TIGHT BINDING BOOK

UNIVERSAL
LIBRARY
OU_198148
UNIVERSAL
LIBRARY

| | | |
|---|---|---|
| ಚಿತ್ತೂರಿನ ಮಹಾರಾಣಿ ಪದ್ಮಿನಿ | | (ಮುಖಚಿತ್ರ) |
| ರಾಜಸ್ಥಾನ ಪರಿಚಯ | .... | i |
| ರಾಜಪುತ್ರರು | .... | iii |
| ಬಪ್ಪಾರಾವಳ | .... | ೧ |
| ಸಮರಸಿಂಹ | .... | ೧೭ |
| ಕರ್ಣ-ಕರ್ಮದೇವಿ | .... | ೨೦ |
| ರಾಣಾ ರಾಹೂಪ | .... | ೨೬ |
| ರಾಣಾ ಲಕ್ಷ್ಮಣಸಿಂಹ | .... | ೩೩ |
| ರಾಣಾ ಭೀಮಸಿಂಹ-ಪದ್ಮಿನಿ | .... | ೩೮ |
| ರಾಣಾ ಹಮೀರಸಿಂಹ | .... | ೪೪ |
| ರಾಣಾ ಖೇತ್ರಸಿಂಹ-ಲಖುರಾಣಾ | .... | ೬೪ |
| ರಾಣಾ ಮೋಕಳದೇವ | .... | ೬೯ |
| ರಾಣಾ ಕುಂಭ | .... | ೮೩ |
| ರಾಣಾ ರಾಯಮಲ್ಲ | .... | ೯೮ |
| ರಾಣಾ ಸಂಗ (ಸಂಗ್ರಾಮಸಿಂಹ) | .... | ೧೨೬ |



ಚಿತ್ತೂರಿನ ಮಹಾರಾಣಿ **ಪದ್ಮಿನಿ** [ಪುಟ ೪೧

ಶ್ರೀರಾಮ ಸಹಾಯಂ

# ರಾಜಸ್ಥಾನ ಕಥಾವಳಿ

## ಮುನ್ನುಡಿ

**ರಾಜಸ್ಥಾನ ಪರಿಚಯ:**- ಪುರಾಣಕಾಲದಿಂದಲೂ, ಭರತವರ್ಷವೆಂದೂ ಭರತಖಂಡವೆಂದೂ ಪ್ರಸಿದ್ಧವಾಗಿದ್ದ ನಮ್ಮ ಮಾತೃಭೂಮಿಯಲ್ಲಿ ವಿಂಧ್ಯಪರ್ವತಕ್ಕೆ ಉತ್ತರಭಾಗದಲ್ಲಿರುವ ದೇಶವನ್ನು ಪೂರ್ವಿಕರು ಆರ್ಯಾವರ್ತವೆಂದು ವ್ಯವಹರಿಸುತ್ತಿದ್ದರು. ಪುಣ್ಯಭೂಮಿಯಾದ ಈ ಆರ್ಯಾವರ್ತದಲ್ಲಿಯೇ ನಮ್ಮ ಪ್ರಕೃತಕಥಾಕ್ಷೇತ್ರವಾದ ರಾಜಸ್ಥಾನವೆಂಬ ದೇಶವಿರುವುದು. ಅದರಲ್ಲಿ ರಾಜಪುತ್ರರು ಎಂದು ಕರೆಯಲ್ಪಡುವ ಕ್ಷತ್ರಿಯ ಸಂತತಿಯವರೇ ಬಹು ಸಂಖ್ಯೆಯಿಂದ ವಾಸಮಾಡುತ್ತಿರುವುದರಿಂದ, ಇದನ್ನು ರಾಜಸ್ಥಾನವೆಂದೂ ಕರೆಯುವ ವಾಡಿಕೆಯುಂಟು.

ರಾಜಪುತ್ರಸ್ಥಾನವೆಂಬುದು ಒಂದೇ ಸಂಸ್ಥಾನವಲ್ಲ: ಒಬ್ಬನೇ ಅರಸನ ಆಳ್ವಿಕೆಗೊಳಪಟ್ಟುದಲ್ಲ. ಅಲ್ವಾರು, ಬಿಕನೀರು, ಕೃಷ್ಣನಗರ, ಜಯಪುರ, ಭರತಪುರ, ಧೋಲ್‌ಪುರ, ಕೆರಾಲಿ, ಟಾಂಕು, ಬೂಂದಿ, ಕೋಟಾ, ಜಾಲಾವಾರ್, ಪ್ರತಾಪಘರ್, ಬನ್ಸ್ವಾರ್, ದಂಗಪುರ, ಮೇವಾರ್, ಸಿರೋಹಿ, ಮಾರ್ವಾರ್, ಜಸಲ್ಮೀರ್ ಎಂಬ ಈ ಇಪ್ಪತ್ತು ಸಂಸ್ಥಾನಗಳೂ ಸೇರಿ, ರಾಜಪುತ್ರಸ್ಥಾನವೆಂಬ ಸಂಯುಕ್ತನಾಮದಿಂದ ವ್ಯವಹರಿಸಲ್ಪಡುತ್ತಿವೆ. ಇವುಗಳಲ್ಲಿ ಟಾಂಕು ಎಂಬ ಸಂಸ್ಥಾನವನ್ನು ಒಬ್ಬ ಮಹಮ್ಮದೀಯ ಪ್ರಭುವೂ, ಭರತಪುರವನ್ನು ಜಾಟ್ ವಂಶಸ್ಥನಾದ ಒಬ್ಬ ರಾಜನೂ ಪಾಲಿಸುತ್ತಿದ್ದಾರೆ. ಮಿಕ್ಕ ಹದಿನೆಂಟು ಸಂಸ್ಥಾನಗಳೂ ವಂಶಪಾರಂಪರ್ಯವಾಗಿ ಆಳುತ್ತಾ ಬಂದ ರಾಜಪುತ್ರರ ಪಾಲನೆಯಲ್ಲೇ ಇವೆ. ಅವುಗಳ ಒಟ್ಟು ವಿಸ್ತೀರ್ಣವು ೧,೩೦,೦೦೦ ಚದರ ಮೈಲುಗಳು. ಒಟ್ಟು ಒಂದುಕೋಟಿ ಇಪ್ಪತ್ತುಲಕ್ಷ ಪ್ರಜೆಗಳು ಈ ಸಂಸ್ಥಾನಗಳಲ್ಲಿ ವಾಸಿಸುತ್ತಿದ್ದಾರೆ. ಇದು ಬಹು ವಿಸ್ತಾರವಾದುದಾದರೂ ಫಲವತ್ತಾದುದಲ್ಲ. ದೇಶದ ಬಹುಭಾಗ

ವೆಲ್ಲ ಮರಳುಕಾಡಿನಿಂದ ವ್ಯಾಪ್ತವಾಗಿದೆ. ಫಲವತ್ತಾದ ಭೂಮಿಯಾಗಲಿ-ನದೀಪ್ರವಾಹಗಳಾಗಲಿ ಅಲ್ಲಿಲ್ಲ. ಆ ದೇಶದ ಈಶಾನ್ಯದಿಕ್ಕಿನಿಂದ ನೈಋತ್ಯ ಮೂಲೆಯುವರೆಗೆ ಆರಾವಳೀ ಪರ್ವತಗಳು ವ್ಯಾಪಿಸಿವೆ. ಈ ಪರ್ವತಗಳ ಪಶ್ಚಿಮಭಾಗವೆಲ್ಲ ಮರಳು ತಾಣವಾಗಿದ್ದರೂ, ಉತ್ತರಭಾಗವು ಸಾರವಂತವಾಗಿ ಧಾನ್ಯ ಹತ್ತಿ ಕಬ್ಬು ಹೊಗೆಯಸೊಪ್ಪು ನೀಲಿ ಮುಂತಾದುವುಗಳ ಬೆಳೆಗೆ ಅನುಕೂಲವಾಗಿದೆ. ಚಂಬಲ್ ಮತ್ತು ಬೇನಾಸ್ ಎಂಬೆರಡು ಸಣ್ಣ ನದಿಗಳು ಅಲ್ಲಿ ಹರಿಯುತ್ತವೆ. ನದಿಗಳು ಕಡಮೆಯಾಗಿರುವುದರಿಂದ ಜನರಿಗೆ ಕುಡಿವನೀರು ಚಿಲುಮೆಗಳಿಂದ ಲಭಿಸುತ್ತದೆ. ಆ ಪ್ರಾಂತ್ಯ ಉಪ್ಪುನೀರಿನ ಸರೋವರಗಳು ವಿಸ್ತಾರವಾಗಿರುವುದರಿಂದ ಜನರು ಅವುಗಳಿಂದ ಉಪ್ಪನ್ನು ತಯಾರಿಸಿ ಉಪಯೋಗಿಸಿಕೊಳ್ಳುತ್ತಾರೆ. ಅಲ್ಲಿಯ ಬೆಟ್ಟಗಳಲ್ಲಿ ಅತ್ಯುತ್ಕೃಷ್ಟವಾದ ಕಲ್ಲು ದೊರೆಯುತ್ತದೆ. ಷಹಾಜಹಾನ್ ಚಕ್ರವರ್ತಿಯು ಆಗ್ರಾ ನಗರದಲ್ಲಿ ಕಟ್ಟಿಸಿರುವ ತಾಜಮಹಲ್ ಎಂಬ ಜಗತ್ಪ್ರಸಿದ್ಧ ಕಟ್ಟಡವನ್ನು ರಚಿಸಲು ಆ ದೇಶದ ಮಕ್ರಾನಾ ಎಂಬಲ್ಲಿಯ ಶಿಲಾಖನಿಗಳಿಂದ ಕಲ್ಲು ಉಪಯೋಗಿಸಲ್ಪಟ್ಟಿತೆಂದು ಪ್ರತೀತಿ ಇದೆ.

ಸುಪ್ರಸಿದ್ಧರಾದ ಅನೇಕಮಂದಿ ಪೂರ್ವಿಕರಿಂದ ಕಟ್ಟಲ್ಪಟ್ಟ ಅರಮನೆಗಳು, ದೇವಸ್ಥಾನಗಳು ಮುಂತಾದ ಭವ್ಯ ಕಟ್ಟಡಗಳಿಂದ ಆ ದೇಶದಲ್ಲಿ ಹಲವು ನಗರಗಳು ನೇತ್ರಾನಂದಕರವಾಗಿವೆ. ಆ ದೇಶಗಳಿಗೆ ಬೆನ್ನೆಲುಬಿನಂತಿರುವ ಆರಾವಳೀ ಪರ್ವತದ ಅಬೂ ಎಂಬ ಶಿಖರದಮೇಲೆ ಕಟ್ಟಲ್ಪಟ್ಟಿರುವ ಅಬೂ ನಗರವು ಅಲ್ಲಿಯ ಮುಖ್ಯ ನಗರಗಳಲ್ಲೊಂದಾಗಿಯೂ, ಆರೋಗ್ಯಪ್ರದಕ್ಷೇತ್ರವಾಗಿಯೂ ಇದೆ. ಈ ಶಿಖರದಮೇಲೆ ಶ್ವೇತಶಿಲಾನಿರ್ಮಿತವಾದ ದೇವಾಲಯಗಳು ಹತ್ತಿರದ ದೂರದ ಬಹುಮಂದಿ ಯಾತ್ರಿಕರನ್ನು ಆಕರ್ಷಿಸುತ್ತವೆ. ಅವುಗಳಲ್ಲೆಲ್ಲಾ ಪ್ರಧಾನವಾದೊಂದು ದೇವಾಲಯವನ್ನು ಕಟ್ಟಲು ಹದಿನೆಂಟುಕೋಟಿ ರೂಪಾಯಿಗಳು ವ್ಯಯವಾದುವಂತೆ! ಅತ್ಯಂತ ಸುಂದರವಾದ ಉದಯಪುರವೆಂಬ ಮತ್ತೊಂದು ನಗರವು ಮೇವಾರ್ ಸಂಸ್ಥಾನದ ರಾಜಧಾನಿಯಾಗಿದೆ. ಮಾರವಾರ್ ದೇಶಕ್ಕೆ ಜೋಡ್‌ಪುರವೆಂಬುದು ರಾಜಧಾನಿ. ಜಯಪುರವೆಂಬ ನಗರವು ಹಿಂದೂಸ್ಥಾನದಲ್ಲೇ ಅತ್ಯಂತ ಮನೋಹರವಾದುದೆಂದು ಪ್ರಖ್ಯಾತವಾಗಿದೆ.

**ರಾಜಪುತ್ರರು:**— ಗಟ್ಟಬೆಟ್ಟಗಳಿಂದ ಆವೃತವಾದ ಈ ದೇಶದಲ್ಲಿ - ಗುಡ್ಡ ಗುಹೆಗಳಲ್ಲಿ ವಾಸಿಸುವ ಸಿಂಹಗಳೋ ಎಂಬಂತೆ ಶೂರರಾದ ರಾಜಪುತ್ರರು ವಾಸಿಸುತ್ತಿರುವರು. ಅವರ ಭವ್ಯ ಶರೀರವೂ, ಆಜಾನುಬಾಹುಗಳೂ, ತೇಜಸ್ವಿನೇತ್ರಗಳೂ ಅವರನ್ನು ಅಲಂಕರಿಸಲು ಸಾಕಾದ ಭೂಷಣಗಳಾಗಿರುವುವು. ಚಿಕ್ಕತನದಿಂದಲೂ ಗರಡಿ ಮುಂತಾದ ಅಂಗಸಾಧನೆ, ಕತ್ತಿಯಸಾಧನೆ, ಈಜುವಿಕೆ, ಕುದುರೆಯ ಸವಾರಿ, ಓಡುವಿಕೆ ಮುಂತಾದ ಶರೀರ ವ್ಯಾಯಾಮಗಳನ್ನು ಮಾಡಿ ದೇಹವನ್ನು ಗಟ್ಟಿಪಡಿಸಿಕೊಂಡ ಅವರು ಯುದ್ಧವೆಂಬುದನ್ನೇ ವಿನೋದಿಕೆಗೋ ಎಂಬಂತೆ ಆತುರದಿಂದಲೂ ಆಸೆಗೊಂಡೂ ಓಡುವಂತಹ ಉತ್ಸಾಹ ಶಾಲಿಗಳಾಗಿರುವರು. ಅವರು ಸಾಹಸ ಶಿರೋಮಣಿಗಳು. ತಮ್ಮ ದೇಶ ಸ್ವಾತಂತ್ರ್ಯವನ್ನೂ ಕುಟುಂಬ ಮರ್ಯಾದೆಯನ್ನೂ ತಮ್ಮ ಸ್ತ್ರೀಯರ ಗೌರವವನ್ನೂ ಕಾಪಾಡಿಕೊಳ್ಳುವ ವಿಷಯದಲ್ಲಿ ತಮ್ಮ ಪ್ರಾಣಗಳನ್ನು ತೃಣಪ್ರಾಯವಾಗೆಣಿಸಿ ಹೋರಾಡುವುದರಲ್ಲಿ ಈ ರಾಜಪುತ್ರರಿಗೆ ಸಮಾನರಾದವರು ಪ್ರಪಂಚದ ಇತರ ಜನಾಂಗಗಳಲ್ಲಿ ದೊರೆವುದು ದುರ್ಲಭ. ಇವರು ಎಂದೂ ಪ್ರಾಣಕ್ಕಾಗಿ ಮಾನವನ್ನು ಬಲಿಮಾಡಿ ಬದುಕ ಅರಿಯರು. ಅವರಲ್ಲಿ ಸ್ತ್ರೀಯರೆಂದರೋ ಪುರುಷರಿಗಿಂತಲೂ ಅಭಿಮಾನಶಾಲಿಗಳು. ಶಾಂತರೂ ಪತಿವ್ರತಾಶಿರೋಮಣಿಗಳೂ ಆದರೂ ವೀರರಸಾಧಿದೇವತೆಗಳವರು! ವೀರಮಾತೆಯರೂ ವೀರಪತ್ನಿಯರೂ ಎಂದರವರೇ! ಲವಲೇಶ ಅಪಮಾನವನ್ನೂ ಸಹಿಸಿ ಪ್ರಾಣವನ್ನು ಧರಿಸುವವರಲ್ಲ. ಮಾನಸಂರಕ್ಷಣಾರ್ಥವಾಗಿ ತಮ್ಮ ಪ್ರಾಣಗಳನ್ನು ತೃಣವಾಗೆಣಿಸಿ, ತಮ್ಮ ಸುಕುಮಾರ ದೇಹಗಳನ್ನು ಕಿಚ್ಚಿಗೊಪ್ಪಿಸಿದ ಶೂರನಾರೀಮಣಿಯರ ಪವಿತ್ರ ನಾಮಗಳೆಷ್ಟೋ ಆ ದೇಶದ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆಯಲ್ಪಟ್ಟಿರುವುವು. ಪತಿಯಾಗಲಿ-ಪುತ್ರನಾಗಲಿ, ಯುದ್ಧದಲ್ಲಿ ಪರಾಜಯಹೊಂದಿ ಶತ್ರುವಿಗೆ ಬೆನ್ನುತೋರಿಸಿ ಹಿಂದೋಡಿ, ಕೋಟೆಯೊಳಕ್ಕೆ ಹೊಕ್ಕು ತಲೆತಪ್ಪಿಸಿಕೊಂಡು ಬದುಕಬೇಕೆಂದು ಬಂದನಾದರೆ, ಆ ವೀರನಾರಿಯರು ಅಂತಹವ ಹೇಡಿಗೆ-ಬಾಗಿಲುತೆಗೆದು ಬರಲೀಯುವುದಂತಿರಲಿ ! ಮುಳ್ಳುಗಳಂತಹ ಮಾತುಗಳಿಂದ ಅವನ ಮನನೋಯಿಸಿ, ರೋಷವನ್ನು ಹೆಚ್ಚಿಸಿ ಅವನ ಹತ ಹೃದಯದಲ್ಲೂ ಶೌರ್ಯ-ಧೈರ್ಯಗಳನ್ನು ಉಲ್ಬಣಗೊಳಿಸಿ ಪುನಃ ಶತ್ರುವಿನ

ಮೇಲೇರಿಹೋಗುವಂತೆ ಅವನನ್ನು ಹುರಿದುಂಬಿಸುವರು. ರಾಜಪುತ್ರರಲ್ಲಿ ಪುರುಷರುಮಾತ್ರವಲ್ಲ: ಸ್ತ್ರೀಯರುಮಾತ್ರವಲ್ಲ: ಬಾಲಕರು ಸಹ ಯುದ್ಧ ರಂಗವನ್ನು ಹೊಕ್ಕು ಹೋರುವುದಕ್ಕಾಗಲೀ, ತಮ್ಮ ಕಾಂತಾಜನರನ್ನು ವಧಿಸಿಯಾದರೂ ಕುಲಗೌರವವನ್ನು ಕಾಪಾಡುವುದಕ್ಕಾಗಲೀ, ಆವಶ್ಯಕ ತೋರಿದರೆ ಅಗ್ನಿಯಲ್ಲಿ ಧುಮುಕಿ ಪ್ರಾಣತ್ಯಾಗಮಾಡಿಕೊಳ್ಳುವುದಕ್ಕಾಗಲೀ ಎಂದೂ ಹಿಂದೆಗೆದವರಲ್ಲ.

ಈ ರಾಜಪುತ್ರರಲ್ಲಿ ಕೆಲವರು ತಾವು ಸೂರ್ಯವಂಶಜರೆಂದೂ ಕೆಲವರು ಚಂದ್ರವಂಶಜರೆಂದೂ ಮತ್ತೆ ಕೆಲವರು ತಾವು ಅಗ್ನಿಕುಲಜರೆಂದೂ ಹೇಳಿಕೊಳ್ಳುವುದುಂಟು. ಹಿಂದೆ ಕ್ಷತ್ರಿಯ ಕುಲವು ಇಪ್ಪತ್ತೊಂದುವೇಳೆ ನಾಶಮಾಡಲ್ಪಟ್ಟಾಗ, ಲೋಕವು ಅರಾಜಕವಾಗಿ ಎಲ್ಲೆಲ್ಲೂ ಅಧರ್ಮವು ಪ್ರಬಲಿಸುತ್ತಿರಲು ವೇದವಿದರಾದ ಮಹರ್ಷಿಗಳು ಅಗಸ್ತ್ಯರನ್ನು ಪ್ರಾರ್ಥಿಸಿ ಅವರ ಮೂಲಕ ಯಜ್ಞೇಶ್ವರನಲ್ಲಿ ಯಜ್ಞಮಾಡಿಸಿದರೆಂದೂ,-ಆಗ ಆ ಯಜ್ಞವೇದಿಕೆಯಿಂದ ಕೇವಲ ಮಂತ್ರಬಲದಿಂದ ಜನಿಸಿಬಂದ ಕ್ಷತ್ರಿಯರು ಭೂಮಿಯಲ್ಲಿ ಧರ್ಮರಕ್ಷಣೆಮಾಡಿದರೆಂದೂ, ಆದುದರಿಂದ ಈಗಿರುವ ರಾಜವರ್ಗದವರು ಅಗ್ನಿಕುಲಜರೆಂದೂ ಕೆಲವರು ತಮ್ಮ ಕುಲದ ಪಾವಿತ್ರ್ಯತೆಯನ್ನು ಹೇಳಿಕೊಳ್ಳುವರು. ಈ ಕಥೆಯನ್ನು ಒಪ್ಪಿಕೊಳ್ಳದ ಮತ್ತೆ ಕೆಲವರು ತಾವು-ಶ್ರೀಮದ್ರಾಮಾಯಣ ಕಥಾನಾಯಕನೂ ಧನುರ್ಧರಾಗ್ರೇಸರನೂ ಆದ ಶ್ರೀರಾಮನ ಮಗನಾದ ಕುಶನ ಸಂತತಿಯುವರೆಂದೂ-ಲವನ ಸಂತತಿಯುವರೆಂದೂ ಹೆಮ್ಮೆಗೊಳ್ಳುವರು. ಮಿಕ್ಕವರು ಪಾಂಡವಮಧ್ಯನೂ ತ್ರಿಲೋಕವೀರನೂ ಧನಂಜಯನ ಮಗನಾದ ವೀರ ಅಭಿಮನ್ಯುವು ತಮ್ಮ ವಂಶಕರ್ತನೆಂದೂ ಆ ಕಾರಣದಿಂದ ತಾವು ಚಂದ್ರ ವಂಶಜರೆಂದೂ ಹೊಗಳಿಸಿಕೊಳ್ಳುವರು. ವಂಶಪ್ರಭೇದಗಳೇನೋ ! ಈ ಮೂರೇ ಆದರೂ ಅವರಲ್ಲಿ ಇತರ ಹಲವು ಪಂಗಡಗಳುಂಟು. ಯಾವ ಪಂಗಡದವರಿಗೆ ಆ ಪಂಡಗದ ನಾಯಕನೇ ಯಜಮಾನನು. ಆ ಕುಲಸ್ಥರೆಲ್ಲರೂ ಆತನಲ್ಲಿ ವಿಶೇಷ ಮರ್ಯಾದೆಯನ್ನಿಟ್ಟುಕೊಂಡು, ಆತನ ಆಜ್ಞೆಯನ್ನು ಲವಮಾತ್ರವೂ ದಾಟದೆ ಆತನ ಮಾತಿನಿಂದ ಕುಲಗೌರವ ರಕ್ಷಣಾರ್ಥವಾಗಿ ಅಸಾಧ್ಯಕಾರ್ಯಗಳಲ್ಲೂ ಹೆಣಗಲು ಹಿಂದೆಗೆಯರು. ಅವರಲ್ಲಿ ಕುಲದ ದೃಷ್ಟಿಯಿಂದ ನೋಡುವುದಾದರೆ ಒಬ್ಬ

ನು ಹೆಚ್ಚು, ಒಬ್ಬನು ಕಡಮೆ ಎಂಬ ತಾರತಮ್ಯವೇ ಇಲ್ಲ: ನೆಲವನ್ನು ಉತ್ತು ಜೀವಿಸುವ ಬಡರೈತನು ಸಹ ದೊಡ್ಡ ಜಮೀನುದಾರನೊಂದಿಗೆ, ಜಾತಿಸಂಬಂಧ ವಿಚಾರಗಳಲ್ಲಿ ಸರಿಸಮನಾಗಿ ವ್ಯವಹರಿಸುವನು. ಅವರಲ್ಲಿ ಒಂದೊಂದು ಪಂಗಡಕ್ಕೆ ಒಬ್ಬೊಬ್ಬನಂತೆ ಹೊಗಳುವ ಭಟ್ಟನಿರುವನು. ಅವನು ಆ ಪಂಗಡದವರ ಶೌರ್ಯ ಪ್ರತಾಪಗಳನ್ನು ಕುರಿತು ಹೊಗಳುತ್ತಲೂ, ಅವರ ಶತ್ರುಗಳನ್ನು ಪರಿಹಾಸ್ಯವಾಕ್ಯಗಳಿಂದ ಜರಿಯುತ್ತಲೂ ಅವರಲ್ಲಿ ಧೈರ್ಯವನ್ನೂ ರಣೋತ್ಸಾಹವನ್ನೂ ಹುಟ್ಟಿಸುತ್ತಿರುವನು. ಇವರಲ್ಲದೆ, ಚಾರಣರೆಂಬ ಬೇರೆಕೆಲವರೂ ಇರುವುದುಂಟು: ಅವರು ಲೌಕಿಕರೀತಿನೀತಿಗಳನ್ನೂ ಧರ್ಮಾಚರಣೆಗಳನ್ನೂ ಬೋಧಿಸುತ್ತ ಕುಲಗುರುಗಳಂತೆ ಗೌರವಿಸಲ್ಪಡುವರು. ರಾಜಪುತ್ರಸ್ಥಾನದಲ್ಲಿ ಜೈನಮತಸ್ಥರು ವಿಶೇಷವಾಗಿದ್ದಾರೆ. ಮೇಲೆ ಹೇಳಿದ ಅಬೂಬೆಟ್ಟದ ಮೇಲಿರುವ ದೇವಾಲಯವು ಹಿಂದೂದೇಶದಲ್ಲಿರುವ ಜೈನರಿಗೆಲ್ಲ ಮುಖ್ಯ ಯಾತ್ರಾಸ್ಥಳವಾಗಿದೆ. ಈ ದೇಶೀಯರು ಹಿಂದೀಭಾಷೆಯನ್ನು ಮಾತನಾಡುತ್ತಾರೆ.

ಧೈರ್ಯ ಶೌರ್ಯ ವೀರ್ಯಾದಿಗಳಿಗೆ ತೌರುಮನೆಯೆನ್ನಿಸಿಕೊಂಡ ಈ ರಾಜಪುತಾನದಲ್ಲಿ ಜನಿಸಿದವರೆಲ್ಲರೂ ಆದಿಯಿಂದಲೂ ಸ್ವಾತಂತ್ರ್ಯಾಪೇಕ್ಷಿಗಳಾಗಿ ವೇದಮತವನ್ನೂ ಗೋಬ್ರಾಹ್ಮಣರನ್ನೂ ದೇವಾಲಯ ಧರ್ಮಸ್ಥಳಗಳನ್ನೂ ಯವನರಿಂದ ರಕ್ಷಿಸುವುದಕ್ಕಾಗಿ ತಮ್ಮ ದೇಹರಕ್ತವನ್ನು ಅನೇಕವೇಳೆ ಹೊಳೆಯಾಗಿ ಹರಿಸಿ ಯಶಃಕಾಯರಾಗಿ ಮೆರೆಯುತ್ತಿರುವರು. ಈ ಸಂಸ್ಥಾನಗಳಲ್ಲೆಲ್ಲಾ ಮಿವಾರ್ ಅಥವ ಮೇವಾಡವೆಂಬುದೇ ಸುಪ್ರಸಿದ್ಧವಾಗಿರುವುದು. ಅದರ ಪೂರ್ವದ ರಾಜಧಾನಿ ಚಿತ್ತೂರು ಡಿಲ್ಲೀ ಚಕ್ರವರ್ತಿಯೊಂದಿಗೆ ನಡೆದಯುದ್ಧದಲ್ಲಿ ಅದು ಕೈತಪ್ಪಿ ಹೋಗಲು, ಆಗ ಇದ್ದ ಪ್ರಭುವು ಅರಾವಳೀ ಪರ್ವತ ಪ್ರಾಂತದಲ್ಲಿ ಉದಯಪುರವೆಂಬ ಬೇರೊಂದು ನಗರವನ್ನು ರಚಿಸಿ ಅದನ್ನೇ ಮೇವಾಡದ ರಾಜಧಾನಿಯನ್ನಾಗಿ ಏರ್ಪಡಿಸಿದನು. ರಾಜಪುತ್ರಸಂಸ್ಥಾನಗಳಲ್ಲೆಲ್ಲ ಈ ಮೇವಾಡದ ರಾಜವಂಶವೇ ನಿಷ್ಕಳಂಕವಾದುದೆಂದು ಸರ್ವರೂ ಒಪ್ಪಿಕೊಳ್ಳುವರು. ಆ ಉದಯ ಪುರಾಧೀಶ್ವರನನ್ನೇ ನಮ್ಮ ನಾಯಕನೆಂದು ಒಪ್ಪಿಕೊಂಡು ಸಕಲರೂ ಆತನ ಆಜ್ಞೆಯನ್ನು ಪಾಲಿಸುವರು. ಆದುದರಿಂದ ಪ್ರಸ್ತುತಕ್ಕೆ ಈ ಮೇವಾಡ ಸಂಸ್ಥಾನದ ರಾಜವಂಶ

ವಿಸ್ತಾರವನ್ನು ವರ್ಣಿಸುವ ಕಥೆಗಳಿಂದಲೇ ಈ ಗ್ರಂಥವು ಪ್ರಾರಂಭಿಸಲ್ಪಡುವುದು.

ಪ್ರಾತಃಸ್ಮರಣೀಯರೂ ಯಶಶ್ಶರೀರಿಗಳೂ ಆದ ಆ ರಾಜಕುಲಭೂಷಣರ ಶೌರ್ಯ ವೀರ್ಯ ಪ್ರದರ್ಶಕ ಅದ್ಭುತಕಾರ್ಯಗಳನ್ನು ವರ್ಣಿಸುವಂತಹ ಸಂಪೂರ್ಣಚರಿತ್ರೆಯೊಂದು *Major James Tod* ಮೇಜರ್ ಜೇಮ್ಸ್ ಟಾಡ್ ಎಂಬ ಆಂಗ್ಲೇಯ ಮಹಾಶಯನಿಂದ ವಿಸ್ತಾರವಾಗಿ ರಚಿಸಲ್ಪಟ್ಟಿದೆ. ಕನ್ನಡಭಾಷೆಯಲ್ಲೂ ಆ ವೀರಶಿರೋಮಣಿಗಳ ಅದ್ಭುತಕಾರ್ಯಕಲಾಪಗಳನ್ನು ವರ್ಣಿಸುವ ಒಂದು ಗ್ರಂಥವನ್ನು ರಚಿಸಬೇಕೆಂದು ಬಹುದಿನಗಳಿಂದ ನನಗೆ ಅಪೇಕ್ಷೆಯಿದ್ದಿತು. ಆದರೆ ವಿಶೇಷ ವಿವರಗಳನ್ನೊಳಗೊಂಡಿದ್ದ ಟಾಡ್ ರವರ ಆ ಸಂಪೂರ್ಣಗ್ರಂಥವನ್ನೂ ಕನ್ನಡಿಸುವುದು ಸಧ್ಯಕ್ಕೆ ಅಪ್ರಕೃತವಾಗಬಹುದೆಂದು ಯೋಚಿಸುತ್ತಿರುವಷ್ಟರಲ್ಲಿ-ದೈವಯೋಗದಿಂದ, ಆಂಧ್ರ ಭಾಷಾಕೋವಿದರೂ ಸುಪ್ರಸಿದ್ಧ ಕಾದಂಬರೀ ಲೇಖಕರೂ ಆದ ಶ್ರೀಯುತ ಚಿಲಕಮರ್ತಿ ಲಕ್ಷ್ಮೀನರಸಿಂಹಂಪಂತಲುಯವರ **'ರಾಜಸ್ಥಾನ ಕಥಾವಳಿ'** ಎಂಬ ಗ್ರಂಥರತ್ನವು ನನ್ನ ದೃಷ್ಟಿಗೋಚರವಾಯಿತು. ಒಡನೆ *Tod's Annals of Rajasthan* ಎಂಬ ಅದರ ಮೂಲಗ್ರಂಥವನ್ನೂ ಸಂಪಾದಿಸಿ ಅವೆರಡರ ಸಹಾಯಗೊಂಡು ಈ ಪ್ರಕೃತ ಗ್ರಂಥವನ್ನು ರಚಿಸಿ ಕರ್ಣಾಟಕ ವಾಚಕರ ಮುಂದಿಟ್ಟಿದ್ದೇನೆ.

ವೀರರಸ ಪ್ರಧಾನವಾದ ಈ ಗ್ರಂಥವು ನಮ್ಮ ಕರ್ಣಾಟಕ ಭಾಷಾಬಾಂಧವರಿಂದಲೂ ಸ್ವೀಕೃತವಾಗಿ ಅವರಲ್ಲಿ ಸ್ವದೇಶಾಭಿಮಾನ ಸ್ವಧರ್ಮಾಭಿಮಾನ ಸ್ವಾಭಿಮಾನಗಳನ್ನು ಹೆಚ್ಚಿಸುವಲ್ಲಿ ಲೇಶಮಾತ್ರ ಸಹಾಯಕವಾಗುವುದಾದರೂ ನನ್ನ ಶ್ರಮವು ಸಾರ್ಥಕವೆಂದು ಭಾವಿಸುತ್ತೇನೆ.

**ಬೆಂಗಳೂರು ನಗರ** | **ಇತಿ ಸುಜನ ವಿಧೇಯ,**

ತಾ|| ೨—೧೧—೨೮ | **ಯಂ. ರಾಮರಾವ್.**

ಶ್ರೀರಾಮ ಸಹಾಯಂ

# ರಾಜಸ್ಥಾನ ಕಥಾವಳಿ

## ಬಪ್ಪಾರಾವಳ

ಕ್ರಿಸ್ತಶಕ ಎರಡನೆಯ ಶತಮಾನ: ಸಿಂಧೂ ನರ್ಮದಾನದಿಗಳ ಮಧ್ಯಪ್ರದೇಶದಲ್ಲಿದ್ದ ರಾಜ್ಯಭಾಗದಲ್ಲಿ ಶಿಲಾದಿತ್ಯನೆಂಬ ಒಬ್ಬ ರಾಜನು, ವಲ್ಲಭಿಪುರವೆಂಬ ನಗರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಧರ್ಮದಿಂದ ರಾಜ್ಯವಾಳುತ್ತಿದ್ದನು. ಶಿಲಾದಿತ್ಯನು ಸೂರ್ಯೋಪಾಸಕನು. ಸೂರ್ಯನಾರಾಯಣನ ಅನುಗ್ರಹಕ್ಕೆ ಪಾತ್ರನಾಗಿದ್ದ ಆ ರಾಜನನ್ನು ಸರ್ವದಾ ಆತನೇ ರಕ್ಷಿಸುತ್ತಿರುವನೆಂಬ ಪ್ರತೀತಿಯಿತ್ತು. ಆತನೊಂದಿಗೆ ಯುದ್ಧದಲ್ಲಿ ಹೋರಾಡಿ ಯಾರೂ ಜಯಿಸಿದವರಿಲ್ಲ. ಸಕಲ ಯುದ್ಧಗಳಲ್ಲೂ ಎಂತಹ ಬಲಾಢ್ಯನಾದ ಶತ್ರುರಾಜನಮೇಲಾದರೂ ಆತನು ಯುದ್ಧಮಾಡಿ ಜಯಿಸುತ್ತಿದ್ದುದಕ್ಕೆ ಕಾರಣವೆಂದು ಒಂದು ಕಥೆಯು ಹೇಳಲ್ಪಟ್ಟಿದೆ. ವಲ್ಲಭಿನಗರದ ಕೋಟೆಯಲ್ಲಿ 'ಸೂರ್ಯಕುಂಡ' ಎಂಬ ಹೆಸರಿನ ಒಂದು ಸರಸ್ಸು ಇದ್ದಿತಂತೆ! ಬಲಾಢ್ಯ ಶತ್ರುಗಳಿಂದ ಪರಾಜಿತನಾಗುವ ಸಂಭವವುಂಟೆಂದು ತೋರಿದಾಗ ಶಿಲಾದಿತ್ಯಮಹಾರಾಜನು ಆ ಸರಸ್ಸಿನ ಬಳಿಗೆಹೋಗಿ ಮಿಂದು ಮಡಿಯುಟ್ಟು ಗಂಧಪುಷ್ಪಾಕ್ಷತೆಗಳಿಂದ ಸೂರ್ಯನಾರಾಯಣನನ್ನು ಪೂಜಿಸಿ-ಪ್ರಾರ್ಥಿಸುವನು. ಆಗ ಸೂರ್ಯಾನುಗ್ರಹದಿಂದ - ಸೂರ್ಯರಥವನ್ನೆಳೆವ ಸಪ್ತಾಶ್ವವು, ಆ ಕೊಳದಿಂದ ಹೊರಕ್ಕೆ ಬಂದು ಅವನ ಬಳಿಯಲ್ಲಿ ನಿಲ್ಲುವುದು. ಒಡನೆ ಶಿಲಾದಿತ್ಯನು ಇದರ ಮೇಲೇರಿ ಆಯುಧಹಸ್ತನಾಗಿ ಹೊರಟನೆಂದರೆ, ಶತ್ರುಸೇನೆಯು ಕ್ಷಣಮಾತ್ರದಲ್ಲಿ ಧ್ವಂಸವಾಗಿ ಹೋಗುವುದಂತೆ !

ಹೀಗಿರುವಲ್ಲಿ ಕೆಲವು ದಿನಗಳ ತರುವಾಯ, ಉತ್ತರದಿಕ್ಕಿನಿಂದ ಸಿಥಿಯನರೆಂಬ ಶತ್ರುಗಳು ಗುಂಪುಗುಂಪಾಗಿ ಬಂದು ವಲ್ಲಭಿಪುರವನ್ನು ಮುತ್ತಿದರು. ಶಿಲಾದಿತ್ಯನ ಸೇನೆಯೊಂದಿಗೆ ಶತ್ರುಗಳು ಹಲವು ದಿನಗಳವರೆಗೆ ಯುದ್ಧಮಾಡಿ ಮಾಡಿ ಬೇಸತ್ತರು. ಆ ನಗರವನ್ನು ಎಷ್ಟು ದಿನಗಳು ಮುತ್ತಿದ್ದ

ರೂ ಅದು ವಶವಾಗುವ ಆಸೆ ತೋರಲಿಲ್ಲ. ಅಜೇಯನಾದ ಶಿಲಾದಿತ್ಯನ ಆ ಬಗೆಯ ಅಕ್ಷಯ ಶೌರ್ಯಕ್ಕೆ ಮೂಲಾಧಾರವಾವುದೆಂಬ ವಿಷಯವನ್ನು ಶೋಧಿಸಲು ಶತ್ರುಗಳು ಪ್ರಯತ್ನ ನಡೆಸಿದರು. ಆ ವೇಳೆಗೆ ಸರಿಯಾಗಿ, ಅವರಿಗೆ ರಾಜ ಪರಿವಾರದ ಒಬ್ಬ ದ್ರೋಹಿಯ ಸಹಾಯ ದೊರೆಯಿತು. ಬಹುಕಾಲದಿಂದ ರಾಜಾಶಿಲಾದಿತ್ಯನ ಮೇಲೆ ದ್ವೇಷಭಾವವನ್ನಿಟ್ಟುಕೊಂಡು, ಆತನನ್ನು ಹೇಗಾದರೂ ನಾಶಗೊಳಿಸಬೇಕೆಂದು ಸಮಯಸಾಧನೆಯಲ್ಲಿದ್ದ ಆತನ ಮಂತ್ರಿಗಳಲ್ಲೊಬ್ಬನು, ಶತ್ರುಗಳ ಕಪಟೋಪಾಯಕ್ಕೆ ಒಳಗಾದನು. ಮತ್ತು ಆ ದ್ರೋಹಿಯು, ಆ ಕೊಳದ ವಿಚಾರವನ್ನೂ ಅದರ ಪಾವಿತ್ರ್ಯತೆಯನ್ನೂ, ಯುದ್ಧಕ್ಕೆ ಹೊರಡುವುದಕ್ಕೆ ಮುಂಚೆ ರಾಜನು ಅಲ್ಲಿ ನಿಷ್ಠನಾಗಿ ಪ್ರಾರ್ಥಿಸಿದೊಡನೆಯೇ ಸೂರ್ಯಾಶ್ವವು ಬರುವ ವಿಚಾರವನ್ನೂ, ಅದನ್ನು ಹತ್ತಿ ಬಂದು ಯುದ್ಧ ಮಾಡುವುದರಿಂದಲೇ ಅವನನ್ನು ಜಯಿಸುವುದು ಅಸಾಧ್ಯವಾಗಿರುವುದೆಂಬ ಈ ಮರ್ಮವನ್ನೂ ತಿಳಿಸಿದನು. ಅಲ್ಲದೆ, ಆ ಕೊಳವನ್ನು ಅಪವಿತ್ರಗೊಳಿಸುವಿರಾದರೆ ಅದರ ಮಹಿಮೆಯು ಲುಪ್ತವಾಗಿ ಮುಂದೆ ರಾಜನಿಗೆ ಆ ಮೂಲಕ ಯಾವ ಸಹಾಯವೂ ದೊರೆಯದೆ ಹೋಗುವುದರಿಂದ ತರುವಾಯ ಆತನನ್ನು ಜಯಿಸುವುದು ಅತ್ಯಂತ ಸುಲಭಸಾಧ್ಯವೆಂದು ಸಲಹೆಯನ್ನೂ ಕೊಟ್ಟನು. ಆ ಮಾತನ್ನು ಕೇಳಿದ ಆ ಘಾತುಕರು, ಒಂದು ಗೋವನ್ನು ವಧಿಸಿ ಅದರ ರಕ್ತವನ್ನು ಹೇಗೋ ತಂದು ಆ ಕೊಳದ ನೀರಿನಲ್ಲಿ ಕಲಸಿಬಿಟ್ಟರು. ಇದಾದ ಸ್ವಲ್ಪ ಹೊತ್ತಿನೊಳಗಾಗಿಯೇ ಶತ್ರುಗಳು ತಮ್ಮ ಬಲವನ್ನೆಲ್ಲ ಒಟ್ಟುಗೂಡಿಸಿಕೊಂಡು, ಒಂದೇ ಸಾರಿಗೆ ವಲ್ಲಭಿಪುರವನ್ನು ಮುತ್ತಿದರು. ದೂತನೊಬ್ಬನು ಓಡುತ್ತಾ ಬಂದು, ರಾಜನಿಗೆ ಆ ವೃತ್ತಾಂತವನ್ನು ತಿಳಿಸಿದನು. ಶಿಲಾದಿತ್ಯನು ಒಡನೆ ಶತ್ರುವಿಗೆ ಅಭಿಮುಖವಾಗಿ ಹೋಗಿರೆಂದು ತನ್ನ ಸೈನ್ಯಕ್ಕೆ ಆಜ್ಞೆಯಿತ್ತು, ಬಹು ತೊಂದರೆ ಕೊಡುತ್ತಿರುವ ಆ ಶತ್ರುಗಳನ್ನು ಆಬಾರಿ ನಿರ್ನಾಮವಾಗಿಸಿ ಬಿಡಬೇಕೆಂದು ರೋಷಗೊಂಡು, ಮಿಂದು ಮಡಿಯುಟ್ಟು ಎಂದಿನಂತೆ ಕೊಳದ ಬಳಿಗೆ ಬಂದು ಪೂಜಿಸಿ, ಅಶ್ವವನ್ನಿತ್ತು ರಕ್ಷಿಸೆಂದು ಪರಿಪರಿಯಿಂದ ಪ್ರಾರ್ಥಿಸಿದನು. ಆ ದಿನ ಎಷ್ಟು ಹೊತ್ತು ಪ್ರಾರ್ಥಿಸಿದರೂ ನೀರಿನ ಮೇಲ್ಭಾಗವು ಕದಲಲಿಲ್ಲ; ಎಂದಿನಂತೆ ಸೂರ್ಯಾಶ್ವವು ಬರಲಿಲ್ಲ. ರಾಜನು ಆಶ್ಚರ್ಯದಿಂದ ಕಾರಣವೇನಿರಬಹು

ದೆಂದು ಯೋಚಿಸತೊಡಗಿದನು. ಸ್ವಾಭಾವಿಕವಾಗಿಯೇ ಮೆಟ್ಟಿಲುಗಳ ಮೇಲೆ ದೃಷ್ಟಿ ಹೋಯಿತು. ಅಲ್ಲಲ್ಲೇ ಬಿದ್ದಿದ್ದ ಕೆಲವು ರಕ್ತಬಿಂದುಗಳು ಕಾಣಿಸಿದುವು. ಆಗ ರಾಜನು ಏನೋ ಮೋಸವು ನಡೆದು ಆ ಸರೋವರದ ಪಾವಿತ್ರ್ಯತೆಗೆ ಹಾನಿಯುಂಟಾಗಿದೆ ಎಂದು ಗ್ರಹಿಸಿ, ಇನ್ನು ವಲ್ಲಭಿಪುರಕ್ಕೆ ಒಳ್ಳೆಯ ದಿನಗಳು ಮುಗಿದುವೆಂದುಕೊಂಡು ಒಂದು ನಿಟ್ಟುಸಿರಿನೊಂದಿಗೆ ಆ ಕೊಳದಿಂದ ಹೊರಕ್ಕೆ ಹೊರಟನು. ರಣಭೂಮಿಯನ್ನು ಸೇರಿ ತನ್ನ ವೀರ ಕ್ಷತ್ರಿಯ ಧರ್ಮಕ್ಕೆ ಲೋಪವಿಲ್ಲದಂತೆ ಶಕ್ತಿ ಸಾಹಸಾದಿಗಳನ್ನು ಪ್ರಕಟಪಡಿಸಿ, ಯುದ್ಧಮಾಡಿ ಶತ್ರುವೀರಸಹಸ್ರವನ್ನು ನೆಲಕ್ಕುರುಳಿಸಿ, ತಾನೂ ತನ್ನ ದೇಹವನ್ನು ರಣದೇವತೆಗೆ ಬಲಿಯೊಪ್ಪಿಸಿ ವೀರಸ್ವರ್ಗವನ್ನು ಗಳಿಸಿಕೊಂಡನು. ರಾಜಪತ್ನಿಯರಲ್ಲಿ ಆಗ ಅರಮನೆಯಲ್ಲಿದ್ದವರೆಲ್ಲರೂ ಆತನೊಂದಿಗೆ ಸಹಗಮನ ಮಾಡಿದರು. ಮುಂದೆ ಶತ್ರುಗಳು ವಲ್ಲಭಿಪುರವನ್ನು ಲೂಟಿ ಮಾಡಿ-ನಾಶಮಾಡಿದರು. ಅನ್ನವಿತ್ತ ಪ್ರಭುವಿಗೆ ದ್ರೋಹವನ್ನೆಣಿಸಿ-ತನ್ಮೂಲಕವಾದರೂ ಅಮಿತ ಐಶ್ವರ್ಯ ಪದವಿಗಳನ್ನು ಗಳಿಸಬಹುದೆಂದು ಮಹತ್ವಾಕಾಂಕ್ಷೆಗೊಂಡಿದ್ದ ಆ ಮಂತ್ರಿಯೂ ಶತ್ರುಗಳ ಕಪಟಕ್ಕೆ ಒಳಗಾಗಿ ಹತನಾಗಿ ತನ್ನ ಸ್ವಾಮಿದ್ರೋಹ ಕಾರ್ಯಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಅನುಭವಿಸಿದನು. ಭಗ್ನಾವಶೇಷವಾದ ವಲ್ಲಭಿಪುರವು ಶತ್ರುವಶವಾಯಿತು.

ರಾಜರಾಣಿಯರ ಮರಣ, ವಲ್ಲಭಿಪುರದ ನಾಶ ಇವುಗಳೊಂದಿಗೆ ಶಿಲಾದಿತ್ಯರಾಜನ ವಂಶವೂ ನಿರ್ನಾಮವಾಗತಕ್ಕುದೇ! ಆದರೆ ಯುದ್ಧಕ್ಕೆ ಮುಂಚೆಯೇ, ದೈವಯೋಗದಿಂದಲೋ ಎಂಬಂತೆ ಒಂದುಕಾರ್ಯವು ನಡೆದಿತ್ತಾದುದರಿಂದ ಆ ರಾಜವಂಶವು ಮುಂದೂ ಬೆಳೆಯಲು ಅವಕಾಶವಾಯಿತು. ಶಿಲಾದಿತ್ಯರಾಜನ ಪತ್ನಿಯರಲ್ಲಿ ಚಂದ್ರಾವತಿಯ ಪ್ರಮರ ರಾಜವಂಶದ ಪುಷ್ಪವತೀ ರಾಣಿಯೆಂಬಾಕೆಯು ಗರ್ಭಿಣಿಯಿದ್ದಳು. ದೈವಭಕ್ತಿಯುತಳಾದ ಆ ನಾರೀಮಣಿಯು ತನಗೆ ಪುತ್ರಸಂತಾನವಾದರೆ, ದೇವಾಲಯಕ್ಕೆ ಒಂದು ತನ್ನ ಸೇವೆಯನ್ನು ಸಲ್ಲಿಸುತ್ತೇನೆಂದು ಜಗದಂಬಾ ಭವಾನೀದೇವಿಗೆ ಪ್ರಾರ್ಥಿಸಿಕೊಂಡಿದ್ದಳು. ಆ ಹರಕೆಯನ್ನು ಸಲ್ಲಿಸುವುದಕ್ಕಾಗಿ ಹೋಗಿದ್ದು-ಆ ಲೋಕಮಾತೆಯ ಆರಾಧನೆಯನ್ನುನಡಿಸಿ ಹಿಂದಿರುಗಿ ಬರುತ್ತಿದ್ದಾಗ್ಗೆ, ಮಾರ್ಗಮಧ್ಯದಲ್ಲಿ ವಲ್ಲಭಿಪುರದಿಂದ ಹೊರಬಿದ್ದ ರಾಜದೂತನೊಬ್ಬನು ಪರಮ

ದಾರುಣವಾದ ಮಹಾರಾಜನ ಮರಣವಾರ್ತೆಯನ್ನೂ ವಲ್ಲಭಿಪುರವು ನೆಲಸಮವಾದ ವೃತ್ತಾಂತವನ್ನೂ ತಿಳಿಸಿದನು. ಆ ಭಯಂಕರವಾರ್ತೆಯನ್ನು ಕೇಳಿ, ಒಡನೆ ಸಿಡಿಲುಬಡಿದಂತಾಗಲು, ಆ ಸಾಧ್ವೀಮಣಿಯು ಮೂರ್ಛೆಬಿದ್ದೆದ್ದು ಮುಂದೇನು ಮಾಡಬೇಕೆಂಬುದು ತೋರದೆ-ಅಲ್ಲೇ ಇದ್ದರೆ ಶತ್ರುಗಳಿಂದ ಬಾಧೆಯುಂಟಾಗಬಹುದೋ ಎಂದು ಹೆದರಿ, ಸಮೀಪದಲ್ಲೇ ಇದ್ದ ಮಾಲಿಯುವೆಂಬ ಪರ್ವತ ಪ್ರಾಂತವನ್ನು ಸೇರಿ, ಅಲ್ಲಿನ ಗುಹೆಯೊಂದರಲ್ಲಿ ಮರೆಸಿಕೊಂಡು ಕಾಲಯಾಪನೆ ಮಾಡುತ್ತಿದ್ದಳು. ಮುಂದೆ ಕೆಲವುದಿನಗಳಲ್ಲೇ ಆಕೆಯ ಉದರದಲ್ಲಿ ಒಂದು ಪುರುಷಶಿಶುವು ಜನಿಸಿತು. ಪುಷ್ಪವತೀ ರಾಣಿಯು ಆ ಶಿಶುವನ್ನು, ಸಮೀಪದ ಊರಿನಲ್ಲಿ ವಾಸಿಸುತ್ತಿದ್ದ ಕಮಲಾವತಿ ಎಂಬೊಬ್ಬ ಬ್ರಾಹ್ಮಣ ಸ್ತ್ರೀಯಳ ಕೈಗಿತ್ತು-'ತಾಯೇ ಇವನು ಕ್ಷತ್ರಿಯ ಕುವರನು. ಇವನನ್ನು ನಿನ್ನ ಮಗನೆಂದು ತಿಳಿದು ರಕ್ಷಿಸು. ಬ್ರಾಹ್ಮಣ ಬಾಲಕನೆಂದೇ ಭಾವಿಸಿ ವಿದ್ಯಾಬುದ್ಧಿಗಳನ್ನು ಕಲಿಸು. ಪ್ರೌಢನಾದಮೇಲೆಮಾತ್ರ ಒಬ್ಬ ರಜಪೂತಕನ್ಯೆಯೊಂದಿಗೆ ವಿವಾಹವಾಗುವಂತೆ ಏರ್ಪಡಿಸು. ಇದರಿಂದ ನಿನಗೆ ಶ್ರೇಯಸ್ಸುಂಟಾಗುವುದು' ಎಂದು ಪ್ರಾರ್ಥಿಸಿ, ತಾನು ಚಿತೆಯನ್ನೇರಿ ಪತಿಲೋಕವನ್ನು ಕುರಿತು ಗಮಿಸಿದಳು.

ಕಮಲಾವತಿಯು ಮಕ್ಕಳತಾಯಿಯಾಗಿದ್ದುದರಿಂದ, ತನ್ನ ಮಕ್ಕಳೊಂದಿಗೆ ಅವನನ್ನೂ ಪೋಷಿಸುವುದು ಕಷ್ಟವಾಗಲಿಲ್ಲ. ಅಲ್ಲದೆ ದಯಾರ್ದ್ರಹೃದಯದ ಆಕೆಯು ತಾಯಿತಂದೆಗಳನ್ನು ಕಳೆದುಕೊಂಡ ಆ ತಬ್ಬಲಿ ಕಂದನನ್ನು ವಿಶೇಷ ಪ್ರೀತಿಯಿಂದಲೇ ನೋಡಿಕೊಂಡು, ಗುಹೆಯಲ್ಲಿ ಜನ್ಮಿಸಿದವನಾದುದರಿಂದ ಅವನನ್ನು ಗೌಹನೆಂದು ಸಂಬೋಧಿಸುತ್ತಾ ಕೆಲಕಾಲ ಕಾಪಾಡಿದಳು. ಗೌಹನು ನಾಲ್ಕಾರು ವರ್ಷಗಳ ಬಾಲಕನಾಗುವವರೆಗೆ ಜೊತೆಯ ಬ್ರಾಹ್ಮಣ ಬಾಲಕರೊಂದಿಗೆ ಆಟಪಾಟಗಳಲ್ಲಿ ಬೆರೆದಿದ್ದನು. ತರುವಾಯ ಅವನ ಮಾರ್ಗವೇ ಬೇರೆಯಾಯಿತು. ಪ್ರತಿದಿನವೂ ಮನೆಯನ್ನು ಬಿಟ್ಟು ಬಯಲಿಗೆ ನಡೆದು ಪಕ್ಷಿಗಳನ್ನೂ ಸಣ್ಣ ಪುಟ್ಟ ಮೃಗಗಳನ್ನೂ ಬೇಟೆಯಾಡುವನು. ಜೊತೆಯ ರಜಪೂತ ಬಾಲಕರೊಂದಿಗೆ ರಣಕ್ಷೇತ್ರಗಳನ್ನು ಕಲ್ಪಿಸಿಕೊಂಡು ಯುದ್ಧಮಾಡುತ್ತೇನೆಂದು ಆಟವಾಡುವನು. ಆ ವೀರಬಾಲಕನ ಚರ್ಯೆಗಳು ಸಾಧು ಸ್ವಭಾವದ ಆ ಬ್ರಾಹ್ಮಣಿಗೂ ಆಕೆಯ ಪತಿಗೂ ತಂದೆ

ಗೂ ಕೆಲಕೆಲವುವೇಳೆ ಬಹು ಅಸಹನೀಯವೆನ್ನಿಸುವುವು. ಹೀಗಿರಲು, ಗೌಹನು ತನ್ನ ಹನ್ನೊಂದನೆಯ ವಯಸ್ಸಿನಲ್ಲ ಮನೆಯಿಂದ ಹೊರಬಿದ್ದನು. ಸಮೀಪದ ವನದಲ್ಲಿ ವಾಸಿಸುತ್ತಿದ್ದ ಭಿಲ್ಲ ಬಾಲಕರು ಬಿಲ್ಲುಬಾಣಗಳನ್ನು ಧರಿಸಿ ದುಷ್ಟಮೃಗಗಳನ್ನು ಬೇಟೆಯಾಡುತ್ತ -ಸರ್ವಸ್ವತಂತ್ರರಾಗಿ-ಸ್ವೇಚ್ಛೆಯಾಗಿ ಹಾರಿ ನೆಗೆದು ಆಡುತ್ತಿದ್ದ ಆಟವು ಅವನಮನಸ್ಸಿಗೊಪ್ಪಿತು. ಮುಂದೆ ಅವನು ಬ್ರಾಹ್ಮಣ ಬಾಲಕರಸಹವಾಸವನ್ನು ಮೆಚ್ಚದೆ, ತನ್ನಮನಸ್ಸಿಗೆ ಹೆಚ್ಚು ಮೆಚ್ಚಿಕೆಯಾದ ಭಿಲ್ಲಬಾಲಕರ ಸಹವಾಸದಲ್ಲೇ ಇದ್ದುಬಿಟ್ಟನು. ಭಿಲ್ಲಬಾಲಕರಾದರೂ ತೇಜಸ್ವಿಯಾದ ಆ ಕ್ಷತ್ರಿಯಪುತ್ರನನ್ನು ಬಹು ಅಭಿಮಾನದಿಂದ-ತಮ್ಮಲ್ಲಿ ಒಬ್ಬನೆಂಬಂತೆ ನೋಡಿಕೊಳ್ಳುತ್ತಿದ್ದರು. ಹೀಗಿರುವಲ್ಲಿ ಒಂದಾನೊಂದುದಿನ ಬೇಟೆಗಾಗಿ ಅಲ್ಲಲ್ಲಿ ಸುತ್ತುತ್ತಿದ್ದ ಆ ವನಪುತ್ರರು, – 'ನಾಗರಿಕರಾದ ಸುತ್ತಲಿನ ದೇಶಗಳವರಂತೆ ತಾವೂ ತಮ್ಮ ಸಂಗಡಕ್ಕೆ ಒಬ್ಬ ರಾಜನನ್ನು ಏರ್ಪಡಿಸಿಕೊಳ್ಳಬೇಕು' ಎಂದುಕೊಂಡರು. ಒಡನೆ ಆ ಸಲಹೆಯನ್ನು ಸಕಲರೂ ಒಪ್ಪಿದರು. ರಾಜಪುತ್ರನೂ ಮಹಾ ತೇಜಸ್ವಿಯೂ ಆಗಿದ್ದ ಗೌಹನೇ ಅವರಿಂದ ರಾಜನಾಗಿರಲು, ಆರಿಸಿಕೊಳ್ಳಲ್ಪಟ್ಟನು. ಅದು ಎಲ್ಲರಿಗೂ ಸಮ್ಮತವಾಯಿತು. ಒಡನೆ ಅವನನ್ನು ಅಲ್ಲೇ ಇದ್ದ ಒಂದು ಎತ್ತರವಾದ ಪ್ರದೇಶದಲ್ಲಿ ಶಿಲಾಸನದಮೇಲೆ ಕುಳ್ಳಿರಿಸಿದರು. ತರುವಾಯ ಒಬ್ಬ ಭಿಲ್ಲಬಾಲಕನು ತನ್ನ ಕೈಯಲ್ಲಿದ್ದ ಚೂರಿಯಿಂದ ತನ್ನ ಹೆಬ್ಬೆರಳನ್ನು ಸೀಳಿಕೊಂಡು ಜೊಟಜೊಟನೆಂದು ಸುರಿಯುತ್ತಿದ್ದ ಆ ಬಿಸಿರಕ್ತದಿಂದ ಗೌಹನ ಹಣೆಯಲ್ಲಿ ತಿಲಕವನ್ನು ಬರೆದು, ರಾಜನನ್ನಾಗಿ ಪ್ರತಿಷ್ಠಿಸಿದ ಕ್ರಿಯೆಯನ್ನು ನೆರವೇರಿಸಿದನು. ಇಂತು ಮಾತಾಪಿತೃ ವಿಹೀನನಾಗಿ ಬೆಳೆದ ಗೌಹನು ಭಿಲ್ಲರಾಜನಾದನು. ಹುಡಗರು ಆಟಕ್ಕಾಗಿಮಾಡಿದ ಈ ಕೃತ್ಯವನ್ನು ಆ ಭಿಲ್ಲರಕುಲವೃದ್ಧರು ಕೇಳಿ ಕೋಪಿಸದೆ-ಅಲ್ಲದೆ ಸಂತಸಗೊಂಡು, ತಮ್ಮ ಆ ಈದೂರು ಗ್ರಾಮವನ್ನೂ ಅದರ ಸುತ್ತುಮುತ್ತಿನ ಪ್ರದೇಶವನ್ನೂ ಪುತ್ರಪೌತ್ರಪಾರಂಪರ್ಯವಾಗಿ ಆಳಿಕೊಂಡು ಬರಬೇಕೆಂದು ಗೌಹನಿಗೇ ಒಪ್ಪಿಸಿಬಿಟ್ಟರು. ಗೌಹನೂ ಯುಕ್ತಕಾಲದಲ್ಲಿ ತನ್ನ ತಾಯಿಯು ಆಸಿಸಿದ್ದಂತೆ ಒಬ್ಬ ರಜಪೂತಕನ್ಯೆಯನ್ನೇ ವರಿಸಿ ವಿವಾಹವಾದನು. ಗೌಹನೂ ಅವನ ವಂಶೀಕರೂ ಮುಂದೆ ಎಂಟುತಲೆಗಳವರೆಗೆ ಈದೂರನ್ನೂ ಭಿಲ್ಲಸಂಗಡವನ್ನೂ ಆಳಿಕೊಂ

ಡು ಬಂದರು. ಈ ಗೌಹನ ವಂಶೀಕರೇ ಗೋಹಿಲೋಟರೆಂದೂ ಗಿಹಲೋಟರೆಂದು ಕರೆಯಲ್ಪಡುವ ಈಗಿನ ರಜಪೂತಪಂಗಡದ ಪೂರ್ವಿಕರು.

ಗೌಹನ ಸಂತತಿಯಲ್ಲಿ ಎಂಟುಮಂದಿ ಅರಸರು ರಾಜ್ಯವಾಳುವ ವೇಳೆಗೆ ಭಿಲ್ಲಕುಲಸ್ಥರಿಗೆ ಆ ಪರಕೀಯರನ್ನು ತಮ್ಮ ದೇಶದಿಂದ ಹೇಗಾದರೂ ಹೊರಡಿಸಿ ತಾವು ಸ್ವತಂತ್ರರಾಗಬೇಕೆಂಬ ಇಚ್ಛೆ ಹುಟ್ಟಿತು. ಒಡನೆ, ಆಗ ಬೇಟೆಯಾಡಲು ಹೋಗಿದ್ದ ಆ ವಂಶದ ಕೊನೆಯ ಒಬ್ಬ ರಾಜನನ್ನು ಕೆಲಮಂದಿ ಬಿಲ್ಲರು ಕಾಡಿನಲ್ಲೇ ವಧಿಸಿ ರಾಜವಂಶೀಯರನ್ನೂ ತಮ್ಮ ಊದೂರಿನಿಂದ ಹೊರಕ್ಕೆ ಹೊರಡಿಸಿಬಿಟ್ಟರು. ಹಿಂದೆ ಗೌಹನನ್ನು ಕಾಪಾಡಿದ ಕಮಲಾವತಿಯ ಪುತ್ರಪೌತ್ರಸಂತತಿಯವರೇ ರಾಜಪುರೋಹಿತರಾಗಿದ್ದುದರಿಂದ ಅವರಲ್ಲಿ ಒಬ್ಬನು ಆಗ ರಾಜನ ಮೂರುವರ್ಷದ ಒಬ್ಬ ಮಗನನ್ನು ಶತ್ರುಗಳಿಂದ ಸಾಯದಂತೆ ತನ್ನಪೋಷಣೆಗೆ ತೆಗೆದುಕೊಂಡು ಮನೆಯಿಂದ ಹೊರಬಿದ್ದು, ಮಹಾ ವನಾಂತರವನ್ನು ಪ್ರವೇಶಿಸಿ, ಅಲ್ಲಿನ ಭಾಂಡೇರೆ ಎಂಬ ದುರ್ಗದಲ್ಲಿ ವಾಸಿಸುತ್ತಿದ್ದ ಯದುವಂಶೀಯನಾದ ಒಬ್ಬ ಭಿಲ್ಲಮುಖ್ಯನ ವಶಪಡಿಸಿದನು. ಭಾಂಡೇರೆದುರ್ಗದಲ್ಲಿ ಕೆಲವು ದಿನಗಳು ವಾಸಿಸಿದ ತರುವಾಯ, ಅಲ್ಲಿ ಆ ರಾಜಪುತ್ರನಿಗೆ ಅಪಾಯತಪ್ಪದೆಂದು ತೋರಿದುದರಿಂದ ಪುರೋಹಿತನು, ಆ ಬಾಲಕನನ್ನೂ ಅವನ ತಾಯಿಯನ್ನೂ ಅಲ್ಲಿಂದ ಮುಂದೆ ಬಹುದೂರದ ನಟ್ಟಡವಿಯಲ್ಲಿದ್ದ ನಾಗೇಂದ್ರವೆಂಬೊಂದು ಪುಣ್ಯಕ್ಷೇತ್ರಕ್ಕೆ ತಂದುಬಿಟ್ಟನು. ಆ ಗ್ರಾಮಕ್ಕೆ ಸಮೀಪದಲ್ಲಿ ಮೂರುಶಿಖರಗಳಿಂದ ಕೂಡಿದ ಒಂದು ಬೆಟ್ಟವುಂಟು. ಅದರಲ್ಲಿ ಏಕಲಿಂಗಸ್ವಾಮಿಯ ಪವಿತ್ರಸಾನ್ನಿಧ್ಯವಿರುವುದು. ನಾಗೇಂದ್ರಗ್ರಾಮದ ಬ್ರಾಹ್ಮಣರು ಏಕಲಿಂಗಸ್ವಾಮಿಯ ಆರಾಧನೆಯಲ್ಲಿ ನಿರತರಾಗಿರುವರು. ರಾಣಿಯು, ತನ್ನ ಪುತ್ರನನ್ನು ರಹಸ್ಯವಾಗಿ ಅಲ್ಲಿ ಕಾಪಾಡಿದಳು. ಆವರೆಗೆ ಬಾಲಕನಿಗೆ ಯಾವ ಹೆಸರನ್ನೂ ಇಟ್ಟಿರಲಿಲ್ಲವಾಗಿ, ತಾಯಿಯು ಪ್ರಾರಂಭದಿಂದಲೂ ಕರೆಯುತ್ತಾ ಬಂದಿದ್ದ ಒಪ್ಪ ಎಂಬ ಹೆಸರೇ ಅವನ ಗೊತ್ತಾದ ಹೆಸರಾಗಿ ಪರಿಣಮಿಸಿತು. ಬಪ್ಪನು ಜೊತೆಯ ಬ್ರಾಹ್ಮಣ ಬಾಲಕರೊಂದಿಗೆ ಆಡುತ್ತಾ ಕಾಲಕಳೆವನು. ಹೀಗೆ ದಿನದಿನಕ್ಕೆ ಬೆಳೆದು ಪ್ರಬುದ್ಧನಾಗುತ್ತಿದ್ದ ಬಪ್ಪನು ತನ್ನ ತೇಜಸ್ಸಿನಿಂದ ಜೊತೆಯ ಬಾಲಕರನ್ನೆಲ್ಲಾ ಸ್ವಾಧೀನಪಡಿಸಿಕೊಂಡು ಅವರೊಂದಿಗೆ ಆಟಪಾಟಗಳಿಂದ ವಿನೋದಗೊಳ್ಳುತ್ತಾ ಬೆಳೆದನು.

ಬಾಲ್ಯಕಳೆದು ಪ್ರಾಯ ಪ್ರಬುದ್ಧನಾಗುತ್ತಿದ್ದ ಬಪ್ಪನು ತನ್ನ ಗೆಳೆಯರೊಂದಿಗೆ ಆಗಿನ ಪದ್ಧತಿಯಂತೆ ಪಶುಪಾಲನೆಗಾಗಿ ಕಾಡಿಗೆ ಹೋಗುತ್ತಿದ್ದುದುಂಟು. ಹೀಗಿರುವಲ್ಲ ಒಂದುದಿನ ಭಿಲ್ಲ ಕುಲಕ್ಕೇ ಅತಿಮಹತ್ವದ್ದೆನಿಸುವ ಒಂದು ಹಬ್ಬವು ಪ್ರಾಪ್ತವಾಯಿತು. ಆ ದಿನ ಆ ನಾಗೇಂದ್ರಗ್ರಾಮದ ನಾಯಕನ ಕುಮಾರ್ತೆಯಾದ ಸಾಲಂಖಿವಂಶದ ಕನ್ಯೆಯೊಬ್ಬಳು ತನ್ನ ಜೊತೆಯ ವಯಸ್ಸಿನ ಗೆಳತಿಯರೊಂದಿಗೆ ಊರುಹೊರಗಿದ್ದ ದೇವಾಲಯದ ಬಳಿಯ ಮಾವಿನ ತೋಪಿನಲ್ಲಿ ಆಡಿಕೊಳ್ಳಲಿಕ್ಕೆಂದು ಬಂದಿದ್ದಳು. ಅವರು ಅಲ್ಲಿ ಉಯ್ಯಾಲೆ ಆಟವನ್ನು ಆಡಬೇಕೆಂದು ಅಪೇಕ್ಷಿಸಿದರು. ಆದರೆ ಅವರಬಳಿ ಒಂದು ಹಗ್ಗವು ಇಲ್ಲದಿದ್ದುದು ಬಹು ಯೋಚನೆಗೆ ಕಾರಣವಾಯಿತು. ಆ ಕನ್ಯೆಯರು, ತಮಗೆ ಪ್ರಿಯವಾದ ಆ ಆಟವಾಡಲು ಹಗ್ಗವಿಲ್ಲವಲ್ಲಾ ಎಂದು ಅಸಮಾಧಾನಗೊಂಡಿದ್ದ ವೇಳೆಗೆ ಸರಿಯಾಗಿ ಅಲ್ಲಿಗೆ ಬಪ್ಪನೂ ಕಾರಣಾಂತರದಿಂದ ಬರುವುದು ಸಂಭವಿಸಿತು. ಒಡನೆ ಆ ಹುಡುಗಿಯರು ಅವನನ್ನು ಕುರಿತು ತಮಗೊಂದು ಹಗ್ಗವನ್ನು ತಂದುಕೊಡೆಂದು ಪ್ರಾರ್ಥಿಸಿದರು. ಆಗ ಬಪ್ಪನು-'ಆಗಬಹುದು. ಆದರೆ ನೀವು ನನ್ನೊಂದಿಗೆ ಒಂದು ಆಟವಾಡುವೆನೆಂದು ಒಪ್ಪಿಕೊಳ್ಳುವುದಾದರೆ ಹಗ್ಗ ತಂದುಕೊಡುವೆನು. ಮನಸಾರೆ ತೂಗಿಕೊಳ್ಳಬಹುದು' ಎಂದನು. ಗ್ರಾಮನಾಯಕನ ಮಗಳು-'ಆ ಆಟವೆಂಥದು?' ಎಂದು ಪ್ರಶ್ನಿಸಿದಳು. ಬಪ್ಪನು-'ವಿಶೇಷವಿಲ್ಲ; ಅದು ಮದುವೆಯಾಟ! ನಾವು ಮದುವೆಯಾಟ ಆಡಿಕೊಳ್ಳಲು ನೀವು ಒಪ್ಪಿದರೆ ಆಗಬಹುದು'ಎಂದನು. ಆ ಮಾತನ್ನು ಕೇಳಿದ ಬಾಲಕೆಯರು ಒಬ್ಬರ ಮುಖವನ್ನೊಬ್ಬರು ನೋಡಿಕೊಳ್ಳುತ್ತ, ಕೆಲಹೊತ್ತು ಸಂದೇಹಪಟ್ಟರಾದರೂ, ಹಗ್ಗವೆಲ್ಲಿ ತಮಗೆ ದೊರಕದೆ ಆಟಕ್ಕೆ ವಿಘ್ನವಾಗುವುದೋ ಎಂದು ಚಿಂತಿಸಿ, ಮದುವೆಯಾಟಕ್ಕೆ ಒಪ್ಪಿದರು. ಒಡನೆಬಪ್ಪನು ತನ್ನ ವಸ್ತ್ರದ ಕೊನೆಯನ್ನೂ, ಗ್ರಾಮನಾಯಕನ ಮಗಳ ವಸ್ತ್ರದ ಕೊನೆಯನ್ನೂ ಸೇರಿಸಿ ಗಂಟುಹಾಕಿ, ಆಕೆಯೂ ಆಕೆಯೊಂದಿಗಿದ್ದ ಆ ಗ್ರಾಮದ ಬಾಲಿಕೆಯರೆಲ್ಲರೂ ಒಬ್ಬರಕೈಯೊಬ್ಬರು ಹಿಡಿದುಕೊಂಡು, ಸಮೀಪದಲ್ಲೇ ಇದ್ದ ಬಹುದಿನಗಳ ಒಂದು ಹಳೆಯ ಮಾವಿನಮರಕ್ಕೆ ಪ್ರದಕ್ಷಿಣೆಮಾಡಿದರು. ವಿವಾಹ ಕಾಲದಲ್ಲಿ ವಧೂವರರು ಒಂದಾನೊಂದು ಹಳೆಯಮರಕ್ಕೆ ಗೊತ್ತಾದ ಇಷ್ಟು ಸಂಖ್ಯೆಯ ಪ್ರದಕ್ಷಿಣೆ

ಮಾಡುವುದೇ ವಿವಾಹದ ಮುಖ್ಯಾಂಗವೆಂದು ಭಾವಿಸಿದ್ದ ಆ ಹಳ್ಳಿಯೂರ ಹುಡುಗಿಯರು. ಹಾಗೆ ಮದುವೆಯಾಟವು ಮುಗಿದ ತರುವಾಯ, ಬಪ್ಪನು ತಂದುಕೊಟ್ಟ ಹಗ್ಗವನ್ನು ಕಟ್ಟಿ ಮನದಣಿಯೆ ಉಯ್ಯಾಲೆಯಾಟವನ್ನು ಆಡಿಕೊಂಡು ಸಾಯಂಕಾಲಕ್ಕೆ ಮನೆಗೆ ಬಂದು ಸೇರಿದರು. ಮದುವೆಯಾಟದ ವಿಚಾರವು ಅವರಿಗೆ ದಿನದಿನಕ್ಕೆ ಸಂಪೂರ್ಣವಾಗಿ ಮರತೇ ಹೋಯಿತು.

ಆದರೆ ಬಪ್ಪನು ಆ ಆಟದ ವಿಚಾರವು ಗ್ರಾಮದಲ್ಲಿನ ಆ ಹುಡುಗಿಯರ ತಂದೆ ತಾಯಿಗಳಿಗೆ ತಿಳಿದರೆ ಏನಾದರೂ ತೊಂದರೆಯುಂಟಾದೀತೆಂದು ಯೋಚಿಸಿ, ತನ್ನ ಸ್ನೇಹಿತರನ್ನೆಲ್ಲ ಕರೆದು ತಾವು ಆ ದಿನ ನಡೆಸಿದ ಆ ವಿಚಿತ್ರ ಕಥೆಯ ವೃತ್ತಾಂತವನ್ನು ಯಾರೆದುರಿಗೂ ಹೇಳಕೂಡದೆಂದೂ, ಹಾಗೆ ಹೇಳುವುದಾದರೆ ಅವರ ಹಿರಿಯರು ಮಾಡಿದ ಪುಣ್ಯಕರ್ಮವೆಲ್ಲ ನಾಶವಾಗಿ ಅವರು ನರಕದಲ್ಲಿ ಬೀಳುವರೆಂದೂ, ದಿಟ್ಟತನದಿಂದ ಅವರಿಂದ ಪ್ರಮಾಣ ಮಾಡಿಸಿಕೊಂಡನು. ಆದರೆ ಆ ವಿಚಾರದಲ್ಲಿ ಗ್ರಾಮದಲ್ಲೇನಾದರೂ ಸಮಾಚಾರ ಹೊರಟರೆ ಅದನ್ನು ಮಾತ್ರ ತಪ್ಪದೆ ತನಗೆ ತಿಳಿಸಬೇಕೆಂದೂ ಹೇಳಿದನು.

ತರುವಾಯ ಎಂದಿನಂತೆ ತನ್ನ ಪಶುಪಾಲನೆಯ ಕಾರ್ಯದಲ್ಲಿ ತೊಡಗಿದ್ದ ಬಪ್ಪನಮೇಲೆ ಕೆಲವು ದಿನಗಳಲ್ಲೇ ಪ್ರಾಪ್ತವಾದ ಒಂದು ಅಪವಾದದ ವಿಚಾರದಲ್ಲಿ ಒಂದು ಕಥೆಯಿದೆ. ಅವನು ಕಾಯುತ್ತಿದ್ದ ಹಸುಗಳ ಮಂದೆಯಲ್ಲಿದ್ದ ಒಂದು ಹಂಡಬಣ್ಣದ ಹಸುವು-ಮನೆಗೆ ಬಂದಾಗ ಕೆಚ್ಚಲು ಬರಿದಾಗಿ ಮೊಲೆಗಳು ಜೋಲುಬಿದ್ದು ಕರೆಯುತೊಡಗಿದಾಗ, ಒಂದು ಹಸಿ ಹಾಲನ್ನಾದರೂ ಕೊಡದಿದ್ದ ಕಾರಣವನ್ನು ತಿಳಿಯಲಾರದೆ, ಬೆಳಗಿನಿಂದ ಸಾಯಂಕಾಲದವರೆಗೂ ಹಸುವನ್ನು ಕಾಯುತ್ತಿರುವ ಇವನೇ ಅದರ ಹಾಲನ್ನೆಲ್ಲಾ ಕರೆದು ಕುಡಿಯುವನು ಎಂದು ಆ ಹಸುವಿನ ಮಾಲೀಕರು ಅವನ ಮೇಲೆ ಅಪವಾದ ಹೊರೆಸಿದರು. ಬಪ್ಪನು ತಾನು ಯಾವ ಪಾಪವನ್ನೂ ಕಂಡರಿಯೆನೆಂದೂ, ಆ ಹಸುವಿನ ಕೆಚ್ಚಲಿನಮೇಲೆ ಕೈ ಹಾಕಲಿಲ್ಲವೆಂದೂ ಹೇಳಿಕೊಂಡನಾದರೂ ಅವನ ವಿಷಯದಲ್ಲಿ ಅವರಿಗೆ ನಂಬಿಕೆಯುಂಟಾಗಲಿಲ್ಲ. ಆಗ, ಆ ಹಸುವು ಹಾಗೆ ಕೆಚ್ಚಲನ್ನು ಬತ್ತಿಸಿಕೊಂಡು ಬರಲು ಕಾರಣವೇನೋ ಅದನ್ನು ಕಂಡುಹಿಡಿಯಬೇಕೆಂದು ಬಪ್ಪನು, ಒಂದಾನೊಂದುದಿನ ಅದು ಮಂದೆಯನ್ನು ಬಿಟ್ಟು ಏಕಾಂಗಿಯಾಗಿ ಹೋಗುತ್ತಿದ್ದುದನ್ನು ಕಂಡು

ಅದಕ್ಕೆ ತಿಳಿಯದಂತೆಯೇ ಅದನ್ನನುಸರಿಸಿ ಹೋದನು. ಹಸುವು ಅನೇಕ ಮರಗಿಡ ಮುಳ್ಳುಕಂಟೆಗಳನ್ನು ಕಳೆದು ಬಹುದೂರ ಸಾಗಿ, ಕೊನೆಗೆ ಒಂದು ಗುಡ್ಡದ ಬುಡದಲ್ಲಿ ಬಹು ದಟ್ಟವಾಗಿ ಬೆಳೆದುಕೊಂಡಿದ್ದ ಒಂದು ಪೊದೆಯ ಮಧ್ಯದಲ್ಲಿದ್ದ ಒಂದು ವೇದಿಕೆಯಮೇಲೆ ನಿಂತು ತನ್ನ ಕೆಚ್ಚಲಿನಿಂದ ಹಾಲನ್ನು ಸುರಿಸುತ್ತಿದ್ದುದನ್ನು ಬಪ್ಪನು ಕಂಡನು. ಆ ವೇದಿಕೆಯಮೇಲೆ ಏನಿರಬಹು ದೆಂದು ಅವನಿಗೆ ಕೌತುಕವೆನಿಸಿ ಮುಂದೆ ಹೋಗಲು, ಅದರ ಸಮೀಪದಲ್ಲೇ ಬಹುಕಾಲದಿಂದಲೂ ಮುಕ್ತಿಮಾರ್ಗಸಾಧನೆಗಾಗಿ ಜಪತಪಾದಿಗಳಲ್ಲಿ ನಿರತ ನಾಗಿ ಯೋಗಸಮಾಧಿಯಲ್ಲಿ ಕುಳಿತಿದ್ದ ಒಬ್ಬಾನೊಬ್ಬ ಸಿದ್ಧಪುರುಷನು ಕಾಣಿ ಸಿದನು. ಬಪ್ಪನು ಸ್ವಲ್ಪ ಮುಂದಕ್ಕೆ ಹೋಗಿ ಕೈ ಜೋಡಿಸಿಕೊಂಡು ಸ್ವಲ್ಪ ಹೊತ್ತು ನಿಂತಿರಲು, ಆ ಮಹಾತ್ಮನು ಸಮಾಧಿಯಿಂದ ಬಹಿರ್ಮುಖನಾಗಿ, ತನ್ನ ದಿವ್ಯಜ್ಞಾನದಿಂದ, ಆ ಬಾಲಕನು ಉತ್ತಮ ಕ್ಷತ್ರಿಯವಂಶ ಸಂಭೂತ ನೆಂಬುದನ್ನೂ, ಮಹತ್ಕಾರ್ಯಸಾಧನೆಗಾಗಿ ವಂಶಕರ್ತನಾಗಿ ಅವತರಿಸಿರುವ ನೆಂಬುದನ್ನೂ ತಿಳಿದು ಅವನನ್ನು ಬಳಿಗೆ ಬರುವಂತೆ ಕರೆದನು. ರಾಜಪು ತ್ರನು ಭಯಭಕ್ತಿಯುತನಾಗಿ ಹತ್ತಿರಕ್ಕೆ ಹೋಗಿ ಸಾಷ್ಟಾಂಗ ನಮಸ್ಕಾರ ಮಾಡಿ, ತಾನು ಪಶುಪಾಲಕನೆಂದೂ, ಮಂದೆಯಿಂದ ತಪ್ಪಿಹೋದ ಹಸು ವನ್ನು ಹುಡುಕಿಕೊಂಡು ಬಂದೆನೆಂದು ಹೇಳಿಕೊಂಡನು. ಸಿದ್ಧನು ಅವನ ಆ ಮಾತುಗಳನ್ನು ಕೇಳಿ ಅವನನ್ನು ಆದರಿಸಿ ದಿನದಿನವೂ ಆ ಗುಡ್ಡದಬಳಿಗೆ ಬಂದು, ತನಗೂ ಅಲ್ಲೇಯಿದ್ದ ಏಕಲಿಂಗಸ್ವಾಮಿಯ ಅಭಿಷೇಕಕ್ಕೂ ಹಾಲ ನ್ನು ಒದಗಿಸುತ್ತಿರೆಂದು ಹೇಳಿ ಆಶೀರ್ವದಿಸಿ ಕಳುಹಿಸಿದನು.

ಅದು ಮೊದಲು ಮುಂದೆ ಹಸುವು ತಪ್ಪಿಸಿಕೊಂಡು ಹೋದಾಗಲೆಲ್ಲ ಬಪ್ಪನು, ಅದನ್ನು ಹುಡುಕುತ್ತಾ ಹೊರಟು, ಸಿದ್ಧನ ಬಳಿಸೇರಿ ಕಡುಭಕ್ತಿ ಯಿಂದ ಆತನ ಪಾದಗಳನ್ನು ತೊಳೆದು ಹಣ್ಣು ಹಂಪಲುಗಳನ್ನು ಸಮರ್ಪಿ ಸುತ್ತ ಆತನ ಪ್ರೀತಿಗೆ ಪಾತ್ರನಾದನು. ಸಿದ್ಧನೂ ಅವನ ವಿಷಯದಲ್ಲಿ ಪ್ರಸ ನ್ನನಾಗಿ ಶೈವ ರಹಸ್ಯಗಳನ್ನು ಉಪದೇಶಿಸಲು, ಬಪ್ಪನು ಪರಮಶಿವಭಕ್ತನಾ ದನು. ಅಲ್ಲದೆ ಅವನು ಬಪ್ಪನಮೇಲೆ ಕನಿಕರವಿಟ್ಟು ಮಂತ್ರೋಪದೇಶವನ್ನು ಮಾಡಲು, ಆ ಮಂತ್ರಮಹಿಮೆಯಿಂದ ಒಂದಾನೊಂದುದಿನ ಅವನಿಗೆ ಶಿವನ ಭಾರ್ಯೆಯಾದ ಮಹಿಷಾಸುರ ಮರ್ದಿನಿಯೂ, ವ್ಯಾಘ್ರವಾಹನಳೂ ಆದ

ಚಾಮುಂಡಿಯು ಪ್ರತ್ಯಕ್ಷಳಾಗಿ ಶತ್ರುನಿರ್ಮೂಲಸಾಧನಗಳಾದ ಈಟಿ, ಬಿಲ್ಲು, ಬತ್ತಳಿಕೆಗಳನ್ನೂ, ಗುರಾಣಿಯನ್ನೂ-ವಿಶ್ವಕರ್ಮನಿರ್ಮಿತವಾಗಿ ಉಭಯ ಪಾರ್ಶ್ವಗಳಲ್ಲೂ ಮೊನೆಯಾಗಿದ್ದ ಒಂದು ಮಹಾಖಡ್ಗವನ್ನೂ ಪ್ರಸಾದಿಸಿದಳು. ಆ ಖಡ್ಗವು ಶಿಲೆಗಳನ್ನಾದರೂ ಭೇದಿಸುವ ಶಕ್ತಿಯುಳ್ಳುದಾಗಿ ಮಹಾಭಾರವಾದುದರಿಂದ ಅದನ್ನು ದಿವ್ಯಪುರುಷರೂ ಮಹಾಶೂರರೂ ಅಲ್ಲದೆ ಸಾಮಾನ್ಯರು ಧರಿಸಲಸಾಧ್ಯವಾದುದಾಗಿದ್ದಿತು. ಹಾಗೆ ದೇವಿಯಿಂದ ಅನುಗೃಹೀತನಾದ ಅವನನ್ನು ಕಂಡು, ಹಾರೀತನೆಂಬ ಆ ಸಿದ್ಧಪುರುಷನು, ಇನ್ನು ತಾನು ಪರಲೋಕವನ್ನು ಕುರಿತು ಹೊರಟುಹೋಗಬಹುದೆಂದೆಣಿಸಿ-'ಮಗೂ ನಾನು ಈ ಶರೀರವನ್ನು ಬಿಟ್ಟು ಸ್ವರ್ಗಕ್ಕೆ ಹೋಗತಕ್ಕವನಿದ್ದೇನೆ. ಆದುದರಿಂದ ನೀನು ನಾಳೆ ಅರುಣೋದಯಕ್ಕೆ ಮುಂಚಿತವಾಗಿಯೇ ಬಂದು ನನ್ನ ಕೊನೆಯ ಆಶೀರ್ವಾದಗಳನ್ನು ಹೊಂದುವನಾಗು' ಎಂದನು. ರಾಜಪುತ್ರನು ಹಾಗೇ ಆಗಲೆಂದು ಒಪ್ಪಿ ಮನೆಗೆ ಬಂದನಾದರೂ ಮಾರನೆಯದಿನ ಆಹೊತ್ತಿಗೆ ಎಚ್ಚರವಾಗದೆ, ಸೂರ್ಯೋದಯಾನಂತರ ಆತನನ್ನು ಕಾಣಲು ಹೊರಟುಬಂದನು. ಅಷ್ಟರಲ್ಲಿ ಆ ಸಿದ್ಧಪುರುಷನು ಅಪ್ಸರಸೆಯರಿಂದ ಹೊರಲ್ಪಟ್ಟ ವಿಮಾನದಲ್ಲಿ ಕುಳಿತು ಅಂತರಿಕ್ಷಮಾರ್ಗದಲ್ಲಿ ಸ್ವಲ್ಪದೂರ ಸಾಗಿದ್ದುದರಿಂದ ಬಪ್ಪನು ಏನುಮಾಡಬೇಕೆಂದು ತೋರದೆ ಚಿಂತಾಕ್ರಾಂತನಾಗಿ ಮಹಾಪ್ರಕಾಶಮಾನವಾಗಿದ್ದ ಆ ಗಂಧರ್ವರನ್ನೆ ದೃಷ್ಟಿಸುತ್ತಾ ನಿಂತನು. ಆಗಲಾ ಸಿದ್ಧಪುರುಷನು ಅವನ ಮೇಲೆ ಕನಿಕರಪಟ್ಟು, ಮೇಲಕ್ಕೇರಿ ಬಂದು ನನ್ನ ಆಶೀರ್ವಾದವನ್ನು ಪಡೆ ಎಂದು ಕೂಗಲಾಗಿ, ಆತನ ವಾಕ್ಸಿದ್ಧಿಯ ಬಲದಿಂದ ಬಪ್ಪನು ಭೂಮಿಯನ್ನು ಬಿಟ್ಟು ಸುಮಾರು ಇಪ್ಪತ್ತು ಮೊಳದಷ್ಟು ಮೇಲಕ್ಕೆ ಏರಿದನಂತೆ! ಸಿದ್ಧನು, ನಿನ್ನ ಬಾಯನ್ನು ತೆರೆ ಎಂದುನುಡಿದು ಬಪ್ಪನು ಹಾಗೆ ತೆಗೆಯಲಾಗಿ ತುಬುಕ್ಕೆಂದು ಬಾಯಿತುಂಬ ಎಂಜಲನ್ನು ಅವನ ಮುಖದಮೇಲೆ ಉಗುಳಿದನು. ಅದನ್ನು ಕಂಡು ಬಪ್ಪನಿಗೆ ಬಹು ಅಸಹ್ಯವಾಗಿ ಆ ಎಂಜಲು ತನ್ನ ಮುಖದಮೇಲೆ ಬೀಳದಂತೆ ಬಂದ ಪಕ್ಕಕ್ಕೆ ಸರಿಯಲು, ಆ ಮುನಿಯ ಎಂಜಲು ಅವನ ಕಾಲುಗಳ ಮೇಲೆ ಬಿದ್ದಿತು. ಆಗ ಸಿದ್ಧನು-'ಅಕ್ಕಟಾ, ಮಗೂ ನೀನು ನಾನು ಉದ್ದೇಶಿಸಿದಂತೆ ನಡೆದಿದ್ದೆಯಾದರೆ, ಚಿರಜೀವಿಯಾಗಿರುತ್ತಿದ್ದೆಯಲ್ಲಾ - ಚಿಂತೆಯಿಲ್ಲ ಈಗಲಾದರೂ ನಿನ್ನ

ದೇಹವು ಯಾವ ಆಯುಧಬಾಧೆಗೂ ಒಳಪಡದಂತೆ ಸುರಕ್ಷಿತವಾಗಿರುವುದು. ನೀನು ಶ್ರೇಯೋವಂತನಾಗು' ಎಂದು ನುಡಿದು ಅಂತರ್ಧಾನನಾದನು.

ಬಪ್ಪನು ತರುವಾಯ ಆ ಗುಹಾಸ್ಥಳವನ್ನು ಬಿಟ್ಟು ತಾಯಿಯ ಬಳಿಗೆ ಬಂದು, ಎಲ್ಲಾ ವೃತ್ತಾಂತಗಳನ್ನೂ ಆಕೆಗೆ ತಿಳಿಸಿದನು. ಆ ಅದ್ಭುತ ಸಮಾಚಾರಗಳನ್ನು ಕೇಳಿದ ಆಕೆಯು,-'ಮಗೂ ಎಲ್ಲರೂ ತಿಳಿದುಕೊಂಡಿರುವಂತೆ ನೀನು ಪಶುಪಾಲಕನಲ್ಲ. ನೀನು ಸಕಲ ಮಹೀಭರಣದಕ್ಷನಾದ ರಾಜಪುತ್ರನು. ನಾನು ಪ್ರಮರರಾಜಕುಲಕ್ಕೆ ಸೇರಿದವಳು' ಎಂದು ತಮ್ಮ ವಂಶದ ಪೂರ್ವವೃತ್ತಾಂತವನ್ನೆಲ್ಲ ಹೇಳಿದಳು. ಅದನ್ನು ಕೇಳಿ ಸಂತಸಗೊಂಡ ಬಪ್ಪನು ಅಂದಿನಿಂದ ಪಶುಪಾಲನ ವೃತ್ತಿಯನ್ನು ತ್ಯಜಿಸಿ, ರಾಜ್ಯಸಂಪಾದನೆ ಮಾಡುವ ಇಷ್ಟವುಳ್ಳವನಾಗಿ ಅಲ್ಲಲ್ಲಿ ತಿರುಗಲಾರಂಭಿಸಿದನು. ಆ ಸಂದರ್ಭದಲ್ಲಿ ಬೇರೊಂದು ಕಾರಣಕ್ಕಾಗಿಯೂ ಅವನು ಆ ಗ್ರಾಮವನ್ನು ಬಿಟ್ಟು ಹೊರಡಬೇಕಾಯಿತು. ಆ ಗ್ರಾಮನಾಯಕನ ಮಗಳು ಪ್ರಾಯಪ್ರಬುದ್ಧಳಾದ್ದರಿಂದ ಅವಳ ವಿವಾಹಕ್ಕೆಂದು ಅಲ್ಲಲ್ಲಿ ವರಾನ್ವೇಷಣೆ ಮಾಡತೊಡಗಿದರು. ಇತ್ತ ನಾಯಕನ ಕುಲಪುರೋಹಿತನು ಆ ವಧುವಿನ ಗ್ರಹಗತಿಗಳನ್ನು ನೋಡುವ ಉದ್ದೇಶದಿಂದ ಹಸ್ತಸಾಮುದ್ರಿಕಾಶಾಸ್ತ್ರರೀತ್ಯಾ ಪರೀಕ್ಷಿಸುತ್ತಿರಲು ಅವಳಿಗೆ ಆವೇಳೆಗೇ ವಿವಾಹವಾಗಿದ್ದಂತೆ ತಿಳಿಯಬಂದಿತು. ಆ ಸಂಗತಿಯು ತಿಳಿದೊಡನೆಯೇ ಆಕೆಯ ಮಾತಾಪಿತೃಗಳೂ ಅವರ ಬಂಧುವರ್ಗದವರೂ ಕಡುಕೋಪಾಕ್ರಾಂತರಾಗಿ, ನಿಶ್ಚಯವೃತ್ತಾಂತವನ್ನು ಹೇಳೆಂದು ನಿಷ್ಠುರವಾಗಿ ಪ್ರಶ್ನಿಸಲು—ಆ ಹುಡುಗಿಯು ಹಿಂದೆ ನಡೆದ ವಿವಾಹ ಸಂಬಂಧವಾದ ಆಟದ ವಿಚಾರವನ್ನು ಇದ್ದುದಿದ್ದಂತೆ ತಿಳಿಸಿ ಬಿಟ್ಟಳು. ವಧೂವರರ ವಸ್ತ್ರಗಳಕೊನೆಯನ್ನುಸೇರಿಸಿ ಗಂಟುಹಾಕುವಿಕೆಯೂ, ಒಬ್ಬರ ಕೈಯ್ಯನ್ನೊಬ್ಬರು ಹಿಡಿದುಕೊಂಡು ಮರವನ್ನು ಪ್ರದಕ್ಷಿಣೆ ಮಾಡುವಿಕೆಯೂ ವಿವಾಹ ವಿಧಿಯ ಮುಖ್ಯಾಂಗಗಳೆಂಬುದು ಆ ಪಂಗಡದವರ ನಂಬಿಕೆಯಾಗಿದ್ದುದರಿಂದ, ಆ ಗ್ರಾಮದಲ್ಲಿದ್ದ ಆರುನೂರುಮಂದಿ ಬಾಲಿಕೆಯರಿಗೆ ಬಪ್ಪನೇ ಪತಿಯಾದಂತೆ ಆಯಿತು. ತನ್ನ ಜೊತೆಯ ಪಶುಪಾಲಕರಲ್ಲೊಬ್ಬನಿಂದ ಈ ಸಂಗತಿಯನ್ನೆಲ್ಲಾ ತಿಳಿದ ಬಪ್ಪನು, ಕ್ರೋಧಪರವಶರಾದ ಅಷ್ಟುಮಂದಿ ಮಾವಂದಿರ ಕಣ್ಣೆದುರಿನಿಂದ ತಪ್ಪಿಸಿಕೊಂಡು ಹೋಗುವುದೇ ಮೇಲೆಂದು ಯೋಚಿಸಿ

ತನ್ನ ತಾಯಿಯೊಂದಿಗೆ ಆ ಗ್ರಾಮದಿಂದ ಹೊರಟು, ಪ್ರಯಾಣದ ಮೇಲೆ ಪ್ರಯಾಣಮಾಡುತ್ತಾ ನಡೆದು ಚಿತ್ತೂರನ್ನು ಪ್ರವೇಶಿಸಿದನು.

ಆ ಕಾಲದಲ್ಲಿ ಚಿತ್ತೂರು ರಾಜ್ಯವು ಮಾಳವ ವಂಶಸ್ಥನಾದ ಆತನ ಸೋದರಮಾವನ ಪಾಲನೆಗೆ ಒಳಪಟ್ಟಿತ್ತು. ಆತನು ಬಹು ದಿನಗಳಿಗೆ ಬಂದ ತನ್ನ ತಂಗಿಯನ್ನೂ ಆಕೆಯ ಶೂರನಾದ ಮಗನನ್ನೂ ಕಂಡು ಬಹು ಪ್ರೀತಿಯಿಂದ ಆದರಿಸಿದನು. ಬಪ್ಪನು ದಿನದಿನಕ್ಕೆ ರಾಜನಾದ ತನ್ನ ಸೋದರಮಾವನ ಪ್ರೀತಿವಿಶ್ವಾಸಗಳಿಗೆ ಪಾತ್ರನಾಗಿ, ರಾಜಸೈನ್ಯದ ಸರದಾರರ ಪಙ್ತ್ತಿಯಲ್ಲಿ ಒಂದು ಗಣ್ಯಸ್ಥಾನವನ್ನು ಸಂಪಾದಿಸಿಕೊಂಡನು. ಎಲ್ಲಿಂದಲೋ ಬಂದು ಸಂಬಂಧಿಗಳೆಂದು ಸೇರಿಕೊಂಡ ಅವರ ಪ್ರಾಬಲ್ಯವನ್ನು ಕಂಡು ಅಲ್ಲಿನ ರಾಜಾಶ್ರಿತರಾದ ಸರದಾರರಿಗೆ ಅಸೂಯೆಯುಂಟಾಯಿತು. ಹೀಗಿರುವಲ್ಲಿ ಆ ರಾಜ್ಯದಮೇಲೆ ದಂಡೆತ್ತಿಬಂದ ಶತ್ರುವಿನಮೇಲೆ ತಾವು ದಂಡೆತ್ತಿ ಯುದ್ಧಮಾಡುವುದಿಲ್ಲವೆಂದೂ, ರಾಜನ ಅತಿಶಯ ಪ್ರೇಮಾದರಗಳಿಗೆ ಪಾತ್ರನಾದ ಸೋದರಳಿಯನೊಬ್ಬನೇ ಅವರನ್ನು ಜಯಿಸಿಕೊಳ್ಳಲೆಂದೂ ಹೇಳಿಬಿಟ್ಟರು. ರಾಜ್ಯಕ್ಕೆ ಸಂಕಟ ಬಂದ ಅಂತಹ ಕಾಲದಲ್ಲಿ ಸಹಾಯಮಾಡದೆ ಹಿಂದೆಗೆವುದಾದರೆ, ಅವರಿಗೆ ವಂಶಪಾರಂಪರ್ಯವಾಗಿ ನಡೆದು ಬಂದ ಜಹಗೀರು ಮುಡಿ ಮಾನ್ಯಗಳೆಲ್ಲವೂ ರಾಜ್ಯಕ್ಕೆ ಸೇರಿ ಹೋಗುವುವೆಂದು ಹೇಳಿದ ಬೆದರಿಕೆಯು ಸಹ ಫಲಕಾರಿಯಾಗಲಿಲ್ಲ. ಆ ಮಾನ್ಯ-ಭೂಮಿಗಳನ್ನೆಲ್ಲ ವಹಿಸಿಬಿಟ್ಟು ನಾವೆಲ್ಲಾದರೂ ಹೊರಟುಹೋಗುವೆವಲ್ಲದೆ, ನಿನ್ನ ಪಕ್ಷದಲ್ಲಿ ಯುದ್ಧಮಾಡಲಾರೆವೆಂದು ತಿಳಿಸಿಬಿಟ್ಟರು. ಆ ಮಾತನ್ನು ಕೇಳಿದೊಡನೆಯೇ, ಬಪ್ಪನು ಲೇಶಮಾತ್ರವೂ ಬೆದರದೆ-ಕುಗ್ಗದೆ, ಮುಖವನ್ನು ಜೋಲುಬೀಳಗೊಡದೆ, ತನ್ನ ಸೋದರಮಾವನಿಗೆ ಧೈರ್ಯಹೇಳುತ್ತಾ ತಾನೊಬ್ಬನೇ ಯುದ್ಧಕ್ಕೆ ಸಿದ್ಧನಾದನು. ಅವನ ಧೈರ್ಯಸಾಹಸಗಳನ್ನು ನೋಡಿ ಮಿಕ್ಕ ಸರದಾರರೆಲ್ಲರೂ ವಿಭ್ರಾಂತರಾಗಿ ಕ್ರಮವಾಗಿ ಒಬ್ಬೊಬ್ಬನೇ ಬಂದು ಸೇರಿ ಅವನ ಕೈ ಕೆಳಗೆ ನಿಂತು ಶತ್ರುಸೇನೆಯೊಂದಿಗೆ ಕಾದಿದರು. ಭವಾನಿಯ ಕೃಪಾಪಾತ್ರನಾಗಿದ್ದ ಅವನ ಕೈಚಳಕವನ್ನೂ ಶಸ್ತ್ರವಿದ್ಯಾ ಪ್ರಾವೀಣ್ಯತೆಯನ್ನೂ ಶತ್ರುಗಳೂ ತರಹರಿಸಲಾರದೆ ಶರಣಾಗತರಾದರು. ಶತ್ರುರಾಜನು ಬಪ್ಪನಿಗೆ ತನ್ನ ಮಗಳನ್ನು ಕೊಟ್ಟು ಲಗ್ನಮಾಡಿದನು.

ನವಯೌವನ ಶಾಲಿಯೂ ಉದಾರಿಯೂ ಶೂರನೂ ಸ್ನೇಹಪರನೂ ಆದ ಬಪ್ಪನಮೇಲೆ ಸರದಾರರೆಲ್ಲರ ಪ್ರೇಮವೂ ಅಧಿಕವಾಯಿತು. ಅವರು ಆತನನ್ನು ಕುರಿತು ಈ ರಾಜನ ದುಷ್ಪರಿಪಾಲನದಿಂದ ನಾವೆಲ್ಲರೂ ಬೇಸತ್ತಿದ್ದೇವೆ. ಈತನನ್ನು ಸಿಂಹಾಸನ ಭ್ರಷ್ಟನನ್ನು ಮಾಡಿ, ನೀನೇ ರಾಜ್ಯಾಧಿಪತಿಯಾದರೆ, ನಾವೆಲ್ಲರೂ ನಿಶ್ಶಂಕೆಯಿಂದ ನಿನ್ನನ್ನು ಓಲೈಸುವೆವೆಂದು ಭಾಷೆಯಿತ್ತರು. ಒಡನೆ ಬಪ್ಪನು ಅದರ ಉಚಿತಾನುಚಿತಗಳನ್ನು ಸಾವಧಾನವಾಗಿ ಯೋಚಿಸಿ, ಕೊನೆಗೆ ತಾನು ರಾಜನಾಗತಕ್ಕುದೇ ಸರಿಯೆಂದು ನಿರ್ಧರಿಸಿ ಆ ಸರದಾರರ ಸಹಾಯದಿಂದ ಆ ರಾಜನನ್ನು ಸಿಂಹಾಸನದಿಂದ ತೊಲಗಿಸಿ ರಾಜ್ಯವನ್ನು ಆಕ್ರಮಿಸಿದನು. ಹಿಂದೆ ಸಿದ್ಧಪುರುಷನು ಬಪ್ಪನನ್ನು ಏಕಲಿಂಗ ಸ್ವಾಮಿಯ ಧರ್ಮಕರ್ತನನ್ನಾಗಿ ನಿಯಮಿಸಿದ್ದನು. ಈಗ ಆತನು ಹಿಂದೂ ಮತ ಪ್ರಭಾಕರನೆಂದೂ, ಸರ್ವ ಭೂಮಂಡಲಾಧೀಶ್ವರನೆಂದೂ ಬಿರುದನ್ನು ಧರಿಸಿ, ಬಪ್ಪಾರಾವಳನೆಂದು ಹೊಗಳಿಸಿಕೊಂಡನು. ಬಪ್ಪಾರಾವಳನು ಅನೇಕ ಮಂದಿ ಸ್ತ್ರೀಯರನ್ನು ವಿವಾಹಮಾಡಿಕೊಂಡನು. ಚಿತ್ತೂರು ರಾಜ್ಯವನ್ನು ಸತ್ಯ ಧರ್ಮನ್ಯಾಯಗಳಿಗೆ ಆವಾಸಸ್ಥಾನವಾಗಿರುವಂತೆ ಬಹುಕಾಲ ಪಾಲಿಸಿದನು. ಆತನ ಪತ್ನಿಯರಲ್ಲಿ ದ್ವೀಪಾಂತರದ ರಾಜಕನ್ಯೆಯೂ ಒಬ್ಬಳಿದ್ದಳಂತೆ ಆಕೆಯು ತನ್ನೊಂದಿಗೆ ತಂದಿದ್ದ ಒಂದು ಲೋಕಮಾತಾ ವಿಗ್ರಹವನ್ನು ರಾಜನು ಕೋಟೆಯಲ್ಲಿ ಸ್ಥಾಪಿಸಿ, ಸಕಲವಿಧ ಪೂಜೆಪುರಸ್ಕಾರಗಳನ್ನೂ ನಡಿಸುತ್ತಿದ್ದನು. ಚಿತ್ತೂರುಕೋಟೆಗೆ ಅಧಿನಾಯಿಕೆಯಾದ ಆ ದೇವಿಯು ಬಹುಕಾಲ ಆ ಕೋಟೆಯನ್ನು ಸಂರಕ್ಷಿಸಿದಳು. ಆ ದ್ವೀಪಾಂತರದ ಸ್ತ್ರೀಯಲ್ಲಿ ಉದಯಿಸಿದ ಪುತ್ರನೇ ಬಪ್ಪಾರಾವಳನ ತರುವಾಯ ಸಿಂಹಾಸನವನ್ನೇರಿ ಚಿತ್ತೂರು ರಾಜ್ಯವನ್ನು ಪಾಲಿಸಿದನು.

ಬಪ್ಪರಾವಳನ ಜೀವಿತವೆಲ್ಲ ಹೇಗೆ ಅದ್ಭುತ ಕಥೆಗಳಿಂದ ಕೂಡಿದೆಯೋ ಆತನ ಮರಣವೂ ಹಾಗೆಯೇ ಅದ್ಭುತವೃತ್ತಾಂತಗಳಿಂದ ಕೂಡಿದೆ. ಆತನು ಅತಿ ವೃದ್ಧನಾದ ತರುವಾಯ, ಹೇಡಿಯಂತೆ ಮನೆಯಲ್ಲಿ ಹಾಸಿಗೆಯಲ್ಲಿ ಮಲಗಿ ಪ್ರಾಣಬಿಡಲು ಇಷ್ಟಪಡದೆ, ಕ್ಷತ್ರಿಯನಾದ ತನಗೆ ಯುದ್ಧರಂಗವೇ ತಕ್ಕ ಮರಣ ಸ್ಥಳವೆಂದು ನಿರ್ಧರಿಸಿ, ಸೇನೆಗಳನ್ನು ತೆಗೆದುಕೊಂಡು, ಪಶ್ಚಿಮದೇಶಗಳ ಮೇಲೆ ದಂಡೆತ್ತಿ ನಡೆದನು. ಕಣ್ಣಿಗೆ ಕಂಡ ಪ್ರಾಂತವನ್ನೆಲ್ಲ

ಜಯಿಸಿ ಚಿತ್ತೂರು ರಾಜ್ಯಕ್ಕೆ ಸೇರಿಸುತ್ತಾ, ಕೊರಸಾನ್ ಎಂಬ ಮ್ಲೇಂಛ ರಾಜ್ಯವನ್ನೂ ಜಯಿಸಿ, ಅಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿದನು. ಕಾಶ್ಮೀರ, ಕಂದಹಾರು, ಪಾರಶೀಕ, ತುರ್ಕಸ್ಥಾನ ಮೊದಲಾದ ಪಶ್ಚಿಮದೇಶಾಧೀಶ್ವರರೆಲ್ಲರೂ ಆತನ ಆಧಿಪತ್ಯಕ್ಕೆ ಒಳಪಟ್ಟು ಕಪ್ಪಗಳನ್ನು ಕೊಟ್ಟು ಸಾಮಂತರಾದರು. ಚಿಕ್ಕಂದಿನಲ್ಲಿ ಹೇಗೋ ಹಾಗೆ ವಾರ್ಧಿಕಾವಸ್ಥೆಯಲ್ಲೂ ಆತನಿಗೆ ವಿವಾಹಾಪೇಕ್ಷೆಯು ಉತ್ಕಟವಾಗಿದ್ದುದರಿಂದ ಆತನು ಆ ಸಾಮಂತರಾಜವರ್ಗದ ಸುಮಾರು ನೂರುಮಂದಿ ಕನ್ಯೆಯರನ್ನು ವಿವಾಹವಾಗಿ ಅವರಲ್ಲಿ ನೂರಮೂವತ್ತು ಮಂದಿ ಪುತ್ರರನ್ನು ಪಡೆದನೆಂದು ಪ್ರತೀತಿಯಿದೆ. ಈ ಕುಮಾರರೇ ನೂರಮೂವತ್ತು ಬಗೆಯ ಪಠಾನುತುರುಷ್ಕ ಪಂಗಡಗಳಿಗೆ ವಂಶಕರ್ತರೆಂದೂ ಒಂದು ಹೇಳಿಕೆಯುಂಟು.

ಕೊರಸಾನ್ ಪ್ರಾಂತದಲ್ಲಿ ಹಾಗೆ ಕೆಲವುಕಾಲ ರಾಜ್ಯವಾಳಿಕೊಂಡಿದ್ದ ತರುವಾಯ, ಆ ರಾಜವರೇಣ್ಯನು ಇಹಲೋಕದ ಭೋಗಭಾಗ್ಯಗಳಲ್ಲೂ ವಿಷಯಾದಿಗಳಲ್ಲೂ ವಿರಕ್ತನಾಗಿ ಅಲ್ಲಿಂದ ಹೊರಟು ಪರಮಪಾವನವಾದ ಮಹಾಮೇರು ಶೈಲಪ್ರಾಂತಕ್ಕೆ ನಡೆದು, ಜಿತೇಂದ್ರಿಯನಾಗಿ ಕಾಲಕಳೆಯುತ್ತಿಗಿದನು. ಕೊನೆಗಾಲದಲ್ಲಿ ಆತನು ಸನ್ಯಾಸ ಸ್ವೀಕಾರಮಾಡಿ ಕೇವಲ ಜಪತಪಾನುಷ್ಠಾನಾದಿಗಳಲ್ಲೇ ಕಾಲಯಾಪನೆ ಮಾಡುತ್ತಿದ್ದನೆಂದೂ ಉಕ್ತವಾಗಿದೆ. ಹೀಗೆ ಬಪ್ಪಾರಾವಳನು ಶತ ವೃದ್ಧನಾಗಿ ದೇಹತ್ಯಾಗಮಾಡಿದಮೇಲೂ ಒಂದು ಅದ್ಭುತ ಪ್ರಸಂಗವು ನಡೆಯಿತೆಂಬುದನ್ನು ಉದಹರಿಸುವ ಕಥೆಯೊಂದುಂಟು. ತಮ್ಮ ರಾಜನು ಕೀರ್ತಿಶೇಷನಾದನೆಂಬ ವಾರ್ತೆಯನ್ನು ಕೇಳಿದೊಡನೆಯೇ ಆತನ ಪೂರ್ವದ ಪ್ರಜೆಗಳಾಗಿದ್ದ ಹಿಂದೂಗಳೂ ಈಚೆಗಿನ ಪ್ರಜೆಗಳಾದ ಮುಹಮ್ಮದೀಯರೂ ತಂಡತಂಡವಾಗಿ ಬಂದು ಆತನ ದೇಹವು ದಹಿಸಲ್ಪಡುವುದಕ್ಕಾಗಿ ತಮಗೆ ಸೇರತಕ್ಕುದೆಂದು ಹಿಂದೂಗಳೂ, ಹೂಳಲ್ಪಡುವುದಕ್ಕಾಗಿ ತಮಗೆ ಸೇರತಕ್ಕುದೆಂದು ಮುಹಮ್ಮದೀಯರೂ ವ್ಯಾಜ್ಯಮಾಡಲಾರಂಭಿಸಿದರು. ಅಷ್ಟರಲ್ಲಿ ಆ ಗುಂಪಿನಲ್ಲಿದ್ದವರಲ್ಲೊಬ್ಬನು ರಾಜನ ದೇಹದ ಮೇಲೆ ಹೊದ್ದಿಸಿದ್ದ ಬಟ್ಟೆಯನ್ನು ಸ್ವಲ್ಪ ಓರೆಮಾಡಿ ನೋಡಲಾಗಿ ಅಲ್ಲಿ ರಾಜನ ಮೃತಕಳೇಬರವಾಗಲಿ ಅದರ ಗುರುತಾಗಲೀ ಇಲ್ಲದೆ ಆ ಸ್ಥಳದಲ್ಲಿ ಲೆಕ್ಕವಿಲ್ಲದಷ್ಟು ತಾವರೆ ಪುಷ್ಪಗಳು ಉದ್ಭವವಾಗಿ ಎಲ್ಲರಿಗೂ ಪರಮಾಶ್ಚರ್ಯವನ್ನು

ಉಂಟುಮಾಡಿದುವು. ಹಿಂದೂ ಮತ್ತು ಮಹಮ್ಮದೀಯ ಪ್ರಜೆಗಳಿಬ್ಬರೂ, ಆ ಪುಷ್ಪಗಳನ್ನು ಸಮವಾಗಿ ಹಂಚಿಕೊಂಡು, ತೆಗೆದುಕೊಂಡೊಯ್ದು ತಮ್ಮ ಕೊಳಗಳಲ್ಲಿಟ್ಟು ಬೆಳೆಯಿಸತೊಡಗಿದರು.

ಗಿಹಲೋಟ ಅಥವ ಶಿಶೋದಯಾ ವಂಶದ ಮೂಲಪುರುಷನಾದ ಬಪ್ಪಾರಾವಳನು ತನ್ನ ಸೋದರಮಾವನಾದ ಮಾಳವವಂಶದ ರಾಜನನು ಸಿಂಹಾಸನದಿಂದ ತಳ್ಳಿ ಚಿತ್ತೂರು ಸಂಸ್ಥಾನವನ್ನು ಆಕ್ರಮಿಸಿ ತನ್ನ ವಂಶೀಯರಿಗೆ ಮೂಲಸ್ಥಾನವಾಗಿ ಆ ರಾಜ್ಯವನ್ನು ಸ್ಥಾಪಿಸಿಕೊಟ್ಟಾಗಿನಿಂದ ಎಂದರೆ ಕ್ರಿ. ಶ. ೭೨೮ನೆಯ ಸಂ||ದಿಂದ, ಈವರೆಗೆ ಐವತ್ತೊಂಬತ್ತು ಮಂದಿ ರಾಜರು ಸಿಂಹಾಸನಾರೂಢರಾಗಿ ರಾಜ್ಯವಾಳುತ್ತ ಬಂದಿದಾರೆಂದು ಆ ಸಂಸ್ಥಾನದ ಚರಿತ್ರೆಯು ಹೇಳುತ್ತಿದೆ. ಪ್ರಾರಂಭದಲ್ಲಿದ್ದ ಕೆಲಮಂದಿ ರಾಜರು ಬಪ್ಪಾರಾವಳನಂತೆಯೇ ರಾವಳನೆಂಬ ಬಿರುದನ್ನು ವಹಿಸಿದ್ದರಾದರೂ. ಈಚೆಗೆ ಬಂದವರು ರಾಣಾ ಎಂಬ ಬಿರುದನ್ನು ಧರಿಸಿದರು. ಆ ಮೂಲ ಪುರುಷನ ಕಾಲದಿಂದಲೂ, ಅಲ್ಲಿಯ ಏಕಲಿಂಗಸ್ವಾಮಿಯ ಪೀಠಕ್ಕೆ ಆ ರಾಜವಂಶೀಯರೇ ಧರ್ಮಕರ್ತರಾದುದರಿಂದ, ಈಗಲೂ ಅವರು ದೇವಸ್ಥಾನಕ್ಕೆ ಹೋದಾಗ್ಗೆ ಸ್ವತಃ ದೇವರಿಗೆ ಅರ್ಚಕರಾಗಿ ಸೇವೆಮಾಡುವ ಆಚಾರವು ಉಂಟೆಂದೂ ಪ್ರತೀತಿಯಿದೆ ಆತನ ಹಿಂದೂ ರಾಣಿಯರ ಉದರದಲ್ಲಿ ತೊಂಬತ್ತೆಂಟು ಮಂದಿ ಮಕ್ಕಳು ಜನಿಸಿದ್ದರೆಂದೂ ಅವರಿಗೆ 'ಅಗ್ನಿಉಪಾಸಿ ಸೂರ್ಯವಂಶೀಯ'ರೆಂದು ಹೆಸರುಂಟೆಂದೂ ಪೂರ್ವ ಚರಿತ್ರೆಯೊಂದು ಹೇಳುತ್ತಿದೆ. ಹೀಗೆ ಬಹು ಪುತ್ರಸಂಪತ್ತನ್ನು ಗಳಿಸಿ, ವಂಶಕರ್ತನಾದ ಶ್ರೀ ಬಪ್ಪಾರಾವಳನು ತನ್ನ ಅದ್ಭುತ ಚರಿತ್ರೆಯಿಂದ ರಾಜಪುತಾನ ಲೋಕಕ್ಕೆ ಧ್ರುವನಕ್ಷತ್ರದಂತೆ ಶಾಶ್ವತ ಕೀರ್ತಿಪ್ರದನಾಗಿರುವನು.

# ಸಮರಸಿಂಹ

ಮಹಾವೀರನೂ ವಂಶಕರ್ತನೂ ಆದ ಬಪ್ಪಾರಾವಳನ ತರುವಾಯ ಆ ವಂಶದಲ್ಲಿ ಹಲವು ಮಂದಿ ಅರಸರು ಚಿತ್ತೂರನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು. ದಿನದಿನಕ್ಕೆ ನಗರವು ಬಹುಮಟ್ಟಿಗೆ ವಿಸ್ತಾರಗೊಳಿಸಲ್ಪಟ್ಟಿತು. ಸುಂದರವಾದ ದೇವಾಲಯಗಳೂ, ರಮ್ಯವಾದ ಸೌಧಗಳೂ ಮಹಲುಗಳೂ ಸಭಾಭವನಗಳೂ ನಿರ್ಮಿತವಾದುವು. ನಗರದ ಸುತ್ತಲೂ ಉನ್ನತವಾದ ದೃಢವಾದ ಶತ್ರುದುರ್ಭೇದ್ಯವಾದ ಕೋಟೆಯು ಕಟ್ಟಿಸಲ್ಪಟ್ಟಿತು. ಅದರ ಸುತ್ತಲೂ ಆಳವೂ ವಿಶಾಲವೂ ಆದ ಕಂದಕವು ನೀರಿನಿಂದ ತುಂಬಲ್ಪಟ್ಟು ಶತ್ರುರಾಜರು ಆ ಕೋಟೆಯನ್ನು ಸೋಂಕಲೀಯದಂತೆ ಕಾಪಾಡುತ್ತಿತ್ತು. ನಗರದಲ್ಲಿ ವಿವಿಧ ಪುಷ್ಪಫಲ ವೃಕ್ಷಗಳೂ ಮನೋಹರವಾದ ಉದ್ಯಾನಗಳೂ, ವಿಸ್ತಾರವಾದ ರಾಜಮಾರ್ಗಗಳೂ ನಗರದ ಸೌಂದರ್ಯವನ್ನು ಹೆಚ್ಚಿಸಿದುವು. ಅಸಹಾಯ ಶೂರರಾದ ರಾಜಪುತ್ರ ಸರದಾರರು, ನರಶಾರ್ದೂಲರೆನಿಸಿ ಆ ನಗರದ ದಿವ್ಯಸೌಧಗಳಲ್ಲಿ—ಗಿರಿಕಂದರಗಳಲ್ಲಿ ವಾಸಿಸುವ ಮೃಗರಾಜಗಳೋ ಎಂಬಂತೆ—ರಾಜವಂಶವನ್ನಾಶ್ರಯಿಸಿಕೊಂಡು ಅತಿಭಯಂಕರರಾಗಿ ವಾಸಿಸುತ್ತಿದ್ದರು.

ಬಪ್ಪಾರಾವಳನ ತರುವಾಯ ಸಿಂಹಾಸನಾರೋಹಣ ಮಾಡಿದವರಲ್ಲಿ ಅಪರಾಜಿತ್, ಖೋಮಾಣ್, ಸಿಂಗ್ಜೀ, ಶಕ್ತಿಕುಮಾರ, ಅಂಬಾಪ್ರಸಾದ, ನರವರ್ಮ, ಜಸ್ವೋವರ್ಮ ಎಂಬೀ ಕೆಲಮಂದಿಯಲ್ಲದೆ, ಮಿಕ್ಕವರ ಹೆಸರುಗಳು ಸಹ ದೊರೆಯುವುದಿಲ್ಲ. ಇವರ ಕಾಲದಲ್ಲೂ ಚರಿತ್ರ ಪ್ರಸಿದ್ಧವೆನಿಸುವಂತಹ ಯಾವ ಮಹತ್ಕಾರ್ಯವೂ ಜರುಗಿದುದಿಲ್ಲ. ಆದುದರಿಂದ ಮಧ್ಯದ ಎರಡು ಮೂರು ಶತಮಾನಗಳ ಕಾಲವನ್ನು ದಾಟಿ, ನಾವು ಹನ್ನೆರಡನೆಯ ಶತಮಾನದ ಪ್ರಾರಂಭದಿಂದ ಪುನಃ ನಮ್ಮ ಕಥಾತಂತುವನ್ನು ಮುಂದರಿಸಲೆಳೆಸುತ್ತೇವೆ.

ವಿಕ್ರಮ ಶಕೆಯ ೧೨೦೬ನೆಯ ಸಂ॥ದಲ್ಲಿ ಸಮರಸಿಂಹ ನೆಂಬ ರಾಜಪುತ್ರನು ಚಿತ್ತೂರಿನಲ್ಲಿ ಜನ್ಮಿಸಿದನು. ಬ್ರಾಹ್ಮಣ ಬಾಲಕರಿಗೆ ಅಕ್ಷರವಿದ್ಯೆ

ಯು ಪ್ರಾರಂಭಿಸಲ್ಪಡುವಂತೆ, ಕ್ಷತ್ರಿಯ ಬಾಲಕರಿಗೆ ರಣವಿದ್ಯೆಯೇ ಬಾಲ ಪಾಠವಾಗಿ ಪ್ರಾರಂಭಿಸಲ್ಪಡುವುದು ರಾಜಪುಟಾನದಲ್ಲಿ ಪೂರ್ವಾಚಾರವು. ಸಮರಸಿಂಹನು ಶಸ್ತ್ರವಿದ್ಯಾ ಪಾರಂಗತರಾದ ಗುರುಗಳಲ್ಲಿ ಕ್ರಮವಾಗಿ ಅಭ್ಯಾಸಮಾಡಿ ಸಕಲವಿಧ ಶಸ್ತ್ರಗಳ ಪ್ರಯೋಗೋಪ ಸಂಹಾರಗಳಲ್ಲೂ, ಕತ್ತಿ ಈಟಿ ಗದೆ ಮುಂತಾದುವುಗಳ ಉಪಯೋಗಗಳಲ್ಲೂ, ಕುದುರೆಯೋರಾಟದಲ್ಲೂ ಅದ್ವಿತೀಯ ಪಂಡಿತನಾದನು. ಯುಕ್ತ ಕಾಲದಲ್ಲಿ, ಚಹ್ವಾಣ ಕುಲ ಭೂಷಣನೂ, ದೆಹಲಿಯಲ್ಲಿ ರಾಜ್ಯಾಧಿಪನೂ ಆದ ಪೃಥ್ವೀರಾಜನ ಸೋದರಿ ಕರ್ಮದೇವಿಯೆಂಬ ನಾರೀಮಣಿಯ ಪಾಣಿಗ್ರಹಣಮಾಡಿ, ಆತನು ಚಿತ್ತೂರು ರತ್ನ ಸಿಂಹಾಸನವನ್ನು ಅಧಿರೋಹಿಸಿದನು. ಮೇವಾಡ ಸಂಸ್ಥಾನವು ಸಮರಸಿಂಹನ ಪಾಲನೆಗೊಳಪಟ್ಟು ತೇಜಸ್ಸಂಪನ್ನವಾಯಿತು.

ಆ ಕಾಲದಲ್ಲಿ ಭಾರತದೇಶವಿದ್ದ ಸ್ಥಿತಿಯನ್ನು ಕುರಿತು ಸ್ವಲ್ಪ ಮಟ್ಟಿಗೆ ತಿಳಿಸತಕ್ಕದು ಪ್ರಕೃತವಿದೆ. ಆದುದರಿಂದ ಸಾಕ್ಷಾತ್ತಾಗಿ ಮೇವಾಡ ಸಂಸ್ಥಾನದ ಚರಿತ್ರೆಗೇ ಸಂಬಂಧಿಸದಿದ್ದರೂ, ದೆಹಲಿಯ ರಾಜ್ಯವನ್ನು ಕುರಿತ ಸಂಕ್ಷೇಪ ವೃತ್ತಾಂತವನ್ನು ಇಲ್ಲಿ ಹೇಳುತ್ತೇವೆ. ದೆಹಲಿಯಲ್ಲಿ ಆಳುತ್ತಿದ್ದ ಚಹ್ವಾಣವಂಶದ ಪೃಥ್ವಿರಾಜನಿಗೂ, ಕನ್ಯಾಕುಬ್ಜದಲ್ಲಿ ಆಳುತ್ತಿದ್ದ ಜಯಚಂದ್ರನಿಗೂ ಕಾರಣಾಂತರದಿಂದ ಬದ್ಧದ್ವೇಷವೇರ್ಪಟ್ಟು, ಜಯಚಂದ್ರನು ತಾನು ದೆಹಲಿಯ ಆಧಿಪತ್ಯಕ್ಕೇ ಒಳಪಟ್ಟಿದ್ದರೂ, ಪೃಥ್ವಿರಾಜನ ಸ್ವಾಮ್ಯವನ್ನು ಮನ್ನಿಸದೆಯೂ, ಅವನನ್ನು ಯಾವ ಬಗೆಯಿಂದಲೂ ಗೌರವಿಸದೆಯೂ ಮತ್ತನಾಗಿದ್ದನು. ಸಾಲದುದಕ್ಕೆ, ತನ್ನ ಮಗಳಾದ ಸಂಯುಕ್ತಾದೇವಿಯ ಸ್ವಯಂವರ ಕಾಲದಲ್ಲಿ ರಾಜಕುಲ ಭೂಷಣನಾದ ಪೃಥ್ವೀರಾಜನಿಗೂ ಆತನ ಪರಮಮಿತ್ರನೂ ಬಂಧುವೂ ಆದ ಸಮರಸಿಂಹನಿಗೂ ಆಹ್ವಾನವನ್ನು ಸಹ ಕಳುಹಿಸದೆ ಅಲಕ್ಷ್ಯಮಾಡಿದನು. ಅಷ್ಟುಮಾತ್ರವಲ್ಲ, ಆ ಇಬ್ಬರು ವೀರರ ಬಂಗಾರದ ವಿಗ್ರಹಗಳನ್ನು ಮಾಡಿಸಿ, ಅವುಗಳಿಗೆ ದ್ವಾರಪಾಲಕರ ಉಡುಪನ್ನು ತೊಡಿಸಿ ಅಖಿಲ ಭೂಪತಿಗಳೂ ನೆರೆದಿದ್ದ ಆ ಸ್ವಯಂವರ ಸಭಾಭವನದಲ್ಲಿ ನಿಲ್ಲಿಸಿ ಅವಮಾನಗೊಳಿಸಿದನು. ಆದರೆ ಸಂಯುಕ್ತಾದೇವಿಯಾದರೋ ಅಪ್ರತಿಮವೀರನೂ, ದಿವ್ಯಸುಂದರ ವಿಗ್ರಹನೂ ಪ್ರಾಯಸಮರ್ಥನೂ ಆದ ಪೃಥ್ವಿರಾಜನನ್ನೇ ಮನಸಾ ವರಿಸಿದ್ದು,-ಪೂರ್ವಯುಗದ ರುಕ್ಮಿಣಿದೇವಿಯು

ತ್ರೀ ಯದುವೀರನನ್ನು ಪ್ರಾರ್ಥಿಸಿಕೊಂಡಿದ್ದಂತೆ-ಸ್ವಯಂವರಕಾಲಕ್ಕೆ ಆ ಸ್ಥಳಕ್ಕೆ ಬಂದು ತನ್ನನ್ನು ಕರೆದುಕೊಂಡು ಹೋಗಬೇಕೆಂದು ಪತ್ರಮೂಲಕ ಆತನಿಗೆ ಬಿನ್ನವಿಸಿಕೊಂಡಿದ್ದಳು. ಆ ಸುಂದರೀಮಣಿಯ ಪ್ರಾರ್ಥನೆಯನ್ನು ಮಾನ್ಯಮಾಡಿ, ಆತನಾದರೂ ಮಾರುವೇಷದಿಂದ ಉಚಿತ ಪರಿವಾರದೊಂದಿಗೆ ಅಲ್ಲಿಗೆ ಬಂದಿದ್ದು, ಆಕೆಯನ್ನು ತನ್ನ ಕುದುರೆಯ ಮೇಲಕ್ಕೆ ಎತ್ತಿಕೊಂಡು, ನೆರೆದಿದ್ದ ಸಕಲಕ್ಷತ್ರಿಯ ವೀರರನ್ನೂ ಪರಾಭವಗೊಳಿಸಿ, ದೆಹಲಿಗೆ ನಡೆದು ಅಲ್ಲಿ ಆಕೆಯನ್ನು ಮಹದ್ವೈಭವದಿಂದ ವಿವಾಹಮಾಡಿಕೊಂಡನು. ಇದರಿಂದಲಂತೂ, ಜಯಚಂದ್ರನಿಗೆ ಪೃಥ್ವೀರಾಜನ ಮೇಲಿದ್ದ ರೋಷಮಾತ್ಸರ್ಯಗಳು ದಶಾಧಿಕ ಶತಾಧಿಕ ಪ್ರಮಾಣದಿಂದ ಹೆಚ್ಚಿ ಹೊರಸೂಸಲಾರಂಭಿಸಿದುವು. ಆ ತನ್ನ ಶತ್ರುವನ್ನು-ತನ್ನ ಮಗಳು ವಿತಂತುವಾದರೂ ಚಿಂತೆಯಿಲ್ಲ-ಯಾವುದಾದರೊಂದು ಬಗೆಯಿಂದ ಸೋಲಿಸಿ, ವಧಿಸಬೇಕೆಂದು ಛಲತೊಟ್ಟನು. ಆ ರೋಷ ಭರದಲ್ಲಿ ಅವನಿಗೆ ಉಚಿತಾನುಚಿತಗಳು ಗಮನಕ್ಕೆ ಬರಲಿಲ್ಲ. ಧರ್ಮಾಧರ್ಮಗಳ ಮೇರೆಯು ಎಂದೋ ಮೀರಿಹೋಗಿದ್ದಿತು. ಆ ತನ್ನ ದುರುದ್ದೇಶ ಸಾಧನೆಗಾಗಿ ಆ ಪಾಪಿಯು ಅಫ್ಘಾನಿಸ್ಥಾನದ ಘೋರ್ ಎಂಬಲ್ಲಿ ರಾಜನಾಗಿದ್ದ ಷಹಬುದ್ದೀನ್ ಎಂಬ ಯವನ ರಾಜನನ್ನು ಸಹಾಯಕ್ಕಾಗಿ ಕರೆದನು. ಹಸುವು, ಹಸಿದ ಹುಲಿಗೆ ಔತಣವಿತ್ತಂತಾಯಿತು. ಅವನು ಬಹು ಸಂತೋಷದಿಂದ ತನ್ನ ಯವನವೀರರ ಭಯಂಕರ ಸೇನೆಯೊಂದಿಗೆ ಹೊರಟು, ಮಾತೃದೇಶ ದ್ರೋಹಿಯಾದ ಜಯಚಂದ್ರನ ಒತ್ತಾಸೆಯಿಂದ ದೆಹಲಿಯ ಮೇಲೆ ಸಾಗಿದನು. ಮಾರಿಯನ್ನು ಮನೆಯೊಳಕ್ಕೆ ಹೊಗಿಸಿಕೊಂಡ ತರುವಾಯ, ಆಗುವ ಪರಿಣಾಮವೇನೆಂದು ಕೇಳಬೇಕಾದುದೇನು! ಮಾರ್ಗಮಧ್ಯದ ಅನೇಕ ಊರು ಕೇರಿಗಳು ಕ್ರೂರರಾದ ಅಫ್ಘಾನರ ಹಾವಳಿಗೆ ಒಳಗಾಗಿ ತಲ್ಲಣಿಸಿಹೋದುವು. ಪೈರುಪಚ್ಚೆಗಳು ನಾಶವಾದವು. ಪ್ರಜೆಗಳ ಧನಮಾನಪ್ರಾಣಗಳು ಬಹು ಅಪಾಯಕ್ಕೆ ಗುರಿಯಾದುವು. ಸ್ವಭಾವ ವೀರನಾದ ಪೃಥ್ವೀರಾಜನು ಇಂತಹ ಅಪಾಯಕಾಲದಲ್ಲಿ ಸ್ವದೇಶೀಯ ಪ್ರಜಾಜನರ ಈ ಕಷ್ಟ ಸಂಕಟಗಳನ್ನು ನೋಡಿ ಸುಮ್ಮನಿರುವನೆ! ಮೇಲೆ ವೀರಪತ್ನಿ ಸಂಯುಕ್ತಾದೇವಿಯ ಉತ್ತೇಜಿತ ವಾಕ್ಯಗಳೂ ಸಹಾಯಕವಾಗಲು ಮುಂದೆ ಕೇಳಬೇಕಾದ್ದೇನು! ಧರ್ಮರಕ್ಷಣೆಗಾಗಿ ಯವನರಮೇಲೆ ರಣವೀ

ಕ್ಷೆಯನ್ನು ವಹಿಸಿ ರಣದುಂದುಭಿಯನ್ನು ಮೊಳಗಿಸಿದನು. ಅದನ್ನು ಕೇಳಿ, ಯಾರ ಹೃದಯದಲ್ಲಿ ಸನಾತನಾರ್ಯರ ಪವಿತ್ರ ಧರ್ಮದಲ್ಲಿ ಲವಲೇಶವಾದರೂ ಅಭಿಮಾನವಿದ್ದಿತೋ ಅವರೆಲ್ಲರೂ, ಆ ಕ್ಷತ್ರಿಯೋತ್ತಮನ ಛತ್ರಚ್ಛಾಯೆಯಲ್ಲಿ ನಿಂತು ಆ ಧರ್ಮಲಂಡರ ತಂಡವನ್ನು ತುಂಡುಗೆಡಹುವೆವೆಂದು ಮುಂದಡಿಯಿಟ್ಟು ಬಂದರು. ಹಾಗೆ ಬಂದವರಲ್ಲಿ ಚಿತ್ತೂರಿನ ಸಮರಸಿಂಹನು ಮೊದಲಿಗನೆಂದರೆ ಅದರಲ್ಲಿ ಆಶ್ಚರ್ಯವೇನು! ತನ್ನ ಮಿತ್ರನು ಕೈಕೊಂಡ ಆ ಧರ್ಮರಕ್ಷಣಕಾರ್ಯಕ್ಕೆ ಸಹಾಯಕನಾಗಬೇಕೆಂಬ ಅಭಿಮಾನದಿಂದ ಬರುತ್ತಿದ್ದ ಆತನನ್ನು ಪೃಥ್ವೀರಾಜನು ತನ್ನ ರಾಜಧಾನಿಯಿಂದ ಏಳು ಮೈಲುದೂರ ಹೋಗಿ ಎದುರುಗೊಂಡು ಗೌರವಿಸಿ ಕರೆತಂದನು. ಸಂಯುಕ್ತಾ ದೇವಿಯೇ ಸ್ವತಃ ತನ್ನ ಪತಿಗೆ ಲೋಹಕವಚವನ್ನು ತೊಡಿಸಿ, ಶಿರಸ್ತ್ರಾಣವನ್ನಿಟ್ಟು ತಿಲಕದಿಂದಲಂಕರಿಸಿ, ಕರ್ಪೂರ ವೀಳೆಯನ್ನಿವತ್ತು, ಕರಾಳಕೃಪಾಣವನ್ನು ಕೈಗಿತ್ತು ಶತ್ರುದಮನಮಾಡಿ ಧರ್ಮರಕ್ಷಕರಾಗಿರೆಂದು ಉತ್ತೇಜಿತವಾಕ್ಯಗಳಿಂದ ಪ್ರೋತ್ಸಾಹಗೊಳಿಸಿ, ಯುದ್ಧಭೂಮಿಗೆ ಕಳುಹಿಸಿದನು. ಯುದ್ಧವೂ ನಡೆಯಿತು. ರಜಪೂತವೀರರ ಪರಾಕ್ರಮದೆದುರಿಗೆ ಯವನಸೈನ್ಯವು ಪುಡಿಪುಡಿಯಾಗಿ ಹಾರಿಹೋಯಿತು. ಷಹಬುದ್ದೀನನು ಜೀವವುಳಿದರೆ ಸಾಕೆಂದು ಸ್ವದೇಶಾಭಿಮುಖನಾಗಿ ಓಡಿಹೋದನು. ಆದರೂ ಪಾಪಿ ಜಯಚಂದನು ಮಾತ್ರ ಹತಾಶನಾಗಲಿಲ್ಲ. ಮತ್ತೆರಡು ವರ್ಷಗಳ ಮೇಲೆ ಅವನಿಗೆ ಅನೇಕ ಆಶೋತ್ತರಗಳನ್ನಿತ್ತು, ಪುನಃ ಔತನವಿತ್ತು, ಸ್ವಜನ ದಮನಕ್ಕಾಗಿ ಬಾರೆಂದು ಅಂಗಲಾಚಿಕೊಂಡನು. ಪ್ರಪಂಚದಲ್ಲಿ ಇಂತಹ ನೀಚರೂ ಉಂಟೇ? ಆ ಯವನರಾಜನು, ಮೊದಲು ಬಾರಿ ಸೋತುಹೋದೊಡನೆಯೇ, ಕ್ರುದ್ಧಯಿಂದ ಯುದ್ಧಮಾಡದೆ ಸೋತುಹೋದ ತನ್ನ ಸೈನಿಕರ ಬಾಯಿಗೆ ಕುದುರೆಗೆ ಕಟ್ಟುವಂತೆ, ತೋಬರವನ್ನು ಕಟ್ಟಿಸಿ ಸೈನ್ಯದ ಠಾಣ್ಯದ ಸುತ್ತಲೂ ತಿರುಗಿಸಿ- ಅವಮಾನಪಡಿಸಿ, ರೋಷಾವೇಶಗಳು ಉಕ್ಕುವಂತೆ ಮಾಡಿದ್ದುದರಿಂದ, ಈ ಎರಡನೆಯ ಬಾರಿ ಅವರು ಅತಿಶಯ ಖತಿಗೊಂಡು ಹಿಂದೂ ಸೈನ್ಯದಮೇಲೆ ಬಿದ್ದರು. ಇತ್ತ ರಜಪೂತ ಸೈನ್ಯದಲ್ಲಿಯಾದರೋ, ಪೂರ್ವದ ಯುದ್ಧದಲ್ಲೇ ಅನೇಕ ವೀರರು ಹತರಾಗಿದ್ದು ಅದು ಸ್ವಭಾವಿಕವಾಗಿಯೇ ದುರ್ಬಲವಾಗಿತ್ತು. ಸಾಲದುದಕ್ಕೆ ಆ ದ್ರೋ

ಹಿ ಜಯಚಂದನು, ಭೇದೋಪಾಯದಿಂದ ಅನೇಕಮಂದಿ ರಾಜಪುತ್ರರನು ದಿಲ್ಲೀಶ್ವರನ ಪಕ್ಷದಿಂದ ಬೇರ್ಪಡಿಸಿದ್ದನು. ಈ ಹಲವು ಕಾರಣಗಳಿಂದ ಪೃಥ್ವೀರಾಜನಿಗೆ ಈ ಎರಡನೆಯ ಯುದ್ಧದಲ್ಲಿ ಜಯವಾಗಲಿಲ್ಲ. ಯವನರ ಬಲವು ಕ್ಷಣಕ್ಷಣಕ್ಕೆ ಏರಸಾಗಿತು. ರೋಷಾವೇಶ ಪರವಶರಾದ ಆ ಅಫ್ಘಾನ ವೀರರು, ಒಡಲು ತಿಳಿಯದೆ ಹೋರಾಡಿ ಹಿಂದೂ ಸೈನ್ಯವನ್ನು ಲಯಗೊಳಿಸತೊಡಗಿದರು. ರಜಪೂತರಾದರೂ ಹಿಂಜರಿಯಲಿಲ್ಲ. ರಜಪೂತಕುಲಕ್ಕೇ ರತ್ನಪ್ರಾಯರಾಗಿದ್ದ ಹಲವುಮಂದಿ ವೀರರು ಸ್ವದೇಶರಕ್ಷಣೆಗಾಗಿ ತಮ್ಮ ತಲೆಗಳನ್ನು ತೆತ್ತರು. ಅವರ ಗುಂಡಿಗೆಯ ಬಿಸಿರಕ್ತವು ರಣಭೂಮಿಯ ಧೂಳನ್ನಾರಿಸಿತು. ಹಿಂದೂಗಳು ಅಂತಃಕಲಹದಿಂದ, ಹೀಗೆ ಸ್ವದೇಶದಲ್ಲೇ ಪರಕೀಯರಿಂದ ಪರಾಭವಗೊಂಡು ತಮ್ಮ ದೇಹರಕ್ತವನ್ನು ಹೊಳೆಯಾಗಿ ಹರಿಯಲಿತ್ತರು. ಪೃಥ್ವಿರಾಜನೂ, ಆತನ ಮಿತ್ರನಾದ ಸಮರಸಿಂಹನೂ, ಮೂರು ದಿನಗಳವರೆಗೆ ಅಜೇಯರೆನ್ನಿಸಿಕೊಂಡು ಯುದ್ಧಮಾಡಿ, ನೂರಾರುಮಂದಿ ಯವನವೀರರ ಕಂಠರಕ್ತದಿಂದ ತಮ್ಮ ಕರಕೃಪಾಣಗಳ ಬಾಯಾರಿಕೆಯನ್ನಾರಿಸಿ, ಕೊನೆಯದಿನ ರಣದೇವತೆಗೆ ತಮ್ಮ ತಲೆಗಳನ್ನು ಬಲಿಕೊಟ್ಟು, ವೀರಸ್ವರ್ಗವನ್ನು ಕುರಿತು ನಡೆದರು. ವೀರಪತ್ನಿ ಸಂಯುಕ್ತೆಯೂ, ಪತಿದೇಹದೊಂದಿಗೆ ಅಗ್ನಿಹೋತ್ರನಿಗೆ ದೇಹವನ್ನೊಪ್ಪಿಸಿ ತನ್ನ ಸತೀಧರ್ಮವನ್ನು ರಕ್ಷಿಸಿಕೊಂಡಳು. ಹೀಗೆ ಆ ವೀರ ರಾಜದಂಪತಿಗಳೊಂದಿಗೆ ಚಹ್ವಾಣ ವಂಶವು ಕೊನೆಗಂಡಿತು; ಮುಂದೆ ಒಂದೆರಡು ವರ್ಷಗಳೊಳಗಾಗಿ, ದೇಶದ್ರೋಹಿಯಾದ ಆ ಜಯಚಂದನೂ ಷಹಬುದ್ದೀನನಿಂದಲೇ ಕೊಲೆಗೀಡಾಗಿ ತನ್ನ ರಾಠೋರವಂಶವನ್ನೂ ಮುಕ್ತಾಯಗೊಳಗಿಕೊಂಡನು.

# ಕರ್ಣ-ಕರ್ಮದೇವಿ

ಪೃಥ್ವೀರಾಜ, ಸಮರಸಿಂಹರ ಮರಣದಿಂದ ಷಹಬುದ್ದೀನನನ್ನು ಎದುರಿಸುವ ವೀರನೇ ರಾಜಪುತಾನದಲ್ಲಿ ಇಲ್ಲದಂತಾಯಿತು. ದೆಹಲಿಯ ಚಹ್ವಾಣ ವಂಶದ ಗಾದಿಯನ್ನು ಆಕ್ರಮಿಸಿದ ಆ ಯವನ ರಾಜನೂ, ಅವನ

ಪೋರಟರೂ ಕ್ರೂರಿಗಳೂ ಆದ ಅಫ್ಘಾನ ಸೈನಿಕರೂ ನಿಸ್ಸಹಾಯಕರಾದ ಹಿಂದೂಗಳನ್ನು ಮನಬಂದಂತೆ ಹಿಂಸಿಸಲಾರಂಭಿಸಿದರು. ದೇಶದಲ್ಲಿ ಹೇಳಿ ಕೇಳುವವರಿಲ್ಲದಂತೆ ಆಗಿಹೋಯಿತು. ಪುರಾತನ ದೇವಸ್ಥಾನಗಳೂ, ಬಹು ಕಾಲದಿಂದ ಅಭಿವೃದ್ಧಿಪಡಿಸಲ್ಪಟ್ಟಿದ್ದ ಚಿತ್ರ-ಶಿಲ್ಪಕಲಾ ಮುಂತಾದುವುಗಳೂ, ಅನೇಕಾನೇಕ ಉದ್ಗ್ರಂಥಗಳೂ ಧೂರ್ತರಾದ ಆ ನರರಾಕ್ಷಸರ ಕೈಗೆ ಬಿದ್ದು ನಾಶವಾದುವು. ಎಲ್ಲಿನೋಡಿದರೂ ಕೊಳ್ಳೆ ಕೊಲೆ ಸುಲಿಗೆ ಇವುಗಳಿಂದ ಜನಗಳ ಹಾಹಾಕಾರವು ಗಗನವನ್ನು ವ್ಯಾಪಿಸಿತು. ದುರ್ದೈವಿ ಹಿಂದೂಗಳಿಗೆ ದಿಕ್ಕೇ ಇಲ್ಲವೆಂಬಂತಾಯಿತು.

ಇಷ್ಟು ಬಗೆಯ ಹಿಂಸೆಯನ್ನೂ, ಪರಜನಾಂಗದ ಧಾಳಿಯನ್ನೂ ಸಹಿಸಿ ಕೊಂಡೂ, ತನ್ನ ಪೂರ್ವದ ನಾಗರಿಕತೆ, ಸಂಸ್ಕೃತಿ, ಹಿರಿಯರ ಆಚಾರ ವ್ಯವ ಹಾರಗಳು ಇವುಗಳನ್ನು ರಜಪೂತ ವಂಶೀಯನಲ್ಲದೆ-ಲೋಕದಲ್ಲಿ ಮತ್ತಾವ ನು ಕಾಯ್ದಿಟ್ಟುಕೊಳ್ಳಬಲ್ಲನು! ರಾಜಪುತ್ರನು ವಿನಯಶಾಲಿಯಲ್ಲವೆಂದು ನೀವು ಅವನ ಮೇಲೆ ತಪ್ಪುಹೊರಿಸಬಹುದು. ಆದರೆ ಸತ್ಯಕ್ಕೆ ಅಣಗಿ ಅಡಿ ಯಾಳಾಗುವಲ್ಲಿ ಅವನಿಗಿಂತಲೂ ಧೀರರು ಎಲ್ಲೂ ದೊರೆಯಲಿಕ್ಕಿಲ್ಲ. ಮತ್ತೆ, ಯಾವುದೊಂದು ಕಾರ್ಯವು ಅವನಿಗೆ ಅಸತ್ಯವಾದುದೆಂದು ತೋರಿತೆಂದರೆ- ಅವನ ಸ್ವಾಭಿಮಾನವನ್ನೂ ಸ್ವಾತಂತ್ರ್ಯವನ್ನೂ ಹರಣಮಾಡುವುದೆಂದು ತೋರಿತೆಂದರೆ, - ಅವನ ವಂಶಗೌರವಕ್ಕೂ, ಕುಲಸ್ತ್ರೀಯರ ಮಾನ ಪ್ರಾಣ ಗಳಿಗೂ ಲೋಪವನ್ನುಂಟುಮಾಡುವುದೆಂದು ತೋರಿತೆಂದರೆ, ಅವನು ಶತ್ರು ವಿನ ಬಿಚ್ಚುಕತ್ತಿಗೆ ತನ್ನ ವಸ್ತ್ರವಿರಹಿತವಾದ ಎದೆಯನ್ನಾದರೂ ಒಡ್ಡಿ, ತನ್ನ ನಾಲಿಗೆಯನ್ನಾದರೂ ಕಿತ್ತುಕೊಟ್ಟು, ಫಿರಂಗಿಯ ಬಾಯಿಗಾದರೂ ಎದು ರಾಗಿ, ಅದನ್ನು ಮುಂದೆ ಸಾಗಗೊಡದಂತೆ ತಡೆವನಲ್ಲದೆ, ಎಂದಿಗೂ ಪ್ರಾಣ ಭಯದಿಂದ ಬೆದರಿ ಹಿಂಜರಿಯನು. ಪಶುಶಕ್ತಿಯಿಂದ ಬಲಗೊಂಡ ನೀವು, ಅವನನ್ನು ನೆಲದವರೆಗೂ ಅಮುಕಬಹುದು. ಆದರೆ ಅವನು - ದ್ವಿಗುಣಿತ ಶಕ್ತಿಯಿಂದ, ಪುಟನೆಗೆವ ಚಂಡಿನಂತೆ ಎದ್ದುನಿಂತು ನಿಮ್ಮನ್ನು ಪ್ರತಿಭಟಿಸು ವನಲ್ಲದೆ, ಅನ್ಯಾಯ ಅಸತ್ಯಗಳನ್ನು ಸಹಿಸಿ ಸುಮ್ಮನಿರನು. ಕಷ್ಟ ಸಂಕಟ ಗಳು ಅವನನ್ನು ಅಂಜಿಸಲಾರವು. ಅಪಾಯಗಳು ಪ್ರಾಪ್ತವಾದಂತೆಲ್ಲ ಅವ ನು ಬೆದರಿ ಹಿಂಜರಿವುದಲ್ಲ—ನೂತನ ಧೈರ್ಯೋತ್ಸಾಹಗಳಿಂದ ಉತ್ತೇಜಿತನಾಗಿ

ಮುಂದರಿಸುವನು. ಹಿಂದೆ ರೋಮನರು ಬ್ರಿಟಿಶ್ ದ್ವೀಪಗಳನ್ನು ಆಕ್ರಮಿಸಿದಾಗ ಬ್ರಿಟನರು ಒಡನೆಯೇ ತಮ್ಮ ಪೂರ್ವಾಚಾರಗಳು, ಮತಮರ್ಯಾದೆಗಳು ಸಂಸ್ಕೃತಿ ಸಂಪ್ರದಾಯಗಳು ಎಲ್ಲವನ್ನೂ ಸೂರೆಗೊಟ್ಟು ಅವರ ರೀತಿನೀತಿಗಳನ್ನು ಕೈಕೊಂಡು ಅವರಂತೆಯೇ ನಡೆಯತೊಡಗಿದರಲ್ಲವೆ! ಮುಂದೆ ಸಾಕ್ಸನರು ಬಂದು ಜಯಿಸಲು ಅವರಿಗೂ, ತರುವಾಯ ಡೇನರಿಗೂ, ನಾರ್ಮನರಿಗೂ ಜಿತರಾಗಿ ತಮ್ಮದೆಂಬ ಸರ್ವಸ್ವವನ್ನೂ ಕೊಳ್ಳೆಗೊಟ್ಟು ಮೇಲೆ ಮೇಲೆ ಪರಕೀಯರ ತಾಳಲಯಗಳನ್ನು ಅನುಸರಿಸಿ ಕುಣಿಯತೊಡಗಿದರಲ್ಲವೆ! ಆದರೆ ವಿಜಯಿಗಳಿಗೆ ಶರಣಾಗತವಾಗಿ ತನ್ನ ಸಂಸ್ಕೃತಿಯನ್ನೂ ಮತಧರ್ಮಗಳನ್ನೂ ಬಿಟ್ಟು ನಡೆಯದಿರುವುದು - ಪ್ರಪಂಚ ಚರಿತ್ರೆಯನ್ನೆಲ್ಲ ಹುಡುಕಿನೋಡಿದರೂ, ಈ ರಜಪೂತ ಚರಿತ್ರೆಯೊಂದರಲ್ಲಲ್ಲದೆ ಮತ್ತೆಲ್ಲೂ ದೊರಕದು. ಅಂತಹ ರಜಪೂತ ಕುಲದಲ್ಲೂ ಮೇವಾಡದ ರಾಜವಂಶಕ್ಕಂತೂ ಅದು ಅದ್ವಿತೀಯ ಆಸ್ತಿ ಎನ್ನಿಸಿರುವುದು. ಅದರ ಪರಂಪರಾನುಗತವಾದ ಈ ಆಸ್ತಿಯನ್ನು ಇಷ್ಟುಕಾಲಗಳಿಂದಲೂ ಯಾರೂ ಅಪಹರಿಸಲಾಗಲಿಲ್ಲ. - ಅನ್ವರ್ಥನಾಮಕನಾದ ಸಮರಸಿಂಹನು ದಿವಂಗತನಾದನು. ಆದರೇನು? ಚಿತ್ತೂರಿನ ರಜಪೂತರ ಮತ್ತು ರಾಜಪಂತೀಯರ ರಕ್ತನಾಳಗಳಲ್ಲಿ, ಆ ನಾಡಿನ ಸಂಸ್ಕೃತಿ ಅಭಿಮಾನ-ಸ್ವಾತಂತ್ರ್ಯಗಳನ್ನು ರಕ್ಷಿಸಿಕೊಳ್ಳುವಷ್ಟು ಶಕ್ತಿಯುತವಾದ ಬಿಸಿರಕ್ತದ ಪ್ರವಾಹವು ನಿಲ್ಲಲಿಲ್ಲ-ಅಲ್ಲ, ಅಂತಹ ಚಂಡ ಪ್ರತಾಪಿಯ ಮರಣದಿಂದ ಅದರ ಬಿಸಿಯೂ ಆರಲೂ ಇಲ್ಲ!

ಸಮರಸಿಂಹನ ಹಲವು ಮಂದಿ ಮಕ್ಕಳಲ್ಲಿ ಕರ್ಣನೆಂಬ ಬಾಲಕನೊಬ್ಬನು ತಂದೆಗೆ ಉತ್ತರಾಧಿಕಾರಿಯಾಗಿ ಉಳಿದಿದ್ದನು. ರಾಜಭಕ್ತರಾದ ಆ ದೇಶದ ಪ್ರಜೆಗಳು, ಆ ತರುಣ ಹುಡುಗನನ್ನೇ ಸಿಂಹಾಸನದ ಮೇಲೆ ಕೂರಿಸಿ, ಆ ಪೀಠಕ್ಕೆ ಭಕ್ತಿಯುತರಾಗಿ ನಡೆದುಕೊಳ್ಳುತ್ತಿದ್ದರು. ಸಮರಸಿಂಹನೊಂದಿಗೆ ಯುದ್ಧಕ್ಕೆ ದೆಹಲಿಗೆ ಹೋಗಿ ಬದುಕಿದವರಲ್ಲಿ, ಒಬ್ಬೊಬ್ಬರೇ ಆಗತಾನೆ ಹಿಂದಿರುಗಿ ಬಂದು ಊರು ಸೇರುವುದರಲ್ಲಿದ್ದರು. ಗಾಯಪಟ್ಟು ಬಂದವರ ಹುಣ್ಣುಗಳು ಸಹ ಇನ್ನೂ ಆರಿರಲಿಲ್ಲ. ಸತ್ತವರಿಗಾಗಿ ಅಳುತ್ತಿದ್ದವರ ರೋದನಧ್ವನಿ ಸಹ ಇನ್ನೂ ನಿಂತಿರಲಿಲ್ಲ. ಅಷ್ಟರಲ್ಲಾಗಲೇ ಚಿತ್ತೂರ ಕೋಟೆಯ ಮಹಾದ್ವಾರದಲ್ಲಿ ಪುನಃ ಯವನ ಸೇನೆಯ ರಣವಾದ್ಯ ಧ್ವನಿಯು,

ಕೇಳಿಸಿತು. ಅದನ್ನು ಕೇಳಿ ಚಿತ್ತೂರಿನ ಪ್ರಜೆಗಳೆಲ್ಲರೂ, ಇಂದು ನಮ್ಮ ಊರಿನ ವಿನಾಶಕಾಲವು ಪ್ರಾಪ್ತವಾಯಿತು ಎಂದುಕೊಂಡರು. ಮಹಾ ಪ್ರೌಢಪ್ರತಾಪಿಗಳು ಸಂಚರಿಸಿದ - ಮಹದುತ್ಸವಗಳು ನಡೆದ ತಮ್ಮ ಆ ಊರಿನ ಬೀದಿಗಳಲ್ಲಿ ಇಂದು ರಕ್ತದ ಹೊಳೆಯು ಹರಿಯುವುದು ಎಂಬ ವಿಷಯದಲ್ಲಿ ಅವರಿಗೆ ಸಂದೇಹ ತೋರಲಿಲ್ಲ. ರಾಜನು ಹತನಾಗಿ, ಬಾಲಕನು ಸಿಂಹಾಸನವೇರಿದ್ದ ತಮ್ಮ ರಾಜ್ಯದ ಆಗಿನ ಸ್ಥಿತಿಯಲ್ಲಿ ಪ್ರಾಪ್ತನಾಗಿದ್ದ ಆ ಪ್ರಬಲ ಶತ್ರುವಿಗೆ, ಯುದ್ಧಭಿಕ್ಷೆಯನ್ನು ಕೊಟ್ಟು ಹೇಗೆ ಹಿಂದಕ್ಕೆ ಕಳುಹಿಸುವುದೆಂದು ತೋರದೆ ಎಲ್ಲರೂ ಕ್ಷಣಮಾತ್ರ ಹತಾಶರಾದಂತೆ ಕುಳಿತಿದ್ದರು.

ಷಹಬುದ್ದೀನನು, ದೆಹಲಿಯನ್ನು ಜಯಿಸಿದ ತರುವಾಯ, ತನ್ನ ಗುಲಾಮನಾಗಿದ್ದ ಕುತುಬುದ್ದೀನನೆಂಬುವನನ್ನು ಅಲ್ಲಿ ಬಿಟ್ಟು ತನ್ನ ದೇಶಕ್ಕೆ ಹೊರಟು ನಡೆದನು. ಇತ್ತ ಆ ಪ್ರತಿನಿಧಿಯು, ತನ್ನ ಪ್ರಭುವಿಗೆ ಪ್ರತಿಭಟಿಸಿದವರಲ್ಲಿ, ಚಿತ್ತೂರಿನ ಸಮರಸಿಂಹನೇ ಮುಖ್ಯನೆಂಬುದನ್ನು ಕೇಳಿ, ಸ್ವಲ್ಪವೂ ಕಾಲ ತಾಮಸಮಾಡದೆ, ಅರಾಜಕವಾಗಿದ್ದ ಆ ರಾಜ್ಯವನ್ನು ಕೊಳ್ಳೆಗೊಂಡು ತನ್ನ ದೆಹಲಿಯ ಆಡಳಿತಕ್ಕೆ ಸೇರಿಸಿಕೊಳ್ಳಬೇಕೆಂದು ಸಂಕಲ್ಪಿಸಿ, ಅಗಾಧ ಸೈನ್ಯವನ್ನು ತೆಗೆದುಕೊಂಡು ಮೇಲ್ಕಂಡಂತೆ ಚಿತ್ತೂರಿನ ಕೋಟೆಯ ಬಾಗಿಲನಲ್ಲಿ ಬಂದು ನಿಂತಿದ್ದನು.

ಚಿತ್ತೂರು ನಗರವಾಸಿ ರಜಪೂತ ಸರದಾರರು ವೀರರೇ, ಧೀರರೇ, ರಾಜಭಕ್ತರೇ! ಆದರೆ ಈ ಸಂದರ್ಭದಲ್ಲಿ ಅವರನ್ನು ಒಂದಾಗಿ ಸೇರಿಸಿ-ಅವರ ಸಮುಷ್ಟಿಬಲದ ಸಹಾಯಗೊಂಡು ಶತ್ರುವನ್ನು ಎದುರಿಸುವ ನಾಯಕನೊಬ್ಬನ ಅಭಾವದಿಂದ ಆ ವೀರರ ಬಲ ಪರಾಕ್ರಮಗಳ ಯೋಗ್ಯ ಪ್ರಯೋಜನವಾಗುವಂತಿರಲಿಲ್ಲ. ಕುತ್ಬುದ್ದೀನನ ರಾಕ್ಷಸೀ ಸೈನ್ಯಕ್ಕೆ ಇಂದು ತಮ್ಮ ಹೆಂಡಿರು ಮಕ್ಕಳು ಬಲಿಯಾಗುವರೆಂದೂ, ತಮ್ಮ ದೇಶದ ಗುಡಿಗೋಪುರಗಳು ನಾಮಾವಶೇಷವಾಗುವುವೆಂದೂ, ತಮ್ಮ ಆಯುಃಪರಿಮಿತಿಯು ತೀರಿಬಂತೆಂದೂ ಯೋಧರೆಲ್ಲರೂ ನಿಶ್ಚಯಿಸಿಕೊಂಡರು. ಆದರೇನು! ಅಂತಹ ನಿರುತ್ಸಾಹದ ಸಂದರ್ಭದಲ್ಲೂ ಯಾವನೂ ಭಯಗೊಳ್ಳಲಿಲ್ಲ, ಶಂಕಿಸಲಿಲ್ಲ, ದುಃಖಿಸಲಿಲ್ಲ. ಅಂತಹ ದುರ್ದೈವಿ ದೇಶದಲ್ಲಿದ್ದುದು ತನ್ನ ದುರ್ವಿಧಿಯೆಂದುಕೊಂಡು ಯಾವನೂ ತನ್ನ ದೈವವನ್ನು ನಿಂದಿಸಲಿಲ್ಲ. ಇತ್ತ ರಜಪೂತ ಶಿಬಿ

ರದಲ್ಲಿ ಹೀಗಿರಲು ಅತ್ತ ಯವನ ಶಿಬಿರವು ಸಮಸ್ತ ಯುದ್ಧ ಸಾಮಗ್ರಿಗಳನ್ನೂ ಸಿದ್ಧಪಡಿಸಿಕೊಂಡು, ಪುಷ್ಕಳವಾದ ಆಹಾರಸಾಮಗ್ರಿಯನ್ನೂ ಒದಗಿಸಿಕೊಂಡು, ಶತ್ರುವಿನ ಮೇಲೇರಿ ಹೋಗುವ ಕ್ಷಣವನ್ನು ಎದುರುನೋಡುತ್ತಾ ಕುಳಿತಿದ್ದಿತು. - ಹಾಗೆ ಆ ಎಂದು ತೆರೆದುಕೊಂಡಿದ್ದ ಮೃತ್ಯುವಿನ ಬಾಯಿಯೊಳಕ್ಕೆ, ಮಂದೆಯನ್ನು ತಪ್ಪಿದ ಕುರಿಗಳಂತೆ ಹೋಗಿ ಧುಮಿಕಿ ನಾಮಾವಶೇಷರಾಗುವುದಾದರೂ ಯಾವ ರಜಪೂತನ ಮನಸ್ಸಿಗೂ ಸರಿ ತೋರಿರಲಿಲ್ಲ. ಅವರಿಗೆ ಅಧಿನಾಯಕನಾಗಿ ಯುದ್ಧಕ್ಕೆ ನಡೆಯಿಸಬೇಕೆಂದರೆ ಕರ್ಣನು ಇನ್ನೂ ಬಾಲಕ. ತಮ್ಮ ಪಾಳಯಕ್ಕೊದಗಿದ್ದ ಈ ವಿಧ ಪರಿಸ್ಥಿತಿಯನ್ನೆಲ್ಲಾ ಸಾವಧಾನದಿಂದ ಯೋಚಿಸುತ್ತ ಕುಳಿತಿದ್ದ, ವೀರರಾಣಿ ಕರ್ಮದೇವಿಯು, ಮನಸ್ಸಿಗೆ ಏನೋ ತೋರಿ, ಒಡನೆ ತಟ್ಟನೆದ್ದು ಯವನಸೇನೆಯಿದ್ದ ದಿಕ್ಕಿಗೆ ಒಮ್ಮೆ ಚುರಚುರನೆಂದು ನೋಡಿದಳು. ಹಲ್ಲುಗಳನ್ನು ಮಸೆದು, ಅವಡುಗಳನ್ನು ಕಚ್ಚಿದಳು. ವೀರಕಾಚೆಯನ್ನು ಬಿಗಿದಳು. ಬಾಲರಾಜನೆದುರಿಗೆ ಸಿಂಹಾಸನದ ಮೇಲಟ್ಟಿದ್ದ ಕೃಪಾಣವನ್ನು ಕೈಗೆತ್ತಿಕೊಂಡು - ಎತ್ತಿಹಿಡಿದಳು. 'ಜೈ ಭಗವತಿ' ಎಂಬ ಶಬ್ದಗಳು ಆಕೆಯ ಬಾಯಿಂದ ಹೊರಬಿದ್ದುವು.

ರಜಪೂತ ಕುಲಕಾಂತೆಯರು ಕೇವಲ ಗೃಹಲಕ್ಷ್ಮಿಯರಾಗಿದ್ದು ಸೌಂದರ್ಯ ಗಾಂಭೀರ್ಯಗಳಿಂದ ತಮ್ಮ ರಮಣರ ಮನರಂಜನಮಾಡಲು ಮಾತ್ರ ಕಲಿತವರಲ್ಲ. ರಾಜಸ್ಥಾನದಲ್ಲಿ ಯುದ್ಧವಿದ್ಯೆಯು ಪುರುಷರಂತೆಯೇ ಸ್ತ್ರೀಯರಿಗೂ ಸ್ವಾಧೀನವಾಗಿದ್ದಿತು. ದ್ರೌಪದಿ ರುಕ್ಮಿಣಿ ಸುಭದ್ರೆ ಸತ್ಯಭಾಮೆಯರಂತೆ, ಆ ಶೂರ ನಾರಿಯರು ತಮ್ಮ ರಮಣರನ್ನು ಅರಮನೆಯಲ್ಲಿ ಮಾತ್ರವಲ್ಲ - ಸಮಯ ಬಂದರೆ ಯುದ್ಧಕ್ಷೇತ್ರದಲ್ಲಿಯೂ ಸೇವಿಸಲು ಅರಿತಿದ್ದರು. ಇಂದು ಕರ್ಮದೇವಿಯು ತಾನು ಪಡೆದ ಯುದ್ಧಶಿಕ್ಷಣದ ಪ್ರಭಾವವನ್ನು ಪ್ರಯೋಗಕ್ಕಿಡಲು ಸಂಕಲ್ಪಿಸಿದಳು. ತನ್ನ ಖಡ್ಗಧಾರೆಯ ತೀಕ್ಷ್ಣತೆಯನ್ನು ಯವನ ಸೈನ್ಯಕ್ಕೆ ತೋರಿಸಲು ನಿಶ್ಚಯಮಾಡಿದಳು.

ತಮ್ಮ ರಾಣಿಯು ಆಯುಧಪಾಣಿಯಾಗಿ ಎದ್ದು ನಿಂತುದನ್ನು ಕಂಡೊಡನೆಯೇ, ಅವರೆಗೆ ನಾಯಕನಿಲ್ಲವೆಂದು ಜಿಗುಪ್ಸಿತರಾಗಿ, ಹತವೀರ್ಯರಂತೆ ಕುಳಿತು ತೂಕಡಿಸುತ್ತಿದ್ದ ರಜಪೂತವೀರರೆಲ್ಲರೂ ಕೊಡಹಿಕೊಂಡೆದ್ದು,

ತಮ್ಮ ಕೈಗಳಲ್ಲಿನ ಆಯುಧಗಳನ್ನ ಎತ್ತಿಹಿಡಿದು ' ಜೈ ಭಗವತೀ ' ಎಂದು ತಮ್ಮ ಮಹಾರಾಣಿಯ ಧ್ವನಿಗೆ ಸಹಸ್ರ ಕಂಠಗಳಿಂದ ಪ್ರತಿ ಧ್ವನಿಯನ್ನಿತ್ತರು. ಒಡನೆ ಶತ್ರುಪಾಳಯದಮೇಲೆ ಸಾಗಿಹೋಗಬೇಕೆಂಬ ಆಜ್ಞೆಯು ರಾಣಿಯ ಬಾಯಿಂದ ಹೊರಟಿತು. ಮುಂದೆ ಕತ್ತಿಯನ್ನು ಹಿಡಿದು ರಾಣಿಯು ನಡೆಯುತ್ತಿರಲು, ಕ್ಷತ್ರಿಯ ವೀರರು ನಾನು ಮುಂದೆ ತಾನು ಮುಂದೆಂದು, ತಮ್ಮ ಮಾತೃತ್ರೀ ಸದೃಶಳಾದ ಮಹಾರಾಣಿಯನ್ನು ಅನುಸರಿಸಿ ನಡೆದು ಬಂದರು. ರಾಜಪುತ್ರಸೈನ್ಯದಲ್ಲುಂಟಾದ ಆ ನವಚೈತನ್ಯವನ್ನು ಕಂಡು ಸ್ತಂಭಿತನಾದ ಕುತ್ಬುದ್ದೀನನು ಒಂದು ಹೆಜ್ಜೆ ಹಿಂಜರಿದು ಅಂಬರ್ ಎಂಬ ಗ್ರಾಮದ ಬಳಿ, ಆ ಸೈನ್ಯವನ್ನು ಎದುರಿಸಲು ಸಜ್ಜುಗೊಂಡು ನಿಂತನು. ಕೇವಲ ಷಹಬುದ್ದೀನನ ಸೇವೆಯಲ್ಲಿ ತೊಡಗಿದ್ದು, ಅದೃಷ್ಟಚಕ್ರವು ಸುಲಗ್ನದ ಕಡೆ ತಿರುಗಿದುದರಿಂದ ರಾಜಪೀಠವನ್ನು ಏರಿದ್ದ ಆ ಸರ್ವಾಧಿಕಾರಿಯು, ರಣರಂಗದಲ್ಲಿ ಕಾಲಭೈರವನ ಸ್ತ್ರೀರೂಪವೋ ಎಂಬಂತೆ ಕೃಪಾಣಹಸ್ತಳಾಗಿ ನಿಂತಿದ್ದ ಕರ್ಮದೇವಿಯ ಆ ಭಯಂಕರ ರೂಪವನ್ನೂ, ಆಕೆಯ ಅನುಯಾಯಿಗಳಾದ ವೀರ ರಜಪೂತರ ಸಾಹಸ ಪರಾಕ್ರಮಗಳ ವಿಜೃಂಭಣೆಯನ್ನೂ ಕಂಡು ಅಂದು ಬೆರಗಾದನು. ಉಭಯಪಕ್ಷದವರಿಗೂ ತುಮುಲ ಯುದ್ಧವು ಪ್ರಾರಂಭವಾಗಿ ಕ್ಷಣಕ್ಷಣಕ್ಕೂ ಭಯಂಕರ ಸ್ವರೂಪವನ್ನು ಹೊಂದತೊಡಗಿತು. ತಮ್ಮ ವೀರರಾಣಿಯ ಉತ್ತೇಜಿತ ವಾಕ್ಯಗಳಿಂದ ರಣೋನ್ಮತ್ತರಾದ ರಜಪೂತ ಯೋಧರು ಅಂದು ಮೈ ತಿಳಿಯದೆ ಯುದ್ಧಮಾಡಿದರು. ಯವನಸೇನೆಯ ಬಲವು ಗಳಿಗೆಗಳಿಗೆಗೆ ಕುಂದಸಾಗಿತು. ಕುತ್ಬುದ್ದೀನನೂ ತನ್ನ ಹಲವು ಸೈನಿಕರೊಂದಿಗೆ ಗಾಯಗೊಂಡು, ಬದುಕಿದರೆ ತಾಯ ಗರ್ಭದಿಂದ ಮರಳಿ ಬಂದಂತೆ ಧನ್ಯನಾಗುವೆನೆಂದುಕೊಂಡು, ಯುದ್ಧರಂಗದಿಂದ ನುಸುಳಿ ತಲೆ ತಪ್ಪಿಸಿಕೊಂಡು, ರಾಜಧಾನಿಯನ್ನು ಕುರಿತು ಓಡಿಹೋದನು. ರಜಪೂತರು ವಿಜಯೋತ್ಸವದಿಂದ, 'ಜೈ ಭಗವತಿಗೆ' 'ಜೈ ಮಹಾರಾಣಿಗೆ' ಎಂಬ ಜಯಘೋಷಗಳಿಂದ ದಿಕ್ತಟಗಳು ಒಡೆಯುವಂತೆ ಗರ್ಜಿಸುತ್ತ ಚಿತ್ತೂರು ರಾಜಧಾನಿಯನ್ನು ಹೊಕ್ಕರು.

# ರಾಣಾ ರಾಹೂಪ

ಕರ್ಣನು ಕ್ರಿ. ಶ. ೧೧೯೩ರಿಂದ ೧೨೦೧ರ ವರೆಗೆ ಎಂಟು ವರ್ಷ ಕಾಲ ಮಾತ್ರ ಚಿತ್ತೂರು ಸಿಂಹಾಸನವನ್ನು ಹಿಡಿದ್ದನು. ಆಕಾಲದಲ್ಲೆಲ್ಲ, ರಾಣಿ ಕರ್ಮದೇವಿಯೇ ಅವನಿಗೆ ಬೆಂಬಲಳಾಗಿದ್ದು ರಾಜ್ಯಮರ್ಯಾದೆಯನ್ನು ಕಾಯ್ದುಕೊಂಡು ಬಂದಳು. ಕರ್ಣನು ಸಂತಾನ ವಿಹೀನನಾಗಿ ಮೃತನಾಗಲು, ಅವನ ಸೋದರನ ಮಗನಾದ ರಾಹೂಪನೆಂಬುವನು, ಚಿತ್ತೂರಿನ ರಾಜ್ಯ ಸಿಂಹಾಸನಕ್ಕೆ ಅಧಿಪತಿಯಾದನು. ಒಡನೆಯೇ ಷಂಷುದ್ದೀನನು ಪುನಃ ಅವನಮೇಲೆ ದಂಡೆತ್ತಿದನು. ಆದರೆ, ಧೀರನಾದ ರಾಹೂಪನು, ನಾಗೋರೆಂಬ ಬಳಿ ಅವನನ್ನು ಸಂಧಿಸಿ, ಭಯಂಕರ ಯುದ್ಧಮಾಡಿ ಓಡಿಸಿಬಿಟ್ಟನು. ತರುವಾಯ ಬಹು ದಿನಗಳ ವರೆಗೆ ಮಹಮ್ಮದೀಯರು ಚಿತ್ತೂರು ರಾಜಧಾನಿಯ ಮೇಲೇರಿ ಬರಲು ಸಾಹಸಮಾಡಲಿಲ್ಲ. ರಾಹೂಪನು ಮೂವತ್ತೆಂಟು ವರ್ಷಕಾಲ ರಾಜ್ಯಭಾರಮಾಡಿ ಬಹು ಬಲಾಢ್ಯ ರಾಜನೆಂದು ಪ್ರಖ್ಯಾತನಾದನು. ಈತನ ಕಾಲದಲ್ಲಿ ಚಿತ್ತೂರು ರಾಜಮನೆತನದಲ್ಲಿ ಎರಡು ಬಹು ಮುಖ್ಯ ಬದಲಾವಣೆಗಳಾದುವು. ಹಿಂದೆ ಬಪ್ಪಾರಾವಳನ ಕಾಲದಿಂದಲೂ, ಗಿಹಲೋಟರೆಂಬಿದ್ದ ಈ ವಂಶೀಕರು ಈತನ ಕಾಲದಿಂದ ಮುಂದೆ ಶಿಶೋದಿಯರೆಂದು ಕರೆಯಲ್ಪಟ್ಟರು. ರಾವಳ ಎಂದಿದ್ದ ಬಿರುದನ್ನು ಈತನೇ ಬದಲುಪಡಿಸಿ 'ರಾಣಾ' ಎಂದು ಕರೆದನು. ಮುಂದೆ ಈ ವಂಶದಲ್ಲಿ ಬಂದ ಅರಸರೆಲ್ಲರೂ 'ರಾಣಾ' ಎಂಬ ಬಿರುದಿನಿಂದಲೇ ಕರೆಯಲ್ಪಟ್ಟಿರುವರು. ಈ ಬಿರುದನ್ನು ಇತರರು ಉಪಯೋಗಿಸಿಕೊಳ್ಳುವುದು ಚಿತ್ತೂರು ರಾಜಸಿಂಹಾಸನಕ್ಕೆ ಅಪಮಾನ ಮಾಡಿದಂತೆ ಎಂಬ ಭಾವನೆಯೂ ಅವರಿಗಿದ್ದಂತೆ ತೋರುತ್ತದೆ. ಏಕೆಂದರೆ, ರಾಹೂಪನ ಕಾಲದಲ್ಲೇ ಮಂಡೋರ್ ಎಂಬಲ್ಲಿಯ ರಾಜನಾದ ಪುರಿಹರ್ ಎಂಬಾತನು ರಾಣಾ ಎಂಬ ಬಿರುದಿನಿಂದ ಹೊಗಳಿಸಿಕೊಳ್ಳುತ್ತಿರಲು, ರಾಹೂಪನು ಅವನ ರಾಜ್ಯದ ಮೇಲೆ ದಂಡೆತ್ತಿ ನಡೆದು, ಅವನನ್ನು ಸೆರೆಹಿಡಿದು ತನ್ನ ರಾಜಧಾನಿಗೆ ಹಿಡಿತಂದು, ಅವನ ರಾಜ್ಯದಲ್ಲಿ ಬಹು ಫಲವತ್ತಾಗಿದ್ದ ಗಾಡ್ವಾರ್ ಎಂಬ ಪ್ರಾಂತವನ್ನು, ಅವನು ತನಗೆ ಒಪ್ಪಿಸಿ, ರಾಣಾ ಎಂಬ ಬಿರುದನ್ನು ತ್ಯಜಿಸಿದಲ್ಲದೆ ಬಿಡುಗಡೆ ಇಲ್ಲದಂತೆ ನಿರ್ಬಂಧಿಸಲು, ಆ ಎರಡನ್ನೂ ಬಿಟ್ಟು ಅವನು ಜೀವದೊಂದಿಗೆ ಬದುಕಿ ನಡೆದನು.

# ರಾಣಾ ಲಕ್ಷ್ಮಣಸಿಂಹ

ರಾಣಾ ರಾಹೂಪನ ತರುವಾಯ ಮುಂದೆ ಐವತ್ತು ವರ್ಷಕಾಲದೊಳಗೆ ಒಂಬತ್ತು ಮಂದಿ ಅರಸರು ಚಿತ್ತೂರು ರಾಜಸಿಂಹಾಸನವನ್ನೇರಿದರು. ಅವರ ಆಳ್ವಿಕೆಯು ಅಷ್ಟು ಪ್ರಸಿದ್ಧವಾದುದಾಗಿ ಇರಲಿಲ್ಲವಾದರೂ, ಅವರಲ್ಲಿ ಯಾವನೂ ಹೇಡಿಯಾಗಿದ್ದು ಮನೆಯಲ್ಲಿ ಮಲಗಿ ಸಾಯಲಿಲ್ಲ. ಆ ಕಾಲದಲ್ಲಿ ಮುಹಮ್ಮದೀಯರಿಂದ ಹಿಂದೂಸ್ಥಾನದ ದೇವಸ್ಥಾನ ಧರ್ಮಸ್ಥಳಗಳಿಗೆ ಪ್ರಾಪ್ತವಾದ ಬಾಧೆಯು ವರ್ಣಿಸಲಳವಲ್ಲ. ಚಿತ್ತೂರಿನ ಆ ಒಂಬತ್ತು ಮಂದಿ ಅರಸರಲ್ಲಿ ಆರುಮಂದಿ ರಾಜರು, ಗಯಾಕ್ಷೇತ್ರದ ಪಾವಿತ್ರ್ಯತೆಯನ್ನು ಕಾಪಾಡುವುದಕ್ಕಾಗಿಯೇ ಯುದ್ಧರಂಗದಲ್ಲಿ ತಮ್ಮ ಪ್ರಾಣಗಳನ್ನು ಅರ್ಪಿಸಿದರು. ಅವರೊಂದಿಗೆ ಆ ಪವಿತ್ರತೀರ್ಥದ ರಕ್ಷಣೆಗಾಗಿ ಎಷ್ಟು ಮಂದಿ ಧರ್ಮಾಭಿಮಾನಿ ರಜಪೂತರು ತಮ್ಮ ತಲೆಗಳನ್ನು ತೆತ್ತರೆಂದು ಹೇಳಬೇಕಾಗಿಲ್ಲವಷ್ಟೆ! ಆ ಆರು ಮಂದಿಯೊಳಗೆ ಕೊನೆಯವನಾದ ಪೃಥ್ವೀಮಲ್ಲನೆಂಬಾತನು, ತನ್ನೆದೆಯ ಬಿಸಿರಕ್ತವನ್ನು ಬಸಿದು ಪವಿತ್ರ ಹಿಂದೂಧರ್ಮವನ್ನು ರಕ್ಷಿಸಿದನು. ಆತನ ಆ ಭಯಂಕರ ತ್ಯಾಗದಿಂದ ಸ್ತಂಭಿತರಾದ ಮುಸಲ್ಮಾನರು ಮುಂದೆ ಬಹು ದಿನಗಳವರೆಗೆ ಹಿಂದೂದೇವಸ್ಥಾನಗಳ ಮೇಲೂ, ಧರ್ಮಕ್ಷೇತ್ರಗಳ ಮೇಲೂ ಧಾಳಿ ಮಾಡಲಿಲ್ಲ. ಪೃಥ್ವೀಮಲ್ಲನ ಕಾಲದಿಂದ ಸುಮಾರು ಮೂರು ತಲೆಯವರ ರಾಜ್ಯಭಾರದ ಕಾಲದಲ್ಲಿ ಚಿತ್ತೂರಿನ ಪ್ರಜೆಗಳು ಯುದ್ಧ, ಕೊಳ್ಳೆ, ಕೊಲೆಗಳನ್ನರಿಯದೆ ಸುಖವಾಗಿದ್ದರು. ಆ ಕಾಲದಲ್ಲಿ ಶಾಂತ ಪ್ರಕೃತಿಯ ಹಿಂದೂಗಳ ಸ್ವಧರ್ಮಾಚರಣೆಗೆ ಯಾವ ನಿರ್ಬಂಧವೂ ಉಂಟಾಗಿರಲಿಲ್ಲ.

ರಾಹೂಪನಿಂದ ಹತ್ತನೆಯ ತಲೆಯವನಾಗಿ ಲಕ್ಷ್ಮಣಸಿಂಹನು ಗಾದಿಯನ್ನೇರಿದನು. ಸಿಂಹಾಸನಾರೋಹಣಮಾಡಿದಾಗ ರಾಣಾ ಲಕ್ಷ್ಮಣಸಿಂಹನು ಬಹು ಚಿಕ್ಕವಯಸ್ಸಿನವನಾಗಿದ್ದುದರಿಂದ, ಆತನ ಚಿಕ್ಕಪ್ಪನಾದ ರಾಣಾ ಭೀಮಸಿಂಹನೇ ರಾಜ್ಯಾಡಳಿತವನ್ನು ಗಮನಿಸುತ್ತಿದ್ದನು. ರಾಜಸ್ಥಾನದ ಇತಿಹಾಸದಲ್ಲಿ ಲಕ್ಷ್ಮಣಸಿಂಹನ ಆಳ್ವಿಕೆಯಲ್ಲಿ ನಡೆದಂತಹ ಭಯಂಕರ ಪ್ರಸಂಗವು ಮತ್ತಾವಾಗಲೂ ನಡೆದಿರಲಿಲ್ಲ. ಚಿತ್ತೂರಿಗೆ ಆಗ ಪ್ರಾಪ್ತವಾ

ದಂತಹ ವಿಪತ್ತು ಎಂದೂ ಒದಗಿರಲಿಲ್ಲ. ದಿಲ್ಲೀ ಪಾದಷಹನಾದ ಅಲ್ಲಾವುದ್ದೀನನು ಆಗ ಆ ನಗರಿಯ ಮೇಲೆ ನಡೆಸಿದಂತಹ ಘಾತುಕ ಕಾರ್ಯವನ್ನು ಮತ್ತೆಲ್ಲೂ ಯಾವಾಗಲೂ ನಡೆಯಿಸಲಿಲ್ಲ.

# ರಾಣಾ ಭೀಮಸಿಂಹ-ಪದ್ಮಿನಿ

ಸರ್ವಾಧಿಕಾರಿಯಾದ ರಾಣಾ ಭೀಮಸಿಂಹನು, ಸಿಲೋನಿನ ಹಮೀರಸಿಂಹ ಚೌಹಣನ ಮಗಳಾದ ಪದ್ಮಿನಿಯೆಂಬ ಸುಂದರಿಯನ್ನು ವಿವಾಹವಾಗಿದ್ದನು. ಪದ್ಮಿನಿಯೆಂಬುದು, ಆಕೆಗೆ ಅಂಕಿತನಾಮ ಮಾತ್ರವಲ್ಲ; ಅನ್ವರ್ಥನಾಮವಾಗಿಯೂ ಇದ್ದಿತು. ಕವಿಗಳು ಪದ್ಮಿನಿ ಜಾತಿಯವಳೆಂದು ವರ್ಣಿಸುವಂತಹ ಸ್ತ್ರೀಗೆ ಯಾವಯಾವ ಲಕ್ಷಣಗಳು ಇರಬೇಕೆಂದು ಸಾಮುದ್ರಿಕಾ ಶಾಸ್ತ್ರದಲ್ಲಿ ಹೇಳಿದೆಯೋ, ಆ ಸುಲಕ್ಷಣಗಳೆಲ್ಲವೂ ಆ ಪದ್ಮಿನೀದೇವಿಯಲ್ಲಿ ಮನೆಮಾಡಿಕೊಂಡಿದ್ದುವು. ಆ ಸೌಂದರ್ಯತನು ವ್ಯಕ್ತಿಯಲ್ಲಿ, ರೂಪು, ಯೌವನ, ವಿದ್ಯೆ, ನಯ, ನಾಗರಿಕತೆಗಳು ಅತ್ಯುತ್ಕೃಷ್ಟ ಪ್ರಮಾಣದಿಂದ ಬೆರೆತಿದ್ದುವು. ಆಕೆಯ ಆ ಸೌಂದರ್ಯ ಪ್ರಭಾವವು ಜನಜನಿತವಾಗಿ, ಆ ಕಾಲದ ಕವಿಗಳು ಅದನ್ನು ತಮ್ಮ ಬುದ್ಧಿ ಶಕ್ತ್ಯನುಗುಣವಾಗಿ ವರ್ಣಿಸಿ ಹಾಡತೊಡಗಿದ್ದರು.

ಆ ಕಾಲದಲ್ಲಿ ಡಿಲ್ಲಿಯಲ್ಲಿ ಖಿಲ್ಜೀವಂಶದ ಅಲ್ಲಾವುದ್ದೀನನು ಆಧಿಪತ್ಯ ಮಾಡುತ್ತಿದ್ದನೆಂದು ಹೇಳಿದೆಯಲ್ಲವೆ! ಒಂದಾನೊಂದು ದುರ್ಮುಹೂರ್ತದಲ್ಲಿ ಅವನ ಕಿವಿಗೆ ಪದ್ಮಿನಿಯ ಸೌಂದರ್ಯಪ್ರಭಾವದ ವರ್ಣನೆಯು ಸೋಕಿತು. ಅಲ್ಲಾವುದ್ದೀನನು ಮೊದಲೇ ವಿದ್ಯಾಹೀನನು, ದುರಭಿಮಾನಿ, ಸ್ವೇಚ್ಛಾಚಾರಿ; ಸಾಲದುದಕ್ಕೆ ಯೌವನ, ಧನಸಂಪತ್ತಿ ಪ್ರಭುತ್ವಾದಿಗಳೂ ಅದರೊಂದಿಗೆ ಬೆರೆದು ಅವನ ತಲೆ ತಿರುಗಿಸಿದ್ದುವು. ಮೇಲೆ ಮಹಾ ಪರಾಕ್ರಮಿ, ಧೈರ್ಯಶಾಲಿ; ತನ್ನ ಚಿಕ್ಕಪ್ಪನನ್ನೇ ವಿಶ್ವಾಸಘಾತುಕತನದಿಂದ ಕೊಂದು ಗಾದಿಯನ್ನೇರಿದ್ದ ಪರಮ ದ್ರೋಹಿ ಗಾದಿಹತ್ತಿದಾಗಿನಿಂದ, ತನ್ನ ಆಗ್ರಹಕ್ಕೆ ಪಾತ್ರರಾದ ನಿರ್ಭಾಗ್ಯ ಪ್ರಜೆಗಳ ಕಣ್ಣು ಕೀಳಿಸಿಯೂ, ಧನವನ್ನು

ಅಪಹರಿಸಿಯೂ, ಕಾರಾಗೃಹದಲ್ಲಿ ಚಿತ್ರಹಿಂಸೆಪಡಿಸಿಯೂ, ಕೊಲ್ಲಿಸಿಯೂ ಹೀಗೆ ಅವನು ಮಾಡಿದ ಪಾಪಕಾರ್ಯಗಳಿಗೆ ಮಿತಿಯಿರಲಿಲ್ಲ. ತನ್ನ ಮೇಲೆ ದಂಡೆತ್ತಿ ಬಂದ ಶತ್ರುಗಳನ್ನು ಜಯಿಸುವುದರಲ್ಲೂ, ಪರರಾಜರ ದೇಶಗಳನ್ನು ಆಕ್ರಮಿಸುವುದರಲ್ಲೂ, ಪಿತೂರಿಗಳ ಹೆಸರೂ ಇಲ್ಲದಂತೆ ಅಡಗಿಸುವುದರಲ್ಲೂ, ಸಾಟಿಯಿಲ್ಲದ ಚಂಡಶಾಸನನಾದುದರಿಂದ ಅವನ ರಾಜ್ಯವು ಸಕಲೈಶ್ವರ್ಯಗಳಿಗೂ ತೌರುಮನೆಯಾಗಿ ಶೋಭಿಸುತ್ತಿದ್ದಿತು. ನಿರಂಕುಶವಾದ ಅವನ ಕ್ರೌರ್ಯಕ್ಕೆ ಅಪರಾಧಿಗಳು ಮಾತ್ರವಲ್ಲ - ನಿರಪರಾಧಿಗಳಾದ ಅವರ ಹೆಂಡಿರೂ ಚಿಕ್ಕಮಕ್ಕಳೂ ಗುರಿಯಾಗಿ ಚಿತ್ರಹಿಂಸೆಗಳ ಪಾಲಾಗುವುದು ತಪ್ಪಿರಲಿಲ್ಲ. ಪ್ರಜೆಗಳನ್ನು ಹಿಂಸಿಸುವುದರಲ್ಲಿ ಅವನಿಗೆ ಹಿಂದುಗಳು ಮಹಮ್ಮದೀಯರು ಎಂಬ ಭೇದವಿರಲಿಲ್ಲ. ಸ್ವಮತಸ್ಥರಾದ ತುರುಷ್ಕರು ಸಹ ಅವನ ಅಪ್ಪಣೆಯಿಲ್ಲದೆ, ಒಬ್ಬರೊಬ್ಬರನ್ನು ನೋಡಕೂಡದು. ಔತಣಗಳಿಗೆ ಹೋಗಕೂಡದು. ಹತ್ತುಮಂದಿ ಸೇರಿ ಮಾತನಾಡಕೂಡದು. ಹೀಗಾಗಿ ಅವನ ಆಳ್ವಿಕೆಯಲ್ಲಿ ಪ್ರಜೆಗಳು ಹೊಟ್ಟೆ ತುಂಬ ಊಟ ಮಾಡಿಯೂ, ಕಣ್ಣು ತುಂಬ ನಿದ್ರೆ ಮಾಡಿಯೂ ಅರಿಯದೆ, ಅಹರ್ನಿಶಿ ಪ್ರಾಣಭಯದಿಂದ ಸಂಕಟ ಪಡುತ್ತಿದ್ದರು.

ಅಂತಹ ಆ ನೀಚನಿಗೆ ಮೇಲ್ಕಂಡಂತೆ ಭುವನಮೋಹನ ಸೌಂದರ್ಯವತಿಯಾದ ಪದ್ಮಿನೀದೇವಿಯ ಸೌಂದರ್ಯವರ್ಣನೆಯು ಕೇಳಿಸಿದೊಡನೆಯೇ 'ಆ ಸೌಂದರ್ಯಪೂರ್ಣ ಸ್ತ್ರೀಯು ದಿಲ್ಲೀ ಪಾದಷಹನಾದ ನನ್ನ ಸ್ವತ್ತಾಗಿರಬೇಕಲ್ಲದೆ, ಆ ಬಡ ರಜಪೂತ ರಾಣಾನು ಆಕೆಗೆ ಸ್ವಾಮಿಯಾಗಿರತಕ್ಕುದಲ್ಲ,ವೆಂದು ನಿರ್ಧರಿಸಿದನು. ಆಕೆಯನ್ನು ಚಿತ್ತೂರಿನಿಂದ ದಿಲ್ಲಿಯ ಅಂತಃಪುರಕ್ಕೆ ಸಾಗಿಸಿ, ಅಲ್ಲಿ ತನ್ನ ಹೃದಯಾಧಿದೇವತೆಯನ್ನಾಗಿ ಆಳಬೇಕೆಂಬ ಆಪೇಕ್ಷೆಯಿಂದ ಮಹಾಸೇನೆಯನ್ನು ತೆಗೆದುಕೊಂಡು ಗುಡ್ಡ ಬೆಟ್ಟ ನದಿ ಕೆರೆಗಳನ್ನು ದಾಟಿಕೊಂಡು, ಚಿತ್ತೂರು ನಗರದ ಮಹಾದ್ವಾರದಲ್ಲಿ ನಿಂತು, ಪದ್ಮಿನೀ ದೇವಿಯನ್ನು ತನಗೆ ಕಾಣಿಕೆಯಾಗಿ ಅರ್ಪಿಸಿದರಲ್ಲದೆ, ತಾನು ಹಿಂದಿರುಗೆನೆಂದು ಹೇಳಿಕಳುಹಿಸಿದನು.

ಚಿತ್ತೂರಿಗೂ, ರಾಜಪುತ್ರಕುಲಕ್ಕೂ ಮಾತೃಶ್ರೀ ಸ್ವರೂಪಿಣಿಯಾದ ಪದ್ಮಿನೀದೇವಿಯನ್ನು ಕುರಿತು ಆಡಿದ ಆ ನರಾಧಮನ ಹೇಯವಾಕ್ಯಗಳನ್ನು ಕೇ

ಳಿದೊಡನೆಯೇ, ಸ್ವಾಭಿಮಾನಶೀಲರಾದ ರಾಜಪುತ್ರರು ಕೋಪಾಕ್ರಾಂತರಾಗಿ ಉರಿದೆದ್ದರು. ರಾಜಮಹಿಷಿಯೂ, ವೀರಕ್ಷತ್ರಿಯ ಕಾಲೋದ್ಭವಳೂ, ಪರಮ ಪತಿವ್ರತಾಶಿರೋಮಣಿಯೂ ಆದ ಪದ್ಮಿನೀದೇವಿಯನ್ನು ನರಮಹಿಷನಾದ ಆ ಯವನನಿಗೆ ಕಾಣಿಕೆಯಾಗಿ ಕೊಡುವುದೆಂದರೇನು! ಅಂತಹ ಹೇಯ ಕಾರ್ಯಕ್ಕೆ ಯಾವ ನರಾಧಮನೂ ಸಮ್ಮತಿಸಲಾರನಲ್ಲವೆ! ಹಾಗಿರುವಲ್ಲಿ ಇನ್ನು ರಾಜಪುತ್ರನನ್ನು ಕೇಳುವುದೇನು? ಕಾದ ಕಬ್ಬಿಣದ ಸರಳನ್ನು ಕಿವಿಯಲ್ಲಿರಿದಂತೆ ಕೇಳಿಸಿದ ಆ ಮಾತಿಗಾಗಿ, ರಾಜಪುತ್ರರು ಪ್ರಾಣಾಂತ್ಯದ ವರೆಗೂ ಹೋರಾಡಿ, ಕೊನೆಗೆ ಪ್ರಾಣಗಳನ್ನು ಒಪ್ಪಿಸಿಯಾದರೂ, ಸ್ವಾಭಿಮಾನರಕ್ಷಣೆಗಾಗಿ ಹೊಡೆದಾಡುವೆವಲ್ಲದೆ, ತಮ್ಮ ಪ್ರಾಣಮಾನಗಳ ರಕ್ಷಣೆಗೆಂದು ಆ ನೀಚನು ಹೇಳುವಂತಹ ಸಂಚಕಾರವನ್ನು ಕೊಟ್ಟು ಬದುಕಲಾರೆವೆಂದು ತಮ್ಮತಮ್ಮ ಆಯುಧಗಳನ್ನು ಹಿಡಿದು ಪ್ರಮಾಣಮಾಡಿದರು. ಒಡನೆ ಹೊರಬಿದ್ದ ರೋಷಭೀಷಣರಾದ ರಜಪೂತರ ಸೈನ್ಯಕ್ಕೂ, ಯವನ ಸೈನ್ಯಕ್ಕೂ ಕದನವು ಕೈಗಟ್ಟಿ, ಉಭಯದಳದಲ್ಲೂ, ನೂರಾರುಮಂದಿ ವೀರರು ರಣದೇವತೆಗೆ ಬಲಿಯಾದರು. ಅಲ್ಲಾವುದ್ದೀನನಿಗೆ ರಜಪೂತರ ಶಕ್ತಿಸಾಮರ್ಥ್ಯಗಳು ಎಷ್ಟುಮಟ್ಟಿನವು ಎಂಬುದರ ಪರಿಚಯವಾಯಿತು. ಶತ್ರುದುರ್ಭೇದ್ಯವಾದ ಆ ನಗರದ ಕೋಟೆಯೂ, ಅಜೇಯರಾದ ರಜಪೂತರ ದಂಡೂ, ಎಷ್ಟುವರ್ಷಗಳವರೆಗೆ ಕಾದಿದರೂ ತನಗೆ ಪದ್ಮಿನಿಯು ಲಾಭಕ್ಕಿಲ್ಲ - ಆಕೆಯ ದರ್ಶನಲಾಭಕ್ಕೂ ಅವಕಾಶಕೊಡಲಾರವೆಂಬುದು ನಿಸ್ಸಂದೇಹವಾಯಿತು. ಅಂತಹ ನಿರಾಶೆಯ ಸಂದರ್ಭದಲ್ಲಿ, ಆ ಯವನರಾಜನು ಆಕೆಯು ಹೇಗಿರುವಳೋ ಒಂದುಸಾರಿ ನೋಡಿಯಾದರೂ ಹೋಗೋಣವೆಂದು ಮತ್ತೊಂದು ಕುಯುಕ್ತಿಯನ್ನು ತೆಗೆದನು.—'ನನಗೇನು ಪದ್ಮಿನೀರಾಣಿಯನ್ನು ಒಪ್ಪಿಸಬೇಕಾದುದಿಲ್ಲ! -ಒಂದುಸಾರಿ ಆಕೆಯ ರೂಪರಾಶಿಯನ್ನು ನೋಡಲು ಅವಕಾಶ ಕೊಟ್ಟರೆ ಸಾಕು' ಎಂದು ತನ್ನ ಅಪೇಕ್ಷೆಯನ್ನು ತಿಳಿಸಿದನು. ಆ ಕಾಮುಕನ ಆ ಅಪೇಕ್ಷೆಯಾದರೂ, ಅವರಿಗೆ ಅಸಹ್ಯವೆನ್ನಿಸದಿರಲಿಲ್ಲ. - 'ನಮ್ಮಾ ಮಹಾಪತಿವ್ರತೆಯ ಕಿರುಬೆರಳ ದರ್ಶನವೂ ಆ ಯವನನಿಗೆ ಆಗಲಾರದು. ಅಗ್ನಿಕುಲಸಂಭವರಾದ ರಜಪೂತರು, ಜೀವಗಳ್ಳರಾಗಿ ತಮ್ಮ ಸ್ತ್ರೀಯರ ರೂಪಪ್ರದರ್ಶನಮಾಡಿ ತನ್ಮೂಲಕ ಬದುಕ ಬಯಸುವುದಿಲ್ಲ' ಎಂದು ಅಭಿಮಾನಿ ರಾಜಪುತ್ರಸರದಾರರು ಛಲ

ಗೊಂಡರು. ಆದರೆ, ಭೀಮಸಿಂಹನು, ಶತ್ರುವು ಎಂಟುಹತ್ತು ತಿಂಗಳವರೆಗೆ ಮುತ್ತಿಗೆಹಾಕಿ ಕುಳಿತುಕೊಂಡುದರಿಂದ, ತಮ್ಮ ನಗರಕ್ಕೆ ಹೊರಗಿನಿಂದ ಪದಾರ್ಥಗಳಾಗಲೀ, ಇತರ ಯಾವ ಬಗೆಯ ಸಹಾಯವಾಗಲಿ ಒದಗಲವಕಾಶವಿಲ್ಲದೆ, ತಮ್ಮ ಬಲವು ದಿನದಿನಕ್ಕೆ ಹೇಗೆ ಕ್ಷೀಣಿಸುತ್ತಿರುವುದೆಂಬಂಶವನ್ನು ಅವರ ಗಮನಕ್ಕೆ ತಂದು, ಆ ಸಂದರ್ಭದಲ್ಲಿ ತನ್ನ ರಾಣಿಯ ಸಲಹೆ ಕೇಳಲು, ಅಂತಃಪುರಕ್ಕೆ ನಡೆದನು.

ತನ್ನ ಸೌಂದರ್ಯದ ಸಲುವಾಗಿ, ಆ ನಗರಕ್ಕೂ ರಜಪೂತಕುಲಕ್ಕೂ ಒದಗಿದ ವಿಪತ್ತಿಗಾಗಿ, ರಾಣಿ ಪದ್ಮಿನೀದೇವಿಯು ಮರುಗಿದಳು. ಆ ಸಂದರ್ಭದಲ್ಲಿ ತಾನು ಅಷ್ಟುಮಟ್ಟಿಗಾದರೂ ಆ ಬಲಾಢ್ಯ ಯುವನನ ಇಷ್ಟಕ್ಕೆ ಒಡಂಬಡದಿದ್ದರೆ, ಮಹಾ ಛಲಗಾರನಾದ ಆತನು ತನ್ನ ಮತ್ತು ಇತರರ ಸರ್ವನಾಶವಾಗುವವರೆಗೂ ತಾನು ಹಿಡಿದ ಹಟವನ್ನು ಬಿಡಲಾರನೆಂದು ತೋರಿತು. ಆಗ ಪದ್ಮಿನೀದೇವಿಯು ಒಂದು ಉಪಾಯವನ್ನು ಯೋಚಿಸಿ- 'ಆರ್ಯಪುತ್ರಾ, ರಾಜ್ಯಕ್ಷೇಮಕ್ಕಾಗಿ ನಾನು ಅಷ್ಟುಮಾತ್ರ ಕಾರ್ಯಕ್ಕೆ ಒಡಂಬಟ್ಟೇನು! ಆದರೆ, ಕಾಮಾಂಧನೂ ಧೂರ್ತನೂ ಆದ ಆ ಯುವನನೆದುರಿಗೆ ನಿಂತು ಮುಖಾವರಣವನ್ನು ತೆಗೆಯುವುದೂ ಒಂದು ಬಗೆಯಿಂದ ಅಪಾಯಹೇತುವಲ್ಲವೇ, ಎಂದೂ ಮನಸ್ಸು ಸಂದೇಹಿಸುತ್ತದೆ. ಅದಕ್ಕೆ ಬದಲಾಗಿ, ಕನ್ನಡಿಯಲ್ಲಿ ಪ್ರತಿಬಿಂಬವನ್ನು ನೋಡಿಕೊಂಡು ಹೋಗಬಹುದೆಂದು ಅವನಿಗೆ ತಿಳಿಸೋಣವಾಗಲಿ' ಎಂದು ವಿಜ್ಞಾಪಿಸಿದಳು. ಭೀಮಸಿಂಹನೂ ಅದು ಸಹಜವೆಂದು ಒಪ್ಪಿಕೊಂಡನು. ಆ ಸಲಹೆಯು ಸರದಾರರಿಗೂ ಯುಕ್ತವೆನ್ನಿಸಿತು. ಆ ಸಂಗತಿಯನ್ನು ಅಲ್ಲಾವುದ್ದೀನನಿಗೆ ತಿಳಿಸಿದ್ದಾಯಿತು. 'ಅಷ್ಟಾದರೂ ಸಾಕು, ನಾನು ತೃಪ್ತನಾಗಿ ಹೊರಟುಹೋಗುವೆನು' ಎಂದು ಪಾದಷಹನಿಂದ ಪ್ರತ್ಯುತ್ತರ ಬಂದಿತು. ರಾಜಪುತ್ರರು ಅದಕ್ಕೆ ತಕ್ಕಂತೆ ಸಿದ್ಧಪಡಿಸಿಕೊಂಡರು.

ಪದ್ಮಿನೀರಾಣಿಯ ಪ್ರತಿಬಿಂಬ ದರ್ಶನಕ್ಕೆಂದು ಒಂದು ದಿನವು ಗೊತ್ತುಮಾಡಲ್ಪಟ್ಟಿತು. ಆ ದಿನ ಅಲ್ಲಾವುದ್ದೀನನು ಮಿತಪರಿವಾರಯುಕ್ತನಾಗಿ, ಚಿತ್ತೂರುನಗರದ ಕೋಟೆಯೊಳಕ್ಕೆ ಪ್ರವೇಶಿಸಿ, ಭೀಮಸಿಂಹನೇ ಮುಂತಾದವರು ಎದುರುಗೊಂಡು ಕರೆದೊಯ್ಯಲು – ರಾಜಗೃಹವನ್ನು ಹೊಕ್ಕನು.

ಅಲ್ಲಿ ಮೊದಲೇ ಏರ್ಪಡಿಸಿದ್ದಂತೆ ಒಂದು ನಿಲುಗನ್ನಡಿಯ ಎದುರಿಗೆ ಅವನನ್ನು ನಿಲ್ಲಿಸಿದರು. ಸ್ವಲ್ಪ ಹೊತ್ತಿನೊಳಗಾಗಿಯೇ ಅದರ ಎದುರಿಗಿರಿಸಲ್ಪಟ್ಟಿದ್ದ ಬೇರೊಂದು ಕನ್ನಡಿಯಲ್ಲಿ ಪ್ರತಿಬಿಂಬಿಸಿದ್ದ ಪದ್ಮಿನೀದೇವಿಯ ಲಾವಣ್ಯರಾಶಿಯು, ಅಲ್ಲಾವುದ್ದೀನನ ಎದುರಿಗಿದ್ದ ಕನ್ನಡಿಯಲ್ಲೂ ಪ್ರತಿಫಲಿಸಿತು. ತನ್ನ ಜೀವಮಾನದಲ್ಲೇ ನೋಡಿ ಕೇಳಿ ಅರಿಯದ-ಅಲ್ಲಿ ಪ್ರತಿಫಲಿತವಾದ ಆ ಸ್ವರ್ಗೀಯಸೌಂದರ್ಯವನ್ನು ಕಂಡು, ಆ ಯವನರಾಜನು ಭ್ರಾಂತನಾದನು. ಆದರೂ ತನ್ನ ಮನಸ್ಸಿನಲ್ಲುಂಟಾದ ಯಾವ ಬಗೆಯ ಉದ್ವೇಗವನ್ನೂ ಹೊರಕ್ಕೆ ತೋರಗೊಡದೆ, ತನ್ನ ಉದ್ದೇಶವನ್ನು ಉಪಾಯಾಂತರದಿಂದ ಸಾಧಿಸಿಕೊಳ್ಳಬೇಕೆಂಬ ದುರಾಲೋಚನೆಯಿಂದ, ಭೀಮಸಿಂಹನಲ್ಲಿ ಕಪಟ ಸ್ನೇಹವನ್ನು ತೋರಿಸುತ್ತಾ, ಲೋಕಾಭಿರಾಮವಾದ ಮಾತುಗಳಿಂದ ಅವನೊಡನೆ ಸಂಭಾಷಣೆಗೆ ತೊಡಗಿ, ಅರಮನೆಯಿಂದ ಹೊರಬಿದ್ದನು. ಸರಳ ಹೃದಯನಾದ ರಾಣಾ ಭೀಮಸಿಂಹನು, ದುಷ್ಕರ್ಮಿಯಾದ ಆ ಯವನರಾಜನ ಹೃದಯವನ್ನು ತಿಳಿಯಲಾರದೆ, ಅವನೊಡನೆ ಮಾತನಾಡುತ್ತ ಆಡುತ್ತ ನಗರದ ಕೋಟೆಯನ್ನೂ ದಾಟಿ ನಡೆದನು. ಅಂಗರಕ್ಷಕ ಸೈನ್ಯವನ್ನಾಗಲೀ, ಕೊನೆಗೆ ಅಪಾಯ ಒದಗಿದರೆ ಸ್ವಸಂರಕ್ಷಣೆಗಾಗಿ ಆಯುಧವನ್ನಾಗಲೀ ತೆಗೆದುಕೊಳ್ಳದೆ, ವಿಶ್ವಾಸಘಾತುಕನಾದ ಅವನನ್ನು ಅನುಸರಿಸಿ ರಾಣಾನು ಅವನ ಬಿಡಾರದವರೆಗೂ ಹೋದನು. ಅಲ್ಲಾವುದ್ದೀನನು ಬೇಟೆಯು ತನ್ನ ಬಲೆಗೆ ಬಿದ್ದಿತೆಂದು ಸಂತೋಷಿಸಿ, ಭೀಮಸಿಂಹನನ್ನು ಒಂದು ಡೇರೆಯಲ್ಲಿ ಕೂರಿಸಿ, ತಾನು ಅಲ್ಪಶಂಕೆಗೆಂಬ ನೆಪದಿಂದ ಹೊರಹೊರಟು ಆ ಡೇರೆಗೆ ಬಲವಾದ ಕಾವಲಿಡಿಸಿದನು. ಮಾತ್ರವಲ್ಲ- ಸ್ವಲ್ಪಹೊತ್ತಿನೊಳಗಾಗಿಯೇ ಆಯುಧ ಹಸ್ತರಾದ ಹಲವುಮಂದಿ ಅಫ್ಘಾನ ಸಿಪಾಯಿಗಳು ಒಳಹೊಕ್ಕು, ನಿರಾಯುಧನೂ ಏಕಾಂಗಿಯೂ ಆಗಿ ಕುಳಿತಿದ್ದ ಭೀಮಸಿಂಹನನ್ನು ಹಿಡಿದು ಕಟ್ಟಿ ಬಂದಿಯಾಗಿ ಮಾಡಿದರು. ಮತ್ತು ಒಡನೆಯೆ, ಅಲ್ಲಾವುದ್ದೀನನು- 'ಭೀಮಸಿಂಹನು ನಮ್ಮ ಬಿಡಾರದಲ್ಲಿ ಬಂದಿಯಾಗಿದ್ದಾನೆ. ಇನ್ನು ಎರಡು ದಿನಗಳೊಳಗಾಗಿ, ಪದ್ಮಿನೀರಾಣಿಯನ್ನು ನನಗೆ ತಂದು ಒಪ್ಪಿಸದಿದ್ದರೆ, ಭೀಮಸಿಂಹನನ್ನು ವಧಿಸುವುದಲ್ಲದೆ, ಚಿತ್ತೂರಿನ ಮೇಲೆ ಲಗ್ಗೆಯೇರಿ, ಊರನ್ನು ಲೂಟಿಮಾಡಲಾಗುತ್ತದೆ. ರಾಜಪುತ್ರರು ಈ ಆಜ್ಞೆಗೆ ಪ್ರತೀಕಾರವನ್ನು ಆಚರಿಸುವುದರ ಸೂಚ

ನೆಯು ತೋರಿದರೂ ಭೀಮಸಿಂಹನ ಪ್ರಾಣವು ಸುರಕ್ಷಿತವಾಗಿರಲಾರದು' ಎಂದು ಚಿತ್ತೂರು ಕೋಟೆಗೆ ಸಮಾಚಾರವನ್ನು ಕಳುಹಿಸಿದನು.

ತಮ್ಮ ವೀರಶಿರೋಮಣಿ ಮಹಾರಾಣಾ ಭೀಮಸಿಂಹನು ಯವನ ಬಿಡಾರದಲ್ಲಿ ಬಂದಿಯಾದನೆಂಬ ವಾರ್ತೆಯು ರಾಜಪುತ್ರರಿಗೂ ರಾಣಿ ಪದ್ಮಿನೀದೇವಿಗೂ ಸಿಡಿಲಿನಂತೆ ಕೇಳಿಸಿತು. ಆಗಿನ ಆ ದುರಂತ ವಿಪತ್ತಿನಿಂದ ಹೇಗೆ ಪಾರಾಗುವುದೆಂಬುದು ತೋರಲಿಲ್ಲ; ಮಹಾ ಪರಾಕ್ರಮಿಗಳಾದ ಸರದಾರರೂ ಹತಾಶರಂತೆ ಉಪಾಯತೋರದೆ ಕುಳಿತರು. ಆಗ ಪದ್ಮಿನೀದೇವಿಯು ಒಂದು ಉಪಾಯವನ್ನು ಯೋಚಿಸಿ- ಅಲ್ಲಾವುದ್ದೀನನ ಶಿಬಿರಕ್ಕೆ ಹೋಗಿ ತನ್ನೊಲಕ ಭೀಮಸಿಂಹನನ್ನು ಬಿಡುಗಡೆ ಮಾಡಿಸಲು ಕೃತಸಂಕಲ್ಪಳಾದಳು. ತನ್ನನ್ನೂ ತನ್ನ ಸಖಿಯರ ಮತ್ತು ದಾಸಿಯರ ಪರಿವಾರವನ್ನೂ ಯೋಗ್ಯಮರ್ಯಾದೆಯಿಂದ ನೋಡಿಕೊಳ್ಳುವಂತೆ ಯವನ ಸೈನ್ಯಕ್ಕೆ ಆಜ್ಞೆಮಾಡಬೇಕೆಂದೂ, ತಾನು ಪಾದಷಹನ ಶಿಬಿರಕ್ಕೆ ಬರಲು ಸಮ್ಮತಿಸಿದ್ದೇನೆಂದೂ ಅಲ್ಲಾವುದ್ದೀನನಿಗೆ ಸಮಾಚಾರವನ್ನು ಕಳುಹಿಸಿದಳು.

ಪದ್ಮಿನೀರಾಣಿಯು ತನ್ನ ಶಿಬಿರಕ್ಕೆ ಬರುವಳೆಂಬ ವಾರ್ತೆಯನ್ನು ಕೇಳಿ ಅಲ್ಲಾವುದ್ದೀನನು ತನ್ನನ್ನೇ ತಾನು ಮರೆತು, ರಾಣಿಯನ್ನೂ ಆಕೆಯ ಪರಿವಾರವನ್ನೂ ಅತಿಶಯ ಗೌರವಾದರಗಳಿಂದ ನೋಡಿಕೊಳ್ಳಲು ತಕ್ಕ ಸಿದ್ಧತೆಯನ್ನು ಮಾಡಿದನು. ಇತ್ತ, ರಾಣಿಯೊಂದಿಗೆ ಹೊರಡಲಿಕ್ಕೆಂದು ಏಳುನೂರು ಪಾಲಕಿಗಳು ಸಿದ್ಧವಾದುವು. ಕಿನಕಾಪಿನ ಬುರಕಿಯನ್ನು ಹಾಕಿದ್ದ ಅವುಗಳಲ್ಲಿ ಒಂದೊಂದರಲ್ಲೂ ಚಿತ್ತೂರಿನ ಮೂಲಬಲದ ಒಬ್ಬೊಬ್ಬ ಪರಾಕ್ರಮಿ ರಾಜಪುತ್ರನು, ಸಕಲಾಯುಧ ಸಮೇತನಾಗಿ ಕುಳಿತನು. ಒಂದೊಂದು ಪಾಲಕಿಯನ್ನು ಹೊರಲು ಆರಾರು ಮಂದಿಯಂತೆ, ವೀರ ಸಿಪಾಯಿಗಳು ಬೋಯಿಗಳ ವೇಷದಲ್ಲಿ ಸಿದ್ಧರಾದರು. ಆ ವೇಳೆಗೆ ಪದ್ಮಿನೀರಾಣಿಯ ಸೋದರಮಾವನಾದ ಗೋರಾಸಿಂಹನೂ, ಬಾದಳನೆಂಬೊಬ್ಬ ಬಾಲವೀರನೂ ಬಂದೊದಗಿದರು. ರಾಣಿಯ ಉಪಾಯವು ಅವರಿಗೂ ಸಮ್ಮತವಾಯಿತು. ಆ ಸಂದರ್ಭದಲ್ಲಿ ತಾವೂ ತಮ್ಮ ಯೋಗ್ಯತಾನುಸಾರ ಸೇವೆಮಾಡತಕ್ಕುದು ಕರ್ತವ್ಯವೆಂದು ಭಾವಿಸಿ ಆ ಪರಿವಾರದೊಂದಿಗೆ ಹೊರಡಲು ಅವರೂ ಸಿದ್ಧರಾದರು.

ಅತ್ತ ಕಾಮುಕನಾದ ಅಲ್ಲಾವುದ್ದೀನನಾದರೋ, ಇಂದು ತನ್ನ ಅಭಿಷೆಯು ಪೂರ್ಣವಾಗುವುದೆಂಬ ಆಸೆಯಿಂದ ಸ್ವರ್ಗವೇ ಕೈಗೆ ಸಿಕ್ಕಿತೆಂಬಷ್ಟು ಸಂತೋಷಗೊಂಡು, - ಚಿತ್ತೂರಿನಿಂದ ಹೊರಟು ಸಾಲುಸಾಲಾಗಿ ಬರುತ್ತಿದ್ದ ಪಾಲಕಿಗಳಿಗೆ ಯಾವ ಬಗೆಯ ಅಪಚಾರವೂ ನಡೆಯದಿರುವಂತೆ ತಕ್ಕ ಏರ್ಪಾಟುಗಳನ್ನು ಮಾಡುವುದರಲ್ಲಿ ನಿರತನಾಗಿದ್ದನು. ಸಮುದ್ರದ ತರಂಗಗಳೋ ಎಂಬಂತೆ ಮೇಲೆಮೇಲೆ ಬರುತ್ತಿದ್ದ ಆ ಏಳುನೂರು ಪಾಲಕಿಗಳನ್ನು ಕಂಡು 'ಅವುಗಳಲ್ಲೆಲ್ಲಾ ಇರುವವರು ಯಾರು?' ಎಂದು ಪ್ರಶ್ನಿಸಲು, ರಜಪೂತರು, ಪದ್ಮಿನೀದೇವಿಯ ದಾಸಿಯರೂ ಸಖಿಯರೂ ಆಕೆಯನ್ನು ಅಗಲಿರಲಾರದೆ ಜೊತೆಗೆ ಹೊರಟುಬಂದಿದ್ದಾರೆಂದು ವಿಜ್ಞಾಪಿಸಿದರು. ಪಾಲಕಿಗಳು ಯುವನ ಪಾಳಯದ ಸಮೀಪಕ್ಕೆ ಬಂದೊಡನೆಯೇ, ಗೋರಾಸಿಂಹನು ಅಲ್ಲಾವುದ್ದೀನನ ಸಮೀಪಕ್ಕೆ ಬಂದು,-"ನನ್ನ ಸೋದರಿಯು, ಕೊನೆಯ ಈಯೊಂದುಬಾರಿ, ತನ್ನ ಭರ್ತನನ್ನು ಸಂದರ್ಶಿಸಿ ಅಂತ್ಯಸಂಭಾಷಣೆಯನ್ನು ಮಾಡಲು ಅಪ್ಪಣೆಯನ್ನು ಬೇಡುತ್ತಾಳೆ.' ಎಂದು ಬಿನ್ನವಿಸಿಕೊಂಡನು. ಅಲ್ಲಾವುದ್ದೀನನೂ, ಅದಕ್ಕೆ ಸಮ್ಮತಿಸದಿರಲಿಲ್ಲ. ಪದ್ಮಿನೀದೇವಿಯದೆಂದು ಬೋಧವಾಗುತ್ತಿದ್ದ ಪಾಲಕಿಯು ಭೀಮಸಿಂಹನಿದ್ದ ಬಿಡಾರದೊಳಕ್ಕೆ ಸಾಗಿತು.

ಅಲ್ಲಿ ಕಾಲತಾಮಸಮಾಡಲು ಅವಕಾಶವಿರಲಿಲ್ಲ. ಒಡನೆ ಪಾಲಕಿಯೊಳಗಿದ್ದ ಬಾದಳಬಾಲಕನು ಹೊರಕ್ಕೆ ಬಂದು, ಭೀಮಸಿಂಹನಿಗೆ ವಂದಿಸಿ ಡೇರೆಯ ಹೊರಗೆ ನಿಂತಿದ್ದ ಅಶ್ವವನ್ನೇರಿ ಚಿತ್ತೂರುಕಡೆಗೆ ವೇಗವಾಗಿ ಪ್ರಯಾಣಮಾಡಿರೆಂದು ಸೂಚಿಸಿ, ಆತನ ಕೈಕಾಲಿನ ಬಂಧನಗಳನ್ನೆಲ್ಲ ಬಿಚ್ಚಿದನು. ಭೀಮಸಿಂಹನು ತನ್ನ ಬಿಡುಗಡೆಗಾಗಿ, ತಮ್ಮವರು ನಡೆಸಿದ ಉಪಾಯಗಳನ್ನೆಲ್ಲ ಕೇಳಿ ಸಂತುಷ್ಟನಾದರೂ ಕೇವಲ ಬಾದಳ ಗೋರಾಸಿಂಗರನ್ನೂ ಕೆಲವುಂದಿ ಸೈನಿಕರನ್ನೂ ಮಾತ್ರ ಶತ್ರುಪಾಳಯದಲ್ಲಿ ಬಿಟ್ಟು, ತಾನು ಜೀವಗಳ್ಳನಾಗಿ ಹಿಂದಿರುಗಿ ಹೋಗಲು ಒಡಂಬಡಲಿಲ್ಲ. ಕೊನೆಗೆ ಬಾದಳನು ಬಹು ಬಗೆಯಿಂದ ಬೇಡಿಕೊಂಡು, ಆ ಪಾಲಕಿಗಳನ್ನು ಹೊತ್ತವರೂ ಅವುಗಳೊಳಗಿದ್ದವರೂ ಎಲ್ಲರೂ ಚಿತ್ತೂರಿನ ಮೂಲಬಲದ ಸೈನಿಕರೇ ಎಂದು ಭರವಸೆ ಕೊಟ್ಟಮೇಲೆ, ಆತನು ಹೊರಡಲನುವಾದನು. ಬಾದಳನು ಸಾಗಿ ಬಂದಿದ್ದ ಪಾಲಕಿಯಲ್ಲೇ ಭೀಮಸಿಂಹನೂ ಹೊರಬಿದ್ದನು. ಪಾಳಯದಿಂದ

ಸ್ವಲ್ಪದೂರ ಹೋಗುವವರೆಗೂ ಗೋಪಾ ಪಾಲಕಿಯಾದುದರಿಂದ ಅದರ ತಂಬೆಗೆ ಯಾರೂ ಹೋಗಲಿಲ್ಲ. ಭೀಮಸಿಂಹನು ಒಡನೆ ಕೆಳಕ್ಕಿಳಿದು, ತನಗಾಗಿ ಸಿದ್ಧವಾಗಿದ್ದ ಕುದುರೆಯನ್ನು ಹತ್ತಿ ಚಿತ್ತೂರಿನ ಕಡೆ ವೇಗವಾಗಿ ಓಡಿಸಿಕೊಂಡು ಹೋಗಿದನು. ಅದನ್ನು ನೋಡಿದ ಯವನ ಸಿಪಾಯಿಗಳು, ಬಲೆಯಲ್ಲಿದ್ದ ಸಿಂಹವು ಹೊರಬಿದ್ದು ಹಾರಾಯಿತೆಂದು ಅಲ್ಲಾವುದ್ದೀನನಿಗೆ ತಿಳಿಸಿದರು. ಅವನು ಆ ದಂಪತಿಗಳ ಅಂತ್ಯಸಂಭಾಷಣೆಗೆ ಅವಕಾಶ ಕೊಟ್ಟು ದೇ ತಪ್ಪಾಯಿತೆಂದುಕೊಂಡು, ಅವನನ್ನು ಬೆನ್ನಟ್ಟುವಂತೆ ವೇಗಶಾಲಿಗಳಾದ ತುರಗಾರೂಢರನ್ನು ಕಳುಹಿಸಿ, ಇತ್ತ ಪದ್ಮಿನಿಯಾದರೂ ತಪ್ಪಿಸಿಕೊಂಡು ಹೋಗದಂತೆ ತಡೆಯಬೇಕೆಂದು ಡೇರೆಯೊಳಕ್ಕೆ ಹೊಕ್ಕನು. ಅಲ್ಲಿ ಪದ್ಮಿನಿಯಿರಲಿಲ್ಲವಂತಿರಲಿ. ಬದಲಾಗಿ ಖಡ್ಗಧಾರಿಗಳಾದ ಗೋರಾಸಿಂಹ, ಬಾದಳ ಸಿಂಹರೂ, ನೂರಾರುಮಂದಿ ರಾಜಪುತ್ರರೂ ನಿಂತಿದ್ದುದನ್ನು ಕಂಡು ಭ್ರಾಂತನಾದನು. ತಾನು ಅವರನ್ನು ವಂಚಿಸಿದಂತೆಯೇ ರಾಜಪುತ್ರರಾದರೂ ತನ್ನನ್ನು ವಂಚಿಸಿದರೆಂದು ಸಂತಾಪಗೊಂಡು, ಒಡನೆ ಅವರನ್ನೆಲ್ಲ ಸೆರೆ ಹಿಡಿಯುವಂತೆ ತನ್ನ ಸೈನಿಕರಿಗೆ ಆಜ್ಞಾಪಿಸಿದನು. ರಾಜಪುತ್ರರು ಎಲ್ಲಾ ವಿಧವಾದ ಪ್ರತಿಕ್ರಿಯೆಗೂ ಸಿದ್ಧರಾಗಿಯೇ ಬಂದಿದ್ದರಾದುದರಿಂದ, ಕಣ್ಣೆವೆ ಹಾಕುವುದರೊಳಗಾಗಿ, ಅಫ್ಘಾನಸೈನ್ಯದಮೇಲೆ ಬಿದ್ದು ಹಣಿಯ ಹತ್ತಿದರು. ಅಫ್ಘಾನರು ಅವರ ಹೊಡೆತವನ್ನು ತಡೆದುಕೊಳ್ಳುವುದು ಅಸಾಧ್ಯವಾಯಿತು. ಆದರೂ ಉಭಯಸೈನ್ಯದಲ್ಲೂ ಹಲವು ನೂರು ಸೈನಿಕರು ಹತರಾಗಿ ಬಿದ್ದರು. ರಾಜಪುತ್ರರು ಪ್ರಾಣಾಂತ್ಯದವರೆಗೂ ಹೋರಾಡಿದರು. ಅಲ್ಲಾವುದ್ದೀನನು, ರೋಷಭೀಷಣರಾದ ಅವರೊಂದಿಗೆ ಕಾದುವುದು ಅಸಾಧ್ಯವೆಂದು ಭಾವಿಸಿ, ಯುದ್ಧದಲ್ಲಿ ಕಳೆದುಳಿದ ತನ್ನ ಸೇನೆಯೊಂದಿಗೆ ಹಿಂದಿರುಗಿ, ಮೂಗು ಹೋದವನಂತೆ, ತನ್ನ ರಾಜಧಾನಿಯನ್ನು ಹೊಕ್ಕನು.

ಡಿಲ್ಲೀ ಚಕ್ರವರ್ತಿ ಅಲ್ಲಾವುದ್ದೀನನಿಗೆ, ಈ ಪರಾಭವದಿಂದ ಬುದ್ಧಿ ಬಂದಿರಬಹುದೆಂದೂ, ಮುಂದೆ ಚಿತ್ತೂರಿನ ಕಡೆ ತಿರುಗಿ ನೋಡಲಾರನೆಂದೂ ರಾಜಪುತ್ರರು ನಂಬಿದ್ದರು. ಆದರೆ ಅದು ಸುಳ್ಳಾಯಿತು. ರಾಜಪುತ್ರರಿಂದ ತನಗುಂಟಾದ ಆ ಪರಾಭವವು ಬೆಂಕಿಯಂತೆ ಅವನ ಹೃದಯವನ್ನು ದಹಿಸುತ್ತಿರಲು, ಅವನು ಊರನ್ನು ಸೇರಿದ ನಂತರ ಕ್ಷಣಮಾತ್ರವೂ

ಸಾವಕಾಶವಾಗದೆ, ಪುನಃ ಮತ್ತೊಂದುವೇಳೆ ಚಿತ್ತೂರನ್ನು ಮುತ್ತಿ ಅದನ್ನು ನೆಲಸಮಮಾಡಲು ಮಾರ್ಗವೇನೆಂದು ಪ್ರಯತ್ನಿಸತೊಡಗಿದನು. ಇತ್ತ ಬಾಲಕನಾಗಿದ್ದ ಲಕ್ಷ್ಮಣಸಿಂಹನು ಪ್ರಬುದ್ಧನಾಗಿ ಸಿಂಹಾಸನವನ್ನು ಏರಿ ರಾಜ್ಯಭಾರವನ್ನು ಕೈಕೊಂಡನು. ಭೀಮಸಿಂಹನು ಪದ್ಮಿನೀದೇವಿಯೊಂದಿಗೆ ದಿವ್ಯಸೌಧದಲ್ಲಿ ವಾಸಿಸುತ್ತಾ ಚಿತ್ತೂರು ರಾಜ್ಯಕ್ಕೆ ಕವಚಪ್ರಾಯನಾಗಿ ರಕ್ಷಕನಾಗಿ ಸರ್ವವಂದ್ಯನಾಗಿದ್ದನು. ಅತ್ತ ಅಲ್ಲಾವುದ್ದೀನನಾದರೋ ಏನು ಕೆಲಸ ಮಾಡುತ್ತಿರಲಿ, ಯಾವ ವಿಷಯವನ್ನು ಯೋಚಿಸುತ್ತಿರಲಿ, ಯಾರೊಂದಿಗೆ ಮಾತನಾಡುತ್ತಿರಲಿ, ಪದ್ಮಿನಿಯ ಮುಖಪದ್ಮವನ್ನು ಮರೆಯದೆ ಸದಾ ತನ್ನ ವಾಂಛಿತವನ್ನು ಈಡೇರಿಸಿಕೊಳ್ಳುವ ಮಾರ್ಗವೇನೆಂಬ ಯೋಚನೆಯಲ್ಲೇ ಮಗ್ನನಾಗಿದ್ದನು.

ತನ್ನ ಉದ್ದೇಶಸಾಧನೆಗಾಗಿ, ಅಸಂಖ್ಯಸೈನ್ಯವನ್ನೂ ಯುದ್ಧಸಾಮಗ್ರಿಗಳನ್ನೂ ಸೇರಿಸಿ, ರಾಜಪುತ್ರರ ಪಿಳ್ಳೆಯುಳಿಯದಂತೆ ಕೊನೆಗಾಣಿಸಬೇಕೆಂಬುದು ಸಂಕಲ್ಪಿಸಿದನು. ಅದಕ್ಕೆ ಅಪಾರ ಧನಸಂಗ್ರಹಣವು ಆವಶ್ಯಕವೆನ್ನಿಸಿತು. ಒಡನೆ ತನ್ನ ರಾಜ್ಯದ ಪ್ರಜೆಗಳಮೇಲೆ, ಹಲವು ದುರ್ಭರ ಕಂದಾಯ ತೆರಿಗೆಗಳನ್ನು ಹೇರಿ ಕೋಟ್ಯಂತರ ದ್ರವ್ಯವನ್ನು ಶೇಖರಿಸಿದನು. ಸೈನ್ಯವೂ ಯುದ್ಧಸಾಮಗ್ರಿಗಳೂ ಸಂಗ್ರಹಿಸಲ್ಪಟ್ಟುವು. ಸೈನಿಕರಿಗೆ ಅಹರ್ನಿಶಿಗಳೆಂಬ ಭೇದವಿಲ್ಲದೆ ಯುದ್ಧವಿದ್ಯೆಯಲ್ಲಿ ಶಿಕ್ಷಣವು ಕೊಡಲ್ಪಟ್ಟು ತಯಾರಿಸಿದ್ದಾಯಿತು. ಒಡನೆ ಆ ಅಸಂಖ್ಯಬಲವನ್ನು ತೆಗೆದುಕೊಂಡು ಸಾಗಿ ಚಿತ್ತೂರಿಗೆ ಮುತ್ತಿಗೆ ಹಾಕಿದನು. ಆ ತುರುಷ್ಕರಾಜನ ಈ ಪ್ರಯತ್ನವನ್ನು ಕಂಡು ರಾಜಪುತ್ರರು ಬೆದರಲಿಲ್ಲ; ಅಪಹಾಸ್ಯ ಮಾಡಿದರು! ಆದರೆ ಈ ಬಾರಿಯ ಮುತ್ತಿಗೆಯು ಅಪಹಾಸ್ಯದಲ್ಲಿ ಪರಿಣಾಮವಾಗುವಂತಹುದಾಗಿರಲಿಲ್ಲ. ಅಲ್ಲಾವುದ್ದೀನನು ಕೋಟೆಯನ್ನು ಮುತ್ತಿ ಕಾದುವುದರಲ್ಲಿ ಪ್ರಯೋಜನವಿಲ್ಲವೆಂದೂಹಿಸಿ, ಅದನ್ನು ಭೇದಿಸಲು ಎಲ್ಲಾದರೂ ಅನುಕೂಲ ಸ್ಥಳ ದೊರಕುವುದೋ ಎಂದು ಅದರ ಸುತ್ತಲೂ ತಿರುಗಿ ನೋಡಿದನು. ಅತಿ ಕಠಿನವಾದ ಕಪ್ಪು ಶಿಲೆಯಿಂದ ಕಟ್ಟಲ್ಪಟ್ಟು ಅಜೇಯವೆನ್ನಿಸಿದ್ದ ಆ ಕೋಟೆಯ ಪೂರ್ವಭಾಗದಲ್ಲಿ ಮಾತ್ರ ಸ್ವಾಭಾವಿಕವಾದ ಒಂದು ಮಣ್ಣುದಿಬ್ಬವಿದ್ದು ನೆಲದಿಂದ ಎತ್ತರವು ಕಡಿಮೆಯಾಗಿದ್ದಿತು. ಆ ಅನುಕೂಲತೆಯನ್ನು ಕಂಡು ಅಲ್ಲಾವು

ಷ್ಟಿಂಸನು, ಆ ಸ್ಥಳದ ನೆಲವನ್ನು ಇನ್ನೂ ಎತ್ತರಿಸಿ, ಮೇಲೆಹತ್ತಿ ಕೋಟೆಯ
ಬಾಗಿಲನ್ನು ತೆಗೆದು ಸುಲಭವಾಗಿ ಒಳಕ್ಕೆ ಪ್ರವೇಶಿಸಬಹುದೆಂದು ಯೋಚಿಸಿ,
ಬಹು ದೂರದಲ್ಲಿದ್ದ ಗುಡ್ಡದ ಪ್ರದೇಶದಿಂದ ಅಲ್ಲಿಗೆ ಮಣ್ಣು ತಂದು ಹಾಕಿ
ಸಲು ಪ್ರಯತ್ನಿಸಿದನು. ಅಷ್ಟು ದೂರದಿಂದ ಮಣ್ಣು ಬರುವುದು ಬಹು
ಪ್ರಯಾಸಕರವಾಗಿದ್ದಿತಾದರೂ, ಆತನು ಲಕ್ಷ್ಯಮಾಡದೆ ಒಂದು ಬುಟ್ಟಿ
ಮಣ್ಣಿಗೆ ಒಂದು ಸುವರ್ಣನಾಣ್ಯದಂತೆ ಕೂಲಿಕೊಟ್ಟು ಅಲ್ಲಿಂದ ತರಿಸಿಹಾಕಿ,
ಅಲ್ಲೊಂದು ದಿಬ್ಬವನ್ನು ನಿರ್ಮಿಸಿದನು. ಅದರಮೇಲೆ ಕೋಟೆಯ ಗೋಡೆ
ಯನ್ನು ಒಡೆಯುವುದಕ್ಕೂ, ದುರ್ಗಸಂರಕ್ಷಕರನ್ನು ಕೊಲ್ಲುವುದಕ್ಕೂ ಅವ
ಶ್ಯಕವಾದ ಫಿರಂಗಿಗಳನ್ನೂ ಸೈನಿಕರನ್ನೂ ಇಡಿಸಿ ಸಿದ್ಧಗೊಳಿಸಿದನು.

ರಾಜಪುತ್ರರಿಗಾದರೋ, ಅಲ್ಲಾವುದ್ದೀನನಿಗಿದ್ದಂತೆ ವಿಶೇಷ ಯುದ್ಧ
ಸಾಮಗ್ರಿಗಳೂ, ಶತ್ರುನಾಶಕಯಂತ್ರಗಳೂ, ಫಿರಂಗಿಗಳೂ, ಗುಂಡು
ಗಳೂ ಯಾವುವೂ ಇರಲಿಲ್ಲ ಅವರಿಗಿದ್ದ ಭುಜಬಲಸಾಮರ್ಥ್ಯಗಳು ಮಾತ್ರ
ವೇ ಅವರ ರಕ್ಷಕ ಸಾಮಗ್ರಿಯಾಗಿದ್ದುವು. ಅಲ್ಲಾವುದ್ದೀನನು ತಮ್ಮ
ಸಮೂಲನಾಶವನ್ನು ಉದ್ದೇಶಿಸಿ ಕೈಕೊಂಡಿದ್ದ ಈಗಿನ ಆ ಯುದ್ಧದಲ್ಲಿ ತಮ
ಗೆ ಉಳಿಗಾಲವಿಲ್ಲೆಂದು ತಿಳಿದು ಎಲ್ಲರೂ ತಮ್ಮ ಪ್ರಾಣದಾಸೆಯನ್ನು ನೀಗಿ
ಯುದ್ಧಕಾಲವನ್ನು ನಿರೀಕ್ಷಿಸಿಕೊಂಡಿದ್ದರು ರಾಣಾನು ಒಂದುದಿನ ಮಧ್ಯ
ರಾತ್ರಿಯಲ್ಲಿ ಎಚ್ಚತ್ತು, ತನ್ನ ರಾಜಧಾನಿಗೆ ಪ್ರಾಪ್ತವಾದ ಈ ದುರಂತಸಂಕಟ
ವನ್ನು ಕುರಿತು ಯೋಚಿಸುತ್ತಾ, ಉಪಾಯ ತೋರದೆ ಚಿಂತಾಕ್ರಾಂತನಾಗಿ
ರುತ್ತಿರಲು, ಅಕಸ್ಮಾತ್ತಾಗಿ ಆ ಶಯ್ಯಾಗೃಹದ ಒಂದು ಮೂಲೆಯಿಂದ
'ಮೈ ಭೂಕಾ ಹೂ' 'ನಾನು ಹಸಿದಿದ್ದೇನೆ' ಎಂಬೊಂದು ಕರಾಳಶಬ್ದವು
ಕೇಳಬಂದಿತು. ಒಡನೆ ನಡನಡುಗಿ ತನ್ನ ಮಂಚದಮೇಲೆ ಎದ್ದು ಕುಳಿತು,
ಆ ಶಬ್ದವು ಬಂದ ದಿಕ್ಕನ್ನು ಕುರಿತು ದಿಟ್ಟಿಸಿನೋಡಲು, ಅಲ್ಲೊಂದು
ಭಯಂಕರಾಕಾರದ ಭೂತರೂಪವು ದೃಷ್ಟಿಗೋಚರವಾಯಿತು. ಅದು,
ಚಿತ್ತೂರು ನಗರಸಂರಕ್ಷಕಳಾದ ದೇವತೆಯೆಂದು ತಿಳಿದ ಆತನು ನಮಸ್ಕರಿಸಿ
ವಿನೀತನಾಗಿ ಕೈಜೋಡಿಸಿಕೊಂಡು–'ತಾಯೇ ಮೊನ್ನೆತಾನೇ ಎಂಟುಸಹಸ್ರ
ಮಂದಿ ರಾಜಪುತ್ರರ ಕಂಠರಕ್ತವನ್ನು ಪಾನಮಾಡಿದೆಯಲ್ಲಾ ! ಇನ್ನೂ
ತೃಪ್ತಿಯಾಗಲಿಲ್ಲವೆ?'' ಎಂದು ಪ್ರಶ್ನಿಸಿದನು. ಆ ಮಾತನ್ನು ಕೇಳಿದ ಆ

ಭೂತರೂಪವು-'ಇಲ್ಲ ಇಲ್ಲ; ಕ್ಷುದ್ರಮಾನವರು ಸಹಸ್ರಾರುಮಂದಿಯ ರಕ್ತದಿಂದಲೂ ನನಗೆ ತೃಪ್ತಿಯಾಗದು. ನನಗೆ ಮುಕುಟಾಭಿಷಿಕ್ತರಾದ ಹನ್ನೆರಡುಮಂದಿ ರಾಜರ ಕಂಠರಕ್ತಪಾನದಿಂದಲ್ಲದೆ ತೃಪ್ತಿಯಾಗದು-ದಾಹವಡಗದು, ಈ ನಗರದ ರಾಜವಂಶಕ್ಕೆ ನನ್ನ ಸಹಾಯವು ಬೇಕೆಂಬ ಅಭಿಲಾಷೆಯಿದ್ದರೆ, ಈ ನನ್ನ ಅಪೇಕ್ಷೆಯು ನೆರವೇರಬೇಕು' ಎಂದು ಪ್ರತ್ಯುತ್ತರ ಕೊಟ್ಟಿತು. ರಾಣಾನು ಮಾರನೆಯ ಪ್ರಾತಃಕಾಲ ನೆರೆದ ಸಭೆಗೆ ತನ್ನ ಸರದಾರರನ್ನೆಲ್ಲ ಕರೆಯಿಸಿಕೊಂಡು, ಅವರೆದುರಿಗೆ ತಾನು ರಾತ್ರಿಯಲ್ಲಿ ಕಂಡ ಈ ಭೀಕರ ಸ್ವಪ್ನವೃತ್ತಾಂತವನ್ನು ತಿಳಿಸಿದನು. ಆದರೆ ಅವರಲ್ಲಿ ಅನೇಕರು ಅದನ್ನು ನಂಬಲಿಲ್ಲ. ಹಲವರು, ಅದು ಚಿಂತಾಕ್ರಾಂತವಾದ ಮನಸ್ಸಿನ ಚೇಷ್ಟೆಯೆಂದೂ, ರಾಣಾಯವರು ವಿಶ್ರಾಂತಿಯನ್ನು ಹೊಂದಿ ಸಮಾಧಾನಗೊಳ್ಳಬೇಕೆಂದೂ ಸಲಹೆಯಿತ್ತರು. ಆದರೆ ರಾಣಾನು ಅವರ ಮಾತನ್ನು ಧಿಕ್ಕರಿಸಿ-'ಇದರ ಸತ್ಯತೆಯನ್ನು ತಿಳಿಯಬೇಕಾಗಿದ್ದರೆ ನೀವೆಲ್ಲರೂ ಈದಿನ ರಾತ್ರಿ ನನ್ನ ಶಯ್ಯಾಗೃಹಕ್ಕೆ ಬಂದು ಆ ಮಾತುಗಳನ್ನು ಆ ದೈವೀಭೂತದ ಬಾಯಿಂದಲೇ ಕೇಳಿರಿ' ಎಂದು ನುಡಿದನು. ಆ ದಿನ ರಾತ್ರಿ, ಎಲ್ಲಾ ಸರದಾರರೂ ರಾಣಾನ ಶಯ್ಯಾಗೃಹದಲ್ಲಿ ನೆರೆದು ಕಣ್ಣುಮುಚ್ಚದೆ ಕಾದುಕೊಂಡಿರಲು, ಹಿಂದಿನ ರಾತ್ರಿಯಲ್ಲಿ ಕಂಡಷ್ಟು ಹೊತ್ತಿಗೆ ಸರಿಯಾಗಿ, ಅದೇ ಭೀಕರ ರೂಪದ ದರ್ಶನವಾಗದಿದ್ದರೂ-ನೆಲವನ್ನು ನಡುಗಿಸುವಂತಹ ಗುಡುಗಿನಂತಹ ಶಬ್ದವೊಂದು ಕೇಳಿಸಿತು. ಎಲ್ಲರೂ ಭಯಭ್ರಾಂತರಾಗಿ ಆ ಶಬ್ದ ಬಂದ ದಿಕ್ಕಿಗೆ ತಿರುಗಿ ಕೇಳುತ್ತಿರಲು-'ನನಗೆ ಹಸಿವೆಯಾಗಿದೆ-ಹಸಿವೆಯಾಗಿದೆ. ದುರಾತ್ಮರಾದ ಮ್ಲೇಂಛರ ಮತ್ತು ಸ್ವಾಮಿದ್ರೋಹಿಗಳಾದ ಸೈನಿಕರ ರಕ್ತವನ್ನು ಎಷ್ಟು ಕುಡಿದರೂ ನನಗೆ ತೃಪ್ತಿಯುಂಟಾಗದು. ನನಗೆ ರಾಜರ ಕಂಠರಕ್ತವನ್ನು ಕುಡಿಯಬೇಕೆಂಬ ಆಸೆಯು ಅತಿಶಯವಾಗಿದೆ. ರಾಣಾನ ಕುಟುಂಬದಿಂದ ಹನ್ನೆರಡುಮಂದಿ ರಾಜರು ಒಬ್ಬರಾದಮೇಲೊಬ್ಬರಂತೆ ಪಟ್ಟಾಭಿಷಿಕ್ತರಾಗಲಿ. ಒಬ್ಬೊಬ್ಬನೂ, ಕಿರೀಟ, ಛತ್ರ, ಚಾಮರಾದಿ ರಾಜಚಿಹ್ನೆಗಳಿಂದ ಕೂಡಿ, ಮೂರುದಿನ ರಾಜ್ಯಾಧಿಪತ್ಯ ಮಾಡಲಿ. ನಾಲ್ಕನೆಯದಿನ ಮುಸಲರಮೇಲೆ ದಂಡೆತ್ತಿನಡೆದು ಯುದ್ಧಮಾಡಿ ತಲೆಯನ್ನೊಪ್ಪಿಸಲಿ. ಈ ಬಲಿಯನ್ನು ಸಮರ್ಪಿಸುವುದಾದರೆ, ನಿನ್ನ ರಾಜವಂಶವನ್ನು ಬಿಟ್ಟುಹೋ

ಗದೆ ಕುಲದೇವತೆಯಾಗಿ ಕಾಪಾಡಿಕೊಂಡಿರುವೆನು' ಎಂಬ ಶಬ್ದಗಳನ್ನು ನುಡಿದಂತಾಯಿತು.

ಇದೇನು ಕೇವಲ ಕವಿಕಲ್ಪನೆಯೋ, ಅಥವಾ ಶತ್ರುದಮನಕ್ಕಾಗಿ ಆ ಸಂದರ್ಭದಲ್ಲಿ ಆ ಬಗೆಯ ಒಂದು ಉತ್ತೇಜಕ ಸಾಮಗ್ರಿಯು ಸಿದ್ಧಗೊಳಿಸಲ್ಪಟ್ಟಿತೋ ಎಂಬ ಶಂಕೆಯು ತೋರಬಹುದು. ಆದರೆ ಶ್ರದ್ಧಾವಂತರಾದ ಆ ರಜಪೂತ ಸರದಾರರು, ಆ ದಾರುಣವಚನಗಳನ್ನು ಕೇಳಿದರೂ ಬೆಚ್ಚಿಬೀಳ್ಳ-ಬೆದರಲಿಲ್ಲ. ರಾಣಾನ ಪುತ್ರರಾದ ಆ ಹನ್ನೆರಡುಮಂದಿ ವೀರರೂ, ದೇಶಕ್ಷೇಮಕರವಾದ ಆ ಕಾರ್ಯದಲ್ಲಿ ತಲೆ ಕೊಡುವುದಕ್ಕೆ ನಾನು ಮುಂದೆ ತಾನು ಮುಂದೆಂದು ಸಿದ್ಧರಾದರು. ಮಾತ್ರವಲ್ಲ—ಬಲಿದಾನದ ಪ್ರಥಮಭಾಗ್ಯವು ತನಗೆ ಪ್ರಾಪ್ತವಾಗಬೇಕೆಂದು ಅವರಲ್ಲೊಬ್ಬೊಬ್ಬನೂ ಕಾದಾಡತೊಡಗಿದನು. ಕೊನೆಗೆ ರಾಣಾನ ಜ್ಯೇಷ್ಠಪುತ್ರನು, ತಾನು ರಾಣಾನ ಉದರದಲ್ಲಿ ಎಲ್ಲರಿಗಿಂತಲೂ ಮೊದಲು ಜನಿಸಿದವನಾದುದರಿಂದ, ದೇಹವನ್ನು ಮೊದಲಿಗೇ ಬಲಿದಾನವಾಗಿ ಅರ್ಪಿಸತಕ್ಕ ಸ್ವಾತಂತ್ರ್ಯವೂ ಜನ್ಮಸಿದ್ಧಹಕ್ಕೂ ತನಗೇ ಸೇರಿದ್ದೆಂದು ವಾದಿಸಿದನು. ಅದಕ್ಕೆ ಎಲ್ಲರೂ ಒಪ್ಪಿಕೊಂಡರು. ಗ್ರಾಮದೇವತೆಯು ಅಪೇಕ್ಷಿಸಿದಂತೆ ಆತನಿಗೆ ಶಾಸ್ತ್ರೋಕ್ತಪಟ್ಟಾಭಿಷೇಕವನ್ನು ಮಹಾಸಂಭ್ರಮದಿಂದ ನೆರವೇರಿಸಿದರು. ಅವನು ಮೂರು ದಿವಸ ರಾಜ್ಯವಾಳಿ, ನಾಲ್ಕನೆಯ ಪ್ರಾತಃಕಾಲ ಶತ್ರುಪಾಳೆಯದಮೇಲೆ ದಂಡೆತ್ತಿ ನಡೆದು ಯುದ್ಧಮಾಡಿ ಮೃತನಾದನು. ತರುವಾಯ ಎರಡನೆಯ ಮಗನಾದ ಜಯಸಿಂಗ್ ಎಂಬವನ ಸರದಿ ಬಂತು ಆತನ ಮೇಲೆ ರಾಣಾನ ಪ್ರೇಮ ಬಹಳ. ರಾಣಾನು ಅವನನ್ನು ಬಳಿಗೆ ಕರೆದು,—'ಅಪ್ಪಾ ಎಲ್ಲರೂ ದುರ್ಭಾಗ್ಯನಾದ ನನ್ನನ್ನು ಬಿಟ್ಟುಹೋಗುವರು. ನೀನೊಬ್ಬನಾದರೂ ನನ್ನ ಬಳಿಯಿದ್ದು ನನಗೆ ಆಶ್ರಯವನ್ನು ಕೊಡಲಾರೆಯಾ?' ಎಂದು ದೀನತೆಯಿಂದ ಕೇಳಿಕೊಂಡನು. ಆದರೆ ಅವನಿಗೆ ಹಾಗೆ ಮಾಡಲು ಇಷ್ಟವಿಲ್ಲದಿದ್ದರೂ, ತಂದೆಯ ಮಾತನ್ನು ಮೀರಲಾರದೆ, ಮಿಕ್ಕ ಹತ್ತುಮಂದಿ ತನ್ನ ಸಹೋದರರೂ ಮೃತರಾಗುವವರೆಗೆ ತಂದೆಯ ಬಳಿಯಿದ್ದು ಆದರಿಸುತ್ತಿದ್ದನು. ತನ್ನ ಹನ್ನೆರಡನೆಯ ಮಗನೂ ಮೃತಿಹೊಂದಿದಮೇಲೆ, ರಾಣಾನು ಜಯಸಿಂಗನ ಸರದಿ ಬಂದಿತೆಂದು ತಿಳಿದು, ಮಂತ್ರಿಸಾಮಂತರನ್ನೂ ರಾಜಬಂಧುಗಳನ್ನೂ ಕರೆಸಿ

ಸಭೆಯಲ್ಲಿ-'ಶೂರರೇ ಹತಶೇಷನಾದ ನನ್ನ ಈ ಪ್ರಿಯನಂದನನೂ ಮೃತ್ಯುವಶ ನಾಗಬೇಕಾದ ಕಾಲವು ಸಮೀಪಿಸಿದೆ. ಆದಗ್ಯೆ ನಗರರಕ್ಷಣೆಗಾಗಿ ಈ ಮುದ್ದು ಬಾಲಕನ ಬದಲಾಗಿ ನಾನು ನನ್ನೀಶರೀರವನ್ನು ಸಮರ್ಪಿಸಲು ಸಂಕಲ್ಪಿಸಿದ್ದೇನೆ. ಅದಕ್ಕೆ ನೀವೆಲ್ಲರೂ ಅನುಮತಿಸಬೇಕು' ಎಂದನು. ಆ ಮಾತನ್ನು ಕೇಳಿದ ಆ ಸರದಾರರೆಲ್ಲರೂ-'ಕೂಡದು ಕೂಡದು. ನೀವೊಬ್ಬರು ಹೋಗಬೇಡಿರಿ. ನಾವೆಲ್ಲರೂ ಒಟ್ಟಿಗೇ ಯುದ್ಧಭೂಮಿಗೆ ನಡೆಯೋಣ! ಈಗಲೇ ಯುದ್ಧಸನ್ನದ್ಧರಾಗಿ ವೀರಕಂಕಣವನ್ನು ಕಟ್ಟಿಕೊಂಡು, ಖಡ್ಗಪಾಣಿಗಳಾಗಿ ತಮ್ಮೊಂದಿಗೆ ನಡೆದು ಚಿತ್ತೂರು ಪುರಸಂರಕ್ಷಣೆಗಾಗಿ ನಮ್ಮ ತಲೆಗಳನ್ನರ್ಪಿಸುವೆವು' ಎಂದು ನುಡಿದರು.

ತರುವಾಯ ರಾಣಾನು-'ಆಗಬಹುದು. ಆದರೆ ಅಷ್ಟರಿಂದಲೇ ಎಲ್ಲಾ ಕಾರ್ಯವೂ ನೆರವೇರಿದಂತಾಗಲಿಲ್ಲ. ನಮ್ಮ ಅಂತಃಪುರ ಸ್ತ್ರೀಜನರು ಪಾಪಕರ್ಮಕ್ಕೆ ಹಿಂದೆಗೆಯದ ಆ ತುರುಕರ ಪಾಲಾಗದಂತೆ ಏರ್ಪಾಟು ಮಾಡಬೇಕಾದುದೂ ಕರ್ತವ್ಯವಾಗಿದೆ. ತರುವಾಯ ನಾವು ನಿಶ್ಚಲಮನಸ್ಕರಾಗಿ ಹಗೆಗಳಮೇಲೆ ಬಿದ್ದುಹೋಗಬಹುದು' ಎಂದನು. ಒಡನೆ ಅದು ಅವಶ್ಯಕರ್ತವ್ಯವೆಂದು ಸಕಲರೂ ಏಕವಾಕ್ಯತೆಯಿಂದ ನುಡಿದರು. ರಾಜಾಜ್ಞೆಯಿಂದ ಸೇವಕರು ಆ ಕೋಟೆಯಲ್ಲಿದ್ದ ಸುರಂಗಮಾರ್ಗವಾಗಿ ನಡೆದು ನೆಲಮನೆಯಲ್ಲೂ ಗುಹಾಸ್ಥಳಗಳಲ್ಲೂ ವಿಶೇಷ ಕಟ್ಟಿಗೆಗಳನ್ನೂ ಕರ್ಪೂರ ಚಂದನ ಗಂಧಕ ಮುಂತಾದ ಸಾಮಗ್ರಿಗಳನ್ನೂ ಶೇಖರಿಸಿದರು. ಹೀಗೆ ಎಲ್ಲವೂ ಸಿದ್ಧವಾದೊಡನೆಯೇ, ಅಂತಃಪುರದಲ್ಲಿದ್ದ ಮಹಾರಾಣಿಯಿಂದ ದಾಸಿಯವರೆಗಿನ ಸ್ತ್ರೀಜನರೆಲ್ಲರೂ ಅರಿಸಿನವರ್ಣದ ವಸ್ತ್ರಗಳನ್ನುಟ್ಟು ದಿವ್ಯರತ್ನಾಭರಣಗಳಿಂದ ವಿವಾಹವೇದಿಕೆಗೆ ನಡೆವ ವಧುಗಳೋ ಎಂಬಂತೆ ಅಲಂಕೃತರಾಗಿ ಆ ಗುಹಾದ್ವಾರವನ್ನು ಕುರಿತು ನಡೆದರು. ಚಿತ್ತೂರು ನಗರಸಂರಕ್ಷಣಾಕರ್ತರಾದ ಶೂರಸರದಾರರು ನಿಂತು, ತಮ್ಮ ತಾಯಂದಿರು, ಸೋದರಿಯರು, ಪತ್ನಿಯರು, ಮಕ್ಕಳು ಮುಂತಾಗಿ ಅಗ್ನಿಹೋತ್ರನಿಗೆ ಆಹುತಿಯಾಗಲು ಸಿದ್ಧವಾಗುತ್ತಿದ್ದುದನ್ನು ನೋಡಿ-'ಕ್ಷತ್ರಿಯರಾಗಿ ಹುಟ್ಟುವುದೇ ಈ ಬಗೆಯ ಮರಣಕ್ಕಾಗಿ' ಎಂದು ತಮ್ಮೊಳಗೆ ತಾವೇ ಸಮಾಧಾನಗೊಳ್ಳುತ್ತಿದ್ದರು. ಪದ್ಮಿನೀರಾಣಿಯು ಆ ಶೂರನಾರೀಪರಿವಾರಕ್ಕೆ ನಾಯಕಳಾಗಿ, ತನ್ನ ಅಮಾ

ನುಷ ಸೌಂದರ್ಯವು ತಂದಿಟ್ಟ ಅಗಾಧ ದುರ್ವಿಧಿಗಾಗಿ ಮರುಗುತ್ತಾ, ತನ್ನ ಪತಿಯ ಪಾದಪದ್ಮಗಳಿಗೆ ನಮಸ್ಕರಿಸಿ-'ಮುಂದೆ ಜನ್ಮಜನ್ಮಾಂತರಕ್ಕೂ ನನಗೆ ನಿಮ್ಮ ಪಾದಸೇವೆಯೇ ದೊರೆಯಲಿ' ಎಂದು ಕಣ್ಣೀರಿಡುತ್ತಾ ಪ್ರಾರ್ಥಿಸಿ ಕೊಂಡು, ಹೊರಟಳು. ಮಿಕ್ಕ ಸ್ತ್ರೀಯರೆಲ್ಲರೂ ತಮ್ಮ ತಮ್ಮ ಪತಿಗಳ ಪಾದಗಳಿಗೆ ಅಭಿನಮಿಸಿ ಕೊನೆಯ ಬಾರಿಯ ಅಪ್ಪಣೆಯನ್ನು ಪಡೆದು ತಮ್ಮ ಮಹಾರಾಣಿಯನ್ನು ಅನುಸರಿಸಿ ಹೊರಟರು. ಹಾಗೆ ಸಹಸ್ರಾರುಮಂದಿ ಸ್ತ್ರೀಯರು, ಆ ವಿಶಾಲವಾದ ನೆಲಮನೆಯನ್ನು ಪ್ರವೇಶಮಾಡಿದೊಡನೆಯೇ, ಅಲ್ಲಿ ಒಟ್ಟಿದ್ದ ಅಗಾಧವಾದ ಚಿತೆಗೆ ಅಗ್ನಿಪ್ರವೇಶಮಾಡಿಸಿ ಗುಹಾದ್ವಾರವನ್ನು ಮುಚ್ಚಿಕೊಂಡರು. ಚಿತ್ತೂರಿನ ಅಲೌಕಿಕ ಸೌಂದರ್ಯರಾಶಿಯು ತುರುಷ್ಕರ ದೃಷ್ಟಿಗೋಚರವಾಗಲವಕಾಶವಿಲ್ಲದಂತೆ, ಅಗ್ನಿಹೋತ್ರನಿಗೆ ಶರಣು ಬಿದ್ದು ತನ್ನ ರಕ್ಷಣೆ ಮಾಡಿಕೊಂಡಿತು.

ಪ್ರಾಣಾಧಿಕರಾದ ತಮ್ಮ ಸ್ತ್ರೀಯರನ್ನು ಅಗ್ನಿಹೋತ್ರನಿಗೆ ಸಮರ್ಪಿಸಿ ನಿಷ್ಕಂಟಕ ಮನೋಭಾವದಿಂದ, ಪುರುಷರು, ತರುವಾಯ ತಾವು ಸಿದ್ಧರಾಗ ತೊಡಗಿದರು. ಎಲ್ಲರೂ ಸ್ನಾನಮಾಡಿ ಅರಿಶಿನಬಣ್ಣದ ವಸ್ತ್ರಗಳನ್ನು ಧರಿಸಿ ಗಂಧಮಾಲ್ಯಾದಿಗಳಿಂದ ಅಲಂಕೃತರಾಗಿ, ಮೃತ್ಯುಕನ್ಯೆಯ ಪಾಣಿಗ್ರಹಣ ಮಾಡುವವರ ಸಮೂಹವೋ ಎಂಬಂತೆ ಖಡ್ಗಧಾರಿಗಳಾಗಿ ಸಮರರಂಗಕ್ಕೆ ಹೊರಡಲು ಸಿದ್ಧರಾದರು. ಆ ಯೋಧರಿಗೆ ಜಯಸಿಂಗನು ಮುಂದಾಳಾಗಿ ಹೊರಡಲು, ರಾಣಾನು, ಅವನನ್ನು ಕುರಿತು-'ಮಗೂ, ಹನ್ನೆರಡುಮಂದಿ ಮಕ್ಕಳನ್ನು ಹೆತ್ತು ಇಷ್ಟುದಿನಗಳವರೆಗೆ ಬದುಕಿದ ನಾನು ನಿಸ್ಸಂತಾನನಾದೆ ನೆಂದುಕೊಂಡು ಸಾಯದಂತೆ ನೀನೊಬ್ಬನಾದರೂ ನಮ್ಮ ವಂಶಾಂಕುರ ನಾಗಿ ಎಲ್ಲಾದರೂ ಬದುಕಿರು. ದೇವಿಯ ಅಪೇಕ್ಷಾನುಸಾರವಾಗಿ ನಾನು ರಣರಂಗದಲ್ಲಿ ಈ ದೇಹವನ್ನು ಬಲಿಕೊಡುತ್ತೇನೆ' ಎಂದು ನುಡಿದು, ಒಪ್ಪಿಸಿ ಕೆಲವುಮಂದಿ ಶೂರರಾದ ರಜಪೂತರನ್ನು ಜೊತೆಮಾಡಿ ಅವನನ್ನು-'ಶತ್ರು ಸೈನ್ಯದಮಧ್ಯೆ ನುಗ್ಗಿ ಪಾರಾಗಿ ವಂಶವನ್ನುಳಿಸೆ'ಂದು ಆಶೀರ್ವದಿಸಿ ಕಳುಹಿಸಿ ಬಿಟ್ಟನು. ಹಾಗೆ ಹೊರಟ ಆ ಚಿಕ್ಕ ಪರಿವಾರವು, ಶತ್ರುಸೈನ್ಯವನ್ನು ದಾಟಿ ಆಚೆಗೆ ನಡೆದರೆಂಬ ಸಂಗತಿಯು ತಿಳಿದೊಡನೆಯೇ ಕೋಟೆಯ ಬಾಗಿಲನ್ನು ತೆಗೆಸಿ, ಶತ್ರುಸೈನ್ಯದಮೇಲೆ ಬೀಳಲು ರಾಜಪುತ್ರಪರಿವಾರವನ್ನು ನಡೆಯಿಸಿ

ಕೊಂಡು ಮುಂದರಿದನು. ಒಡನೆ ಕೇಳುವುದೇನು ? ಪ್ರಳಯರಭಸದಿಂದ ಬರುವ ಎದುರುಬದರು ಪ್ರವಾಹಗಳೆರಡು ಏಕತ್ರ ಸಂಧಿಸಿದಂತಾಗಿ, ಚಿತ್ತೂರು ಕೋಟೆಯಬಾಗಿಲಿನಲ್ಲಿ ಒಂದು ಅಭೂತಪೂರ್ವ ಘನಘೋರ ಸಂಗ್ರಾಮವು ನಡೆಯಿತು. ಉಭಯಸೈನ್ಯದ ಸಹಸ್ರಾರುಮಂದಿ ಯೋಧರು ರಣದೇವತೆಗೆ ಶಿರಗಳನ್ನೊಪ್ಪಿಸಿ ಮಡಿದುಬಿದ್ದರು. ರಕ್ತವು ಹೊಳೆಯಾಗಿ ಹರಿಯಿತು. ರಾಜಪುತ್ರರು, ತಮ್ಮ ಸಾಂಸಾರಿಕವಾದ ಸಮಸ್ತವನ್ನೂ ಹಿಂದುಬಿಟ್ಟು, ಕೇವಲ ವೀರಸ್ವರ್ಗಾಪೇಕ್ಷಿಗಳಾಗಿಯೇ ಬಂದಿದ್ದುದರಿಂದ, ಮರಣಭೀತಿಯಿಲ್ಲದೆ ರಣರಂಗವನ್ನು ಹೊಕ್ಕು ಅಸಂಖ್ಯಮಂದಿ ತುರುಷ್ಕರನ್ನು ಬಲಿಕೊಟ್ಟರು. ದೇಹದಲ್ಲಿ ತೃಣಮಾತ್ರ ಚೈತನ್ಯವಿರುವವರೆಗೂ ಹಿಂದೆಗೆಯದೆ ಹೋರಾಡಿ, ಒಬ್ಬೊಬ್ಬ ರಜಪೂತನೂ ತನ್ನ ಕರಕೃಪಾಣಕ್ಕೆ ನಾಲ್ಕಾರುಮಂದಿ ಶತ್ರುವೀರರ ಪ್ರಾಣವನ್ನು ಬಲಿಕೊಟ್ಟು, ಕೊನೆಗೆ ರಣರಂಗದಲ್ಲಿ ಮಡಿದುಬಿದ್ದನು. ರಜಪೂತ ಸೈನ್ಯದ ಕೊನೆಯ ಸಿಪಾಯಿಯು ಉಳಿದಿದ್ದವರೆಗೂ ಯುದ್ಧವು ಬಹು ಭೀಕರ ಉತ್ಸಾಹದಿಂದ ನಡೆದು, ಕೊನೆಗೆ ಸ್ತಬ್ಧವಾಯಿತು.

ಇಂತು ರಜಪೂತ ಸಂಸಾರವು ನಿಶ್ಶೇಷವಾಗಿ ಹತವಾಗಿ, ಚಿತ್ತೂರು ನಿರ್ಮಾನುಷ್ಯವಾಯಿತು. ಇಷ್ಟಾದಮೇಲೆ ಅಲ್ಲಾವುದ್ದೀನನು ಜಯಭೇರಿಯನ್ನು ಹೊಡೆಸಿಕೊಳ್ಳುತ್ತಾ, ಪುರಪ್ರವೇಶಮಾಡಿ, ರಾಜಬೀದಿಯಲ್ಲಿ ಪ್ರಯಾಣಮಾಡಿಕೊಂಡು ಅರಮನೆಯಕಡೆಗೆ ಸಾಗಿದನು. ಮಹಾಲಕ್ಷ್ಮೀಮಂದಿರಗಳೋ ಎಂಬಂತೆ ಸರ್ವಸೌಭಾಗ್ಯಯುಕ್ತವಾಗಿದ್ದ ದಿವ್ಯಭವನಗಳು, ನಿರ್ಮಾನುಷ್ಯಗಳಾದುದರಿಂದ ಮೃತ್ಯುದೇವತಾವಿಹಾರ ಸ್ಥಾನಗಳಂತೆ ಭೀಕರವಾಗಿದ್ದುವು. ಪುರಜನರ ಕೋಲಾಹಲದಿಂದ ಕೂಡಿ ಮನೋಹರವೆನ್ನಿಸಿದ್ದ ರಾಜಮಾರ್ಗಗಳು ನಿಶ್ಶಬ್ದವಾಗಿ ಸ್ಮಶಾನಪ್ರಾಯ ಎಂಬಂತೆ ಭಾಸವಾಗಿದ್ದುವು. ಮನೆಗಳು ಮಠಗಳು ಗುಡಿಗೋಪುರಗಳು, ಅಂಗಡಿ ಮುಂಗಟ್ಟುಗಳು ಹೀಗೆ ಯಾವಕಡೆ ನೋಡಿದರೂ ಎಲ್ಲವೂ ಹಾಳುಹಾಳು ಸುರಿಯುತ್ತಾ, ನಿರ್ದಯಹೃದಯರಾದ ಆ ತುರುಕರಿಗೂ ಭೀತಿಜನಕವಾಗಿದ್ದುವು. ಪ್ರಪಂಚದಲ್ಲಿ ಜನಿಸಿದ ಕಲುಷಹೃದಯರಲ್ಲಿ ಅಗ್ರೇಸರನಾದ ಅಲ್ಲಾವುದ್ದೀನನು ನಿರ್ಮಾನುಷ್ಯವಾದ ಆ ಪಟ್ಟಣವನ್ನು ನೋಡಿ ಪರಮಾಶ್ಚರ್ಯಪಡುತ್ತಾ, ತನ್ನ ಹೃದ

ಯೋಶ್ವರಿಯಾದ ಪದ್ಮಿನಿಯ ಮುಖಚಂದ್ರ ದರ್ಶನಮಾಡಲು ಆತುರನಾಗಿ ಅರಮನೆಯನ್ನು ಹೊಕ್ಕನು. ಅಂತಃಪುರದಲ್ಲಿ ಪದ್ಮಿನಿಯಲ್ಲ-ಇತರ ಯಾವ ಸ್ತ್ರೀಯೂ ಇಲ್ಲದಿದ್ದುದನ್ನು ಕಂಡು, ಆತನು-'ಪುರುಷರಂತೂ ಯುದ್ಧದಲ್ಲಿ ಹತರಾದರು ಸರಿ. ಆದರೆ ಹೆಂಗಸರೂ ಮಕ್ಕಳೂ ಏನಾದರು ?' ಎಂದು ಮಹದಾಶ್ಚರ್ಯದಿಂದ ಎಲ್ಲಾ ಕಡೆಯಲ್ಲೂ ಹುಡುಕಿಸುತ್ತಿರಲು, ಕೋಟೆಯಲ್ಲಿನ ಒಂದು ಗುಪ್ತಸ್ಥಳದಿಂದ ಕಮರುಕಂಪೂ ವಿಶೇಷ ಹೊಗೆಯೂ ಹೊರಪಡುತ್ತಿದ್ದುದು ದೃಷ್ಟಿಗೋಚರವಾಯಿತು. ಅದನ್ನು ನೋಡಿ, ಸ್ತ್ರೀಜನರೆಲ್ಲರೂ ಅಲ್ಲಿ ಗಾಢಾಗ್ನಿಗೆ ತಮ್ಮ ದೇಹಗಳನ್ನೊಪ್ಪಿಸಿ ಮೃತರಾದರೆಂದೂ, ಅವರೊಂದಿಗೇ ಪದ್ಮಿನಿಯೂ ದಹಿಸಿಹೋಗಿರುವಳೆಂದೂ ಊಹಿಸಿ, ಆ ನಿರ್ಘೃಣನು ಒಂದು ಸಾರಿ ನಿಟ್ಟುಸಿರುಬಿಟ್ಟನು. ಆ ಭಯಂಕರ ಅಗ್ನಿಕುಂಡವನ್ನು ಒಂದು ಸಾರಿ ನೋಡಬೇಕೆಂದು ಅವನಿಗೆ ಅಪೇಕ್ಷೆಯಾಗದಿರಲಿಲ್ಲ. ಆದರೆ, ಅವನ ಕರುಣಾತ್ಮರಾದ ಸೇವಕರಲ್ಲಿ ಮಹಾಧೈರ್ಯವಂತರಾದವರೂ ಆ ಮೃತ್ಯುದೇವತಾ ಗರ್ಭಗೃಹದ ಕವಾಟವನ್ನು ತೆರೆಯಲು ಸಾಹಸಗೊಳ್ಳಲಾರದೆ ಹೋದರು !

ಅಂದು ಮಾತ್ರವಲ್ಲ-ಇಂದು ಸಹ ಆ ಗೃಹದ್ವಾರದ ಬಳಿಗೆ ಹೋಗಲು ಯಾರೂ ಸಾಹಸಗೊಳ್ಳರು. ಒಂದು ಬಾರಿ ಮಾತ್ರ ಒಬ್ಬ ಮನುಷ್ಯನು ಅಂಧಕಾರಮಯವಾದ ಆ ಗುಹೆಯಲ್ಲಿ ಸ್ವಲ್ಪ ದೂರ ನಡೆದುಹೋಗಿ ಪುನಃ ಭಗವತ್ಕಟಾಕ್ಷದಿಂದ ಪ್ರಾಣವನ್ನು ದಕ್ಕಿಸಿಕೊಂಡು ಹೊರಕ್ಕೆ ಬಂದು ಬದುಕಿದನೆಂದು ಹೇಳುವರು ! ಅಲ್ಲಿಯ ಅಗ್ನಿಯು ಇನ್ನೂ ಶಾಂತವಾಗದೆ ನಿಗಿನಿಗಿ ಉರಿಯುತ್ತಲೇ ಇರುವುದೆಂದೂ, ಆ ದ್ವಾರದ ಮುಂಭಾಗದಲ್ಲೊಂದು ಘಟಸರ್ಪವು ಮಲಗಿದ್ದು, ಯಾರನ್ನೂ ಸಮೀಪಕ್ಕೆ ಬರಲೀಯದೆ ಕಾಯುತ್ತಿರುವುದೆಂದೂ ಈಗಲೂ ಜನರು ಹೇಳಿಕೊಳ್ಳುವುದುಂಟು.

ರಾಜಪುತ್ರರು ಎಂತಹ ಭಯಂಕರ ರಣರಂಗವನ್ನಾದರೂ ಹೊಕ್ಕು ಹೋರಲು ಸಿದ್ಧರಾಗುವರಲ್ಲದೆ, ದುಃಖಭಾಜನವಾದ ಆ ಗೃಹದ್ವಾರವನ್ನು ದರ್ಶಿಸಲೊಲ್ಲರು. ಅಂದು ಮೊದಲು 'ಜೋಹರ್' ಎಂಬ ಈ ಬಗೆಯ ಬಲಿದಾನವು ಚಿತ್ತೂರಿನ ಅಖಂಡ ಶೌರ್ಯಪ್ರತಾಪವನ್ನು ಅಖಿಲಜಗತ್ತಿಗೂ ಸಾರುತ್ತಿದೆ. ಚಿತ್ತೂರುನಗರರಾಜವು ಇಂತು, ತನ್ನ ಸಕಲಸಂಪತ್ತನ್ನೂ,

ಪ್ರಜೆ ಪರಿವಾರಗಳನ್ನೂ, ಅಗಾಧ ವೈಭವಸಂಪನ್ನತೆಯನ್ನೂ ನೀಗಿಯಾದರೂ ತನ್ನ ಜನ್ಮಸಿದ್ಧ ಹಕ್ಕಾದ ಆತ್ಮಗೌರವವನ್ನು ರಕ್ಷಿಸಿಕೊಂಡಿತು. ಧನ್ಯ ಮೇವಾಡವೇ! ಧನ್ಯ ಚಿತ್ತೂರು ನಗರರಾಜವೇ! ಧನ್ಯ ರಜಪೂತ ವೀರರೇ! ನಶ್ವರವಾದ ಅಂಧಕಾರಮಯವಾದ ಈ ಜಗತ್ತಿನಲ್ಲಿ ನಿಮ್ಮ ಯಶೋಚಂದ್ರಿಕೆಯೇ ಸ್ಥಿರವಾದುದು. ಅದೇ ಅನಂತಮಹಿಮಾಸ್ಪದವಾದುದು. ಅದೇ ಚಿರಶಾಂತಿದಾಯಕವಾದುದು.

# ರಾಣಾ ಹಮೀರಸಿಂಹ

ಅಲ್ಲಾವುದ್ದೀನನ ವಕ್ರದೃಷ್ಟಿಗೊಳಪಟ್ಟ ಚಿತ್ತೂರು ನಗರವು ಮೇಲ್ಕಂಡಂತೆ ಕ್ರಿ. ಶ. ೧೩೦೩ನೆಯ ಸಂವತ್ಸರದಲ್ಲಿ ಪುನಃ ಮೇಲಕ್ಕೇಳಲಾರದಂತಹ ದುಸ್ಥಿತಿಗೆ ಗುರಿಯಾಯಿತಷ್ಟೆ! ಚಿತ್ತೂರು ಮಾತ್ರವಲ್ಲ-ತರುವಾಯ, ಅಲ್ಲಾವುದ್ದೀನನು, ಅನ್ಹಲ್ವಾರ, ಧಾರ್ ಮತ್ತು ಅವಂತಿ, ಮಂಡೋರ್ ಮತ್ತು ದೇವಗಿರಿ, ಮುಂತಾದುವುಗಳಲ್ಲಿ ಆಳುತ್ತಿದ್ದ ಸಾಲಂಕಿ ವಂಶದ ಅಗ್ನಿಕುಲ ಸಂಭೂತರಾದ ಸಮಸ್ತ ರಜಪೂತರನ್ನೂ ಜಯಿಸಿ, ಅವರ ರಾಜ್ಯಗಳನ್ನು ಸಾಧಿಸಿದನು. ಜಸಲ್ಮೀರ್, ಗಾಗ್ರೋನ್, ಬೂಂದಿ ಮುಂತಾದ ಸಂಸ್ಥಾನಗಳೂ, ಅಗರ್ಭ ಹಿಂದೂಕುಲ ವಿದ್ವೇಷಿಯಾದ ಅಲ್ಲಾನ ನಿಗ್ರಹಕ್ಕೊಳಪಟ್ಟು ಅಗಾಧ ಕಷ್ಟನಷ್ಟಗಳನ್ನು ಅನುಭವಿಸಿದುವು. ಚಿತ್ತೂರಿನ ಜೋಹರು ನಡೆದ ತರುವಾಯ ನಗರಪ್ರವೇಶ ಮಾಡಿದ್ದ ಅಲ್ಲಾವುದ್ದೀನನು ಮುಂದೆ ಕೆಲವು ದಿನಗಳವರೆಗೆ ಅಲ್ಲೇ ವಾಸಿಸಿ ದಿವ್ಯ ಶಿಲ್ಪ ಕಲಾಕುಶಲತೆಯಿಂದ ವಿರಾಜಿಸುತ್ತಿದ್ದ ಅಲ್ಲಿಯ ಸೌಧಗಳನ್ನೂ, ದೇವಸ್ಥಾನ ಧರ್ಮಸ್ಥಳಗಳನ್ನೂ, ಒಂದೊಂದನ್ನಾಗಿ ಕೆಡಹಿಸಿ, ಪೂರ್ವರಾಜರ ಸ್ಮಾರಕ ಚಿಹ್ನೆಗಳಾದ ಸಮಸ್ತ ಉತ್ತಮ ವಸ್ತು ಸಾಮಗ್ರಿಯನ್ನೂ ಧ್ವಂಸಗೊಳಿಸಿದನು. ಅವನ ಹಾವಳಿಗೊಳಪಟ್ಟೂ ನಾಶವಾಗದೆ ಉಳಿದುದೊಂದು, ಭೀಮಸಿಂಹನ ಅರಮನೆ! ಭೂತಾವೇಶಿತನಂತೆ ಸಮಸ್ತವನ್ನೂ ಧ್ವಂಸ

ಮಾಡಿದ ಆ ಪಾಷಾಣ ಹೃದಯನು, ಅದೊಂದನ್ನು ಉಳಿಸಿದನೇಕೆ ? ಅದ ರಲ್ಲಿ ತನ್ನ ಮನೋಹರಣ ಮಾಡಿದ ಪದ್ಮಿನೀದೇವಿಯು ವಾಸಿಸಿದ್ದಳೆಂದೋ? ಎಂತೂ ಆ ನರರಾಕ್ಷಸನ ಹೃದಯದಲ್ಲಿ ಅಷ್ಟುಮಾತ್ರ ಮಾನುಷತ್ವ ಸಂ ಚಾರವಾಗಿ, ಅದೊಂದು ಸೌಧವು ಉಳಿಯಿತು. ಹೀಗೆ ಚಿತ್ತೂರನ್ನು ಆಹುತಿಗೊಂಡಮೇಲೆ, ತನಗೆ ಸಾಮಂತನಾಗಿದ್ದ ಮಾಲ್ದೇವನೆಂಬುವನನ್ನು ಅಲ್ಲಿಗೆ ಅಧಿಕಾರಿಯಾಗಿಟ್ಟು, ಅಲ್ಲಾವುದ್ದೀನನು ಡಿಲ್ಲಿಗೆ ಪ್ರಯಾಣಮಾಡಿದನು.

ರಾಣಾನ ಆಜ್ಞೆಯಿಂದ, ಅಲ್ಲಾವುದ್ದೀನನ ಸೈನ್ಯದಲ್ಲಿ ದಾರಿ ಮಾಡಿ ಕೊಂಡು ಹೊರಟಿದ್ದ ಜಯಸಿಂಗ್ ಅಥವ ಅಜೇಯಸಿಂಗನು, ಆರಾವಳೀ ಪರ್ವತಗಳ ಮಧ್ಯಪ್ರದೇಶದಲ್ಲಿದ್ದ ಕೈಲವಾರವೆಂಬ ಕೋಟೆಯನ್ನು ಸೇರಿ, ಅಲ್ಲಿ ಕೆಲಕಾಲ ಸುರಕ್ಷಿತವಾಗಿ ವಾಸಿಸಿದನು. ಕೈಲವಾರವು ಆ ಪರ್ವತ ಪ್ರಾಂತದಲ್ಲೇ ಬಹು ಫಲವತ್ತಾದ-ತೃಣಜಲಸಮೃದ್ಧವಾದ, ಮನೋಹರ ಪ್ರದೇಶಗಳಲ್ಲೊಂದಾಗಿ ಶತ್ರುಗಳಿಗೆ ದುರ್ಗಮವಾದ ಕೋಟೆ ಕೊತ್ತಲಗ ಳಿಂದ ಆವೃತವಾಗಿದ್ದಿತು. ತನಗೆ ಶತಾಯುರ್ದಾಯವು ಪೂರ್ಣವಾದಮೇಲೆ ತನ್ನ ಹಿರಿಯಮಗನಾದ ಹರಸಿಂಗನು, ತನ್ನ ಸ್ಥಳದಲ್ಲಿ ಪಟ್ಟಾಭಿಷಿಕ್ತನಾಗಬೇ ಕೆಂಬುದು ರಾಣಾನ ಅಂತರ್ಯಾಪೇಕ್ಷೆಯಾಗಿದ್ದಿತು. ಅದು ಮಧ್ಯೆ ಅಲ್ಲಾವು ದ್ದೀನನ ಹಾವಳಿಯಿಂದ ಸಾಧಿಸಲಿಲ್ಲವಾದರೂ, ರಾಣಾನ ಮೊಮ್ಮಗನಾದ ಹಮ್ಮೀರನೇ ಪುನಃ ನೂರು ಸಂವತ್ಸರಗಳ ತರುವಾಯ ಚಿತ್ತೂರು ನಗರವನ್ನು ಸ್ವಾಧೀನಗೊಂಡು ತನ್ನ ಪಿತಾಮಹನ ಸಂಕಲ್ಪವನ್ನು ನೆರವೇರಿಸಿದನು. ಚಿತ್ತೂರು ಸಿಂಹಾಸನವನ್ನೇರಿ ಆಳಿದ ರಜಪೂತ ಪ್ರಭುಗಳಲ್ಲಿ ಹಮ್ಮೀರನು ಸುಪ್ರಸಿದ್ಧನು. ಈತನ ಜನನ-ಬಾಲ್ಯ ಜೀವಿತಗಳು ರಾಜಪುತ್ರಸ್ಥಾನದ ಇತಿ ಹಾಸಗಳಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ. ಆಶ್ಚರ್ಯ ಜನಕವಾಗಿರುವ ಆ ವೃತ್ತಾಂತವನ್ನು ಇಲ್ಲಿ ಸಂಕ್ಷೇಪವಾಗಿ ಕೊಡಲೆಳಸುತ್ತೇವೆ.

ಅಲ್ಲಾವುದ್ದೀನನು, ಚಿತ್ತೂರಿನಮೇಲೆ ದಂಡೆತ್ತಿ ಬರುವುದಕ್ಕೆ ಬಹು ದಿನಗಳ ಹಿಂದೆ, ಒಂದುದಿನ ರಾಣಾ ಲಕ್ಷ್ಮಣಸಿಂಹನ ಹಿರಿಯಮಗನಾದ ಹರ ಸಿಂಗನು, ಓಂಡ್ವಾ ಎಂಬೊಂದು ಅಡವಿಯಲ್ಲಿ ಬೇಟೆಗಾಗಿ ಸುತ್ತಾಡುತ್ತಿ ದ್ದನು. ಅಕಸ್ಮಾತ್ತಾಗಿ, ಒಂದು ಕಾಡುಹಂದಿಯು ಅವನ ದೃಷ್ಟಿಗೋಚರ ವಾಗಲು, ರಾಜಪುತ್ರನು ಅದರ ಬೆನ್ನಟ್ಟಿ ನಡೆದನು. ಪ್ರಾಣಭಯದಿಂದ ಓಡ

ನಾಗಿದ ಆ ಹಂದಿಯು, ಕಾಡಿನ ಪಕ್ಕದಲ್ಲೇ ಇದ್ದ. ಒಂದಾನೊಂದು ಜೋಳದ ಹೊಲವನ್ನು ಹೊಕ್ಕು ಅಡಿತುಕೊಂಡಿತು. ರಾಜಪುತ್ರನೂ ಆತನ ಪರಿವಾರದವರೂ ಆ ಹೊಲದ ಸುತ್ತಲೂ ಕಾದುಕೊಂಡಿದ್ದು, ಅಡಿತುಕೊಂಡಿದ್ದ ಆ ಹಂದಿಯನ್ನು ಯಾರಾದರೂ ಹೊರಕ್ಕೆ ಹೊರಡಿಸಿದರೆ ಚೆನ್ನಾಗಿರುವುದಲ್ಲಾ ಎಂದು ಯೋಚಿಸುತ್ತಿದ್ದರು. ಆ ಹೊಲದ ಪೈರನ್ನು ಕಾಯುವುದಕ್ಕಾಗಿ, ಅದರ ಮಧ್ಯದಲ್ಲಿ ಹಾಕಿದ್ದ ಮಂಚಿಗೆಯಮೇಲೆ ಮಾಸಿದ ಬಟ್ಟೆಯನ್ನು ಉಟ್ಟು ಕಳಾಹೀನಳೆಂಬಂತಿದ್ದರೂ, ದೃಢವಾದ ಶರೀರದಿಂದಲೂ ತೇಜಸ್ವಿ ಕಣ್ಣುಗಳಿಂದಲೂ ಬಲಿಷ್ಠಳೆಂದು ಬೋಧವಾಗುತ್ತಿದ್ದ ಒಬ್ಬ ಯುವತಿಯು ಕುಳಿತಿದ್ದಳು. ಅವಳಲ್ಲದೆ ಸಮೀಪದಲ್ಲಿ ಮತ್ತಾರೂ ದೃಷ್ಟಿಗೋಚರರಾಗಲಿಲ್ಲ. ಬೇಟೆಗಾರರ ಪ್ರಯತ್ನವನ್ನೂ, ತನ್ನ ಹೊಲದ ಒಳಗೆ ಹೊಕ್ಕಿದ್ದ ಆ ಹಂದಿಯನ್ನೂ ನೋಡುತ್ತಲಿದ್ದ ಆ ಯುವತಿಯು, ಆ ಪರಿವಾರವನ್ನು ಕುರಿತು–'ಹಂದಿಯನ್ನು ನಿಮ್ಮ ಕಡೆಗೆ ತರುವೆನಲಾ' ಎಂದು ಕೇಳಿದಳು. ಅದಕ್ಕೆ ಪ್ರತ್ಯುತ್ತರವಾಗಿ ಹರಸಿಂಗನು, ಅವಳು ಏನು ಮಾಡುವಳೋ ನೋಡೋಣವೆಂದುಕೊಂಡು, ಹಾಗೆ ಮಾಡೆಂದನು. ಒಡನೆ ಆಕೆಯು ಮಂಚಿಗೆಯಿಂದ ಕೆಳಕ್ಕಿಳಿದು. ಹತ್ತು ಹನ್ನೆರಡು ಅಡಿಗಳ ಎತ್ತರಕ್ಕೆ ಬೆಳೆದಿದ್ದ ಆ ಜೋಳದ ಜಳವೆಗಳಲ್ಲಿ ಒಂದನ್ನು ಬೇರೊಂದಿಗೆ ಕಿತ್ತುಕೊಂಡು, ಅದರ ಒಂದು ಕೊನೆಯನ್ನು ಕತ್ತಿಯಿಂದ ಹೆರೆದು ಚೂಪಾಗಿಸಿದಳು. ಒಡನೆ ಮಂಚಿಗೆಯಮೇಲೆ ಹತ್ತಿ, ಅಲ್ಲಿಂದ ಅದನ್ನು ಗುರಿಯಿಟ್ಟು ಆ ಹಂದಿಗೆ ಹೊಡೆದಳು. ಹಾಗೆ ಬಿಟ್ಟ ಆ ಜೋಳದ ಜಳವೆಯು ಸುಯ್ಯೆಂದು ಶಬ್ದಮಾಡುತ್ತಾ ಹೋಗಿ, ಅಲ್ಲೇ ಅಡಿತುಕೊಂಡಿದ್ದ ಹಂದಿಯ ದೇಹವನ್ನು ಹೊಕ್ಕಿತು. ಉತ್ತರಕ್ಷಣದಲ್ಲೇ ಕೆಳಕ್ಕಿಳಿದ ಆ ಧೀರ ಯುವತಿಯು ಅದನ್ನು ಹಿಡಿದು, ಎಳೆದು ತಂದು, ರಾಜಪುತ್ರನೂ ಪರಿವಾರದವರೂ ಆಶ್ಚರ್ಯಪಟ್ಟು-ಮೂಗಿನಮೇಲೆ ಬೆರಳನ್ನಿಟ್ಟುಕೊಳ್ಳುವಂತೆ, ಅವರ ಎದುರಿಗೆ ಹಾಕಿದಳು. ರಜಪೂತ ಸ್ತ್ರೀಯರ ಶೌರ್ಯ ಸಾಮರ್ಥ್ಯಗಳೂ ಬಾಹುಬಲವೂ ಧೈರ್ಯಸಾಹಸಗಳೂ ಚೆನ್ನಾಗಿ ಪರಿಚಯವಿದ್ದುದಾದರೂ, ಹರಸಿಂಗನು ಆಕೆಯ ಸಾಹಸಕ್ಕಾಗಿ ಅದ್ಭುತಪಟ್ಟನು. ರಾಜಪುತ್ರನ ಬಾಣಕ್ಕೆ ಗುರಿಯಾದ ಬೇಟೆಯನ್ನು ಬೇರೊಬ್ಬನು ಕೊಂದರೆ, ಅವನ ಪ್ರಾಣಗಳು ನಿಲ್ಲುವುದು ಕಷ್ಟ! ಆದರೂ ಹರ

ಸಿಂಗನು ಅವಳಮೇಲೆ ಕೋಪಿಸಿಕೊಳ್ಳದೆ, ಆಕೆಯ ಸಾಹಸಕ್ಕಾಗಿ ಮೆಚ್ಚಿಕೊಂಡನು. ಯುವತಿಯು ಆ ಮೃಗವನ್ನು ಅಲ್ಲೇಬಿಟ್ಟು ತನ್ನ ಹೊಲವನ್ನು ಪ್ರವೇಶಿಸಿ ನಡೆದಳು. ತರುವಾಯ ರಾಜಪುತ್ರನೂ ಪರಿವಾರದವರೂ, ಸಮೀಪದಲ್ಲೇ ಇದ್ದ ಒಂದು ಕೊಳದ ಒಳಿಗೆ ಹೋಗಿ ಬುತ್ತಿಯನ್ನು ತಿಂದು-ಮರದ ನೆರಳಿನಲ್ಲಿ ವಿಶ್ರಮಿಸಿಕೊಂಡು ಸರಸ ಸಲ್ಲಾಪಗಳನ್ನಾಡಿಕೊಳ್ಳುತ್ತಿದ್ದರು. ಅಷ್ಟರಲ್ಲಿ ಗೋಲಿಯಂತಿದ್ದ ಒಂದು ಹಸೀಮಣ್ಣಿನ ಉಂಡೆಯು, ಸುಳ್ ಎಂದು ಬಂದು ರಾಜಪುತ್ರನ ಕುದುರೆಯಕಾಲಿಗೆ ತಗಲಿತು. ಆ ಪೆಟ್ಟಿಗೆ ಕುದುರೆಯ ಕಾಲು ಕುಂಟುಬಿದ್ದಿತು. ಎಲ್ಲರೂ ಅದೇನೆಂದು ಕೋಪವಿಸ್ಮಯಾಕ್ರಾಂತರಾಗಿ-ಸುತ್ತಲೂ ನೋಡಿಕೊಳ್ಳುತ್ತಿರಲು, ಮುಂಚಿನಂತೆಯೇ ಮಂಚಿಗೆಯಮೇಲೆ ಕುಳಿತು, ಪೈರಿನಮೇಲೆ ಎರಗುತ್ತಿದ್ದ ಪಕ್ಷಿಗಳನ್ನು ಓಡಿಸುವುದಕ್ಕಾಗಿ ಕವಣೆಯಲ್ಲಿ ಹಸೀಮಣ್ಣಿನ ಗುಳಿಗೆಗಳನ್ನಿಟ್ಟು ಹೊಡೆಯುತ್ತಿದ್ದ ಆದೇ ಯುವತಿಯೇ ದೃಷ್ಟಿಗೋಚರಳಾದಳು. ತನ್ನ ಚೇಷ್ಟೆಯಿಂದ ಉಂಟಾದ ತಪ್ಪಿತಕ್ಕಾಗಿ ಖೇದಪಟ್ಟು ಆಕೆಯು, ಒಡನೆ ಕೆಳಕ್ಕಿಳಿದು ಬಂದು, ತಿಳಿಯದೆ ನಡೆದುಹೋದ ತಪ್ಪಿತವನ್ನು ಕ್ಷಮಿಸೆಂದು ರಾಜಪುತ್ರನನ್ನು ಕೇಳಿಕೊಂಡಳು. ಹರಸಿಂಗನೂ ಆಕೆಯಮೇಲೆ ಕೋಪಗೊಳ್ಳದೆ, ಹಸನ್ಮುಖದಿಂದ ಮನ್ನಿಸಿ, ಒಳ್ಳೆಯ ಮಾತುಗಳನ್ನಾಡಿ ಕಳುಹಿಸಿದನು.

ಆ ದಿನದ ಬೇಟೆಯನ್ನು ಸಾಕುಮಾಡಿ, ರಾಜಪುತ್ರನು ಪರಿವಾರದೊಂದಿಗೆ ನಗರಾಭಿಮುಖನಾದನು. ಆ ವೇಳೆಗೆ ತಲೆಯಮೇಲೆ ಹಾಲಿನ ಹರವಿಯನ್ನಿಟ್ಟುಕೊಂಡು, ಎರಡು ಮೇಕೆಯ ಮರಿಗಳನ್ನು - ಕುತ್ತಿಗೆಯಲ್ಲಿ ಕಟ್ಟಿದ ಹಗ್ಗಗಳನ್ನು ಕೈಯಲ್ಲಿ ಹಿಡಿದು ನಡಯಿಸಿಕೊಳ್ಳುತ್ತಾ, ಆ ಯುವತಿಯೇ ಅವರ ಮಾರ್ಗದಲ್ಲಿ ಬಂದಳು. ಆಕೆಯನ್ನು ನೋಡಿದೊಡನೆಯೇ ಬೇಟೆಯ ಪರಿವಾರದವರಲ್ಲೊಬ್ಬನು, ಅವಳು ಬೆದರಿ ಮೇಕೆಗಳನ್ನು ಕೈಬಿಟ್ಟು ಓಡುವಳೋ ಅಥವ ಹಾಲ ಹರವಿಯನ್ನು ಜಾರಿ ಬಿಡುವಳೋ ನೋಡಬೇಕೆಂದು ವಿನೋದಕ್ಕಾಗಿ ಆಕೆಯಮೇಲೆ ತನ್ನ ಕುದುರೆಯನ್ನು ಬಿಟ್ಟನು. ಆದರೆ ಆ ಯುವತಿಯು ಅವನು ಏನುಮಾಡಲಿರುವನೆಂಬುದರ ಸುಳಿವನ್ನು ಮೊದಲೇ ತಿಳಿದುಕೊಂಡಿದ್ದುದರಿಂದ ಲೇಶಮಾತ್ರವೂ ಬೆದರದೆ, ತನ್ನ ಕೈಯಿಂದ ಹಿಡಿದಿದ್ದ ಮೇಕೆಯ ಮರಿಗಳಲ್ಲೊಂದನ್ನು ಅವನ ಕುದುರೆಯ

ಕಾಲಿಗೆ ಅಡ್ಡವಾಗಿ ನಡೆಯಿಸಿದಳು. ಒಡನೆ ಆ ಕುದುರೆಯು ತತ್ತರಪಟ್ಟು ಆ ಶೂರಶಿಖಾಮಣಿಯನ್ನು ನೆಲಕ್ಕೆ ಕೆಡಹಿತು. ಆಕೆಯಾದರೋ ಏನೂ ತಿಳಿಯದವಳಂತೆ, ತನ್ನ ಎರಡು ಮೇಕೆಯ ಮರಿಗಳನ್ನೂ ನಡೆಯಿಸಿಕೊಂಡು, ಒಂದು ತೊಟ್ಟು ಹಾಲನ್ನೂ ಚೆಲ್ಲಿಕೊಳ್ಳದೆ ಗಾಂಭೀರ್ಯದಿಂದಲೇ ನಡೆದುಹೋದಳು. ಕೆಳಕ್ಕೆ ಬಿದ್ದ ಸರದಾರನನ್ನು ಕಂಡು ಎಲ್ಲರೂ ನಕ್ಕರು. ರಾಜಪುತ್ರನು, ಅವಳ ಚಾತುರ್ಯಕ್ಕಾಗಿ ಸಂತೋಷಪಟ್ಟು - ಆ ಕನ್ಯಾಮಣಿಯನ್ನು ಕುರಿತು 'ಎಲೌ ನೀನು ಯಾರಮಗಳು'? ಎಂದು ಪ್ರಶ್ನಿಸಿದನು.—'ನಾನು ಚಂದನ ವಂಶದ ಒಬ್ಬ ರಜಪೂತ ರೈತನ ಮಗಳು. ನಮ್ಮ ಮನೆಯು ಇಲ್ಲಿಗೆ ಸಮೀಪದಲ್ಲೇ ಇದೆ!' ಎಂದು ಅವಳು ನುಡಿದಳು.—'ನಿಮ್ಮ ತಂದೆಯನ್ನು ಒಂದು ಬಾರಿ ಬಂದು ನನ್ನನ್ನು ನೋಡಲು ಹೇಳಿ ಕಳುಹಿಸು' ಎಂದು ನುಡಿದು ಹರಸಿಂಗನು ಶೀಘ್ರವಾಗಿ ಪ್ರಯಾಣಮಾಡಿ, ಅರಮನೆಯನ್ನು ಸೇರಿದನು.

ಮಾರನೆಯ ಪ್ರಾತಃಕಾಲ ಆ ಕನ್ನಿಕೆಯ ತಂದೆಯು ರಾಜಾಸ್ಥಾನಕ್ಕೆ ಬಂದು, ತಾನು ಕೇವಲ ದರಿದ್ರನಾಗಿದ್ದರೂ, ಎಲ್ಲರೂ ಆಶ್ಚರ್ಯಪಡುವಂತೆ -ರಾಜಪುತ್ರನಿಗೆ ಸಮಾನಸ್ಕಂದನೋ ಎಂಬಂತೆ ಆತನಿಗೆ ಸಮಪೀಠದಲ್ಲಿ ಕುಳಿತು, ಸಂಭಾಷಿಸಿದನು. ಆಗ ಹರಸಿಂಗನು,—'ನಿನ್ನ ಮಗಳನ್ನು ನನಗೆ ಕೊಟ್ಟು ಲಗ್ನ ಮಾಡುವೆಯಾ!' ಎಂದು ಪ್ರಶ್ನಿಸಲು—'ನನ್ನ ಮಗಳನ್ನು ರಾಜರಿಗೆ ಕೊಟ್ಟು ಮದುವೆ ಮಾಡುವ ಉದ್ದೇಶವು ನನಗಿಲ್ಲ' ಎಂದು ಸ್ಪಷ್ಟವಾಗಿ ಪ್ರತ್ಯುತ್ತರಕೊಟ್ಟನು. ರಾಜಪುತ್ರನು ಸಜ್ಜನನಾದುದರಿಂದ, ಅವನನ್ನು ಸೆರೆಯಲ್ಲಿಡಿಸಿ, ಅವನ ಮಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳಲಿಷ್ಟಪಡದೆ, ಸುಮ್ಮನೆ ಅವಳನ್ನು ಹೋಗಲಿತ್ತನು. ಆದರೆ ಆ ವೃದ್ಧನು, ಮನೆಗೆ ಬಂದು, ತನ್ನ ಪತ್ನಿಯ ಎದುರಿಗೆ ನಡೆದ ಸಂಗತಿಯನ್ನೆಲ್ಲಾ ಹೇಳಲು, ಆಕೆಯು ಕೋಪಿಸಿ - 'ಭಾಗ್ಯಲಕ್ಷ್ಮಿಯು ಬರುತ್ತೇನೆಂದು ಅಪೇಕ್ಷಿಸಿದರೆ, ಕಾಲಿನಿಂದ ಒದ್ದು ನಿವಾರಿಸುವ ಮೂರ್ಖರಂತೆ, ಮಹಾರಾಣಾನೇ ಅಪೇಕ್ಷೆಪಟ್ಟಿರುವಲ್ಲಿ ನಿರಾಕರಿಸಬಹುದೇ! ಈಗಲಾದರೂ ರಾಜಪುತ್ರನ ಬಳಿಗೆ ಹೋಗಿ ತಪ್ಪನ್ನು ಕ್ಷಮಿಸೆಂದು ಕೇಳಿಕೊಂಡು, ನಮ್ಮ ಹುಡುಗಿಯನ್ನು ಆತನ ಪಾದಗಳಿಗೆ ಒಪ್ಪಿಸಿರಿ' ಎಂದು ನುಡಿದು ಅವನನ್ನು ಪುನಃ ರಾಜ

ಪುತ್ರನ ಒಳಿಗೆ ಕಳುಹಿಸಿದಳು. ಅವನು ಪುನಃ ಚಿತ್ತೂರಿಗೆ ಹೋಗಿ, ರಾಜಪುತ್ರನನ್ನು ಸಂದರ್ಶಿಸಿ, ತನ್ನ ತಪ್ಪನ್ನು ಕ್ಷಮಿಸೆಂದು ಕೇಳಿಕೊಂಡನು. ಹರಸಿಂಗನು ತನ್ನ ತಂದೆಯ ಅನುಮತಿಯನ್ನು ಪಡೆದು, ಆ ಕನ್ನಿಕೆಯನ್ನು ವಿಧ್ಯುಕ್ತವಾಗಿ ವಿವಾಹವಾದನು. ಈ ದಂಪತಿಗಳಿಗೆ ಉದಯಿಸಿದ ಪುತ್ರನೇ ಹಮೀರಸಿಂಹನು.

ಚಿತ್ತೂರು ನಗರದ ಸಂರಕ್ಷಣೆಗಾಗಿ ಹರಸಿಂಗನು ಅಲ್ಲಾವುದ್ದೀನನ ಮೇಲೇರಿ ಹೋಗಿ ಯುದ್ಧದಲ್ಲಿ ಪ್ರಾಣತ್ಯಾಗ ಮಾಡಿದಾಗ, ಹಮೀರಸಿಂಹನು ಕೇವಲ ಅಲ್ಪ ವಯಸ್ಕನಾದ ಬಾಲಕನಾಗಿದ್ದನು. ಅಜೇಯಸಿಂಗನನ್ನು ಹೊರಕ್ಕೆ ಕಳುಹಿಸುವಾಗ್ಗೆ, ರಾಣಾನು,-'ಅಪ್ಪಾ ದೇವರು ನಿನಗೆ ಪುನಃ ಈ ಮೇವಾಡ ರಾಜ್ಯವನ್ನು ಅನುಗ್ರಹಿಸಿದರೆ ನಮ್ಮ ಹಮೀರನಿಗೆ ಯೌವರಾಜ್ಯಾಭಿಷೇಕ ಮಾಡಿ ನೀನು ಸಿಂಹಾಸನವನ್ನು ಏರು ' ಎಂದು ಆಜ್ಞಾಪಿಸಿದ್ದನು. ಅಜೇಯಸಿಂಗನಾದರೂ-'ಹಮೀರನು ಯೌವರಾಜ್ಯ ಪಟ್ಟಕ್ಕೆ ಯೋಗ್ಯನಾಗುವುದಾದರೆ ಅಗತ್ಯ ಹಾಗೆ ಮಾಡುವೆನೆಂದು ವಾಗ್ದಾನ ಮಾಡಿದ್ದನು. ಹಮೀರನೂ ಆಗ ರಾಣಾನ ಅಪೇಕ್ಷೆಯಂತೆ ಚಿತ್ತೂರನ್ನು ಬಿಟ್ಟು ಹೊರಟಿದ್ದ ಅಜೇಯಸಿಂಗನೊಂದಿಗೇ ಬಂದಿದ್ದು-ಆತನೊಂದಿಗೇ ಕೈಲವಾರ ದುರ್ಗದಲ್ಲೇ ವಾಸಮಾಡುತ್ತಿದ್ದನು.

ಕೈಲವಾರ ದುರ್ಗದ ಸುತ್ತುಮುತ್ತಲಿನ ಗುಡ್ಡಗಾಡು ಪ್ರಾಂತವೆಲ್ಲಾ, ಅಜೇಯಸಿಂಹನ ಮಕ್ಕಳಾದ ಸುಜನಸಿಂಹ ಮತ್ತು ಅಜಿಮಸಿಂಹ ಎಂಬಿಬ್ಬರ ಮತ್ತು ಹಮೀರಸಿಂಹನ ಕ್ರೀಡಾ ಕ್ಷೇತ್ರವಾಗಿದ್ದಿತು. ಆ ಮೂವರು ಬಾಲಕರೂ, ಅಲ್ಲಿ ದುಷ್ಟ ಮೃಗಗಳನ್ನು ಬೇಟೆಯಾಡುತ್ತಲೂ, ಬಿಲ್ಲುವಿದ್ಯೆಯನ್ನು ಅಭ್ಯಸಿಸುತ್ತಲೂ ಕಾಲ ಕಳೆಯುವರು. ಡಿಲ್ಲೀ ಪಾದಷಹನ ಅಜೇಯ ಸೈನ್ಯವು, ಮೇವಾಡವನ್ನು ರಕ್ಷಿಸುತ್ತಿರಲು, ಅಜೇಯಸಿಂಹನು ಆ ಕಡೆ ತಿರುಗಲು ಸಹ ಸಾಧ್ಯವಿಲ್ಲದೆ, ತನ್ನಮೇಲೆ ಆಗಾಗ ತಿರುಗಿ ಬೀಳುತ್ತಿದ್ದ ಇತರ ಹಲವು ಗಟ್ಟಬೆಟ್ಟ ನಿವಾಸಿಗಳಾದ ಕಳ್ಳಕಾಕರು-ದುರುಳರು ದೊಂಬಿಗಾರರು ಮುಂತಾದವರ ಉಪದ್ರವವನ್ನು ಅಡಗಿಸುವುದರಲ್ಲೇ ನಿರತನಾಗಿ ಸದಾ ಯುದ್ಧ ಮಾಡುತ್ತಲೇ ಇದ್ದನು. ಆತನಿಗೆ ಹಾಗೆ ತೊಂದರೆ ಕೊಡುತ್ತಿದ್ದವರಲ್ಲಿ, ಬಳೇಯ್ಯ ಕುಲದ ಮೂಂಜನೆಂಬೊಬ್ಬ ಶೂರನು ಪ್ರಧಾನನು. ಈ

ಮುಂಜನು, ಒಂದಾನೊಂದು ವೇಳೆ ಕೈಲವಾರದ ಮೇಲೆ ದಂಡೆತ್ತಿ ಬಂದು, ರಾಣಾನನ್ನು ಎದುರಿಸಿ, ತನ್ನ ಕೈಯ್ಯಲ್ಲಿನ ಭಲ್ಯೆಯಿಂದ ಅವನ ತಲೆಯ ಮೇಲೆ ಹೊಡೆದು ಗಾಯಮಾಡಿ ಹೋದನು.

ಅಜೇಯಸಿಂಗನು, ಆ ಗಾಯವನ್ನು ಕುರಿತು ಅಷ್ಟುಮಟ್ಟಿಗೆ ಲಕ್ಷ್ಯ ಮಾಡದಿದ್ದರೂ, ತನ್ನ ಶತ್ರುವಿನಿಂದ ಪ್ರಾಪ್ತವಾದ ಆ ಪರಾಭವ ಕಳಂಕವನ್ನು ಮುಂಜನ ರಕ್ತದಿಂದಲೇ ತೊಳೆದು ಪರಿಹರಿಸಬೇಕೆಂದುಕೊಂಡು, ತನ್ನ ಇಬ್ಬರು ಮಕ್ಕಳನ್ನೂ ಬಳಿಗೆ ಕರೆದು,—"ನನಗೆ ಅಪಕಾರ ಮಾಡಿದ ಆ ಹಗೆಯನ್ನು ವಧಿಸಿ, ಹಗೆ ತೀರಿಸಿಕೊಳ್ಳಬಲ್ಲಿರಾ" ಎಂದು ಪ್ರಶ್ನಿಸಿದನು. ಸುಜನಸಿಂಹ-ಅಜಿಮಸಿಂಹರಿಗೆ ಆಗ ಕ್ರಮವಾಗಿ ಕೇವಲ ಹದಿನೈದು ಹದಿನಾಲ್ಕು ವರ್ಷಗಳ ಪ್ರಾಯವಿತ್ತು. ಆದರೇನು! ಆ ವಯಸ್ಸಿನಲ್ಲೇ ರಜಪೂತರು ತಮ್ಮ ಶೌರ್ಯ ಪ್ರತಾಪಗಳನ್ನು ಪ್ರಕಟಿಸಿ, ತಮ್ಮ ಜೀವನ ಧ್ಯೇಯವೇನೆಂಬುದನ್ನು ವ್ಯಕ್ತಗೊಳಿಸಬೇಕಾದುದು! ಆದರೆ ಅಜೇಯಸಿಂಹನ ಆ ಇಬ್ಬರು ಮಕ್ಕಳೂ, ಅಗ್ಗೆ ವೀರಪುರುಷೋಚಿತವಾದ ಪ್ರತ್ಯುತ್ತರ ಕೊಡದೆ ಮುಖವನ್ನು ಸಪ್ಪೆ ಮಾಡಿಕೊಂಡುದರಿಂದ, ಅಜೇಯಸಿಂಹನು, ತನ್ನ ಅಣ್ಣನ ಮಗನಾದ ಹಮೀರನನ್ನು ಮುಂದಕ್ಕೆ ಕರೆದು—'ನೀನು ಆ ಕೆಲಸವನ್ನು ನಿರ್ವಹಿಸಲಾಪೆಯಾ?" ಎಂದು ಪ್ರಶ್ನಿಸಿದನು. ಆಗಲಾ ಧೀರಬಾಲಕನು—'ಇದೋ ನಾನು ಈಗ ನಿಮ್ಮ ಶತ್ರುವಿನ ಮೇಲೆ ಹಗೆ ತೀರಿಸಿಕೊಳ್ಳಲು ಹೋಗುತ್ತಿದ್ದೇನೆ! ಅವನನ್ನು ಜಯಿಸಿದೆನಾದರೆ, ಬಹು ಶೀಘ್ರದಲ್ಲೇ ನನ್ನನ್ನು ದರ್ಶನ ಮಾಡಬಲ್ಲಿರಿ-ಅಪಜಯಹೊಂದುವೆನಾದರೆ ಇದೇ ನಮ್ಮ ಕೊನೆಯ ದರ್ಶನವೆಂದು ತಿಳಿಯಿರಿ' ಎಂದು ಪ್ರತಿಜ್ಞೆಮಾಡಿ, ಕೈಲವಾರ ದುರ್ಗದಿಂದ ಹೊರಬಿದ್ದನು.

ತರುವಾಯ ಕೆಲವು ದಿನಗಳೊಳಗಾಗಿಯೇ, ಹಮೀರನ ಅಶ್ವರಾಜವು ಕೈಲವಾರ ದುರ್ಗವನ್ನು ಪ್ರವೇಶಿಸಿತು. ಕುದುರೆಯ ಜೀನಿನ ಒಂದು ಪಕ್ಕದಲ್ಲಿ ಒಂದು ಮನುಷ್ಯಶಿರವು ನೇತಾಡುತ್ತಿದ್ದಿತು. ಹಮೀರನು ಅರಮನೆಯ ಸಮೀಪದಲ್ಲಿ ಕುದುರೆಯಿಂದಿಳಿದು, ಆ ಶಿರಸ್ಸನ್ನು ಕೈಯ್ಯಲ್ಲೆತ್ತಿ ತಂದು—"ಇದಿಗೋ ನಿಮ್ಮ ಶತ್ರುವಿನ ತಲೆಯು-ಇದನ್ನು ಗುರುತಿಸಿರಿ" ಎಂದು ಮುಂಜನ ತಲೆಯನ್ನು ತನ್ನ ಚಿಕ್ಕ ತಂದೆಯ ಪಾದದ ಬಳಿ ಬಿಸುಟ

ಟನು.—ಅಜೇಯಸಿಂಗನು, ಅದನ್ನು ಕಂಡು ಬಹು ಸಂತೋಷದಿಂದ - ಅವನನ್ನು ಆಲಿಂಗಿಸಿಕೊಂಡು, ಕಣ್ಣಿಗೆ ಮುದ್ದಿಟ್ಟು, "ಮಗೂ-ಹಮ್ಮೀರಾ ಮೇವಾಡದ ರಾಜ್ಯಾಧಿಪತ್ಯವು ನಿನ್ನ ಹಣೆಯಲ್ಲಿ ಬರೆಯಲ್ಪಟ್ಟಿದೆ. ಚಿರಜೀವಿಯಾಗು" ಎಂದು ಆಶೀರ್ವದಿಸಿ, ಆ ಶತ್ರು ಶಿರದಿಂದ ತೊಟ್ಟಿಕ್ಕುತ್ತಿದ್ದ ರಕ್ತದಿಂದ ಹಮ್ಮೀರನ ನೆತ್ತಿಯಲ್ಲಿ ತಿಲಕವನ್ನಿಟ್ಟನು.

ಅಜೇಯಸಿಂಹನು, ಹಮ್ಮೀರಸಿಂಹನಿಗೆ ಈ ಬಗೆಯಲ್ಲಿ ರಾಜ್ಯಪ್ರದಾನ ಮಾಡಿದುದರಿಂದ, ಮುಂದೆ ಅವನ ಇಬ್ಬರು ಮಕ್ಕಳ ಗತಿಯೇನೆಂಬುದು ನಿರ್ಧರವಾದಂತಾಯಿತಲ್ಲವೆ! ಅವರಲ್ಲಿ ಅಜಿಮಸಿಂಹನು ಮುಂದೆ ಕೆಲವು ದಿನಗಳಲ್ಲೇ ಮೃತನಾದನು. ಸುಜನಸಿಂಹನು, ರಾಜ್ಯ ಸಂಪಾದನೆಯ ಉದ್ದೇಶದಿಂದ, ತನ್ನ ಪಿತೃಗೃಹವನ್ನು ಬಿಟ್ಟು ದಖ್ಖನಿಗೆ ಹೊರಟುಹೋದನು. ಮೇವಾಡದ ರಾಜ್ಯದ ಫಲವತ್ತಾದ ಪ್ರದೇಶಗಳೂ, ಜನನಿಬಿಡವಾದ ಗಡಿದುರ್ಗಗಳೂ ಡಿಲ್ಲಿಯ ಪ್ರಭುತ್ವಕ್ಕೆ ಒಳಪಟ್ಟು, ಕೇವಲ ಕಾಡುಮೇಡುಗಳೂ - ಗಟ್ಟಬೆಟ್ಟದ ಪ್ರದೇಶಗಳೂ ಮಾತ್ರವೇ ಅಜೇಯಸಿಂಹನ ಪಾಲಿಗೆ ಬಂದಿದ್ದುದರಿಂದ, ಆ ಪ್ರಾಂತಕ್ಕೆ ಯಾರು ದೊರೆಯಾಗಿದ್ದರೆ ಏನು ಫಲ ಎಂದು ಭಾವಿಸಿ, ಪಿತ್ರಾರ್ಜಿತದ ರಾಜ್ಯ ವಿಷಯದಲ್ಲಿ ನಿರಾಶನಾಗಿ ರಾಜಪುತ್ರನು ದಖ್ಖನಿಗೆ ಹೊರಟು ಅಲ್ಲೇ ನೆಲೆಗೊಂಡನು. ಇವನ ವಂಶದಲ್ಲಿ ಹತ್ತು ತಲಾಂತರಗಳು - ಎಂದರೆ ಸುಮಾರು ಮುನ್ನೂರು ಸಂವತ್ಸರಗಳು ಕಳೆದ ತರುವಾಯ, ಭಾಂಸ್ಲೇ ಕುಟುಂಬದಲ್ಲಿ ಜನ್ಮಿಸಿದ ಬಾಲಕನೊಬ್ಬನು. ಮಹಾರಾಷ್ಟ್ರ ರಾಜ್ಯ ಸಂಸ್ಥಾಪಕನಾಗಿ, ಸತಾರಾ ಸಿಂಹಾಸನವನ್ನು ಊರ್ಜಿತಗೊಳಿಸಿ, ಛತ್ರಪತಿ ಶಿವಾಜಿ ಮಹಾರಾಜನೆಂದು ಸುಪ್ರಸಿದ್ಧನಾಗಿ, ಮಹಮ್ಮದೀಯ ರಾಜರ ಹೃದಯಕ್ಕೆ ಶೂಲಪ್ರಾಯನಾಗಿದ್ದು ಹಿಂದೂ ಧರ್ಮವನ್ನು ಉದ್ಧರಿಸಿದನು.

ಅಜೇಯಸಿಂಹನು ಸ್ವರ್ಗಾರೋಹಣ ಮಾಡಿದ ತರುವಾಯ ಹಮ್ಮೀರಸಿಂಹನು ಕೈಲವಾರದಲ್ಲಿ ಸಿಂಹಾಸನವನ್ನೇರಿದನು. ಕೈಲವಾರವು ಶೂರನಾದ ಹಮ್ಮೀರಸಿಂಹನ ಪಾಲನೆಗೆ ಒಳಪಟ್ಟಂದಿನಿಂದ ಸುತ್ತುಮುತ್ತಲಿನ ಮೈದಾನ ಪ್ರದೇಶಗಳಲ್ಲಿ ವಾಸಿಸಿದ ರಜಪೂತ ಜನರಿಗೆಲ್ಲ ರಕ್ಷಕ ಸ್ಥಾನವಾಯಿತು. ಅನೇಕರು ಹತ್ತಿರದ-ದೂರದ ಅನೇಕ ಸ್ಥಳಗಳಿಂದ ಹೊರಟು

ಬಂದು ಆ ದುರ್ಗದಲ್ಲಿ ಆಶ್ರಯ ಹೊಂದಿದರು. ಕೈಲವಾರ ಪ್ರಾಂತವು ಐವತ್ತು ಮೈಲು ವಿಸ್ತಾರವಾಗಿದ್ದು-ಸಮುದ್ರ ಮಟ್ಟದಿಂದ ಮೂರು ಸಾವಿರ ಅಡಿಗಳ ಎತ್ತರದಲ್ಲಿ ಮನೋಹರ ಪ್ರದೇಶವಾಗಿ ಒಪ್ಪುತ್ತಿರುವುದು. ಇಂತಹ ಸುರಕ್ಷಿತ ಸ್ಥಳದಲ್ಲಿ ನೆಲೆಗೊಂಡ ಹಮೀರನು, ತನ್ನ ಪೂರ್ವಿಕರಿಂದ ರಾಜ್ಯಾಪಹರಣ ಮಾಡಿದ ಡಿಲ್ಲೀ ಚಕ್ರವರ್ತಿಯಿಂದ ಪುನಃ ತನ್ನ ಆ ಪಿತ್ರಾರ್ಜಿತ ಸ್ವಾಸ್ಥ್ಯವನ್ನು ಕಸುಕೊಳ್ಳಬೇಕೆಂದು ಸಂಕಲ್ಪಿಸಿ-ತನ್ನನ್ನು ರಾಜನನ್ನಾಗಿ ಅಂಗೀಕರಿಸಿ ರಕ್ಷಣೆಯನ್ನು ಅಪೇಕ್ಷಿಸಿದವರೆಲ್ಲರೂ ಬಂದು ಕೈಲವಾರದಲ್ಲಿ ವಾಸ ಮಾಡಬಹುದೆಂದು ದೇಶದೇಶಗಳಲ್ಲಿ ತಿಳಿಯಪಡಿಸಿದನು. ರಾಣಾನ ಆ ಸಂದೇಶವನ್ನು ಕೇಳಿದ ಅನೇಕರು ಧೈರ್ಯಗೊಂಡು ಕುಟುಂಬ ಸಮೇತರಾಗಿ ಹೊರಟುಬಂದು ಅಲ್ಲಿ ವಾಸಿಸಿದರು. ಹಮೀರನು ಹಾಗೆ ಬಂದು ಸೇರಿದ ಸಹಸ್ರಾರು ಮಂದಿ ರಜಪೂತರ ಸಹಾಯಗೊಂಡು ಸಮಯಸಾಧನೆಮಾಡಿ ಸಿಕ್ಕಸಿಕ್ಕಲ್ಲಿ ಮ್ಲೇಂಛ ಸೈನಿಕರನ್ನು ವಧಿಸುತ್ತ ಬಂದನು. ಮುಸಲ್ಮಾನರಿಗೆ ಹಮೀರನೆಂಬ ನಾಮವು ಸಿಂಹಸ್ವಪ್ನವೆಂಬಂತಾಯಿತು. ತುರುಷ್ಕ ಸೈನಿಕರು ಹಮೀರಸಿಂಹನೆದುರಿಗೆ ನಿಂತು ಹೋರಾಡುವುದಂತಿರಲಿ-ಅವನ ಹೆಸರನ್ನು ಕೇಳಿದ ಮಾತ್ರದಲ್ಲೇ ಗರ್ಭನಿರ್ಭೇದವಾಗಿ ಕೋಟೆಗಳಲ್ಲಡಗಿ ಪ್ರಾಣಗಳನ್ನು ದಕ್ಕಿಸಿಕೊಳ್ಳತೊಡಗಿದರು. ಒಂದುವೇಳೆ ಮಹತ್ಪ್ರಯತ್ನಮಾಡಿ ಅವನನ್ನು ಎದುರಿಸಲು ಸಿದ್ಧಗೊಂಡರೂ ಗಟ್ಟಬೆಟ್ಟದ ಗುಪ್ತಮಾರ್ಗಗಳು ಅವರಿಗೆ ವಿಶೇಷ ತಿಳಿಯದೆ ಇದ್ದುದರಿಂದಲೂ ಆತನು ಆ ಸಮಸ್ತ ಗುಪ್ತಮಾರ್ಗಗಳನ್ನೂ ಚೆನ್ನಾಗಿ ತಿಳಿದಿದ್ದುದಲ್ಲದೆ, ಜನಪ್ರಿಯನಾಗಿದ್ದುದರಿಂದಲೂ, ಶತ್ರುಗಳ ಪ್ರಯತ್ನಗಳೆಲ್ಲವೂ ನಿಷ್ಫಲವಾಗುತ್ತಿದ್ದುವು. --

ಹಮೀರಸಿಂಹನು ಹೀಗೆ ತನ್ನ ವೀರವಿಹಾರದಲ್ಲಿ ಮಗ್ನನಾಗಿರುತ್ತಿರಲು, ಒಂದಾನೊಂದು ದಿನ, ಚಿತ್ತೂರು ನಗರದಲ್ಲಿ ಡಿಲ್ಲಿ ಪ್ರಭುತ್ವದವರ ಪ್ರತಿನಿಧಿಯಾಗಿದ್ದ ರಾವ್ ಮಾಲ್ದೇವನ ಕಡೆಯ ಒಬ್ಬ ಸೇವಕನು ಬಂದು, ಅರಿಸಿನವನ್ನು ಬಳಿದ ಒಂದು ತೆಂಗಿನಕಾಯನ್ನು ಹಮೀರಸಿಂಹನಿಗೆ ಒಪ್ಪಿಸಿದನು. ರಜಪೂತರಲ್ಲಿ ಪ್ರಚಾರವಿರುವ ಈ ಪದ್ಧತಿಗೆ ಕನ್ಯಾ ಸ್ವೀಕಾರಕ್ಕಾಗಿ ಬರಬೇಕೆಂದು ಆಹ್ವಾನವಿತ್ತಂತೆ ಅರ್ಥವಾಗುವುದು. ಹಮೀರಸಿಂಹನ ಹಿತ

ಚಿಂತಕ ಪರಿವಾರದವರು, ಏನೋದ್ರೋಹಕೃತ್ಯವು ಜರುಗಲಿರುವುದೆಂದು ಶಂಕೆಗೊಂಡು ಆ ಸಂದರ್ಭದಲ್ಲಿ ಚಿತ್ತೂರಿಗೆ ಪ್ರಯಾಣ ಮಾಡಬೇಡಿರೆಂದು ಪ್ರಾರ್ಥಿಸಿದರು. ಆದರೆ ಧೀರ ಹಮೀರನು, ಅವರ ಅಂಜಿಕೆಗಾಗಿ ಹುಸಿ ನಗುವನ್ನು ನಕ್ಕು,—'ಮಿತ್ರರೇ ಲಕ್ಷ್ಮಿಯು ಸಾಹಸಕ್ಕೆ ಒಲಿವಳಲ್ಲದೆ ಸಂಶಯಕ್ಕಲ್ಲ-ಅಂಜಿಕೆಗಲ್ಲ. ನಾವು ಹೇಗಾದರೂ ನಮ್ಮ ಪಿತ್ರಾರ್ಜಿತ ಸ್ವತ್ತಾದ ಚಿತ್ತೂರು ರಾಜ್ಯವನ್ನು ಸಾಧಿಸಬೇಕಲ್ಲವೆ ? ಆ ನಗರವು ಯಾವ ಸ್ಥಿತಿಯಲ್ಲಿದೆಯೋ ಎಂಬುದನ್ನು ತಿಳಿದುಕೊಳ್ಳುವುದಕ್ಕೆ, ಅವರಿಂದ ಆಹ್ವಾನಿಸಲಟ್ಟಿರುವ ಇದೇ ಉತ್ತಮ ಸಮಯವು. ರಜಪೂತನು ಅಪಾಯಕ್ಕೆ ಶಂಕಿಸಿ ಎಂದಿಗೂ ಹಿಂದುಳಿಯಲಾಗದು. ಇಂದು ಗಾಯಗೊಂಡು ಇಳಿದ ದುರ್ಗವನ್ನು ನಾಳೆ ಕಿರೀಟಧಾರಣ ಮಾಡಿಕೊಂಡು ಏರತಕ್ಕುದು ಕ್ಷತ್ರಿಯನ ಮಹತ್ವಾಕಾಂಕ್ಷೆಯಾಗಿರಬೇಕಲ್ಲವೆ !'' ಎಂದು ನುಡಿದು, ಐದುನೂರು ಮಂದಿ ಅಶ್ವಾರೂಢ ಬೆಂಬಲದೊಂದಿಗೆ ಹೊರಟು, ಚಿತ್ತೂರನ್ನು ಕುರಿತು ಪ್ರಯಾಣ ಮಾಡಿದನು.

ಹಮೀರಸಿಂಹನೂ, ಆತನ ಅಶ್ವಾರೂಢ ಪರಿವಾರವೂ ಚಿತ್ತೂರನ್ನು ಸಮೀಪಿಸುತ್ತಿದ್ದಂತೆಯೇ, ಮಾಲ್ದೇವನ ಐದುಮಂದಿ ಮಕ್ಕಳೂ ಅವರನ್ನು ಎದುರುಗೊಂಡು, ಕೋಟೆಯೊಳಕ್ಕೆ ಪ್ರವೇಶಗೊಳಿಸಿದರು. ವಿವಾಹಕ್ಕೆಂದು ಹಮೀರ ಸಿಂಹನನ್ನು ಕರೆಯಿಸಿಕೊಂಡರಾದರೂ, ನಗರದ್ವಾರದಲ್ಲಿ ಶುಭಸೂಚಕವಾದ ತೋರಣವಾಗಲೀ, ಮತ್ತಾವಬಗೆಯ ವಿವಾಹ ಸಮಾರಂಭ ಚಿಹ್ನೆಗಳಾಗಲೀ ಕಂಡುಬಾರದಿರಲು, ಅವರಿಗೆ ಸ್ವಾಭಾವಿಕವಾಗಿಯೇ ಕೌತುಕವುಂಟಾಗದಿರಲಿಲ್ಲ. ಆದರೂ ಏನು ನಡೆಯಲಿರುವುದೋ ನೋಡೋಣವೆಂದು, ಅವರು ಮೌನಮುದ್ರೆಯಿಂದ ಮುಂದರಿದು ಹೋದರು. ಮಹಾರಾಜನ ಆಸ್ಥಾನ ಸಮೀಪದಲ್ಲಿ ರಾವ್ ಮಾಲ್ದೇವನೂ ಆತನ ಪುತ್ರರಾದ ವನವೀರನೇ ಮುಂತಾದವರೂ, ರಾಜಪ್ರತಿನಿಧಿಯ ಬಾಂಧವರೂ, ಹಮೀರಸಿಂಹನನ್ನು ಎದುರುಗೊಂಡು ಗೌರವಿಸಿದರು. ವಿವಾಹ ಮಂಗಳಕಾರ್ಯದ ಯಾವಸಿದ್ಧತೆಯೂ ಇಲ್ಲದಿದ್ದ ಆ ಪರಿಸ್ಥಿತಿಯನ್ನು ಕಂಡು ನಿಶ್ಚಯವಾಗಿ ಏನೋ ದ್ರೋಹವು ಜರುಗಲಿರುವುದೆಂದು, ಕ್ಷಣಕ್ಷಣಕ್ಕೂ ಭೀತಿಗೊಳ್ಳುತ್ತಿದ್ದ ಪರಿವಾರದವರನ್ನು ಸುಮ್ಮನಾಗಿಸಿ, ಹಮೀರಸಿಂಹನು

ಸ್ಥೈರ್ಯದಿಂದ ಕುದುರೆಯನ್ನಿಳಿದು ಲೇಶಮಾತ್ರವೂ ಅಂಜಿಕೆಸಂಕೋಚಗಳಿಲ್ಲದೆ ನೇರವಾಗಿ ನಡೆದು, ಸಭೆ ಮನೆಯಲ್ಲಿದ್ದ ಅವರ ಮಧ್ಯದಲ್ಲಿ ನಿಂತನು ಅವರು ಶಂಕಿಸಿದ್ದಂತೆ,ಅಲ್ಲಿ ಯಾವ ಬಗೆಯ ದ್ರೋಹಚಿಂತನೆಗೂ ಎಡೆಯಿರಲಿಲ್ಲವಾದರೂ, ಅವರು ತಿಳಿದುಕೊಂಡಿದ್ದಂತೆ, ಆದು ಮದುವೆಯ ಮನೆಯಾಗಿರಲಿಲ್ಲ. ಮಾಲ್ದೇವನು, ವಧುವನ್ನು ಕರೆಯಿಸಿ, ಆಕೆಯನ್ನು, ಅಲ್ಲೇ ಆಗಲೇ ಒಬ್ಬ ಬ್ರಾಹ್ಮಣನಿಂದ ಹಮ್ಮೀರನಿಗೆ ವಿವಾಹ ಮಾಡಿಸಿದನು. ಪುರೋಹಿತನು ವಧುವರಗಳ ಮೇಲ್ಮುಸುಕಿನ ಕೊನೆಗೂ, ಮದುಮಗನು ಹೊದ್ದಿದ್ದ ಶಾಲುವಿನ ಕೊನೆಗೂ ಗಂಟುಹಾಕಿಸಿದನು. ಈ ತಂತ್ರವೊಂದಲ್ಲದೆ, ಮತ್ತಾವ ವಿವಾಹಾಂಗ ಮಂತ್ರತಂತ್ರಗಳಾಗಲೀ, ಕನ್ಯಾ ಪ್ರದಾನವಾಗಲೀ, ಫಲದಾನಾದಿ ಕ್ರಿಯೆಗಳಾಗಲೀ ಅಗ ನಡೆಯಲಿಲ್ಲ.

ಆ ವೇಳೆಗೆ ಸಾಯಂಕಾಲವಾಯಿತು. ರಾಜಭವನದಲ್ಲಿ ಸರ್ವಸಾಮಾನ್ಯವೆನ್ನಿಸುವಂತಹ ಉಪಚಾರಗಳು ನಡೆದ ತರುವಾಯ, ನೂತನ ದಂಪತಿಗಳು ಶಯನಗೃಹದಲ್ಲಿ ಒಂದೆಡೆ ಕಲೆತರು. ಹಮ್ಮೀರಸಿಂಹನು, ಆವರೆಗೆ ವಧುವಿನ ಮುಖವನ್ನೇ ಕಂಡಿರಲಿಲ್ಲ! ವಿವಾಹಾಂಗಗಳೆಲ್ಲವೂ, ಲೋಕವಿಲಕ್ಷಣವೆನ್ನಿಸುವಂತೆ ಅಷ್ಟು ಸಂಕ್ಷಿಪ್ತರೀತಿಯಿಂದ ನಡೆದು, ತಮ್ಮಿಬ್ಬರನ್ನೂ ಶಯನಗೃಹಕ್ಕೆ ಬಿಟ್ಟಿದ್ದ ಆ ಸಂದರ್ಭವೊದಗಿದಾಗ, ಆತನ ಮನಸ್ಸಿನಲ್ಲಿ-ಏನಿದು! ಜಗತ್ತಿನಲ್ಲಿ ಯಾವ ಪುರುಷನಿಗೂ ಭಾರ್ಯೆಯಾಗಲು ಅರ್ಹಳಾಗದ್ದ ವಿಕೃತವಿಗ್ರಹದ ಕುರೂಪಿ ಹೆಣ್ಣನ್ನು ತನ್ನ ಪಾಲಿಗೆ ಕಟ್ಟಿದರೋ, ಎಂಬ ಯೋಚನೆಯುಂಟಾಯಿತು. ಈ ಬಗೆಯ ಸಂದೇಹದಿಂದ, ಹಮ್ಮೀರಸಿಂಹನು, ತನ್ನ ಭಾರ್ಯೆಯ ಮುಖವನ್ನು ಆಚ್ಛಾದಿಸಿದ್ದ ಮುಸುಕನ್ನು ತೆಗೆದು, ತನ್ನ ಪತ್ನಿಯನ್ನು ನೋಡಬಯಸಲು, ನಿರುಪಮಾನಲಾವಣ್ಯಮಯಿಯಾದ ಆ ನಾರೀಶಿರೋಮಣಿಯ ಮುಖಚಂದ್ರವು ಅವನ ಮನಃಚಕೋರವನ್ನು ಅತ್ಯಾನಂದಗೊಳಿಸಿತು. ಆದರೇನು ! ಆಕೆಯ ಕಣ್ಣುಗಳಿಂದ ಅವಿರಳವಾಗಿ ಸುರಿಯುತ್ತಿದ್ದ ಜಲಧಾರೆಯನ್ನು ಕಂಡು, ಹಮ್ಮೀರನ ಮನಸ್ಸಿನಲ್ಲಿ ವಿವಿಧಾಲೋಚನೆಗಳು ತೋರಲಾಗಿದುವು. ಎಷ್ಟು ಹೊತ್ತಾದರೂ ಆಕೆಯು ಕತ್ತೆತ್ತಿ ತನ್ನ ಭರ್ತನ ಮುಖವನ್ನು ನೋಡಲಿಕ್ಕಾಗಲೀ ತನ್ನ ಮುಖವನ್ನು ಪತಿಗೆ ತೋರಿಸಲಿಕ್ಕಾಗಲೀ ಇಚ್ಛಿಸದೆ ಬಹು ನಾಚಿಕೆ

ಗೆಂಡವಳಂತೆ ಇದ್ದ ಸ್ಥಿತಿಯು ಗೋಚರಿಸಿತು. ಆಗಲಾ ರಾಜಪುತ್ರನು, ಆಕೆಯನ್ನು ಕುರಿತು—'ಸುಂದರೀ, ಇದೇನು ವಿಚಿತ್ರವು ? ಸರ್ವಾಂಗಸುಂದರಿಯೂ, ನವಯೌವನವತಿಯೂ ಆದ ನಿನ್ನೀ ವಿವಾಹವು, ನಿನ್ನ ಸ್ವಂತ ಪಿತೃಗೃಹದಲ್ಲಿ-ಸಾಕ್ಷಾತ್ತಾಗಿ ಆತನೆದುರಿಗೇ ಇಷ್ಟು ನಿರುತ್ಸಾಹಕವಾಗಿಯೂ, ನಿರ್ಮಂತ್ರವಿಧಿಯಿಂದಲೂ ನಡೆಯಲು ಕಾರಣವೇನು ! ನೀನು ಇಷ್ಟು ವ್ಯಸನಾಕ್ರಾಂತಳಾಗಿರುವೆ ಏಕೆ ?' ಎಂದು ಪ್ರಶ್ನಿಸಿದನು. ಆ ಮಾತುಗಳನ್ನು ಕೇಳಿದ, ಆ ಯುವತಿಯು—'ಸ್ವಾಮಿ, ಇದರ ಕಾರಣವಿಂಥದೆಂದು ನಾನು ಏನು ಹೇಳಲಿ ? ನಮ್ಮವರು, ನಿಮ್ಮನ್ನು ನಿಷ್ಕಾರಣವಾಗಿ ವಂಚಿಸಿದ್ದಾರೆ. ನೀವು ಪಾಣಿಗ್ರಹಣ ಮಾಡಿರುವ ಈ ದಾಸಿಯು ಕನ್ಯೆಯಲ್ಲ-ವಿತಂತುವು. ನಾನು ಇನ್ನೂ ಹಸುಗೂಸಾಗಿದ್ದಾಗಲೇ ನನ್ನ ತಂದೆಯು ನನ್ನನ್ನು ವಿವಾಹವಿಧಿಯಿಂದ ಜೀರೊಬ್ಬಾತನಿಗೆ ಒಪ್ಪಿಸಿಬಿಟ್ಟಿದ್ದನಂತೆ. ಆದರೆ ಆತನು, ನನಗೆ ತಿಳಿವಳಿಕೆಯುಂಟಾಗುವುದಕ್ಕೆ ಮೊದಲೇ ಯುದ್ಧದಲ್ಲಿ ಮೃತನಾದನು. ಆತನ ಮುಖಪರಿಚಯು ಸಹ ನನಗಾಗಲಿಲ್ಲ' ಎಂದು ನುಡಿದಳು. ಆ ಮಾತನ್ನು ಕೇಳಿದ ಹಮೀರನು ಬಹು ಸಂತಪ್ತನಾದನು. ತನಗೆ ಅವರು ಧಾರ್ಮಿಕರೀತಿಯಲ್ಲಿ ಮಾಡಿದ ಆ ವಂಚನೆಗಾಗಿ ಅಗಾಧ ಯೋಚನಾ ಮಗ್ನನಾದನು. ಹಿಂದೂಗಳ ಇತರ ಪಂಗಡಗಳವರಲ್ಲಿ ಇರುವ ಪದ್ಧತಿಯಂತೆಯೇ, ವಿತಂತುಗಳನ್ನು ವಿವಾಹವಾಗುವ ರಜಪೂತನಾದರೂ ಪತಿತರಲ್ಲಿ ಪರಿಗಣಿತನಾಗುತ್ತಿದ್ದನು. ಶುಭಕಾರ್ಯಗಳು ನಡೆವಾಗ ಎದುರಾಗಿ ಸಹ ಬರಕೂಡದ ವಿಧವೆಯನ್ನು-ರಾಜ್ಯಾಭಿಷಿಕ್ತನಾಗಲುಳ್ಳ ಪದ್ಮಂಶಜನೂ ಕ್ಷತ್ರಿಯನೂ ಆದ ತಾನು ವಿವಾಹವಾದುದರಿಂದ ಇನ್ನು ತನ್ನ ಪಾಲಿಗಿದ್ದ ಅಭಿಮಾನವೂ, ಕುಲಗೌರವವೂ, ಆತ್ಮಪ್ರತಿಷ್ಠೆಯೂ, ಸಮಸ್ತವೂ ನಾಶವಾಗಿ ಹೋದುವೆಂದು, ಮಹದ್ಯೋಚನಾಮಗ್ನನಾಗಿ, ಆತನು ಏನೂತೋರದೆ, ಹಾಸಿಗೆಯಮೇಲೆ ಬಿದ್ದು ಹೊರಳಾಡುತ್ತ ಅತ್ಯಂತ ವಿಚಾರಕ್ಕೆ ಒಳಗಾದನು. ಆ ಸಮಯದಲ್ಲಿ ಬಹು ತೀಕ್ಷ್ಣಪ್ರಕೃತಿಯ ಆ ರಜಪೂತ ಯುವಕನು ಕೋಪಾವೇಶ ಪರನಾಗಿ, ಆಕೆಯನ್ನು ಖಡ್ಗದಿಂದ ಕತ್ತರಿಸಿ ಹಾಕುವಂತಿದ್ದರೂ, ಆಕೆಯು ಉಸಿರೆತ್ತದೆ ಸಹಿಸಿಕೊಂಡಿರಬೇಕಾದಂತಹ ಸಂದರ್ಭ! ಏಕೆಂದರೆ, ಸಮಾಜದಲ್ಲಿ ದುರ್ಭರ ದುಷ್ಕೀರ್ತಿಯನ್ನು ಹೊರಿಸಿ ಅನುಗಾಲವೂ ಚಿಂತಾಜನಕವಾ

ಗಲಿದ್ದ ಆ ವಿವಾಹದಿಂದ ವರನು ಎಷ್ಟುಮಟ್ಟಿಗೆ ನಾಚಿಕೆಗೊಂಡಿದ್ದನೋ ವಧುವೂ ಅಷ್ಟುಮಟ್ಟಿಗೇ ನಾಚಿಕೆಗೊಂಡಿದ್ದಳು. ಆದರೆ, ತನ್ನ ತಂಟೆಗೇ ಬಾರದೆ, ಏನೆಂದೂ ನಿಂದಿಸದೆ, ತನ್ನಲ್ಲಿ ತಾನೇ ದುಸ್ಸಹವೇದನೆಯನ್ನು ಅನುಭವಿಸುತ್ತ ಆಗಾಗ ನಿಟ್ಟುಸಿರು ಬಿಡುತ್ತ ಹಾಸಿಗೆಯಮೇಲೆ ಹೊರಳಾಡುತ್ತಿದ್ದ ಆತನನ್ನು ಕಂಡು, ಆ ರಾಜಪುತ್ರಿಯು,–'ಸ್ವಾಮಿ, ಸೇವಕಳಾದ ನನ್ನನ್ನು ಕ್ಷಮಿಸಬೇಕು. ಈ ದಿನ ನಡೆದ ಈ ಕಾರ್ಯದಲ್ಲಿ ನನ್ನದೇನೂ ಅಪರಾಧವಿಲ್ಲವೆಂಬುದು ನಿಮಗೇ ತಿಳಿದಿದೆಯಲ್ಲವೆ? ನಿಮಗೆ ಇಷ್ಟುಮಟ್ಟಿನ ಅವಮಾನವನ್ನುಂಟುಮಾಡಿದ, ನಿಮ್ಮ ಶತ್ರುಗಳಮೇಲೆ ಹೇಗೆ ಹಗೆ ತೀರಿಸಿಕೊಳ್ಳಬಹುದು ಎಂಬುದನ್ನು ನಾನು ಹೇಳಿಕೊಡುತ್ತೇನೆ. ನೀವು ಈ ಕಾರಣದಿಂದಲೇ ನಿಮ್ಮ ಪಿತೃ ಪಿತಾಮಹಾರ್ಜಿತವಾದ ಈ ಚಿತ್ತೂರ ನಗರವನ್ನು ಸ್ವಾಧೀನಪಡಿಸಿಕೊಳ್ಳಬಹುದು.' ಎಂದಳು.

ಯುವತಿಯ ಈ ಮಾತುಗಳು ಕರ್ಣಾನಂದಕರವಾಗಿರಲು, ಆತನು ತನ್ನ ವ್ಯಸನಭಾರವನ್ನು ಹಿಂದಕ್ಕೊತ್ತಿ ಮೇಲಕ್ಕೆದ್ದು, ಆಕೆಯು ಹೇಳಲಿದ್ದ ರಾಜ್ಯಲಾಭದ ಕಾರಣವೇನೆಂಬುದನ್ನು ಕೇಳಲು ಸಿದ್ಧನಾಗಿ ಕುಳಿತನು. ಆಗ ಆಕೆಯು -'ಪ್ರಭೋ, ನಾನು ಹೇಳುವ ಈ ಮಾತನ್ನು ಲಘುಭಾವದಿಂದ ನೋಡದೆ, ವಿಚಾರಪೂರ್ವಕ ವಿಮರ್ಶಿಸಿ ತರುವಾಯ ಯುಕ್ತ ತೋರಿದಂತೆ ಮಾಡೋಣವಾಗಲಿ! ನನ್ನ ತಂದೆಯಿಂದ ನೀವು ವಸ್ತ್ರ ಭೂಷಣಗಳು, ದ್ರವ್ಯ, ಭೂಮಿ ಈ ಮುಂತಾದ ಯಾವ ಬಹುಮಾನವನ್ನೂ ಪಡೆಯಲಪೇಕ್ಷಿಸದೆ, ಆತನ ಮಂತ್ರಿಯಾದ ಚಾಲನೆಂಬಾತನನ್ನು ಮಾತ್ರ ಅಪೇಕ್ಷಿಸಿರಿ. ವರೋಪಚಾರವಾಗಿ ಮತ್ತೇನನ್ನೂ ಅಪೇಕ್ಷಿಸದೆ, ಆತನನ್ನು ಮಾತ್ರ ಕೇಳುವಿರಾದರೆ ತಂದೆಯು ನಿಮ್ಮ ಮಾತನ್ನು ನಿರಾಕರಿಸದೆ ಖಂಡಿತ ನಡೆಯಿಸಿಕೊಡದಿರಲಾರನು. ಚಾಲನಾದರೆ ನಮ್ಮ ಕಾರ್ಯವನ್ನು ಅವಲೀಲೆಯಿಂದ ಸಾಧಿಸಬಲ್ಲನು' ಎಂದಳು. ಹಮೀರನು, ಆ ಯುವತಿಯ ಉಪಾಯವನ್ನು ಕೇಳಿ ಸಂತೋಷಿಸಿ, ವಿತಂತುವನ್ನು ವಿವಾಹವಾದೆನಲ್ಲಾ ಎಂಬ ವಿಚಾರವನ್ನು ಬಿಟ್ಟು ತನ್ನ ಪತ್ನಿಯು ರಾಣಿಯಾಗಿರಲು ಯೋಗ್ಯಳೆಂದು ತಿಳಿದು, ಆ ರಾತ್ರಿ ಸುಖದಲ್ಲಿದ್ದು ಕಳೆದನು. ಮಾರನೆಯ ಪ್ರಾತಃಕಾಲ, ಮಾಲ್ದೇವನನ್ನು ಕಂಡು, ಕೋಪ ವಿಷಾದಾದಿಗಳನ್ನು ಪ್ರಕಟಿಸದೆಯೇ - ಮಂತ್ರಿ

ಯಾದ ಚಾಂಡನನ್ನು ತನಗೆ ಕಾಣಿಕೆಯಾಗಿ ಕೊಡಬೇಕೆಂದು ಕೇಳಿ, ಆತನಿಂದ ಅನುಮತಿಹೊಂದಿ, ಭಾರ್ಯೆಯೊಂದಿಗೂ, ನೂತನ ಮಂತ್ರಿಯೊಂದಿಗೂ ಪ್ರಯಾಣಮಾಡಿ, ತಾನು ಹೊರಟ ಒಂದು ಪಕ್ಷ ಕಾಲದೊಳಗಾಗಿ ಹಿಂದಿರುಗಿ ಕೈಲವಾರದ ಕೋಟೆಯನ್ನು ಸೇರಿದನು. ಪತ್ನಿಯೊಂದಿಗೆ ದುರ್ಗಪ್ರವೇಶಮಾಡಿದ ತಮ್ಮ ರಾಜಪುತ್ರನನ್ನು ಕಂಡು ಸಕಲರೂ ಪರಮಾನಂದಭರಿತರಾದರು.

ವಿವಾಹವಾಗಿ ಒಂದು ಸಂವತ್ಸರಕಾಲ ಕಳೆಯಲು, ರಾಣಾ ಹಮೀರಸಿಂಹನಿಗೆ ಈ ಪತ್ನಿಯಲ್ಲಿ ಒಬ್ಬ ಕುಮಾರನು ಉದಯಿಸಿದನು. ರಾಣಾನೂ ರಾಣಿಯೂ ಚಾಂಡನೂ ಚಿತ್ತೂರು ರಾಜ್ಯ ಸ್ವಾಧೀನತೆಯ ವಿಷಯದಲ್ಲಿ ಎಷ್ಟೋ ಬಗೆಯ ಯೋಚನೆಗಳನ್ನು ಮಾಡುತ್ತ ದಿನಗಳನ್ನು ಕಳೆದರು. ಹೀಗಿರುತ್ತಿರಲು, ವಿವಾಹವಾದ ಎರಡು ವರ್ಷಗಳಾದ ತರುವಾಯ, ಒಂದಾನೊಂದು ದಿನ ಕೈಲವಾರದ ನಿವಾಸಿಯೊಬ್ಬನು, ಚಿತ್ತೂರು ನಗರವನ್ನು ಸೇರಿ ರಾಜಾಜ್ಞೆಯನ್ನು ಪಡೆದು ಅರಮನೆಯೊಳಕ್ಕೆ ಪ್ರವೇಶಿಸಿ-'ರಾಣಾ ಹಮೀರಸಿಂಹನ ಪತ್ನಿಯು ತನ್ನ ಮಗುವನ್ನೆತ್ತಿಕೊಂಡು ಬಂದು ಕುಲದೇವತೆಯನ್ನು ಆರಾಧಿಸಿಹೋಗಲು ಅಪೇಕ್ಷಿಸುತ್ತಾಳೆ' ಎಂಬ ಸಂಗತಿಯನ್ನು ತಿಳಿಸಿದನು. ಆಗ ಮಾಲ್ದೇವನು ಯುದ್ಧಯಾತ್ರೆಗಾಗಿ ಹೊರಟು ಪರದೇಶದಲ್ಲಿದ್ದುದರಿಂದ, ಆತನ ಜ್ಯೇಷ್ಠಕುಮಾರನು ಆ ಮಾತನ್ನು ಕೇಳಿ ಆಕೆಯು ಆಗಮನಕ್ಕಾಗಿ ಬಹು ಸಂತೋಷದಿಂದ ಅನುಮತಿಸಿದನು. ದೂತವಾಕ್ಯದಲ್ಲಿ ನಂಬಿಕೆಯಿಟ್ಟು ಯುಕ್ತಪರಿವಾರದೊಂದಿಗೆ ಬಂದ ಆಕೆಯನ್ನು ಸಗೌರವವಾಗಿ ಎದುರುಗೊಂಡು ಅಂತಃಪುರದಲ್ಲಿ ಪ್ರವೇಶಗೊಳಿಸಿ, ಉಚಿತರೀತಿಯಿಂದ ಉಪಚರಿಸಿದನು. ಆಕೆಯೂ ತನ್ನೊಂದಿಗೆ, ಮಹಾಶೂರರರೂ ಚತುರರೂ ಆದ ಅನೇಕಮಂದಿ ಸೈನಿಕರನ್ನು ಕರೆತಂದಿದ್ದಳು. ಪಿತೃಗೃಹದಲ್ಲಿ ದೇವತಾಕಾರ್ಯವನ್ನು ಮುಗಿಸಿದ ತರುವಾಯ, ಆ ರಾಜಪುತ್ರಿಯು ಬಹು ಚಾತುರ್ಯದಿಂದಲೂ ಹಲವು ಮಾಯೋಪಾಯಗಳಿಂದಲೂ ಅಲ್ಲಿಯ ಜನರನ್ನು ತಮ್ಮಂತೆ ತಿರುಗಿಸಿಕೊಳ್ಳಲು ಪ್ರಯತ್ನಿಸಿದಳು. ಪ್ರಾರ್ಥನೆಗೆ ವಶರಾಗುವಂತಹರನ್ನು ಪ್ರಾರ್ಥಿಸಿ, ಲಂಚದಿಂದ ತೃಪ್ತರಾಗುವಂತಹರನ್ನು ಲಂಚಾದಿಗಳಿಂದ ತೃಪ್ತಿಪಡಿಸಿ, ಬೆದರಿಕೆಗೆ ಬಗ್ಗುವಂತಹರನ್ನು ಬೆದರಿಸಿ, ಹೊಗಳಿ

ಕೆಗೆ ಉಬ್ಬುವಂತಹರನ್ನು ಹೊಗಳಿ-ಹೀಗೆ ತನ್ನ ತಂದೆಯ ಸೈನಿಕರನ್ನೆಲ್ಲ ವಶ ಪಡಿಸಿಕೊಂಡು, ತನ್ನ ಭರ್ತನನ್ನು ಕರೆಯಿಸಿಕೊಂಡು, ಆತನನ್ನು ಅನಾಯಾಸವಾಗಿ ಕೋಟೆಯೊಳಗೆ ಪ್ರವೇಶಗೊಳಿಸಿ, ಬಂಗಾರದ ಸೂರ್ಯಬಿಂಬ ಶೋಭಿತವಾದ ರಾಣಾ ಹಮೀರನ ಧ್ವಜವನ್ನು ಚಿತ್ತೂರು ಕೋಟೆಯ ಬುರುಜಿನ ಮೇಲೆ ಎಬ್ಬಿಸಿದಳು. ತರುವಾಯ ಕೆಲವು ದಿನಗಳೊಳಗಾಗಿ ಮಾಲ್ದೇವನು ಯುದ್ಧವನ್ನು ಮುಗಿಸಿಕೊಂಡು ಹಿಂದಿರುಗಿ ಬಂದು, ಊರಿನಲ್ಲಿ ನಡೆದುಹೋದ, ಈ ವಿಚಿತ್ರವ್ಯಾಪಾರವನ್ನು ನೋಡಿ ಪರಮಾಶ್ಚರ್ಯ ಮಗ್ನನಾದನು. ಮಗಳೂ ಅಳಿಯನೂ ಆತನನ್ನು ಕೋಟೆಯೊಳಗಡೆ ಪ್ರವೇಶಗೊಳ್ಳಲವಕಾಶಕೊಡದೆ, ತಾವು ಆ ಕೋಟೆಯನ್ನು ಆಕ್ರಮಿಸಿರುವರೆಂಬುದರ ಪರಿಚಯವು ಆತನಿಗಾಗಬೇಕೆಂಬುದಕ್ಕಾಗಿ ಕೋಟೆಯ ಮೇಲ್ಗಡೆಯಿಂದ ಫಿರಂಗಿ ಗುಂಡುಗಳನ್ನು ಹಾರಿಸಿದರು. ಪೂರ್ವದ ರಾಜವಂಶೀಕನಾದ ರಾಣಾಹಮೀರಸಿಂಹನು ಚಿತ್ತೂರು ಕೋಟೆಯನ್ನು ಪುನಃ ಆಕ್ರಮಿಸಿದನೆಂದು, ಎಲ್ಲಾ ಸ್ಥಳದಲ್ಲೂ ಜನಗಳು ಹೇಳಿಕೊಳ್ಳತೊಡಗಿದರು.

ತನ್ನ ರಾಜಧಾನಿಯು ಮಗಳು ಅಳಿಯನಿಂದ ಆಕ್ರಮಿಸಲ್ಪಟ್ಟು, ತಾನು ತನ್ನ ಸ್ವಂತ ಮನೆಯಿಂದಲೇ ಬಹಿಷ್ಕೃತನಾಗಿದ್ದ ಈ ಸ್ಥಿತಿಯು ಮಾಲ್ದೇವನಿಗೆ ಬಹು ಚಿಂತಾಜನಕವಾಯಿತು. ತನ್ನ ಸೈನಿಕರು ಮಂತ್ರಿಗಳು ಆಪ್ತರು ಮುಂತಾದವರ ಸಹಾಯದಿಂದ ಹಮೀರನಿಗೆ ವಿರೋಧವಾಗಿ ಯುದ್ಧವನ್ನು ಹೂಡೋಣವೆಂದು ಯೋಚಿಸಿದಲು, ಅವರೆಲ್ಲರೂ ಮೇಲ್ನಂಡಂತೆ ಒಂದಲ್ಲ ಒಂದು ಬಗೆಯಿಂದ ಅವನ ಪಕ್ಷವನ್ನೇ ವಹಿಸಿದ್ದರೆಂಬುದು ತಿಳಿಯಬಂದಿತು. ಮುಂದೇನು ಮಾಡಬೇಕೆಂದು ತೋರದೆ, ಮಾಲ್ದೇವನು ನೇರವಾಗಿ ದಿಲ್ಲಿಗೆ ನಡೆದು, ತನಗೆ ಪ್ರಾಪ್ತವಾಗಿದ್ದ ದುರವಸ್ಥೆವನ್ನು ಸಾಮ್ರಾಜ್ಯ ಪ್ರಭುತ್ವದವರಲ್ಲಿ ವಿಜ್ಞಾಪಿಸಿಕೊಂಡನು. ದಿಲ್ಲಿಯಲ್ಲಿ ಆಗ ಅಲ್ಲಾವುದ್ದೀನನ ತರುವಾಯ ಗಾದಿಯನ್ನೇರಿದ್ದ ಮಹಮ್ಮದ್ ಖಿಲ್ಜೀ ಎಂಬುವನು ಪ್ರಭುವಾಗಿದ್ದನು. ಸಾಮಂತನಾದ ಮಾಲ್ದೇವನ ಪ್ರಾರ್ಥನೆಯನ್ನು ಕೇಳಿ, ಹಮೀರನ ಮೇಲೆ ದಂಡೆತ್ತಿಹೋಗಬೇಕೆಂದು ಖಿಲ್ಜೀ ಮಹಮ್ಮದನು ತನ್ನ ಸೇನೆಗೆ ಆಜ್ಞೆಮಾಡಿದನು. ಇತ್ತ, ಹಮೀರನು ಪಿತ್ರಾರ್ಜಿತವಾದ ಚಿತ್ತೂರು ಕೋಟೆಯಮೇಲೆ ತಮ್ಮ ವಂಶಲಾಂಛನವಾದ ಸುವರ್ಣ ಸೂರ್ಯ

ಧ್ವಜವನ್ನು ನಾಟಿದನೆಂಬ ವಾರ್ತೆಯು ತಲುಪಿದೊಡನೆಯೇ, ಅಲ್ಲಲ್ಲಿ ಪ್ರಾಣ ಭಯದಿಂದ ಅವಿತುಕೊಂಡಿದ್ದ ಹಲವು ಮಂದಿ ರಜಪೂತಯೋದ್ಧರೂ, ಕಮಲಮೇರು ದುರ್ಗದ ಪ್ರಾಂತದಲ್ಲಿ ವಾಸಿಸಿದ್ದ ಶೂರ ರಜಪೂತರೂ ಹೀಗೆ ಹಲವು ಸಹಸ್ರಮಂದಿ ರಜಪೂತ ಸೈನ್ಯವು ಬಂದು ರಾಣಾನಬಳಿ ಸೆರೆಯಿತು. ಮಹಮ್ಮದನು ತನ್ನ ಸೈನ್ಯ ಸಮೇತನಾಗಿ, ಮೇವಾರು ರಾಜ್ಯದ ಮೇಲೆ ಏರಿ ಬರುತ್ತಿದ್ದಾನೆಂಬ ವಾರ್ತೆಯು ತಿಳಿದೊಡನೆಯೇ, ಹಮೀರನು ತನ್ನ ಶಿಕ್ಷಿತನಾದ ಸೈನ್ಯದೊಂದಿಗೆ ಕೋಟೆಯಿಂದ ಹೊರಬಿದ್ದು ನಡೆದು, ಆ ತುರುಷ್ಕ ಸೈನ್ಯವನ್ನು ಮಾರ್ಗದಲ್ಲೇ ಸಂಧಿಸಿ, ಭಯಂಕರವಾದ ಯುದ್ಧ ಮಾಡಿದನು. ಡಿಲ್ಲಿಯ ಸೈನ್ಯವು ಸಂಪೂರ್ಣವಾಗಿ ಸೋತುಹೋಯಿತು. ಮಾಲ್ದೇವನ ಮಗನಾದ ಹರಿಸಿಂಗ್ ಎಂಬಾತನು ಹಮೀರಸಿಂಹನಿಂದ ಹತನಾದನು. ವನವೀರನು ಶರಣಾಗತನಾಗಿ ಹಮೀರನ ಬಳಿಯಲ್ಲೇ ಉದ್ಯೋಗವನ್ನು ಸ್ವೀಕರಿಸಿ ಬದುಕಿಕೊಂಡನು. ಬಿಲ್ಜೀ ಮಹಮ್ಮಗನು, ರಾಣಾನ ಪ್ರತಾಪಕ್ಕೆ ಬಲಿಬಿದ್ದು ಮೂರುತಿಂಗಳ ಕಾಲ ಚಿತ್ತೂರಿನ ಸೆರೆಮನೆಯಲ್ಲಿ ನರಳಿ, ತರುವಾಯ ಅಜ್ಮೀರ್ ರಿಂಥಬೋರ್ ನಾಗೂರ್ ಮತ್ತು ಸೂಯಸೊಪೂರ್ ಎಂಬ ನಾಲ್ಕು ಪ್ರಾಂತಗಳನ್ನೂ ಐವತ್ತುಲಕ್ಷ ರೂಪಾಯಿಗಳು ಮತ್ತು ನೂರು ಆನೆಗಳನ್ನೂ ಕಾಣಿಕೆಯಾಗಿ ಅರ್ಪಿಸಿ, ಅಲ್ಲಿಂದ ಬಿಡುಗಡೆಯಾಗಿ ತನ್ನ ರಾಜ್ಯವನ್ನು ಕುರಿತು ಪ್ರಯಾಣಮಾಡಿದನು.

ಪ್ರಜಾನುರಾಗವನ್ನು ಗಳಿಸಿದ್ದ ಆತನ ಸೇನೆಗೆ ಜನಗಳು ಮಹೋತ್ಸಾಹದಿಂದ ಸಾವಿರಸಾವಿರವಾಗಿ ಬಂದು ಸೇರಲು ಸೈನ್ಯವು ಬಹುಬೇಗನೇ ಪ್ರಬಲವಾಯಿತು. ಆ ಸೇನೆಯನ್ನು ತೆಗೆದುಕೊಂಡು ಆತನು ಶತ್ರುಸಂಹಾರಕ್ಕೆ ಉದ್ಯುಕ್ತನಾಗಲು ಒಬ್ಬರ ಹಿಂದೆ ಒಬ್ಬರಂತೆ ರಾಜರೆಲ್ಲರೂ ಆತನಿಗೆ ಅಧೀನರಾದರು. ಮಾಲ್ದೇವನ ಮಕ್ಕಳಲ್ಲೊಬ್ಬನು, ಆತನಿಗೆ ವಿರೋಧಿಯಾಗಿ ಮರಣಕ್ಕೀಡಾದನು. ಮತ್ತೊಬ್ಬ ಮಗನು ಆತನಿಗೆ ವಿಧೇಯನಾಗಿದ್ದುಕೊಂಡು, ಆತನ ಮಹಾಸೈನ್ಯದಲ್ಲಿ ಸೇನಾಪತಿಯಾಗಿ ಸ್ವಲ್ಪ ದೇಶವನ್ನು ಜಯಿಸಿ ಆತನಿಗೆ ಒಪ್ಪಿಸಿದನು. ಚಿತ್ತೂರಿನಲ್ಲಿದ್ದ ಡಿಲ್ಲಿ ಚಕ್ರವರ್ತಿಯ ಸೈನಿಕರು ಆತನ ಪರಿವಾರದೊಂದಿಗೇ ಜಿರೆತುಹೋದರು. ಮಾರ್ವಾರ ಜಯಪುರ, ಗ್ವಾಲಿಯರ್, ಚಾಂಡೇರಿ, ಸಿಕ್ರಿ, ಕಾಲ್ಪಿ ಮುಂತಾದ ಹಲವು ಸ್ವ

ದೇಶೀಯ ರಾಜರು ಅದುವರೆಗೇ ಆತನಿಗೆ ಅಧೀನರಾಗಿದ್ದರು. ಮೇವಾರು ದೇಶಕ್ಕೂ-ಚಿತ್ತೂರು ನಗರಕ್ಕೂ ಮತ್ತೊಂದುವೇಳೆ ಹಿಂದಿನ ಆ ಮಹೋನ್ನತದೆಸೆಯು ಪ್ರಾಪ್ತವಾಗಿ ಅವು ಕಂಗೊಳಿಸಹಾಗಿದುವು. ಮೇಲ್ಕಂಡಂತೆ ಡಿಲ್ಲಿಯಲ್ಲಿ ಶಕ್ತನಾಗಿದ್ದ ಅಲ್ಲಾವುದ್ದೀನನು ಮೃತನಾಗಿ, ಆ ರಾಜಧಾನಿಯು ಅನೇಕ ಸಂಕ್ಷೋಭಗಳ ಪಾಲಾಗಿ ಹೀಗೆ ತನ್ನ ಅವಸ್ಥೆಯೇ ಅಸಹನೀಯವಾಗಿರುತ್ತಿರಲು, ಸ್ವತಂತ್ರಗೊಂಡ ವಿದೇಶಗಳಕಡೆಗೆ ಅದು ತಿರುಗಿ ನೋಡಲೂ ಧೈರ್ಯಗೊಳ್ಳದೆ ಇದ್ದಿತು. ಹೀಗೆ ಸುಸಂದರ್ಭಗಳೊದಗಲು, ಹಮೀರಸಿಂಹನ ಪಾಲನೆಗೊಳಪಟ್ಟ ಮೇವಾರು ರಾಜ್ಯವು, ಅತಿಶಯ ಅಭಿವೃದ್ಧಿಗೊಂಡಿತು.

ಚಿತ್ತೂರು ಸಿಂಹಾಸನದಲ್ಲಿ ಸುಪ್ರತಿಷ್ಠಿತನಾದ ಹಮೀರಸಿಂಹನು ಹಿಂದೆ ತುರುಷ್ಕರು ಮಾಡಿದ ದುಷ್ಕಾರ್ಯಗಳ ಫಲವಾಗಿ, ನಾಶವಾದ ಆ ನಗರದ ಅಗಣಿತಸಂಪತ್ತನ್ನೂ, ಅದಕ್ಕೆ ಪ್ರಾಪ್ತವಾದ ಹಾನಿಯನ್ನೂ ಕುರಿತು ಬಹು ದುಃಖಿಸಿ, ಸಾಧ್ಯವಿದ್ದಮಟ್ಟಿಗೂ ಅವುಗಳನ್ನು ಜೀರ್ಣೋದ್ಧಾರಗೊಳಿಸಬೇಕೆಂದು ಸಂಕಲ್ಪಿಸಿದನು. ಪದ್ಮಿನೀ ಮರಣಾನಂತರ, ಅಲ್ಲಾವುದ್ದೀನನು, ಅಲ್ಲಿಯ ಅನುಪಮೇಯಸಂಪತ್ತಿನಲ್ಲಿ ತಾನು ತೆಗೆದುಕೊಂಡು ಹೋಗುವಷ್ಟನ್ನು ಸಾಗಿಸಿ, ಹೊತ್ತೊಯ್ಯಲಾರದುದನ್ನು ನಾಶಗೊಳಿಸಿ, ಎಂತಹ ದ್ರವ್ಯಭಾಂಡಾರವನ್ನಂತೂ ಸಂಪೂರ್ಣವಾಗಿ ಕೊಳ್ಳೆಹೊಡೆದು ಡಿಲ್ಲಿಗೆ ಸಾಗಿಸಿದ್ದನು. ರಾಣಾನು, ಕೈಮೀರಿಹೋಗಿದ್ದ ಆ ಅಮೌಲ್ಯಾಭರಣಗಳಿಗಾಗಿಯೂ, ಅಮಿತೈಶ್ವರ್ಯಕ್ಕಾಗಿಯೂ, ಅಷ್ಟುಮಟ್ಟಿಗೆ ವಿಚಾರಪಡಲಿಲ್ಲವಾದರೂ, ತಾನು ಕೋಟೆಯಲ್ಲಿ ಕಾಲಿಟ್ಟಾಗಿನಿಂದ, ಪೂರ್ವಾರ್ಜಿತವೂ ಅತ್ಯಪೂರ್ವವೂ ಆದ ಒಂದು ವಸ್ತುವಿಗಾಗಿ ಮಾತ್ರ ಚಿಂತಾಕ್ರಾಂತನಾಗಿದ್ದನು. ಅದಾವುದೆಂದರೆ, ಪೂರ್ವದಲ್ಲಿ ಜಗನ್ಮಾತೆ ಭವಾನಿಯು ವಂಶಕರ್ತನಾದ ಬಪ್ಪಾರಾವಳನಿಗೆ ಅನುಗ್ರಹಿಸಿಕೊಟ್ಟಿದ್ದುದೂ, ವಿಶ್ವಕರ್ಮನಿರ್ಮಿತವಾದುದೂ, ಎರಡು ಕಡೆಯೂ ಹರಿತವಾಗಿದ್ದುದೂ ಆದ ಮಹಾಖಡ್ಗವೊಂದು. ಅದು ಎಲ್ಲಿದ್ದಿತೆಂಬುದು ಯಾರಿಗೂ ತಿಳಿಯದಿದ್ದರೂ, ಲೋಕಮಾತೆಯು ಆ ಖಡ್ಗವನ್ನು ಮಾತ್ರ ಗೋಹಂತಕರಾದ ತುರುಷ್ಕರ ಪಾಲಾಗದಂತೆ ಎಲ್ಲೋ ಅಡಗಿಸಿಟ್ಟಿರಬಹುದೆಂದು ಆತನು ನಂಬಿದ್ದನು. ಅದು ಚಿತ್ತೂರುಮುತ್ತಿಗೆ

ಯಲ್ಲಿ ಎಲ್ಲೋ ಅದೃಶ್ಯವಾಗಿ, ಪದ್ಮಿನಿಯಂತೆಯೇ ಅದೂ ಶಾಶ್ವತವಾಗಿ ನಾಶ ವಾಯಿತೆಂದು ಜನರು ಹೇಳಿಕೊಳ್ಳುತ್ತಿದ್ದರು. ಆದರೂ, ತನ್ನ ವಿಷಯದಲ್ಲಿ ಪರಮಾನುಗ್ರಹಮಾಡಿ ರಾಜ್ಯಪ್ರದಾನ ಮಾಡಿದ ಆ ದೇವತೆಯು ಆ ಖಡ್ಗ ವನ್ನಾದರೂ ಪ್ರಸಾದಿಸದೆ ಇರಲಾರಳೆಂದು ನಂಬಿ ಆ ರಾಜಪುತ್ರನು ಅಲ್ಲಿದ್ದ ಸಕಲ ಗ್ರಾಮದೇವತೆಗಳನ್ನೂ ಮುಖ್ಯವಾಗಿ ಆ ನಗರ ಸಮೀಪದಲ್ಲಿನ ವ್ಯಾಘ್ರಗಿರಿಯಲ್ಲಿ ನೆಲೆಸಿದ್ದ ಚಾರಣೀ ದೇವಿಯನ್ನೂ ಅತಿಶಯ ಭಕ್ತಿಶ್ರದ್ಧೆ ಗಳಿಂದ ಪ್ರಾರ್ಥಿಸುತ್ತಿದ್ದನು. ಹೀಗೆ ಕೆಲವು ದಿನಗಳು ಕಳೆಯಲು ಆ ದೇವ ತೆಯು ಆತನಿಗೆ ಪ್ರತ್ಯಕ್ಷಳಾಗಿ,-'ಆ ಖಡ್ಗವು ಅಂತಃಪುರಕ್ಕೆ ಕೆಳಗಡೆಯಿರುವ ನೆಲಕೋಟೆಯಲ್ಲಿ ಇದೆ, ತೆಗೆದುಕೋ' ಎಂದು ಹೇಳಿದಳು.

ಚಿತ್ತೂರಿನ ರಾಜಪತ್ನಿ ರಾಜಪುತ್ರಿಯರೂ, ರಜಪೂತ ಸ್ತ್ರೀರತ್ನಗಳೂ ಅಗ್ನಿದಗ್ಧರಾದಾಗಿನಿಂದ ಈವರೆಗೂ ಮನುಷ್ಯಮಾತ್ರನಾರೂ ಸಾಹಸಮಾಡಿ. ಆ ಸುರಂಗ ಮಾರ್ಗವನ್ನು ಪ್ರವೇಶಿಸಿದುದಿಲ್ಲ. ಸತ್ತವರ ಆತ್ಮಗಳು ಅಲ್ಲಿಯೇ ನೆಲೆಸಿ ರೋದಿಸುತ್ತಿರುವುವೆಂದೂ, ಆ ಗುಹಾದ್ವಾರದಲ್ಲೊಂದು ಮಹಾ ಸರ್ಪವು ಬುಸುಗುಟ್ಟುತ್ತಾ ಕುಳಿತಿದ್ದು ಯಾರನ್ನೂ ಬಳಿ ಸೇರಲೀಯದಂತೆ ಕಾದಿದೆಯೆಂದೂ ಜನರು ಬಹು ಭಯಂಕರಗಳಾದ ಕಥೆಗಳನ್ನು ಹೇಳಿಕೊ ಳ್ಳುತ್ತಿದ್ದರು. ಆದರೂ, ಇನ್ನೂ ಕುಡಿಮೀಸೆ ಬಾರದ ಮುಂಚೆಯೇ ಮಹಾ ಸಾಹಸಕಾರ್ಯಗಳನ್ನು ಮಾಡಿದ್ದ-ಭಯವೆಂದರೇನೆಂದು ಅರಿಯದಿದ್ದ ಶೂರ ಹಮೀರನು, ಆ ಕಥೆಗಳಿಗೆ ಬೆದರದೆ, ದೆವ್ವಗಳಿರಲಿ ದೇವತೆಗಳಿರಲಿ, ಹಾವುಗ ಳಿರಲಿ ಕೊನೆಗೆ ಯಮನೇ ಇರಲಿ, ಗುಹೆಯ ಒಳಹೊಕ್ಕು ಖಡ್ಗವನ್ನು ತರ ತಕ್ಕುದೇ ಸರಿ ಎಂದು ಸಂಕಲ್ಪಿಸಿ ಆ ಕಾರ್ಯಕ್ಕೆ ಸಿದ್ಧನಾದನು.

ಹಾಗೆ ನಿಶ್ಚಯಿಸಿ, ಶೂರ ಶಿಖಾಮಣಿ ಹಮೀರನು, ಸೂರ್ಯರಶ್ಮಿ ಯನ್ನು ಸಹ ಕಂಡರಿಯದಿದ್ದ ಮಹಾಂಧಕಾರಮಯವಾಗಿದ್ದ ಆ ಗುಹೆಯ ನ್ನು ಪ್ರವೇಶಿಸಿ, ಗೋಡೆಯನ್ನು ಹಿಡಿದು ತಡವರಿಸುತ್ತಾ, ಒಳಕ್ಕೊಳಕ್ಕೆ ನಡೆದು ಹೋಗತೊಡಗಿದನು. ಆಗ ಅವನಮೇಲೆ ಏನೋ ಗುಂಪುಗುಂಪಾಗಿ ಬಿದ್ದಂತೆ ಬೋಧವಾಗುತ್ತಿದ್ದಿತು. ಅವೇನು ? ಬಾವಲಿಗಳೋ, ಅಥವ ದೆವ್ವ ಗಳೋ ತಿಳಿಯಲಾರದೆ, ತಾನು ತುಳಿದುಕೊಂಡು ಹೋಗುತ್ತಿದ್ದುವುಗಳು ತನ್ನ ತಾಯಿಯರ ದೇಹಾಸ್ಥಿಪಂಜರವೋ ಅಥವ ಇತರ ರಾಜಾಂಗನೆಯರ

ಅಸ್ಥಿಪಂಜರಗಳೋ ಗುರುತಿಸಲಾರದೆ, ತನ್ನ ಪೂರ್ವಿಕರಿಗೆ ಪ್ರಾಪ್ತವಾಗಿದ್ದ ದುರ್ಗತಿಗಾಗಿ ಅಗಾಧ ಪರಿತಾಪಪಡುತ್ತ, ಮೆಲ್ಲನೆ ಮುಂದುಮುಂದಕ್ಕೆ ನಡೆದುಹೋದನು. ಹಾಗೆ ಬಹುದೂರ ನಡೆದುಹೋದ ತರುವಾಯ ಕೊನೆಯಲ್ಲಿ ಚಿಕ್ಕದೊಂದು ಉರಿಯೂ, ಅದರಿಂದ ಹೊರಡುತ್ತಿದ್ದ ಹೊಗೆಯೂ ಕಾಣಿಸುತ್ತಿರಲು, ಅದರ ಸಮೀಪಕ್ಕೆ ಹೋಗಿ ಸೇರಿದನು. ಹತ್ತಿರಕ್ಕೆ ನಡೆದು ನೋಡಲು, ಆ ಆಶ್ಚರ್ಯವನ್ನು ಏನೆಂದು ವರ್ಣಿಸಬಹುದು! ಆ ಚಿಂತೆಯ ಸುತ್ತಲೂ, ಅರ್ಧ ಸರ್ಪದೇಹದಿಂದಲೂ ಅರ್ಧ ಮನುಷ್ಯದೇಹದಿಂದಲೂ ಕೂಡಿ ವಿಕೃತಾಂಗಿಗಳಾಗಿದ್ದ ಕೆಲವು ಸ್ತ್ರೀ ವಿಗ್ರಹಗಳು ಕಾಣಿಸಿದುವು. ಅವುಗಳನ್ನು ನೋಡುತ್ತಾ ಆಶ್ಚರ್ಯಮಗ್ನನಾಗಿ ನಿಮಿಷಕಾಲ ಹಾಗೆಯೇ ನಿಂತುಕೊಂಡಿರಲು, ಕೇವಲ ಚಿತ್ರಪ್ರತಿಮೆಗಳಂತಿದ್ದ ಅವುಗಳಲ್ಲಿ ಒಂದು ಬಾಯ್ದೆರೆದು ಹಲ್ಕಿರಿದು ವಿಕಾರವಾದ ನೋಟದಿಂದ ಅವನನ್ನು ದಿಟ್ಟಿಸಿ—'ನೀನಾರು? ಇಲ್ಲಿ ನಿನಗೇನು ಕೆಲಸ? ನಮ್ಮ ವಿಹಾರಕ್ಕೂ ಉತ್ಸವಕ್ಕೂ ಭಂಗವನ್ನುಂಟುಮಾಡಲು ನೀನಿಲ್ಲಿಗೆ ಬಂದುದೇಕೆ?' ಎಂದು ಪ್ರಶ್ನಿಸಿತು. ನಿರ್ಜನವಾದ ಆ ಸ್ಥಳದಲ್ಲಿ ಏಕಾಂಗಿಯಾಗಿದ್ದರೂ, ಆ ಮಾತುಗಳನ್ನು ಕೇಳಿ ಬೆದರದೆ, ಹಮೀರನು, ಅಲ್ಲೇ ಇದ್ದ ಚಿಂತೆಯಮೇಲೆ ಹಾಕಿದ್ದ ಒಂದು ಪೀಠದಲ್ಲಿ ಕುಳಿತಿದ್ದ ಆ ದೆವ್ವಗಳ ಯಜಮಾನಿಯ ಬಳಿಗೆ ಹೋಗಿ—"ನಿಮ್ಮ ವಿಹಾರ-ಉತ್ಸವಾದಿಗಳನ್ನು ಕೆಡಿಸುವುದಕ್ಕಾಗಿ ನಾನಿಲ್ಲಿಗೆ ಬರಲಿಲ್ಲ. ವಿಶ್ವಕರ್ಮನಿರ್ಮಿತವೂ ಭವಾನಿಯಿಂದ ಅನುಗ್ರಹಿಸಲ್ಪಟ್ಟುದೂ, ನಮ್ಮ ವಂಶಕ್ಕೆ ರಕ್ಷಾಕರವಾದುದೂ ಆದ ನನ್ನ ಖಡ್ಗವನ್ನು ನನಗೆ ಕೊಟ್ಟರೆ, ನಾನು ಹೊರಟುಹೋಗುತ್ತೇನೆ" ಎಂದನು. ಆ ಹೊಗೆಯ ಮಧ್ಯದಲ್ಲಿ, ವಿಕಾರವೂ ಭಯಂಕರವೂ ಆದ ರೂಪಿನಿಂದಲೂ ವೇಷದಿಂದಲೂ ನೋಟದಿಂದಲೂ ತಲೆಯ ಕೂದಲನ್ನು ಬಿರಿ ಹಾಕಿಕೊಂಡು ಮೃತ್ಯುದೇವತೆಯ ಬಳಗವೋ ಎಂಬಂತೆ ಕಾಣಿಸುತ್ತಿದ್ದ ಆ ದೆವ್ವಗಳು, ಅವನೊಂದಿಗೆ ಮುಂದೆ ಮಾತನಾಡದೆ, ಅಲ್ಲೇ ಇದ್ದ ಒಂದು ದೊಡ್ಡ ಪಾತ್ರೆಗೆ ಮುಚ್ಚಿದ್ದ ಮುಚ್ಚಳವನ್ನು ತೆಗೆ ಎಂದು ಸನ್ನೆ ಮಾಡಿದುವು. ಹಮೀರನು ಬೆದರದೆ, ಆ ದೊಡ್ಡ ಪಾತ್ರೆಯ ಮುಚ್ಚಳವನ್ನು ಬಹುಪ್ರಯಾಸದಿಂದ ತೆರೆದು ಒಳಗೆ ನೋಡಿದನು. ಅದರಲ್ಲಿ ಏನಿತ್ತೆಂಬುದು ಆತನಿಗೆ ಮಾತ್ರವಲ್ಲದೆ ಬೇರೊಬ್ಬರಿಗೆ ತಿಳಿಯದು! ಆಗ

ಒಂದು ದೆವ್ವವು-ಪಕಪಕನೆಂದು ನಕ್ಕು, ಆ ಪಾತ್ರೆಯಲ್ಲಿ ಬೆಂದು ಕುದಿಯು ತ್ತಿದ್ದ ಪದಾರ್ಥದ ಸ್ವಲ್ಪ ಭಾಗವನ್ನು ಒಂದು ಸಟ್ಟುಗದಿಂದ ಎತ್ತಿ ಹಮೀ ರನ ಕೈಯಲ್ಲಿಟ್ಟು ಅದನ್ನು ತಿನ್ನೆಂದು ಹೇಳಿತು. ಹಮೀರನಾದರೂ ಲೇಶವೂ ಶಂಕಿಸದೆ, ಮರುಮಾತನಾಡದೆ ಅದನ್ನು ಭಕ್ಷಿಸಿದನು.

ಆತನ ಧೈರ್ಯ ಸಾಹಸಾದಿಗಳಿಗಾಗಿ ಮೆಚ್ಚಿಕೊಂಡ ಆ ಭೂತವರ್ಗವು ತರುವಾಯ ಅಲ್ಲೇ ಒಂದು ಮೂಲೆಯಲ್ಲಿಡಲ್ಪಟ್ಟಿದ್ದ-ಎರಡು ಅಂಚುಗ ಳನ್ನೂ ಹರಿತಗೊಳಿಸಿದ್ದ ಆ ಅಪೂರ್ವಖಡ್ಗವನ್ನು ತಂದು ಆತನ ಕೈಯಲ್ಲಿ ಕೊಟ್ಟು ಇನ್ನು ಹೋಗಬಹುದು ಎಂದು ಹೇಳಿತು. ಹಮೀರಸಿಂಹನು ಕೃತಕೃತ್ಯನಾಗಿ, ಹಿಂದಿನಂತೆಯೇ ವರ್ಣನಾತೀತವಾದ ಅಂಧಕಾರದಿಂದ ಕೂಡಿ, ಭಯಂಕರವೆನ್ನಿಸಿದ್ದ ಆ ಗುಹೆಯನ್ನು ಬಹು ಜಾಗರೂಕತೆಯಿಂದ ದಾಟಿ ಹೊರಕ್ಕೆ ಬಂದು, ದೇವಶಿಲ್ಪಿ ವಿಶ್ವಕರ್ಮನಿರ್ಮಿತವಾದ ಆ ಖಡ್ಗ ವನ್ನು ಹಸ್ತದಲ್ಲಿ ಧರಿಸಿ, ತನ್ನ ಪರಿವಾರದವರ ಕಣ್ಣುಗಳಿಗೆ ಹಬ್ಬವನ್ನುಂಟು ಮಾಡಿ, ಆ ಖಡ್ಗಸಹಾಯದಿಂದ ಶತ್ರುವರ್ಗಕ್ಕೆ ಯಮಸ್ವರೂಪನಾಗಿದ್ದು ಮೀವಾರು ರಾಜ್ಯವನ್ನು ಚಿರಕಾಲ ಧರ್ಮದಿಂದ ಪಾಲಿಸಿದನು. ಮುಂದೆ ವೃದ್ಧಾಪ್ಯವು ಪ್ರಾಪ್ತವಾಗಲು, ತನ್ನ ಭುಜಬಲದಿಂದ ಸಂಪಾದಿಸಿ ರಕ್ಷಿ ಸಿದ್ದ ಆ ಅಖಂಡ ರಾಜ್ಯವೈಭವವನ್ನೂ, ಅಗಣಿತ ಸಂಪತ್ತನ್ನೂ ತನ್ನ ಏಕ ಮಾತ್ರಪುತ್ರನಿಗೆ ವಹಿಸಿ ಸರ್ವಜನವಂದಿತನಾಗಿ ದಿವಂಗತನಾದನು. ರಾಣಾ ಹಮೀರಸಿಂಹನ ನಾಮವು ಮೀವಾರಿನಲ್ಲಿ ಇನ್ನೂ ಪ್ರತಿಮನೆಯ ಮಾತಾಗಿ ಉಳಿದಿದೆ. ಮೀವಾರುದೇಶವನ್ನು ಪಾಲಿಸಿದ ರಜಪೂತ ಪ್ರಭುಗಳಲ್ಲಿ ಹಮೀರನ ನಾಮವು ಅತ್ಯಧಿಕ ಶೌರ್ಯ ಧೈರ್ಯಸಂಪನ್ನನೆಂದೂ, ಉತ್ತಮ ರಾಜನೀತಿಜ್ಞನೆಂದೂ ಚರಿತ್ರಪ್ರಸಿದ್ಧವಾಗಿ ಬಹುಕಾಲ ನಿಲ್ಲಲು ಅರ್ಹವಾಗಿ ರುವುದು.

# ರಾಣಾ ಖೆಯ್ತ್‌ಸಿಂಹ - ಲಖು ರಾಣಾ

ರಾಣಾ ಹಮೀರನನ್ನು ಆತನ ಏಕಮಾತ್ರಪುತ್ರನಾದ ಖೆಯ್ತ್‌ಸಿಂಹನೆಂಬಾತನು ಕ್ರಿ. ಶ. ೧೩೬೪ರಲ್ಲಿ ಹಿಂಬಾಲಿಸಿದನು. ಖೆಯ್ತ್‌ಸಿಂಹನು ತನ್ನ ತಂದೆಯಾದ ಹಮೀರನಿಗೆ ತಕ್ಕ ಮಗನು. ಸಿಂಹದ ಉದರದಲ್ಲಿ ಉದಿಸಿದ ಸಿಂಹ ಕಿಶೋರದಂತೆಯೇ ಹಮೀರನ ಮಗನೂ ಪರಾಕ್ರಮ ಧುರ್ಯನಾಗಿ, ಅಜ್ಮೀರ್ ಜಹಜಪುರ್ ಮಂಡಲ್‌ಘರ್ ದಸ್ಸೂರ್ ಮುಂತಾದ ಪ್ರಾಂತಗಳನ್ನು ಜಯಿಸಿ ಮೇವಾರು ರಾಜ್ಯಾಧಿಪತ್ಯಕ್ಕೆ ಸೇರಿಸಿದನು. ಮಾತ್ರವಲ್ಲ-ಅಗಾಧ ಪರಾಕ್ರಮಿಯಾದ ಈತನು, ಡೆಲ್ಲಿ ಚಕ್ರವರ್ತಿಯಾದ ಹುಮಾಯೂನನಮೇಲೆ ಯುದ್ಧಮಾಡಿ ವಿಜಯಿಯಾದನು. ಈತನು ಇನ್ನೂ ಬಹುಕಾಲ ಬದುಕಿ ರಾಜ್ಯವನ್ನು ವಿಸ್ತರಿಸಬಹುದಾಗಿದ್ದಿತು. ಆದರೆ ಬನೋದ ಸಂಸ್ಥಾನದ ಅಧಿಪತಿಯಾದ ಹರನ ಮಗಳನ್ನು ಅಪೇಕ್ಷಿಸಿ ತ ಸಂಬಂಧವಾಗಿ ನಡೆದ ವ್ಯವಹಾರದಲ್ಲಿ ಈತನು ದುರ್ಮರಣಕ್ಕೀಡಾಗಿ ಕೊಲ್ಲಲ್ಪಟ್ಟನು.

ಖೆಯ್ತ್‌ಸಿಂಹನ ಮರಣದಿಂದ ಆತನ ಮಗನಾದ ಲಖುರಾಣಾನು ಕ್ರಿ. ಶ. ೧೩೮೩ರಲ್ಲಿ ಚಿತ್ತೂರಿನ ಸಿಂಹಾಸನವನ್ನೇರಿದನು. ಈತನೂ ಧೀರನಾಗಿ ತನ್ನ ಪಿತೃಪಿತಾಮಹರಿಂದ ಸಂಪಾದಿತವಾಗಿ-ವಿಸ್ತರಿಸಲ್ಪಟ್ಟಿದ್ದ ಮೇವಾರು ರಾಜ್ಯವನ್ನು, ಪರರಾಜರ ಧಾಳಿಯಿಂದ ಬಹು ಸಮರ್ಥತೆಯಿಂದ ರಕ್ಷಿಸಿಕೊಂಡು ವಿಖ್ಯಾತನಾದನು. ಅಷ್ಟು ಮಾತ್ರವಲ್ಲ. ಈತನ ಕಾಲದಲ್ಲಿ ಮೇವಾರು ರಾಜ್ಯದಲ್ಲಿ ಇನ್ನೊಂದು ಮಹತ್ವದ ಕಾರ್ಯವು ಪ್ರಾರಂಭವಾಯಿತು. ಇದರಿಂದ ಲಖುರಾಣಾನ ಹೆಸರು ಶಾಶ್ವತವಾಯಿತು. ಈತನು, ಅಲ್ಲಿ ತಗರದ ಮತ್ತು ಬೆಳ್ಳಿಯ ಗಣಿಗಳನ್ನು ಕಂಡುಹಿಡಿದು, ಅವುಗಳನ್ನು ಅಗೆಯಿಸಿ ತೆಗೆಯಿಸಿದನು. ಈತನು, ಅಂಬರ್ ಬೇಡನೂರು ಮುಂತಾದ ಪ್ರಾಂತಗಳನ್ನೂ ಜಯಿಸಿದುದಲ್ಲದೆ, ಅನೇಕ ಸರೋವರಗಳನ್ನೂ ಕಾಲುವೆಗಳನ್ನೂ ತೋಡಿಸಿ, ವ್ಯವಸಾಯಕ್ಕೂ ಪಶುಪಾಲನೆಗೂ ವಿಶೇಷ ಅನುಕೂಲತೆಗಳನ್ನು ಕಲ್ಪಿಸಿದನು. ಆತನು ತನಗಾಗಿ ಕಟ್ಟಿಸಿದ ಬಹು ಸುಂದರವಾದ ಅರಮನೆಯು ಇನ್ನೂ ಶೋಭಿಸುತ್ತಲಿದೆ. ಅಲ್ಲದೆ, ವಿಶೇಷ ದ್ರವ್ಯ

ವ್ಯಯಮಾಡಿ, ಬ್ರಹ್ಮದೇವನ ದೇವಾಲಯವನ್ನು ಕಟ್ಟಿಸಿ ಶಿಲ್ಪವಿದ್ಯೆಗೂ ವಿಶೇಷ ಪ್ರೋತ್ಸಾಹವನ್ನಿತ್ತನು.

ಲಖ ರಾಣಾನ ಸಂತತಿಯವರು ಲೂನಾವತರು ದೂಲಾವತರು ಎಂಬ ಹೆಸರುಗಳಿಂದ ಅರಾವಳೀ ಪರ್ವತದ ಹಲವು ಪ್ರಾಂತಗಳನ್ನು ಆಕ್ರಮಿಸಿಕೊಂಡು ಪ್ರಸಿದ್ಧರಾಗಿ ಆಳುತ್ತಿದ್ದರು. ಆದರೆ ರಾಣಾನ ಜೀವಿತಕಾಲದಲ್ಲೇ ನಡೆದ ಒಂದಾನೊಂದು ಕಾರ್ಯದಿಂದ ಚಿತ್ತೂರಿನ ರಾಜಸಿಂಹಾಸನವು ಹಿರಿಯಮಗನಾದ ಚಂಡನಿಗೆ ತಪ್ಪಿ ಕಿರಿಯವನಾದ ಮೋಕುಳನಿಗೆ ಲಭಿಸುವಂತಾಯಿತು. ಜ್ಯೇಷ್ಠಪುತ್ರನು ಪಿತೃಸ್ಥಾನವನ್ನು ವಹಿಸುವ ಪದ್ಧತಿಯು ಕಾರಣಾಂತರದಿಂದ ತಪ್ಪಿದುದು, ಚಿತ್ತೂರು ರಾಜಮನೆತನಕ್ಕೆ ಅನರ್ಥ ಪರಂಪರೆಗಳನ್ನೇ ತಂದು ಒದಗಿಸಿತು.

ಸ್ತ್ರೀಜಾತಿಯ ಗೌರವಪಾಲನೆಯು ನಾಗರಿಕತೆಯ ಕುರುಹು ಎಂಬ ಭಾವನೆಯು ಸತ್ಯವೆನ್ನಿಸುವಂತಿದ್ದರೆ, ರಾಜಪುತ್ರನು ನಾಗರಿಕರಲ್ಲಿ ಮೊದಲನೆಯ ತರಗತಿಗೆ ಸೇರಲರ್ಹನು. ತನ್ನ ಕುಲಸ್ತ್ರೀಯರ ಮಾನಕ್ಕೆ ಲವಲೇಶ ಕುಂದುಂಟಾಯಿತೆಂದು ಅವನಿಗೆ ಬೋಧವಾದರೆ, ಒಡನೆ ರೋಷಭೀಷಣನಾಗಿ ಅವನು ತನ್ನ ಪ್ರಾಣವನ್ನಾದರೂ ಬಲಿಯಾಗಿ ಅರ್ಪಿಸಿ, ಆ ದ್ರೋಹಿಗೆ ತಕ್ಕ ಪ್ರತೀಕಾರ ಮಾಡದೆ ಬಿಡನು.

'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ' 'ಯಾವ ಸ್ಥಳದಲ್ಲಿ ಸ್ತ್ರೀಯರು ಗೌರವಿಸಲ್ಪಡುತ್ತಾರೋ, ಅಲ್ಲಿ ದೇವತೆಗಳು ನಲಿದಾಡುತ್ತ ಇರುವರು' ಎಂಬ ಮನುವಾಕ್ಯದಲ್ಲಿ ಅವನಿಗೆ ಅತಿಶಯ ನಂಬಿಕೆಯುಂಟು. ಈ ಅಭಿಮಾನ ರಕ್ಷಣಾಕಾರ್ಯವೇ ವಿಚಿತ್ರಸ್ವರೂಪವನ್ನು ಹೊಂದಿ, ರಾಠೋರರಿಗೂ ಕಚ್‌ವಾಹಾ ಕುಲದವರಿಗೂ ಪರಸ್ಪರ ದ್ವೇಷಭಾವವನ್ನು ತಂದಿಟ್ಟು-ಅಭಿವೃದ್ಧಿಗೊಳಿಸಿ-ಆ ಎರಡು ಕುಲಸ್ಥರೂ ಐಕಮತ್ಯದಿಂದ ಇದ್ದಾಗ್ಗೆ ಯಾವ ಮೊಗಲರನ್ನೂ ಮರಾಠರನ್ನೂ ಅಡಗಿಸಿ ಪಾದಾಕ್ರಾಂತರನ್ನಾಗಿಸಿದ್ದರೋ, ಈಗ ಅದೇ ಮೊಗಲ-ಮರಾಠರಿಗೆ ವಶವರ್ತಿಗಳಾಗಬೇಕಾಯಿತು. ರಜಪೂತರ ಅವನತಿಗೆ ಅವರವರಲ್ಲಿ ಹುಟ್ಟಿದ ದುರಭಿಮಾನಪೂರಿತವಾದ ಅಂತಃಕಲಹಗಳೇ ಮೂಲಕಾರಣವಲ್ಲದೆ, ಶತ್ರುರಾಜರ ಖಡ್ಗವಲ್ಲ.

ಲಖು ರಾಣಾನಿಗೆ ವಯಸ್ಸು ಗಳಿತವಾಗಿದ್ದಿತು. ಆತನ ಮಕ್ಕಳು ಮೊಮ್ಮಕ್ಕಳು, ಶಕ್ತರಾಗಿ ರಾಜ್ಯಾಧಿಪತ್ಯದಲ್ಲಿ ವಿವಿಧ ಸ್ಥಾನಗಳನ್ನಲಂಕರಿಸಿ ರಾಜ್ಯಭಾರಕ್ಕೆ ಆಧಾರಸ್ತಂಭರಾಗಿದ್ದರು. ಆ ಸಂದರ್ಭದಲ್ಲಿ ಒಂದಾನೊಂದು ದಿನ ಮಾರವಾಡದ ಅಧಿಪತಿಯಾದ ರಣಮಲ್ಲನು ತನ್ನ ಪುತ್ರಿಯನ್ನು, ಮೇವಾರದ ಯುವರಾಜ ಚಂಡನಿಗೆ ಕೊಟ್ಟು ಲಗ್ನಮಾಡಬೇಕೆಂದು ಅಪೇಕ್ಷಿಸಿ, ರಜಪೂತ ಪದ್ಧತಿಯಂತೆ, ಅರಿಶಿನವನ್ನು ಬಳಿದ ತೆಂಗಿನಕಾಯನ್ನು ರಾಜಸಭೆಗೆ ಕಳುಹಿಸಿದನು. ಮಾರವಾಡದ ಕನ್ಯಾಪಕ್ಷದ ರಾಯಭಾರಿಯು ಮೇವಾರಿನ ರಾಜಾಸ್ಥಾನವನ್ನು ತಲುಪಿದಾಗ, ಚಂಡನು ಸಭೆಯಲ್ಲಿ ಹಾಜರಿರಲಿಲ್ಲ. ವೃದ್ಧರಾಜನು ತನ್ನ ಪರಿವಾರಯುಕ್ತನಾಗಿ ಪೀಠದಲ್ಲಿ ಕುಳಿತು, ಅವರನ್ನು ಎದುರುಗೊಂಡು ಗೌರವಿಸಿ, ತನ್ನ ಮಗ ಚಂಡನು ಇನ್ನು ಸ್ವಲ್ಪ ಹೊತ್ತಿನಲ್ಲೇ ಬಂದು ಅದನ್ನು ಸ್ವೀಕರಿಸುವನೆಂದು ಹೇಳಿದನು. ಈ ಸಂದರ್ಭದಲ್ಲೇ ವೃದ್ಧರಾಣಾನು ವಿನೋದಕ್ಕಾಗಿ ತನ್ನ ನರೆತ ಮೀಸೆಯ ಮೇಲೆ ಕೈಯಾಡಿಸಿಕೊಳ್ಳುತ್ತಾ–'ಅಂತಹ ಪ್ರಾಯಸ್ಥ ರಾಜಕುಮಾರರಿಗಲ್ಲದೆ ನನ್ನಂಥ ಗಡ್ಡ ನರೆತ ವೃದ್ಧನಿಗೆ ವಿವಾಹಾಂಗ ನಾರಿಕೇಳ ಫಲವನ್ನು ಕೊಟ್ಟೀರಾ–ಕುಳಿತುಕೊಳ್ಳಿ, ಈಗ ಬಂದು ಚಂಡನು ಅದನ್ನು ಸ್ವೀಕರಿಸುತ್ತಾನೆ' ಎಂದನು. ಇದು ಕೇವಲ ವಿನೋದಕ್ಕಾಗಿ ಅಂದದ್ದಲ್ಲದೆ ಬೇರಲ್ಲ! ಆದರೆ ಈ ಮಾತೇ ಸಭೆಯವರಲ್ಲಿ ಬಹು ವಿನೋದಕಾರಣವಾಗಿ ಎಲ್ಲರ ಬಾಯಲ್ಲೂ ಪುನರಾವರ್ತನೆಯನ್ನು ಹೊಂದುತ್ತಾ, ಚಂಡನು ಬಂದ ತಲುವಾಯ ಅವನ ಕಿವಿಗೂ ಬಿದ್ದಿತು. ಆ ಮಾತನ್ನು ಕೇಳಿದೊಡನೆಯೇ ಚಂಡನು, ತನ್ನ ತಂದೆಯು ವಿನೋದಕ್ಕಾಗಿಯಾದರೂ ಅಪೇಕ್ಷಿಸಿದ ಆ ವಸ್ತುವನ್ನು ತಾನು ಗ್ರಹಿಸುವುದು ಧರ್ಮವಿರುದ್ಧವೆಂದು ಭಾವಿಸಿ, ಆ ಕನ್ಯೆಯು ತನಗೆ ಮಾತೃಸ್ವರೂಪಿಣಿಯಾದುದರಿಂದ ತಾನು ಆಕೆಯನ್ನು ವರಿಸಲಾರೆನೆಂದು ಹೇಳಿಬಿಟ್ಟನು. ಚಂಡನ ಈ ನಿರ್ಧಾರವು ರಣಮಲ್ಲನಿಗೆ ಬಹು ನಿರಾಶಾಜನಕವಾಗುವುದೆಂದು ತಿಳಿಯಹೇಳಲು ಪ್ರಯತ್ನಿಸಿದ ರಾಣಾನ ಮಾತುಗಳೆಲ್ಲವೂ ನಿರರ್ಥಕವಾದುವು. ಚಂಡನು ತನ್ನ ನಿಶ್ಚಯವನ್ನು ಬಿಡಲಿಲ್ಲ. ಕೊನೆಗೆ ಲಖುರಾಣಾನೇ ಆ ಕನ್ಯೆಯನ್ನು ವಿವಾಹವಾಗತಕ್ಕದೆಂದು ನಿರ್ಧರವಾಯಿತು. ಆದರೆ ಅದಕ್ಕೆ ಮೊದಲು ರಾಣಾನು, ತನಗೆ

ಆ ಕನ್ಯೆಯಲ್ಲಿ ಸಂತಾನವಾಗುವುದಾದರೆ, ಚಂಡನು ರಾಜಸಿಂಹಾಸನದ ಹಕ್ಕು ದಾರಿಯನ್ನು ಬಿಟ್ಟು, ಆ ರಾಜಪುತ್ರನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಅವನಿಗೆ ಪೋಷಕನಾಗಿರಲು ಒಪ್ಪಬೇಕೆಂದು ಅಪೇಕ್ಷಿಸಿದನು. ಧೀರನಾದ ಚಂಡ ನಾದರೋ ಅದಕ್ಕು ಹಿಂದೆಗೆಯದೆ ಕುರುಪಿತಾಮಹನಾದ ಭೀಷ್ಮನಂತೆ ತಾನೂ ಆಜನ್ಮವೂ ಬ್ರಹ್ಮಚಾರಿಯಾಗಿಯೇ ಉಳಿದು, ತನ್ನ ಬಲತಮ್ಮನಿಗಾಗಿ ರಾಜಸಿಂಹಾಸನವನ್ನು ಬಿಟ್ಟುಕೊಡುವೆನೆಂದು ಕುಲದೇವತೆ ಏಕಲಿಂಗ ಸ್ವಾಮಿಯ ಸಾಕ್ಷಿಯನ್ನಿಟ್ಟುಕೊಂಡು ಪ್ರಮಾಣಮಾಡಿದನು. ತಂದೆಯ ವೃದ್ಧಾಪ್ಯದ ಚಪಲವನ್ನು ತೀರಿಸುವುದಕ್ಕಾಗಿ ಯೌವನಸ್ಥನಾದ ತಮ್ಮ ರಾಜ ಪುತ್ರನು ಮಾಡಿದ ಈ ಘೋರಪ್ರತಿಜ್ಞೆಯನ್ನು ಕೇಳಿ ಸಭೆಯವರೂ, ರಾಜ್ಯ ದವರೂ ಪರಮಕೌತುಕಮಗ್ನರಾದರು.

ಲಖು ರಾಣಾನು ಮಾರವಾಡದ ರಾಜಪುತ್ರಿಯನ್ನು ವಿವಾಹವಾದನು. ಈ ಸಂಬಂಧದಿಂದ ಜನಿಸಿದ ರಾಜಪುತ್ರನೇ ಮೋಕುಳನು. ಈ ಪುತ್ರನಿಗೆ ಐದನೆಯ ವರ್ಷಪ್ರಾಯವು ನಡೆಯುತ್ತಿದ್ದಾಗ, ರಾಣಾನು ಗಯಾಕ್ಷೇತ್ರಕ್ಕೆ ಮುತ್ತಿಗೆ ಹಾಕಿದ ಯವನಸೈನ್ಯಗಳನ್ನು ಓಡಿಸಿ, ಆ ಕ್ಷೇತ್ರದ ಪಾವಿತ್ರ್ಯತೆ ಯನ್ನು ರಕ್ಷಿಸುವುದಕ್ಕಾಗಿ ಸೈನ್ಯದೊಂದಿಗೆ ಹೊರಟು, ಘೋರಯುದ್ಧ ಮಾಡಿ, ಹಲವು ಸಹಸ್ರ ಶತ್ರುಸೈನ್ಯವನ್ನು ವಧಿಸಿದನಲ್ಲದೆ, ತಾನೂ ರಣ ದೇವತೆಗೆ ತಲೆಯನ್ನು ತೆತ್ತನು. ರಜಪೂತರಿಗೆ ವೃದ್ಧಾಪ್ಯವು ಪ್ರಾಪ್ತವಾಗಿ, ಮರಣಕಾಲವು ಸಮೀಪಿಸುತ್ತಿದೆಯೆಂದು ತಿಳಿದಾಗ್ಗ ಅವರು, ಧರ್ಮ ಯುದ್ಧದಲ್ಲಿ ಶತ್ರುದಳದೊಂದಿಗೆ ಹೋರಾಡುತ್ತ ದೇಹಬಿಡಲು ಬಯಸಿ ಹೊರಕ್ಕೆ ಹೊರಡುವರಲ್ಲದೆ, ಮನೆಯಲ್ಲಿ ಮಲಗಿ ಪ್ರಾಣಬಿಡಲು ಇಷ್ಟ ಪಡರು. ಈ ಪದ್ಧತಿಯನ್ನನುಸರಿಸಿಯೇ, ಧರ್ಮರಕ್ಷಣಾಕಾರ್ಯಕ್ಕಾಗಿ ಪ್ರಾಪ್ತವಾದ ಧರ್ಮಯುದ್ಧದಲ್ಲೇ ತನ್ನ ದೇಹದ ರಕ್ತವನ್ನು ಸುರಿದು, ರಾಣಾನು ವೀರಸ್ವರ್ಗವನ್ನು ಗಳಿಸಿಕೊಂಡನು. ಯುದ್ಧಕ್ಕಾಗಿ ಹೊರಡು ವುದಕ್ಕೆ ಮುಂಚಿತವಾಗಿಯೇ, ರಾಜಸಿಂಹಾಸನದ ವಿಚಾರವನ್ನು ಇತ್ಯರ್ಥ ಗೊಳಿಸುವುದು ಉಚಿತವೆಂದು ಭಾವಿಸಿ, ರಾಣಾನು ಜ್ಯೇಷ್ಠಪುತ್ರನಾದ ಚಂಡ ನನ್ನು ಕರೆದು–'ಮೋಕುಳನಿಗೆ ರಾಜ್ಯದ ಯಾವ ಭಾಗದ ಎಷ್ಟು ಪ್ರಾಂತ ವನ್ನು ಕೊಡಬಹುದು' ಎಂದು ಪ್ರಶ್ನಿಸಿದ್ದನು. ಆ ಮಾತಿಗೆ ಸತ್ಯಸಂಧ

ನಾದ ಆ ರಾಜಪುತ್ರನು-'ಯಾವ ಭಾಗದ ಯಾವ ಪ್ರಾಂತ ಎಂದರೇನು? ಚಿತ್ತೂರು ರಾಜಸಿಂಹಾಸನಕ್ಕೆ ಮೋಕುಳನೇ ಅಧಿಪತಿ. ಪೂರ್ತಿ ರಾಜ್ಯವೂ ಅವನಿಗೇ ಸೇರತಕ್ಕದ್ದು' ಎಂದು ಹೇಳಿಬಿಟ್ಟನಲ್ಲದೆ, ಯಾವ ಬಗೆಯ ಸಂಶಯಕ್ಕೂ ಆಸ್ಪದ ಉಳಿಯಬಾರದೆಂದು, ರಾಣಾಸ ಯುದ್ಧಯಾತ್ರಾಪ್ರಯಾಣಕ್ಕೆ ಮುಂಚಿತವಾಗಿಯೇ, ಮೋಕುಳನ ಪಟ್ಟಾಭಿಷೇಕಮಹೋತ್ಸವವೂ ನಡೆದುಹೋಗಬೇಕೆಂದು ಹೇಳಿದನು. ರಾಜ್ಯಾಭಿಷೇಕವೂ ನಡೆಯಿತು. ಭಾವೀ ರಾಜನಿಗೆ ಕಾಣಿಕೆಯನ್ನೊಪ್ಪಿಸಿ, ಆತನ ಸ್ವಾಮ್ಯವನ್ನು ಒಪ್ಪಿಕೊಳ್ಳಲು ವಿಧೇಯತೆಯಿಂದ ಸಿಂಹಾಸನದೆದುರಿಗೆ ಮಂಡಿಯನ್ನೂರುವಲ್ಲಿ ಚಂಡನೇ ಪ್ರಥಮ ರಾಜಪುತ್ರನಾದನು. ಆತನ ಅಗಾಧಸ್ವಾರ್ಥತ್ಯಾಗದ ಪ್ರತಿಫಲಕ್ಕಾಗಿ, ಅವನು, ರಾಜನ ಮಂತ್ರಾಲೋಚಕರಲ್ಲಿ ಪ್ರಥಮಸ್ಥಾನೀಯನಾಗಿರತಕ್ಕದೆಂದು ತೀರ್ಮಾನಿಸಲ್ಪಟ್ಟಿತು.

ಕನ್ಯಾಸಂಬಂಧದಲ್ಲಿ ತನ್ನ ಆತ್ಮಗೌರವಕ್ಕೆ ಒದಗಿದ ಕುಂದಕಕ್ಕೆ ಪ್ರತಿಯಾಗಿ ಚಂಡನು ಮಾಡಿದ ಸ್ವಾರ್ಥತ್ಯಾಗವು ಅತ್ಯಗಾಧವಾದುದು. ಚಂಡನು ಅತ್ಯುತ್ತಮ ತರಗತಿಯ ದಂಡನಾಯಕನು. ಧೈರ್ಯಶಾಲಿ, ನಿಸ್ಪೃಹಿ, ರಾಜನೀತಿಜ್ಞ, ಮಂತ್ರಮೂಲವನ್ನರಿತವನು. ಪ್ರಭು ಮಂತ್ರ ಉತ್ಸಾಹಶಕ್ತಿಗಳು ಮೂರೂ ಆತನಲ್ಲಿ ಮೂರ್ತಿಮತ್ತಾಗಿದ್ದುವು. ಲಖು ರಾಣಾನು ರಾಜ್ಯದಿಂದ ಯುದ್ಧಯಾತ್ರೆಗೆಂದು ಹೊರಟುನಡೆದ ತರುವಾಯವೂ ಯುದ್ಧದಲ್ಲಿ ದೇಹಬಿಟ್ಟ ತರುವಾಯವೂ, ರಾಜ್ಯಾಡಳಿತ ವಿಚಾರವನ್ನೆಲ್ಲಾ ಬಹು ಸಮರ್ಥತೆಯಿಂದ ಆತನೇ ಗಮನಿಸಿಕೊಂಡಿದ್ದನು. ಆತನ ಮೇಲ್ವಿಚಾರಣೆಗೆ ಒಳಪಟ್ಟ ಚಿತ್ತೂರಿನ ರಾಜ್ಯಪಾಲನೆಯು ಅತ್ಯುತ್ಕೃಷ್ಟ ಸ್ಥಿತಿಯನ್ನೈದಿತು. ರಾಣಿಗಾದರೋ, ತಾನು ರಾಜಮಾತೃವಾದ್ದರಿಂದ ರಾಜನ ಬಾಲ್ಯದಲ್ಲಿ ತನ್ನ ಅಧಿಕಾರವು ನಡೆಯಬೇಕೆಂಬ ಅಪೇಕ್ಷೆಯು ಸ್ವಾಭಾವಿಕವಾಗಿಯೇ ಉಂಟಾಯಿತು! ಮನೋಭಾವನೆಯು, ಹೀಗೆ ಸ್ವಾರ್ಥತೆಯ ವರ್ಣದಿಂದ ರಂಜಿತವಾದೊಡನೆಯೇ, ಕೇವಲ ನಿಸ್ಪೃಹತೆಯಿಂದ ನಡೆಸುತ್ತಿದ್ದ ಚಂಡನ ಕೃತ್ಯಗಳೆಲ್ಲವೂ ವಿವರ್ಣವನ್ನು ಹೊಂದಿ ದೃಷ್ಟಿಗೋಚರವಾಗತೊಡಗಿದುವು. ಚಂಡನು ನಾಮಮಾತ್ರ ಆ ಬಾಲಕನನ್ನು ಸಿಂಹಾಸನದಮೇಲೆ ಕೂರಿಸಿ, ತಾನೇ ಸರ್ವಾಧಿಕಾರ ಮಾಡುತ್ತ, ಕ್ರಮಕ್ರಮವಾಗಿ

ರಾಜ್ಯಾಕ್ರಮಣಕ್ಕೂ ಪ್ರಯತ್ನಿಸುತ್ತಿರುವನೆಂದು ಆಕೆಗೆ ಭಾಸವಾಯಿತು. ಸರ್ವಾಧಿಕಾರದ ರಾಜ್ಯಸೂತ್ರವು ತನ್ನ ಕೈಯಲ್ಲಿರುವಾಗ, ಚಂಡನು ಮುಕುಟ ವಿರಹಿತನಾಗಿದ್ದರೂ ತಾನೇ ರಾಜನೆಂಬಂತಿದ್ದು, ಬಾಲರಾಜನನ್ನು ಶುಷ್ಕ ರಾಜಪದವಿಯಲ್ಲಿಟ್ಟು ಲೋಕದ ಕಣ್ಣು ಮುಚ್ಚಿಸುತ್ತಿರುವನೆಂದು ಆಕೆಯು ಭಾವಿಸಿದಳು. ತನ್ನ ಆಚರಣೆಗಳ ವಿಷಯದಲ್ಲಿ ರಾಜಮಾತೃವಿಗೆ ಈ ಭಾವನೆ ಬಿಡೆಯೆಂದು ತಿಳಿದೊಡನೆಯೇ, ಚಂಡನು ರಾಣಿಯನ್ನು ಸಮೀಪಿಸಿ, ಆಕೆಯು ತನ್ನ ವಿಷಯದಲ್ಲಿ ಪಟ್ಟ ನಿರಾಧಾರ ಸಂಶಯಗಳನ್ನು ಕುರಿತೂ, ತನ್ನ ಮನಸ್ಸಾಕ್ಷಿಗನುಸಾರವಾದ ಆಚರಣೆಗಳನ್ನು ಕುರಿತೂ, ಸ್ಪಷ್ಟವಿಚಾರಗಳನ್ನು ತಿಳಿಸಿ, ರಾಜ್ಯಸೂತ್ರಗಳನ್ನು ಒಪ್ಪಿಸಿಕೊಟ್ಟು, ರಾಜಕಾರ್ಯನಿರ್ಮುಕ್ತನಾಗಿ ಹೊರಹೊರಟನು. ಆದರೆ ರಾಜ್ಯಾಧಿಕಾರವನ್ನೆಲ್ಲ ಒಪ್ಪಿಸಿಕೊಟ್ಟರೂ, ತಮ್ಮ ಶಿಶೋದಿಯಾಕುಲದ ಹಕ್ಕುಬಾಧ್ಯತೆಗಳ ರಕ್ಷಣೆಯನ್ನು ಕುರಿತು ಮಾತ್ರ ತಕ್ಕ ನಿಯಮನಿಬಂಧನೆಗಳನ್ನು ಏರ್ಪಡಿಸಲು ಮರೆಯಲಿಲ್ಲ. ಹೀಗೆ ವಂಶಪಾರಂಪರ್ಯವಾಗಿ ನಡೆದುಬಂದ ರಾಜ್ಯವನ್ನು ಬಿಟ್ಟು ಹೊರಹೊರಟ ಚಂಡನು, ಸಮೀಪದಲ್ಲೇ, ಆಗತಾನೇ ಅಭಿವೃದ್ಧಿಯ ಒಂದೊಂದೇ ಮೆಟ್ಟಲುಗಳನ್ನೇರುತ್ತಾ ಇದ್ದ ಮಂಡೂ ಎಂಬೊಂದು ಸಂಸ್ಥಾನವನ್ನು ಕುರಿತು ನಡೆದನು. ಅಲ್ಲಿಯ ರಾಜನು ಚಂಡನನ್ನು ಬಹು ಗೌರವದಿಂದ ಎದುರುಗೊಂಡು, ಅತನ ಯೋಗ್ಯತೆಗೆ ತಕ್ಕಂತೆ ತನ್ನ ರಾಜ್ಯದ ಹಲ್ಲಾರ್ ಎಂಬೊಂದು ಮಂಡಲವನ್ನೇ ಬಿಡಿಸಿಕೊಟ್ಟು ಆತನನ್ನು ಬಹು ಪರಿಯಿಂದ ಆದರಿಸಿದನು.

ಚಂಡನು ರಾಜಧಾನಿಯನ್ನು ಬಿಟ್ಟು ಹೊರಟುದೇ ಸಾಹಕಾಶವು. ಒಡನೆ ಹಂಸಾದೇವಿಯ ಸೋದರನಾದ ಜೋಡಾನೂ, ತಂದೆಯಾದ ರಣಮಲ್ಲನೂ ಮಂಡೋರಿನ ಹಲವು ಮಂದಿ ಸರದಾರರೂ ಬಂದು ಚಿತ್ತೂರಿನಲ್ಲಿ ನೆಲೆಗೊಂಡರು. ಮೆಲ್ಲಮೆಲ್ಲನೆ ರಾಜ್ಯಸೂತ್ರಗಳು ಅವರ ಕೈಸೇರಿದುವು. ಕಲ್ಲುನೆಲದ-ಮರುಭೂಮಿಯ ಬೆಂಗಾಡಿನಲ್ಲಿ ವಾಸಿಸಿದ್ದ ಅವರಿಗೆ ಫಲವಂತವಾದ ಮೇವಾರಿನ ವಾಸವು ಸ್ವರ್ಗವಾಸವೆನ್ನಿಸುವಂತಿರಲು, ಅವರು ತಮ್ಮ ಸ್ವಸ್ಥಳಗಳನ್ನು ಮರೆತು ಅಲ್ಲೇ ನೆಲೆಗೊಂಡು, ಮನೆಬಾಗಿಲುಗಳನ್ನು ಮಾಡಿಕೊಂಡರು. ರಾಣಾನ ಕಾಲದಲ್ಲಿದ್ದ ರಾಜಕಾರ್ಯಜ್ಞಾನವೃದ್ಧರೂ ವಯೋ

ವೃದ್ಧರೂ ಆದ ಅಧಿಕಾರಿಗಳೂ ರಾಜಸೇವಕರೂ ತೊಲಗಿಸಲ್ಪಟ್ಟು ಆ ಸ್ಥಾನಗಳಲ್ಲೆಲ್ಲಾ, ಮಾರವಾಡದ ಜನಗಳು ನಿಯಮಿಸಲ್ಪಟ್ಟರು. ಈ ಹೊಸಬರ ಮಾತೇ ದೇಶದಲ್ಲಿ ಶಾಸನವೋ ಎಂಬಂತೆ ಆಯಿತು. ಅವರ ಆಜ್ಞೆಯೇ ನಿರಂಕುಶವಾಗಿ ಜರುಗತೊಡಗಿತು. ಮೇವಾರಿನ ಪ್ರಜೆಗಳು ಸ್ವಗೃಹದಲ್ಲೇ ಪರಕೀಯರೂ, ಸ್ವದೇಶದಲ್ಲೇ ಪರದೇಶಿಗಳೂ ಆದರು. ಎಲ್ಲರೂ ಪರಾಧೀನತೆಯ ಶೃಂಖಲೆಯಿಂದ ಬದ್ಧರಾಗಿ ತಮ್ಮ ಸಂಕಟವನ್ನು ಧೈರ್ಯದಿಂದ ಬಾಯಿಬಿಟ್ಟು ನುಡಿಯಲಾರದೆ, ಅವರಿಂದ ಆದ ಹಿಂಸೆಗಳನ್ನೆಲ್ಲ ಸಹಿಸಿಕೊಂಡಿದ್ದರು. ಹಾಗೂ ತಡೆಯಲಾರದೆ, ಈ ನಿರಂಕುಶತೆಯೇತಕ್ಕೆಂದು ಲೇಶಮಾತ್ರ ಎದುರಾಡಿದವನು ಧನಮಾನಗಳನ್ನು ಹೋಗೊಳಿಸಿಕೊಳ್ಳುವುದರೊಂದಿಗೆ ಪ್ರಾಣಗಳನ್ನೂ ತೆರಬೇಕಾಗುತ್ತಿದ್ದಿತು. ಮಹಾಶೌರ್ಯಪ್ರತಾಪನಿಧಿಗಳೇ ಆಗಿದ್ದರೂ ಚಿತ್ತೂರಿನ ರಜಪೂತರು ದುರಾಗ್ರಹಿಗಳಾದ ಪರಕೀಯರ ಚಂಡಶಾಸನಕ್ಕೂ ದಾಸ್ಯಕ್ಕೂ ಒಳಗಾಗಿ ಹೀಗೆ ನಿಸ್ಸತ್ವರಂತಾದರು. ಇಂತಹ ವಿಷಮಸಮಯದಲ್ಲಿ ರಾಜಪುತ್ರ ಮೋಕುಳನಿಗೆ ಸ್ತನ್ಯಕೊಟ್ಟು ಕಾಪಾಡಿದ ಒಬ್ಬ ದಾದಿಯು ಆ ಪರಕೀಯರ ಶಕ್ತಿಹರಣಮಾಡುವುದಕ್ಕೆ ಉದ್ಯೋಗಿಸಿ ಕೃತಕೃತ್ಯಳಾದಳು. ರಾಜಾಸ್ಥಾನದ ಇತಿಹಾಸದಲ್ಲಿ ದಾದಿಯರು ತಮ್ಮ ಪ್ರಾಣಗಳನ್ನು ಸೂರೆಗೊಟ್ಟು,-ತಮ್ಮ ಹೃದಯರಕ್ತವನ್ನು ಧಾರೆಯಾಗಿ ಸುರಿದು, ತಾವು ಸಾಕಿದ ರಾಜಪುತ್ರರನ್ನು ಕಾಪಾಡಿದ ಕಥೆಗಳಿಗೆ ಕೊರತೆಯಿಲ್ಲ. ಮೋಕುಳನ ದಾದಿಯೂ ಅಂತಹ ಸುಪ್ರಸಿದ್ಧಳೇ !

ಒಂದಾನೊಂದು ದಿನ ರಾಣಿ ಹಂಸಾದೇವಿಯ ತಂದೆ ರಣಮಲ್ಲನು, ಬಾಲರಾಜ ಮೋಕುಳನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಆಡಿಸುತ್ತಾ, ಬಪ್ಪಾರಾವಳನೇ ಮುಂತಾದ ಸುಪ್ರಸಿದ್ಧ ರಾಜಮಾರ್ತಾಂಡರು ಏರಿದ್ದ ರತ್ನಸಿಂಹಾಸನದಮೇಲೆ ಕುಳಿತಿದ್ದನು. ತೊಡೆಯಮೇಲೆ ಕುಳಿತಿದ್ದ ಮೋಕುಳನು ಆಡುತ್ತಾಡುತ್ತ, ಕೆಳಕ್ಕೆ ಸರಿದುಬಂದು ರಣಮಲ್ಲನ ಕಾಲಬದಿಯಲ್ಲಿ ನೆಲದಮೇಲೆ ಕುಳಿತನು. ಬಾಲಕನೇ ಆದರೂ ಮಕುಟಾಭಿಷಿಕ್ತನಾದ ಆ ರಾಜಕುವರನು ಕಾಲಬದಿಯಲ್ಲಿ ನೆಲದಮೇಲೆ ಕುಳಿತಿದ್ದುದನ್ನು ಕಂಡಮೇಲಾದರೂ ಆ ವೃದ್ಧನು ಸಿಂಹಾಸನವನ್ನು ಬಿಟ್ಟು ಕೆಳಕ್ಕಿಳಿಯದೆ, ಎಂದಿನಂತೆಯೇ ಕಾಲಮೇಲೆ ಕಾಲು ಹಾಕಿಕೊಂಡು ವಿನೋದಗೊಳ್ಳುತ್ತ

ಲಿದ್ದನು. ಇದನ್ನು ಕಂಡು ಸಭೆಯಲ್ಲಿದ್ದ ರಾಜಪಕ್ಷಪಾತಿಗಳೆಲ್ಲರೂ ಬಹು ನೊಂದುಕೊಂಡರು. ಮೋಕುಳನ ದಾದಿಗಂತೂ ವೃದ್ಧನ ಈ ಚರ್ಯೆಯನ್ನು ಕಂಡು ಹೊಟ್ಟೆಯಲ್ಲಿ ಕಿಚ್ಚಿಟ್ಟಂತೆ ವ್ಯಥೆಯಾಯಿತು. ಒಡನೆ ಅವಳು ಆ ಸ್ಥಳದಿಂದ ಹೊರಟು ಅಂತಃಪುರಕ್ಕೆ ನಡೆದು, ರಾಜಮಾತೆಯನ್ನು ಕಂಡು ವೃದ್ಧ ರಣಮಲ್ಲನು ಬಾಲರಾಜನ ವಿಷಯದಲ್ಲಿ ನಡೆಯಿಸಿದ ಅಪಚಾರವನ್ನು ಸವಿಸ್ತಾರವಾಗಿ ಬಿನ್ನವಿಸಿದ್ದಲ್ಲದೆ-'ಇದೇನನ್ಯಾಯ, ಹೊಟ್ಟೆಗಿಲ್ಲದೆ ಎಲ್ಲಿಂದಲೋ ಬಂದು ಸೇರಿಕೊಂಡಿರುವ ಈ ಲಂಡರು ಮುಕುಟಾಭಿಷಿಕ್ತನಾದ ರಾಜಕುಮಾರನ ವಿಷಯದಲ್ಲಿ ಇಷ್ಟುಮಟ್ಟಿನ ದೌರ್ಜನ್ಯವನ್ನು ನಡಿಸುತ್ತಿದ್ದರೂ, ತಾಯೀ ಇನ್ನೂ ಸಹಿಸಿಕೊಂಡಿರತಕ್ಕುದು ಸಮನಲ್ಲ, ಕ್ಷೇಮವಲ್ಲ' ಎಂದು ಒತ್ತಿಯೊತ್ತಿ ಹೇಳಿದಳು. ರಾಣಿಯು, ತನ್ನವರೆಂದು ಅಷ್ಟುಮಟ್ಟಿನ ಸಲುಗೆಯನ್ನಿತ್ತುದು ಪ್ರಮಾದಕ್ಕೆ ಬಂದಿತೆಂದುಕೊಂಡು, ಆ ರಾತ್ರಿ ಅಂತಃಪುರಕ್ಕೆ ಬಂದಿದ್ದ ತನ್ನ ತಂದೆಯನ್ನು ಕುರಿತು ಆತನ ಆಚರಣೆಗಾಗಿ ಆಕ್ಷೇಪಿಸಿ ಜರೆದಳು. ಮದೋನ್ಮತ್ತನಾಗಿದ್ದ ರಣಮಲ್ಲನಾದರೋ ಕೆಲಸಕ್ಕೆ ಬಾರದ ಆ ಹೆಂಗಸಿನ ಮಾತಿಗೆ ಅಂಜಿ ವಿಧೇಯತೆಯನ್ನು ತೋರಿಸಿಕೊಳ್ಳಕೂಡದೆಂದು ನಿಶ್ಚಯಿಸಿ, ಆಕೆಯ ಲಕ್ಷ್ಯವನ್ನೇ ಇಡದೆ-'ನಾನೂ ನನ್ನ ಮಕ್ಕಳೂ ಮಾಡುವ ಕೆಲಸಗಳಿಗೆ ಬಾಯಿಮುಚ್ಚಿ ಒಪ್ಪಿಕೊಂಡು ಬಿದ್ದಿರಬೇಕು, ಹಾಗಲ್ಲದೆ ಅಧಿಕಾರ ನಡೆಯಿಸಲು ಬಂದೆಯಾದರೆ ನಿನ್ನ ಮಗನ ಸಿಂಹಾಸನಕ್ಕೆ ಮಾತ್ರವಲ್ಲ-ಪ್ರಾಣಕ್ಕೂ ಅಪಾಯವುಂಟಾಗದಿರದು, ಜೋಕೆ' ಎಂದು ಪ್ರತ್ಯುತ್ತರವನ್ನು ಕೊಟ್ಟನು. ಆತನ ಆ ಮಾತುಗಳನ್ನು ಕೇಳಿದ ರಾಣಿಯು, ತನ್ನವರೆಂಬ ಆ ಜನರು ತನ್ನಮೇಲೆ ಎಷ್ಟುಮಟ್ಟಿನ ಅಭಿಮಾನದಿಂದ ತನ್ನ ಮನೆಯಲ್ಲಿ ಇದ್ದಾರೆಂಬುದರ ನಿಶ್ಚಯಸಂಗತಿಯನ್ನು ತಿಳಿದು, ಎಲ್ಲಿ ತನಗೂ ತನ್ನ ಮಗುವಿಗೂ ಪ್ರಾಣಾಪಾಯ ಬಂದೊದಗುವುದೋ ಎಂದು ಭಯಗೊಂಡು ಕೆಲವುಕಾಲ ಸುಮ್ಮನಿದ್ದಳು.

ತನ್ನ ಮಗನ ವಿಚಾರದಲ್ಲಿ ನಡೆದ ದೌರ್ಜನವೇ ಆಕೆಗೆ ಬಹು ಸಂತಾಪಕರವಾಗಿರುತ್ತಿರಲು, ಮುಂದೆ ಕೆಲವು ದಿನಗಳಲ್ಲೇ ರಾಣಾನ ಎರಡನೆಯ ಮಗನಾಗಿದ್ದ ರಘುದೇವನನ್ನು ತನ್ನ ತಂದೆಯ ಕಡೆಯ ಭೃತ್ಯರೇ ವಧಿಸಿದರೆಂಬ ಘೋರವಾರ್ತೆಯೊಂದು ಕರ್ಣಶಲ್ಯವಾಗಿ ಆಕೆಗೆ ಕೇಳಿಸಿತು. ರಘು

ದೇವನು ಬಹು ಸದ್ಗುಣಿ. ಆತನ ಧೈರ್ಯ ಔದಾರ್ಯ ನಯವಿನಯಗಳನ್ನು ಮೆಚ್ಚಿಕೊಳ್ಳದ ಜನರೇ ಇರಲಿಲ್ಲ. ಚಿತ್ತೂರಿನ ಆಬಾಲವೃದ್ಧರಾದ ಸಮಸ್ತರೂ ಆ ರಾಜಕುಮಾರನ ಅಕಾಲಮರಣಕ್ಕಾಗಿ ಚಿಂತಿಸಿದರು. ಮಾತ್ರವಲ್ಲ-ಆತನು ಪರಕೀಯರ ಧೂರ್ತತೆಗೆ ಬಲಿಬಿದ್ದ ರಾಷ್ಟ್ರವೀರಪುರುಷನೆಂಬ ಭಾವನೆಯಿಂದ, ಬೆಳ್ಳಿ ಬಂಗಾರ ಪಂಚಲೋಹ ಶ್ವೇತಶಿಲೆ ಮುಂತಾದವುಗಳಲ್ಲಿ ಆತನ ಪ್ರತಿಮೆಯನ್ನು ಮಾಡಿಸಿ ತಮ್ಮ ಮನೆಯಲ್ಲಿಟ್ಟುಕೊಂಡು ರಜಪೂತರು ನವರಾತ್ರಿಯ ಹಬ್ಬದಲ್ಲಿ ಪೂಜಿಸತೊಡಗಿದರು. ಅಪ್ರತಿಮ ದೇಶಭಕ್ತನೂ ಮಹಾಸದ್ಗುಣಿಯೂ ಆದ ರಘುದೇವನ ಜೀವಿತವನ್ನು ಕೊನೆಗಾಣಿಸಿದ ರಣಮಲ್ಲನ ಧೂರ್ತಸೈನಿಕರೇ ತನ್ನ ಮಗನ ಪ್ರಾಣವನ್ನಾದರೂ ಅಪಹರಿಸದೆ ಬಿಡರೆಂದು, ಹಂಸಾದೇವಿಗೆ ನಿಶ್ಚಯವಾಯಿತು. ರಣಮಲ್ಲನ ಧೂರ್ತತೆಯು ಏಕಮುಖವಾಗಿರಲಿಲ್ಲ. ಮಾರವಾರು ರಾಜಕುಟುಂಬದಲ್ಲಿ ಜನ್ಮಿಸಿ, ರಾಣಿಗೆ ಸಖಿಯಾಗಿದ್ದ ಸುಂದರ ಯುವತಿಯೊಬ್ಬಳನ್ನು ಕಂಡು, ಆ ವೃದ್ಧನು ಅವಳನ್ನು ತನಗೆ ಕೊಟ್ಟು ಲಗ್ನ ಮಾಡಿಸೆಂದು ಮಗಳನ್ನು ಪೀಡಿಸತೊಡಗಿದ್ದನು. ಪ್ರಾರಂಭದಲ್ಲಿ ಪ್ರಾರ್ಥನೆಗಿದ್ದುದು ಕೊನೆಕೊನೆಗೆ ಬಲವಂತಕ್ಕಿಟ್ಟಿತು. ಮುಂದೊಂದು ವೇಳೆ ಆ ಕಾಮಾಂಧನು ಕೇವಲ ಪಶುಪ್ರವೃತ್ತಿಯಿಂದ ಆ ಯುವತಿಯನ್ನು ನಿರ್ಬಂಧಿಸಿ ತನ್ನ ಇಚ್ಛಾಪೂರ್ತಿಮಾಡಿಕೊಂಡನೆಂಬ ವಾರ್ತೆಯೂ ರಾಣಿಯ ಕಿವಿಗೆ ಬಿದ್ದಿತು. ದಿನದಿನಕ್ಕೆ ಹೆಚ್ಚುತ್ತಿದ್ದ ತನ್ನ ತಂದೆ ಮತ್ತು ಸೋದರರ ಈ ಬಗೆಯ ಅಸಹನೀಯ ದುರ್ವೃತ್ತಿಗಳನ್ನು ಕಂಡು ರೋಸಿದ ರಾಣಿ ಹಂಸಾದೇವಿಯು, ಅಂತಹ ಆಪತ್ಕಾಲದಲ್ಲಿ ಚಂಡನೇ ರಕ್ಷಕನೆಂದು ನೆರೆನಂಬಿ, 'ನನ್ನ ಹಲವು ಅಪರಾಧಗಳನ್ನೂ ಅಪಚಾರಗಳನ್ನೂ ಮನಸ್ಸಿನಲ್ಲಿಟ್ಟುಕೊಳ್ಳದೆ ಬಂದು, ನಿನ್ನ ತಮ್ಮನನ್ನೂ ರಾಜ್ಯವನ್ನೂ ಕಾಪಾಡು' ಎಂದು ಆತನಿಗೆ ಸಂದೇಶವನ್ನು ಕಳುಹಿಸಿದಳು.

ತನ್ನ ತಮ್ಮ ರಘುದೇವನನ್ನು ಕೊಲೆ ಮಾಡಿಸಿದುದರಿಂದಲೂ, ನಿಸ್ಸಹಾಯಕಳಾದ ಸ್ತ್ರೀಯಮೇಲೂ ಬಾಲರಾಜನಮೇಲೂ, ಆ ನೀಚರು ಜರುಗಿಸುತ್ತಿದ್ದ ನಿರಂಕುಶ ಅಧಿಕಾರದಿಂದಲೂ ಚಂಡನಿಗೆ ಸ್ವಾಭಾವಿಕವಾಗಿಯೇ ಅವರಮೇಲೆ ರೋಷದ್ವೇಷಗಳು ಉತ್ಪನ್ನವಾಗಿದ್ದುವು. ರಾಣಿ ಹಂಸಾದೇವಿಯೂ ಹೇಳಿಕಳುಹಿಸಿದುದು ಹೆಚ್ಚು ಉತ್ತೇಜಕವಾದಂತಾಗಲು,

ಆತನು ಚಿತ್ತೂರಿನಮೇಲೆ ಬೀಳಲು ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳತೊಡಗಿದನು. ಆತನು ಹಿಂದೆ ರಾಜಧಾನಿಯನ್ನು ಬಿಟ್ಟು ಹೊರಟಿದ್ದಾಗ್ಗೆ ಆತನೊಂದಿಗೆ ಸುಮಾರು ಇನ್ನೂರು ಮುನ್ನೂರುಮಂದಿ ಬೇಟೆಗಾರರೂ ಹೋಗಿದ್ದರಾದರೂ ಅವರ ಹೆಂಡಿರುಮಕ್ಕಳೆಲ್ಲ ಚಿತ್ತೂರಿನಲ್ಲೇ ವಾಸಿಸುತ್ತಿದ್ದರು. ಈಗ ಆ ಬೇಡರು, ಚಂಡನ ಆಜ್ಞೆಯಮೇರೆ ಅಲ್ಲಿಂದ ಹೊರಟು ಚಿತ್ತೂರನ್ನು ಸೇರಿ, ಕೋಟೆಯೊಳಹೊಕ್ಕು ತಮ್ಮತಮ್ಮ ಮನೆಗಳಿಗೆ ಸೇರಿಕೊಂಡರು. ಅವರ ಸಂಸಾರಗಳೆಲ್ಲ ಊರಲ್ಲಿದ್ದುದರಿಂದ ಅವರನ್ನು ಯಾರೂ ತಡೆಯಲಿಲ್ಲ. ಅಷ್ಟು ದಿನ ಹೋಗಿದ್ದು ಈಗ ಏಕೆ ಹಿಂದಿರುಗಿದಿರೆಂದು ಯಾರಾದರೂ ಕೇಳಿದರೆ, ರಾಜ್ಯಕೋಶಾದಿಗಳಿಲ್ಲದೆ ಕಾಡುಜೋಗಿಯಂತೆ ಅಲೆಯುತ್ತಿರುವ ಚಂಡನೊಂದಿಗೆ ತಿರುಗಲಾರದೆ ಬಂದುಬಿಟ್ಟೆವೆಂದು ಹೇಳಿಕೊಳ್ಳುತ್ತಿದ್ದರು. ಊರು ಸೇರಿದುದು ಮಾತ್ರವಲ್ಲ-ಆ ಬೇಡರು ಚಂಡನ ಸಂಕೇತದ ಪ್ರಕಾರ ಉಪಾಯದಿಂದ ರಾಜಸೇವೆಯಲ್ಲಿ ಸೇರಿಕೊಂಡು ಸಮಯಸಾಧನೆಯಲ್ಲಿದ್ದರು. ರಾಣಿಯಾದರೋ, ವಿಧವೆಯಾದ ತಾನು ಸದ್ಗತಿದಾಯಕವೆಂದು ಸುತ್ತುಮುತ್ತಲಿದ್ದ ಗ್ರಾಮಸ್ಥ ಬಡಜನರಿಗೆ ಅನ್ನವಸ್ತ್ರಗಳನ್ನು ಹಂಚುವುದಕ್ಕೆ ಪ್ರಾರಂಭಿಸಿ, ತನ್ನ ಮಗನನ್ನು ರಾಜಧಾನಿಯ ನಿರ್ಬಂಧದಿಂದ ತಪ್ಪಿಸಿ ಅಲ್ಲಲ್ಲೇ ಸಂಚಾರಮಾಡಿಸುತ್ತಿದ್ದಳು. ದಿನದಿನಕ್ಕೆ ಕೋಟೆಯನ್ನು ಬಿಟ್ಟು ಹೆಚ್ಚು ಹೆಚ್ಚು ದೂರಕ್ಕೆ ಹೋಗ ಹೇಳಿ ಶತ್ರುಗಳಿಗೆ ತಮ್ಮ ವಿಷಯದಲ್ಲಿ ಯಾವ ಬಗೆಯ ಸಂಶಯವುಂಟಾಗಲೂ ಆಸ್ಪದವಿಲ್ಲದಂತೆ ಜಾಗರೂಕಳಾಗಿದ್ದಳು. ಆ ವೇಳೆಗೆ ದೀಪಾವಳಿ ಹಬ್ಬವೂ ಪ್ರಾಪ್ತವಾಯಿತು. ಚಂಡನ ಸಂಕೇತದಂತೆ ಆಕೆ ಚಿತ್ತೂರು ಕೋಟೆಯಿಂದ ಸುಮಾರು ಏಳು ಮೈಲು ದೂರವಿದ್ದ ಗೋಸುಂದ್ರವೆಂಬ ಗ್ರಾಮದಲ್ಲಿ ಲಕ್ಷ್ಮೀ ಪೂಜೆಯನ್ನು ಏರ್ಪಡಿಸಿ ರಾಜಪುತ್ರನನ್ನು ತಕ್ಕ ಆಪ್ತರೊಂದಿಗೆ ಅಲ್ಲಿಗೆ ಕಳುಹಿಸಿದಳು. ಆಕೆಯ ಸೋದರರೂ ರಣಮಲ್ಲನೂ, ಮನಬಂದಂತೆ ತಿಂದು ಕುಡಿದು ಮತ್ತರಾಗಿ, ಕಾಮಾಂಧತೆಯಿಂದ ಮೈಮರೆತು ಬಿದ್ದಿದ್ದರಲ್ಲದೆ, ರಾಣಿಯ ಈ ಚರ್ಯೆಗಳನ್ನು ಗಮನಿಸಲೇ ಇಲ್ಲ. ದೀಪಾವಳಿಯ ದಿನ ರಾಜಧಾನಿಯಲ್ಲೂ, ಗೋಸುಂದ್ರ ಗ್ರಾಮದಲ್ಲಿಯೂ ಅನೇಕ ವಿನೋದಗಳು ನಡೆದುವು. ಅಲ್ಲಿಯ ಉತ್ಸವಾದಿಗಳನ್ನು ಮುಗಿಸಿಕೊಂಡು

ರಾಜಪುತ್ರನು ಪರಿವಾರದೊಂದಿಗೆ ಹಿಂದಿರುಗಿದನು. ಮೆಲ್ಲಮೆಲ್ಲನೆ ಕೋಟೆಯ ಪೂರ್ವದ್ವಾರವನ್ನೂ ಸಮೀಪಿಸಿದ್ದಾಯಿತು. ಆದರೂ ಚಂಡನ ಸುಳಿವೇ ಕಾಣಲಿಲ್ಲ. ಬಾಲರಾಜನ ಸೇವಕರು,-'ಅಕ್ಕಟಾ ಈ ದಿನ ಸೈನ್ಯ ಬಲದೊಂದಿಗೆ ಬರುತ್ತೇನೆಂದು ವಾಗ್ದಾನಮಾಡಿದ್ದ ಚಂಡ ರಾಜಪುತ್ರನು ಬಾರದಿರಲು ಕಾರಣವೇನಿರಬಹುದು! ಆತನ ಸಂಕೇತದಂತೆಯೇ ಬಾಲರಾಜನನ್ನು ರಾಜಧಾನಿಯಿಂದ ಹೊರಕ್ಕೆ ಕರೆತಂದು ಎಲ್ಲೆಲ್ಲೋ ಅಲೆಯಿಸಿದೆವು. ಗೋಸುಂದ್ರ ಗ್ರಾಮದಲ್ಲಿ ಲಕ್ಷ್ಮೀಪೂಜೆಯನ್ನೇರ್ಪಡಿಸಿ ಅದನ್ನೂ ಜರುಗಿಸಿದ್ದುದಾಯಿತು. ಏನು, ತನ್ನ ವಾಗ್ದಾನವನ್ನು ಮರೆತುಬಿಟ್ಟನೋ! ಇಂದು ಆತನು ಬಾರದಿದ್ದರೆ ಮುಂದೆ ದಿಕ್ಕೇನು?' ಎಂದು ಮೆಲ್ಲಮೆಲ್ಲನೆ ನಡೆಯುತ್ತ ಕೋಟೆಯ ಪೂರ್ವದ್ವಾರದ ಬಳಿ ಹಿಂದೆ ಅಲ್ಲಾವುದ್ದೀನನು ಹಾಕಿಸಿದ್ದ ದಿಬ್ಬದ ಬಳಿಗೆ ಬರುವವೇಳೆಗೆ ಅವರಿಗೆ ಹಲವು ಕುದುರೆಗಳು ನಾಗಾಲೋಟದಿಂದ ಬರುತ್ತಿರುವಂತೆ ಬೋಧವಾಗುತ್ತಿದ್ದ ಖುರಪುಟ ಧ್ವನಿಯು ಕೇಳಿಸಿತು. ಅದೇನೆಂದು ನಿಂತುನೋಡಲಾಗಿ ನಾಲ್ವತ್ತು ಸವಾರರು ವಾಯುವೇಗದಿಂದ ಬಂದು ಕೋಟೆಯನ್ನು ಸಮೀಪಿಸಿದರು. ಅವರಲ್ಲಿ ಮುಖ್ಯನಾದವನು ಮಾಸಿದ ಹಳೆಯ ಬಟ್ಟೆಯನ್ನು ಧರಿಸಿಕೊಂಡು ಎಲ್ಲರಿಗೂ ಮಾರ್ಗದರ್ಶಕನಾಗಿ, ಸಮೀಪಕ್ಕೆ ಬಂದೊಡನೆಯೇ, ರಾಜಭಕ್ತಿಸೂಚಕವಾಗಿ ಯಾರಿಗೂ ಸಂಶಯವುಂಟಾಗದಂತಹ ಒಂದು ಬಗೆಯ ಸಂಜ್ಞೆಯಿಂದ ಬಾಲರಾಜನಿಗೆ ಪ್ರಣಾಮಮಾಡಿ ಗೌರವಿಸಿ, ಕೋಟೆಯ ಒಳಹೊಗಲು ಹವಣಿಸಿದನು. ಆಗ ರಣಮಲ್ಲನ ಕಡೆಯ ದೂತರು, ನೀವು ಯಾರು, ಎಂದು ಮುಂತಾಗಿ ಪ್ರಶ್ನಿಸಲು,-'ನಾವು ಗೋಸುಂದ್ರಗ್ರಾಮಕ್ಕೆ ಉತ್ಸವನಿಮಿತ್ತವಾಗಿ ಬಂದಿದ್ದೆವು. ಬಾಲರಾಜರಿಗೆ ಅಂಗರಕ್ಷಕರಾಗಿ ರಾಜಧಾನಿಗೆ ಹೋಗಬೇಕೆಂದು ರಾಣಿಯವರ ಆಜ್ಞೆಯಾದ್ದರಿಂದ ಬಂದೆವು' ಎಂದು ಹೇಳಿಕೊಳ್ಳುತ್ತಲೇ ಒಂದೊಂದು ಕೋಟೆಯಬಾಗಿಲನ್ನೂ ದಾಟಲಾರಂಭಿಸಿದರು. ಹೀಗೆ ಬಹು ಬಾಗಿಲುಗಳನ್ನು ದಾಟಿ ಚಂಡನು ರಾಮದ್ವಾರವೆಂದು ಹೆಸರುಳ್ಳ ಬಾಗಿಲಿನ ಬಳಿಗೆ ಬಂದನು. ಆಗ ಅಲ್ಲಿದ್ದ ರಾಜಸೇವಕನು, ಅವರು ಹೇಳುವ ಸಮಾಧಾನವನ್ನು ಒಪ್ಪದೆ ನಿರ್ಬಂಧಿಸಲು, ಇನ್ನು ಉಪಾಯದಿಂದ ಕೆಲಸ ನಡೆಯದೆಂದು ನಿಶ್ಚಯಿಸಿ, ಒಡನೆ ಒರೆ

ಯಿಂದ ಕತ್ತಿಯನ್ನು ಸೆಳೆದು, ಆ ಸೇವಕರ ತಲೆಯನ್ನು ಹಾರಿಸಿ ಮುಂದರಿಸಿದನು. ಅವೇಳೆಗೆ ಸೈನಿಕರೆಲ್ಲರೂ ಬಂದು ಸೇರಿದರು. ಚಂಡನು ಬಂದನೆಂಬ ವಾರ್ತೆಯು ಒಡನೆ ಚಿತ್ತೂರು ನಗರದಲ್ಲೆಲ್ಲ ಹಬ್ಬಿತು. ರಾಣಿಯ ಸೋದರರು ಅಕಸ್ಮಾತ್ತಾಗಿ ಪ್ರಾಪ್ತವಾದ ಈ ಪರಿಸ್ಥಿತಿಯನ್ನು ಕಂಡು ಮುಂದೇನೂ ತೋರದೆ ನಿಶ್ಚೇಷ್ಟಿತರಾಗಿ ಕುಳಿತರು. ವೃದ್ಧ ರಣಮಲ್ಲನಾದರೋ ಮಿತಿಮೀರಿ ಅಫೀಮು ತಿಂದಿದ್ದುದರಿಂದ ಪ್ರಜ್ಞಾವಿಹೀನನಾಗಿ ತಾನು ಬಲವಂತದಿಂದ ಕೂಡಿದ್ದ ಯುವತಿಯನ್ನು ಅಲಿಂಗಿಸಿಕೊಂಡು ಶಯನಗೃಹದಲ್ಲಿ ಒಡಲು ತಿಳಿಯದ ಬಿದ್ದಿದ್ದನು. ಹೊರಗೆ ಆಗುತ್ತಿದ್ದ ಈ ಕೋಲಾಹಲವನ್ನೂ ಸಾಯುವವರಚೀತ್ಕಾರಗಳನ್ನೂ, ಖಡ್ಗಗಳ ಖಣಿಲು ಖಣಿಲೆಂಬ ಶಬ್ದಗಳನ್ನೂ ಕೇಳಿ ಚಂಡನು ಬಂದನೆಂದು ಧೈರ್ಯಗೊಂಡ ಆ ಸ್ತ್ರೀಯು ಒಡನೆ ಮೇಲಕ್ಕೆದ್ದು, ಮಾರವಾಡದ ಪದ್ಧತಿಯಂತೆ ಬಹು ದೀರ್ಘವಾಗಿದ್ದ ಆ ವೃದ್ಧನ ರುಮಾಲನ್ನೇ ತೆಗೆದುಕೊಂಡು, ಅವನನ್ನು ಭದ್ರವಾಗಿ ಆ ಮಂಚಕ್ಕೇ ಕಟ್ಟಿಹಾಕಿ ತನ್ನ ಯಜಮಾನಿತಿಯ ಬಳಿಗೆ ಬಂದಳು. ಆ ವೇಳೆಗೆ ಅರಮನೆಯೊಳಕ್ಕೂ ಪ್ರವೇಶಿಸಿದ್ದ ಶತ್ರುದಳದವರು ಮಾಡುತ್ತಿದ್ದ ಕೊಲೆಗೆಲಸದ ಹಾವಳಿಯಿಂದ ಅರ್ಧಮರ್ಧವಾಗಿ ಎಚ್ಚೆತ್ತ ಆ ವೃದ್ಧನು, ತನ್ನ ಎದುರಿಗೆ ಯಮದೂತರಂತೆ ನಿಂತಿದ್ದ ಚಂಡನ ಸೈನಿಕರನ್ನು ಕಂಡು, ಏಳಲು ಪ್ರಯತ್ನಿಸಲು, ತನ್ನ ಹೊಸ ಹೆಂಡತಿಯಿಂದ ತಾನು ಮಂಚಕ್ಕೆ ಕಟ್ಟಲ್ಪಟ್ಟಿದ್ದ ಸಂಗತಿಯು ತಿಳಿಯಿತು. ಕೊನೆಗೆ ರೋಷದಿಂದ ಆ ಕಟ್ಟುಗಳನ್ನೆಲ್ಲ ಕಿತ್ತು ಕತ್ತರಿಸಿಕೊಂಡು, ಆಯುಧಕ್ಕಾಗಿ ಅಲ್ಲಲ್ಲಿ ಹುಡುಕುತ್ತಿರಲು, ಶತ್ರುಸೈನಿಕರು ಅವನ ಕತ್ತನ್ನು ಕತ್ತರಿಸಿ ಕೊನೆಮುಟ್ಟಿಸಿದರು.

ಚಿತ್ತೂರು ಹೀಗೆ ನೂತನಪ್ರಭುಗಳಾದ ಮಾರವಾಡ ದೇಶಸ್ಥರ ದಾಸ್ಯದಿಂದ ವಿಮುಕ್ತಿಹೊಂದಿ ಸ್ವತಂತ್ರವಾಯಿತು. ರಣಮಲ್ಲನ ಮಕ್ಕಳಲ್ಲಿ ಜೋಡಾ ಎಂಬುವನೊಬ್ಬನಲ್ಲದೆ ಮಿಕ್ಕ ಎಲ್ಲರೂ ಹತರಾದರು. ಜೋಡಾನು ಚಂಡನ ಕಣ್ಣಿಗೆ ಬೀಳದಂತೆ ೧೨೦ ಮಂದಿ ಸೈನಿಕರೊಂದಿಗೆ ಹೊರಟು ತಲೆತಪ್ಪಿಸಿಕೊಂಡು, ತಮ್ಮ ಹಿಂದಿನ ಮಾರವಾಡದೇಶದ ರಾಜಧಾನಿಯಾದ ಮಂಡೂರು ಎಂಬ ಸ್ಥಳವನ್ನು ಸೇರಿದನು. ಚಂಡಶಾಸನ

ನಾದ ಚಂಡನು, ಅಲ್ಲಿಗೂ ಬಿಡದೆ ಬೆನ್ನಟ್ಟಲು, ಅಲ್ಲಿಯೂ ಉಳಿಗಾಲವಿಲ್ಲದೆ ಜೋಧಾನು ಹಬೀರ್ ಶಂಕರನೆಂಬ ತನ್ನ ಮಿತ್ರನ ಬಳಿಗೆ ಓಡಿಹೋಗಿ ಪ್ರಾಣಗಳನ್ನು ದಕ್ಕಿಸಿಕೊಂಡನು. ಚಂಡನು ಮಂಡೂರು ರಾಜಧಾನಿಯನ್ನು ಪ್ರವೇಶಿಸಿ ಸ್ವಾಧೀನಗೊಂಡು, ಮುಂದೆ ಹನ್ನೆರಡು ವರ್ಷಕಾಲ ಬಾಲರಾಜನ ಹೆಸರಿನಲ್ಲಿ ಅದನ್ನು ಆಳತೊಡಗಿದನು.

ಹಬೀರ್ ಶಂಕರನು ಒಂದು ಕಾಲದಲ್ಲಿ ಬಹು ಶೂರನಾದ ಸೈನಿಕನಾಗಿದ್ದು ತರುವಾಯ ವಿರಕ್ತಿಹೊಂದಿ, ವಿವಿಕ್ತವಾದ ಒಂದು ಸ್ಥಳದಲ್ಲಿದ್ದುಕೊಂಡು, ಆ ಮಾರ್ಗವಾಗಿ ಬಂದವರಿಗೆ ಅನ್ನದಾನಮಾಡುತ್ತ ಭಗವಧ್ಯಾನದಿಂದ ಕಾಲಯಾಪನೆ ಮಾಡಿಕೊಂಡಿದ್ದನು. ಹಾವನ್ನು ಬಡಿದು ಹದ್ದಿಗೆ ಹಾಕಿದರೆಂಬ ಗಾದೆಯಂತೆ, ಆತನು ಲೋಭಿಗಳಾದ ಧನವಂತರನ್ನು ಬಡಿದು ತಂದ ದ್ರವ್ಯವನ್ನು ಬಡಜನರಿಗೂ ನಿರ್ಗತಿಕರಿಗೂ ಮುಕ್ತಹಸ್ತದಿಂದ ಅನ್ನದಾನ ಮಾಡುವುದರಲ್ಲಿ ವಿನಿಯೋಗಿಸುತ್ತಿರುವನು. ಜೋಧಾನು ತನ್ನ ನೂರಿಪ್ಪತ್ತು ಮಂದಿ ಪರಿವಾರದೊಂದಿಗೆ ಅಲ್ಲಿಗೆ ಬಂದು ಸೇರಿದಾಗ, ಅವನ ಬಳಿ ಆಹಾರಪದಾರ್ಥಗಳೆಲ್ಲವೂ ಮುಗಿದುಹೋಗಿದ್ದುದರಿಂದ, ತನ್ನಾ ಮಿತ್ರನನ್ನು ಹೇಗೆ ಆದರಿಸುವುದೆಂದು ತಿಳಿಯದೆ, ಅವನು ಸ್ವಲ್ಪಹೊತ್ತು ಏನೂ ತೋರದೆ ಇದ್ದನು. ತರುವಾಯ, ಬಣ್ಣಕ್ಕಾಗಿ ಉಪಯೋಗಿಸುವ ಒಂದು ಬಗೆಯ ಮರದ ತೊಗಟೆಯನ್ನು ಸಂಗ್ರಹಿಸಿಟ್ಟಿದ್ದ ಜ್ಞಾಪಕವು ಬರಲು ಹಬೀರ್ ಶಂಕರನು, ಅದರೊಂದಿಗೆ ಸ್ವಲ್ಪ ಗೋಧಿ ರವೆ, ಸಕ್ಕರೆ, ಏಲಕ್ಕಿ ಮುಂತಾದ ಪದಾರ್ಥಗಳನ್ನುಪಯೋಗಿಸಿ ಎಲ್ಲವನ್ನೂ ಬೇಯಿಸಿ, ಪಾಯಸವನ್ನು ಮಾಡಿ, ತನ್ನಾ ಅತಿಥಿಗಳಿಗೆಲ್ಲರಿಗೂ ತಿನಲಿತ್ತನು. ಅದನ್ನು ತಿಂದು ತೃಪ್ತರಾಗಿ ಮಲಗಿದ ಅವರು, ಮಾರನೆಯ ಪ್ರಾತಃಕಾಲ ಎದ್ದು ಒಬ್ಬರ ಮುಖವನ್ನೊಬ್ಬರು ನೋಡಿಕೊಳ್ಳಲು, ಅವರ ಗಡ್ಡಮೀಸೆಗಳು ಕೆಂಪು ಛಾಯೆಗೆ ತಿರುಗಿದ್ದುದನ್ನು ಕಂಡು ಎಲ್ಲರೂ ಪರಮಾಶ್ಚರ್ಯಪಟ್ಟರು. ಆ ಪರಿವರ್ತನೆಯು ಹಬೀರ್ ಶಂಕರನಿಗೂ ಆಶ್ಚರ್ಯವನ್ನುಂಟುಮಾಡಿತಾದರೂ, ಅವನು ಅವರನ್ನು ಕುರಿತು-'ನೋಡಿ ; ಪರಮೇಶ್ವರನ ಅದ್ಭುತ ಶಕ್ತಿಯನ್ನು ಏನೆಂದು ಹೇಳೋಣ ! ನಿಮ್ಮ ಗಡ್ಡಮೀಸೆಗಳ ರಂಗು ಬದಲಾದಂತೆಯೇ ಇನ್ನು ಸ್ವಲ್ಪ ದಿನಗಳೊಳಗಾಗಿಯೇ, ನಿಮ್ಮ ಅದೃಷ್ಟವೂ

ಬದಲಾಗಿ ನಿಮ್ಮ ಕೈಬಿಟ್ಟುಹೋಗಿರುವ ಮಂಡೂರು ರಾಜಧಾನಿಯು ಪುನಃ ಪ್ರಾಪ್ತಿಸುವುದು ಸುಲಭವಾಗಿರುವುದು. ಆ ಭವಿಷ್ಯವನ್ನು ಸೂಚಿಸುವುದಕ್ಕಾಗಿಯೇ ಭಗವಂತನು, ನಿಮಗೆ ಇಂದು ಈರೀತಿ ಪರಿಸ್ಥಿತಿಯನ್ನುಂಟುಮಾಡಿರುವನು' ಎಂದನು. ಈ ಮಾತು ಕೆಲವರಿಗೆ ಕೌತುಕವಾಗಿ ತೋರಿದರೂ, ಮತ್ತೆ ಕೆಲವರು, ಆ ಭವಿಷ್ಯವು ನಿಜವಾಗಬಹುದೆಂದು ನಂಬಿದರು.

ಈ ಭವಿಷ್ಯವಾಣಿಯನ್ನು ಕೇಳಿ ತೃಪ್ತನಾದ ಜೋಧಾನು, ಹರ್ಬಾ ಶಂಕರನನ್ನು ತನ್ನ ಪರಿವಾರದಲ್ಲಿ ಒಬ್ಬನನ್ನಾಗಿ ಸೇರಿಸಿಕೊಂಡನು. ಜನ್ಮತಃ ಯೋಧನಾಗಿದ್ದ ಅವನು, ಇದರಿಂದ ಉತ್ಸಾಹಗೊಂಡು, ಮೇವಾ ಎಂಬ ಪ್ರಾಂತದ ಒಡೆಯನಾಗಿದ್ದ ಪೂಬಾಜಿ ಎಂಬ ತನ್ನ ಮಿತ್ರನ ಸಹಾಯಗೊಂಡು ಅತನಲ್ಲಿದ್ದ ನೂರು ಕುದುರೆಗಳನ್ನು ತನ್ನ ಮಿತ್ರನಾದ ಜೋಧಾನ ಸಹಾಯಕ್ಕಾಗಿ ಪಡೆದನು. ಜೋಧಾನು, ಆ ಸಹಾಯದಿಂದ ಧೈರ್ಯಗೊಂಡು, ಒಡನೆ ಹೊರಟು,* ಚಂಡನ ಪುತ್ರರಿಂದ ಆಳಲ್ಪಡುತ್ತಿದ್ದ ಮಂಡೂರು ರಾಜಧಾನಿಯನ್ನು ಮುತ್ತಿ ಅವನ ಹಿರಿಯ ಮಗನನ್ನು ಸಂಹರಿಸಿದನು. ಮತ್ತೊಬ್ಬ ಮಗನು, ವೇಗಶಾಲಿಯಾದೊಂದು ಕುದುರೆಯನ್ನೇರಿ, ಅವರಿಗೆ ಸಿಕ್ಕದಂತೆ ತಪ್ಪಿಸಿಕೊಂಡು ಓಡುತ್ತಿರಲು ಬೆನ್ನಟ್ಟಿದ ಜೋಧಾನ ಸೈನಿಕರು ಅವನನ್ನೂ ಹಿಡಿದು ವಧಿಸಿದರು. ಕಾರಣಾಂತರದಿಂದ ಚಿತ್ತೂರಿಗೆ ಹೋಗಿದ್ದ ಚಂಡನು, ತನ್ನ ಪುತ್ರರಿಗೆ ಪ್ರಾಪ್ತವಾದ ದುರ್ಮರಣದ ಸಂಗತಿಯನ್ನು ಕೇಳಿ, ಜೋಧಾನಮೇಲೆ ಏರಿಹೋಗಿ ಯುದ್ಧಮಾಡಬೇಕೆಂದು ಮನಸ್ಸಾದರೂ, ತನಗೆ ತಾನೇ ಸಮಾಧಾನಮಾಡಿಕೊಂಡು--ಅವನ ತಂದೆ ಮತ್ತು ಸೋದರರನ್ನು ತಾನು ವಧಿಸಿದ್ದಕ್ಕಾಗಿ ತನ್ನ ಮಕ್ಕಳನ್ನು ಅವನು ವಧಿಸಿ ಯೋಗ್ಯರೀತಿಯಿಂದ ಪ್ರತಿಕ್ರಿಯೆಯನ್ನಾಚರಿಸಿದನು. ಇನ್ನು ಪರಸ್ಪರ ದ್ವೇಷಭಾವವು ಬೇಡ ಎಂದುಕೊಂಡು ಚಿತ್ತೂ

---

*ಆಜನ್ಮವೂ ಬ್ರಹ್ಮಚಾರಿಯಾಗಿಯೇ ಇರುವೆನೆಂದು ತನ್ನ ತಂದೆಗೆ ವಾಗ್ದಾನ ಮಾಡಿದ್ದ ಚಂಡನಿಗೆ ಮಕ್ಕಳೆಲ್ಲಿಂದ ಬಂದರೆಂಬ ಸಂದೇಹವುಂಟಾದೀತು! ಈ ಮಕ್ಕಳು ಬಹುಶಃ ರಘುದೇವನ ಮಕ್ಕಳಿದ್ದು, ಆತನು ಮೃತನಾದ್ದರಿಂದ, ಈಗ ಅವರನ್ನು ದೊಡ್ಡಪ್ಪನಾದ ಚಂಡನ ಪುತ್ರರೇ ಎಂದು ಹೇಳಬಹುದು.

ರನಲ್ಲೇ ನಿಂತುಬಿಟ್ಟನು. ಜೋಧಾನೂ ಸೋಕುಳ ಮತ್ತು ಚಂಡ ಇವರೊಂದಿಗೆ ದೀರ್ಘವೈರವಿಟ್ಟುಕೊಂಡರೆ ಏಕಾಂಗಿಯಾದ ತಾನು ಉಳಿಯುವುದು ಕಷ್ಟವೆಂದು ಭಾವಿಸಿ, ಸಂಧಿಯ ಪ್ರಸ್ತಾಪವನ್ನು ತೆಗೆದು ಅವರನ್ನು ಒಪ್ಪಿಸಿದನು. ಚಂಡನ ಎರಡನೆಯ ಮಗ ಮುಂಜನು ಅಶ್ವಾರೂಢನಾಗಿ ಓಡಿಹೋಗುತ್ತಿದ್ದಾಗ್ಗೆ ತನ್ನ ಸೈನಿಕರಿಂದ ಹತನಾದ ಸ್ಥಳವೇ ಮೇವಾರು ಮತ್ತು ಮಾರವಾರ ಪ್ರಾಂತಗಳ ಎಲ್ಲೆಕಟ್ಟಾಗಿರಬೇಕೆಂದು ನಿರ್ಧಾರವಾಯಿತು. ಇದರಿಂದ ಮಾರವಾಡ ಪ್ರಾಂತದ ಒಂದೆರಡು ತಾಲ್ಲೂಕುಗಳು ಮಾತ್ರ ಮೇವಾರಿಗೆ ಸೇರಿದಂತಾಯಿತು.

ಮುಂದೆ ಮೇವಾರು ಮಾರವಾಡ ರಾಜಕುಟುಂಬಗಳವರು ತಮ್ಮ ಹಿಂದಿನ ಹಗೆತನವನ್ನು ಮರೆತು ಮೈತ್ರಿಯಿಂದ ಇರತೊಡಗಿದರು. ಚಿತ್ತೂರು ನಗರದಮೇಲೆ ದಂಡೆತ್ತಿಬಂದ ಬೇರೊಬ್ಬ ಶತ್ರುವನ್ನು ಎದುರಿಸಿ ಓಡಿಸುವುದಕ್ಕಾಗಿ ಜೋಧಾನು ತನ್ನ ಸೈನ್ಯದೊಂದಿಗೆ ಮುಂದೊಂದುವೇಳೆ ಬಂದು ತನ್ನ ಸೋದರಳಿಯನಿಗೆ ಸಹಾಯಕನಾದನು. ಅವರ ತರುವಾಯ ಸುಮಾರು ಎರಡು ಮೂರು ಶತಮಾನ ಕಾಲ, ಈ ಎರಡು ಪ್ರಾಂತಗಳಿಗೂ ಸ್ನೇಹವು ಅವಿಚ್ಛಿನ್ನವಾಗಿ ನಡೆದುಬಂದಿತು. ಚಂಡನಂತಹ ನೀತಿವಂತರೂ ದೇಶಾಭಿಮಾನಿಗಳೂ ಸ್ವಾರ್ಥತ್ಯಾಗಿಗಳೂ ಇದ್ದಲ್ಲಿ ಯಾವ ದೇಶವು ತಾನೇ ಅಭಿವೃದ್ಧಿಗೆ ಬರಲಾರದು ?

# ರಾಣಾ ಮೋಕುಳದೇವ

ಪೂರ್ವಾಧ್ಯಾಯದಲ್ಲಿ ಕಂಡಂತೆ, ರಾಜಪುತ್ರ ಚಂಡನು ತನ್ನ ಜನ್ಮಸಿದ್ಧಸ್ವಾಸ್ಥ್ಯವಾದ ರಾಜಸಿಂಹಾಸನವನ್ನು ತನ್ನ ಬಲತಮ್ಮನಿಗೆ ವಹಿಸಿ, ಶೇಷ ಜೀವಿತವನ್ನು ಆತನ ಆಸ್ಥಾನದಲ್ಲೇ ಇದ್ದು ಕಳೆದನು. ಹೀಗೆ ಪಡೆದ ರಾಜ್ಯಾಧಿಪತ್ಯವನ್ನು ವಹಿಸಬಲ್ಲ ಧೈರ್ಯ, ಸಾಮರ್ಥ್ಯ, ಜಾಣ್ಮೆ, ಜಾಗರೂಕತೆಗಳು ಯುಕ್ತಪ್ರಮಾಣದಲ್ಲಿ ಮೋಕುಳದೇವನಲ್ಲಿಯೂ ನೆಲೆಗೊಂಡಿದ್ದುದರಿಂದ ಆತನ ರಾಜ್ಯವು ಕೆಲಕಾಲ ಸುರಕ್ಷಿತವಾಗಿದ್ದಿತು. ಆತನು ವಿಕ್ರಮಶಕೆಯ ೧೪೫೫ (ಕ್ರಿ.ಶ.೧೩೯೮) ರಲ್ಲಿ ಸಿಂಹಾಸನಾರೋಹಣ ಮಾಡಿ, ಹದಿನಾಲ್ಕು ವರ್ಷಕಾಲ ರಾಜ್ಯಾಧಿಪತ್ಯಮಾಡಿದನು. ಈತನ ಅಧಿಕಾರಕಾಲವು ಸ್ವಲ್ಪವೇ ಆದರೂ, ಅಷ್ಟುಕಾಲವೂ ದೇಶದಲ್ಲಿ ನ್ಯಾಯಾನ್ಯಾಯವಿಮರ್ಶೆ, ದುಷ್ಟಶಿಕ್ಷಣೆ ಶಿಷ್ಟರಕ್ಷಣೆ ಮುಂತಾದುವು ಉತ್ತಮರೀತಿಯಿಂದ ನಡೆದುವು. ರಾಣಾ ಮೋಕುಳದೇವನು, ಸ್ವತಃ ಶ್ರದ್ಧೆವಹಿಸಿ ರಾಜ್ಯವಿಚಾರಗಳನ್ನು ಗಮನಿಸುತ್ತಿದ್ದನಾದುದರಿಂದ, ರಾಜ್ಯಾಧಿಕಾರಿಗಳಿಗೆ ಸ್ವೇಚ್ಛಾಪ್ರವರ್ತನೆಗೆ ಅವಕಾಶವಿಲ್ಲದೆ, ಪ್ರಜೆಗಳು ಸುಖಸಂಪತ್ತುಗಳನ್ನುಂಟಾಗಿ ತಾಯಮಡಿಲಲ್ಲಿನ ಮಕ್ಕಳಂತೆ ಶಾಂತರಾಗಿದ್ದರು. ಧೀರನಾದ ರಾಣಾ ಮೋಕುಳನು, ಆ ಕಾಲದಲ್ಲಿ ಗುಜರಾತಿನಮೇಲೆ ದಂಡೆತ್ತಿಹೊರಟಿದ್ದ ತೈಮೂರನ ಮೊಮ್ಮಗನನ್ನು, ಆರಾವಳೀ ಬೆಟ್ಟಗಳ ಬಳಿ ಸಂಧಿಸಿ, ಘೋರಯುದ್ಧದಲ್ಲಿ ಸೋಲಿಸಿ ಅಟ್ಟಿದನು. ಇದೇ ಜಯದ ಉತ್ಸಾಹದಲ್ಲೇ ಸೈನ್ಯವನ್ನು ಮುಂದಕ್ಕೂ ನಡೆಯಿಸಿ ತಂಬೂರು ಕೋಟೆಯನ್ನೂ, ಅದಕ್ಕೆ ಸೇರಿದ ಉಪ್ಪುನೀರಿನ ಸರೋವರಗಳನ್ನೂ ಸ್ವಾಧೀನಗೊಳಿಸಿಕೊಂಡು, ಅಗಾಧ ವೈಭವದೊಂದಿಗೆ ರಾಜಧಾನಿಯನ್ನು ಕುರಿತು ಹಿಂದಿರುಗಿದನು. ಲಖಿರಾಣಾನಿಂದ ಪ್ರಾರಂಭಿಸಲ್ಪಟ್ಟಿದ್ದ ಅರಮನೆಯು ಈತನ ಆಳಿಕೆಯಲ್ಲಿ ಕಟ್ಟಿ ಮುಗಿಯಿತು. ದೈವಭಕ್ತನಾದ ಮೋಕುಳನು, ಆರಾವಳೀ ಪರ್ವತದ ಪಶ್ಚಿಮಭಾಗದಲ್ಲಿ ಶ್ರೀ ಚತುರ್ಭುಜಮೂರ್ತಿಗೆ ಒಂದು ಆಲಯವನ್ನು ಕಟ್ಟಿಸಿ, ವಿಗ್ರಹವನ್ನು ಸ್ಥಾಪಿಸಿ, ಉತ್ಸವಾದಿಗಳಿಗೂ ಏರ್ಪಡಿಸಿದನು. ಈತನಿಗೆ ಮೂವರು ಪುತ್ರ

ರೂ, ಅನುಪಮಾನಸೌಂದರ್ಯಶಾಲಿನಿಯಾದ ಒಬ್ಬ ಪುತ್ರಿಯೂ ಇದ್ದರು. ಪ್ರಜೆಗಳೆಲ್ಲರೂ ಈತನ ಆಳ್ವಿಕೆಯು ಬಹಳ ಕಾಲ ಆಗಲೆಂದು ಅಪೇಕ್ಷಿಸುತ್ತಿದ್ದಂತಹ ಸಂದರ್ಭದಲ್ಲೇ, ಒಂದು ವಿಚಿತ್ರರೀತಿಯ ಕಾರಣವೊದಗಿ ಈತನು ದುರ್ಮರಣಕ್ಕೆ ತುತ್ತಾದನು.

ಈತನ ತಂದೆ ಬಹಾದರಖಾನು ರಾಣಾ ಜೈಸಿಂಹನ ಮಗನಲ್ಲವೆ! ಆತನಿಗೆ ವಿಶ್ವಕರ್ಮ (ಬಡಗಿ) ಜಾತಿಯ ಒಬ್ಬ ಸ್ತ್ರೀಯು ಪ್ರೇಯಸಿಯಾಗಿದ್ದು ಅವಳಲ್ಲಿ ಕಾಜಾ, ಮೇರ ಎಂಬಿಬ್ಬರು ಮಕ್ಕಳು ಜನಿಸಿದ್ದರು. ರಾಜನ ಆಸ್ಥಾನದಲ್ಲಿ ರಾಜಬಂಧುಗಳೆಂಬ ಭಾವನೆಯಿಂದ ಅವರಿಗೂ ಯೋಗ್ಯ ಮರ್ಯಾದೆಯು ಸಿಕ್ಕುತ್ತಿತ್ತಾದರೂ. ಸಿಂಹಾಸನಕ್ಕೆ ಬಾಧ್ಯಸ್ಥರಾದ ಔರಸಪುತ್ರರಿಗೆ ದೊರೆಯುತ್ತಿದ್ದಷ್ಟು ರಾಜಮರ್ಯಾದೆಯು ಅವರಿಗೆ ಸಿಕ್ಕುತ್ತಿರಲಿಲ್ಲ. ಸಾಲದುದಕ್ಕೆ ತಮ್ಮ ಜನ್ಮವು ಕೀಳುಕುಲದಲ್ಲಿ ಆಯಿತೆಂಬ ಸಂತ್ರಾಸವು ಅವರ ಹೃದಯದಲ್ಲಿ ನೆಲೆಸಿ, ಅದು ದಿನದಿನಕ್ಕೆ ರಾಜಸಂತತಿಯ ಮೇಲೆ ದ್ವೇಷಭಾವವನ್ನು ಹೆಚ್ಚಿಸತೊಡಗಿತು. ರಾಜನಪ್ರೀತಿಯಲ್ಲಿ ಬೇರಾವುದರೂ ಕಾರಣಾಂತರದಿಂದ, ಬಡಗಿ ವೃತ್ತಿಗೆ ಸಂಬಂಧಪಟ್ಟ ಯಾವ ಮಾತನ್ನಾಡಿದರೂ, ಅದು ತಮ್ಮ ಅಪಮಾನಕ್ಕಾಗಿಯೇ ವ್ಯಂಗ್ಯಾರ್ಥವಾಗಿ ಹೇಳಲ್ಪಟ್ಟುದೆಂದು ಭಾಸವಾಗಿ ಅವರಲ್ಲಿ ದ್ವೇಷಭಾವವನ್ನು ಅಭಿವೃದ್ಧಿಗೊಳಿಸುತ್ತಿರುವುದು. ಹೀಗೆ ಅರ್ಥವಿಲ್ಲದ ಅವರ ದುರ್ಭಾವನೆಯು ಅತ್ಯಂತ ಪ್ರಕೋಪಸ್ಥಿತಿಗೆ ಬರುವಂತಹ ಒಂದು ದುರ್ದೈವದ ಸಂಗತಿಯು ಒಂದು ದಿನ ಸಂಭವಿಸಿತು. ರಾಣಾ ಮೋಕಲನಾದರೋ ಅವರ ಮನಸ್ಸಿನಲ್ಲಿ ಹುಟ್ಟಿ ಬೆಳೆಯುತ್ತಿದ್ದ ಈ ವಿಷವೃಕ್ಷದ ವೃತ್ತಾಂತವೇ ತಿಳಿಯದೆ, ಅವರನ್ನು ತನ್ನ ತಂದೆಯ ಬಲಕಮ್ಮಂದಿರೆಂಬ ಭಾವನೆಯಿಂದ ಯೋಗ್ಯರೀತಿಯಿಂದ ಗೌರವಿಸುತ್ತ, ಏಳುನೂರು ಕುದುರೆಗಳ ಮೇಲಿನ ಅಧಿಕಾರವನ್ನು ಅವರಿಗೆ ವಹಿಸಿ, ನಿಶ್ಚಿಂತೆಯಿಂದ ಅವರೊಂದಿಗೆ ಅತಿ ರಹಸ್ಯದ ರಾಜಕೀಯವಿಚಾರಗಳಲ್ಲೂ ಸಲಹೆ ಕೇಳುತ್ತಿದ್ದನು. ಆದರೆ, ಉನ್ನತಕುಲಸಂಭವರಾದ ಇತರ ಕೆಲವರು ರಾಜಪುತ್ರರು, ಕೀಳುಜಾತಿಯ ಕಾಜಾ-ಮೇರರು ತಮಗಿಂತಲೂ ಉನ್ನತಾಧಿಕಾರವನ್ನು ಪಡೆದುದನ್ನು ಕಂಡು ಸಹಿಸದೆ, ಅವರನ್ನು ಎಂದಾದರೊಂದು ದಿನ ರಾಜಸಮ್ಮುಖದಲ್ಲಿ ಅವಮಾನಗೊಳಿಸಿ, ಅವರ ಪ್ರತಿಷ್ಠೆಯನ್ನು ಹಾಳುಮಾಡಬೇಕೆಂದು ಸಮ

ನಿರೀಕ್ಷೆಯಲ್ಲೇ ಇದ್ದರು. ಅವರಿಗೆ ಅನುಕೂಲಸಂದರ್ಭವೂ ದೊರೆಯಿತು. ಒಂದಿಗೇ ರಾಣಾನ ಪ್ರಾಣಕ್ಕೂ ಅಪಾಯವೊದಗಿತು.

ರಾಣಾ ಮೋಕುಳನು, ಆಗ ತನ್ನ ರಾಜಧಾನಿಯನ್ನು ಮುದೇರಿಯಾ ಎಂಬಲ್ಲಿ ಸ್ಥಾಪಿಸಿಕೊಂಡಿದ್ದನು. ಸಮೀಪದ ಪರ್ವತಪ್ರಾಂತನಿವಾಸಿಗಳಾದ ಹಾಡುಜನರು ದಂಗೆಯೆದ್ದು ಗ್ರಾಮವಾಸಿಗಳಿಗೆ ಹಿಂಸೆಯನ್ನುಂಟುಮಾಡುತ್ತಿರುವರೆಂಬ ವರ್ತಮಾನವು ಬರಲು, ಯುಕ್ತಪರಿವಾರದೊಂದಿಗೆ ಹೊರಟು, ಅವರಮೇಲೆ ಯುದ್ಧಮಾಡಿ ದಂಗೆಯನ್ನಡಗಿಸಿ, ಪ್ರಜೆಗಳಿಗೆ ಅಭಯಪ್ರದಾನಮಾಡಿ ರಾಜಧಾನಿಗೆ ಅಭಿಮುಖವಾಗಿ ಪ್ರಯಾಣಮಾಡುತ್ತಾ, ಮಧ್ಯಾಹ್ನ ಬಹು ಬಿಸಿಲಾಗಿದ್ದುದರಿಂದ ಆತನು ಮಾರ್ಗದಲ್ಲಿ ಸಿಕ್ಕಿದ ತೋಪಿನಲ್ಲಿ ಒಂದು ಮಾವಿನಮರದ ನೆರಳಿನಲ್ಲಿ ವಿಶ್ರಾಂತಿಗಾಗಿ ತಂಗಿದನು. ಆ ಸಂದರ್ಭದಲ್ಲಿ ಆತನು ಎಂದೂ ಕಂಡರಿಯದಿದ್ದ ಒಂದು ನೂತನಜಾತಿಯ ವೃಕ್ಷವು ಆತನಿಗೆ ದೃಷ್ಟಿಗೋಚರವಾಯಿತು. ಮೋಕುಳನು, ಸ್ವಾಭಾವಿಕವಾಗಿಯೇ ಅದು ಯಾವ ಜಾತಿಯ ವೃಕ್ಷವೆಂದು ತನ್ನ ಬಳಿಯಲ್ಲೇ ಇದ್ದ ಕೆಲವುಮಂದಿ ಸರದಾರರನ್ನು ಪ್ರಶ್ನಿಸಿದನು. ಅವರಿಗೆ ಆ ವೃಕ್ಷದ ಹೆಸರೇನೆಂಬುದು ತಿಳಿದಿದ್ದರೂ ಚಾಚ-ಮೇರರನ್ನು ರಾಣಾನಸಮ್ಮುಖದಲ್ಲಿ ಅವಹೇಳನಕ್ಕೆ ಗುರಿಮಾಡಲು ಅದಕ್ಕಿಂತಲೂ ಉತ್ತಮವಾದ ಸಂದರ್ಭವು ದೊರೆಯಲಾರದೆಂದು ಯೋಚಿಸಿ, ಆ ಸರದಾರರು—'ನಮಗೆ ತಿಳಿಯದು, ಒಂದುವೇಳೆ ಚಾಚಮೇರರಿಗೆ ತಿಳಿದಿರಬಹುದು.' ಎಂದು ನುಡಿದರು. ರಾಣಾನಿಗೆ, ಅವರ ದುರುದ್ದೇಶವಾಗಲೀ, ಆ ಸಂಬಂಧ ಪ್ರಶ್ನೆಯು ಚಾಚ-ಮೇರರಿಗೆ ಹೃದಯಶಲ್ಯವಾಗಿರುವುದೆಂಬ ಭಾವನೆಯಾಗಲೀ ಇಲ್ಲದಿದ್ದುದರಿಂದ ಅವರನ್ನು ಕರೆಯಿಸಿ—'ಈ ವೃಕ್ಷವು ಯಾವಜಾತಿಯದು?' ಎಂದು ಪ್ರಶ್ನಿಸಿದನು. ಅವರ ಹೃದಯವು ಮೊದಲೇ ಕಳಂಕಿತವಾಗಿದ್ದುದರಿಂದ, ಕೇವಲ ಸ್ವಾಭಾವಿಕರೀತಿಯಲ್ಲಿ ಕೇಳಲ್ಪಟ್ಟ ಆ ಪ್ರಶ್ನೆಯು, ಅಷ್ಟು ಮಂದಿಯಲ್ಲಿ ತಮ್ಮ ಜನ್ಮಸ್ಥಳದ ಕೀಳ್ದೆಸೆಯನ್ನು ಎತ್ತಿ ಆಡಿ ಅವಮಾನಗೊಳಿಸುವುದಕ್ಕಾಗಿಯೇ ಕೇಳಲ್ಪಟ್ಟುದೆಂದು ಅವರಿಗೆ ತೋರಿ, ಗುಪ್ತವಾಗಿ ಅಡಗಿದ್ದ ಕ್ರೋಧಾನಲವನ್ನು ಎಣ್ಣೆ ಹೊಯ್ದು ಹುತಗೊಳಿಸಿದಂತೆ ಜ್ವಾಲೆಯನ್ನಾಗಿಸಿತು. ಆ ಮಾತುಗಳನ್ನು ಕೇಳಿ ಅತಿಶಯ ಸಂತಾಪಗೊಂಡ ಅವರು, ಆಗಲೇ ಏನು ಪ್ರತೀಕಾರವನ್ನೂ

ಮಾಡಲಾಗದಿದ್ದರೂ, 'ತಮಗೆ ಅದರ ಹೆಸರು ತಿಳಿಯದೆ'ಂದು ಪ್ರತ್ಯಕ್ಷರ ಹೇಳಿ, ಅದಕ್ಕೆ ಯೋಗ್ಯಪ್ರತೀಕಾರ ಮಾಡಲು ಸಮಯನಿರೀಕ್ಷಣೆ ಮಾಡಿಕೊಂಡಿದ್ದರು. ಅದಿನ ಸಾಯಂಕಾಲವೇ, ಸರದಾರರು ಅಲ್ಲಲ್ಲಿ ಚದರಿಹೋಗಿದ್ದು, ರಾಣಾನು ಒಂದು ಮಡಿಯುಟ್ಟು ಏಕಾಂಗಿಯಾಗಿ ಧ್ಯಾನಾರೂಢನಾಗಿ ಕುಳಿತಿದ್ದ ವೇಳೆಯಲ್ಲಿ, ಆ ಘಾತುಕರು ನಿಶಿತವಾದ ಆಯುಧಹಸ್ತರಾಗಿ ಹಿಂದುಗಡೆಯಿಂದ ಬಂದು, ಒಂದೇಹೊಡೆತಕ್ಕೆ ರಾಣಾನ ಒಂದುಕೈಯನ್ನು ಕತ್ತರಿಸಿದರು. ಮುಸ್ಸಂಜೆಯ ಮಬ್ಬಿನಲ್ಲಿ ಅಕಸ್ಮಾತ್ತಾಗಿ ಒದಗಿದ ಆ ಅಪಘಾತಕ್ಕೆ ಕಾರಣವೇನಿರಬಹುದೆಂದು ತಿರುಗಿನೋಡುವವೇಳೆಗೇ ರಾಣಾನ ರುಂಡವು ಆ ಘಾತುಕರ ಕತ್ತಿಗೆ ತುತ್ತಾಗಿ ನೆಲಕ್ಕುರುಳಿ ಧೂಳಿಯಲ್ಲಿ ಹೊರಳತೊಡಗಿತು. ಹೀಗೆ ವೈರಿಯನ್ನು ಘಾತಿಸಿದೆವೆಂದು ಕೃತಕೃತ್ಯರಾದವರಂತೆ ಆ ಚಾಚಸೋದರರು ಒಡನೆ ರಾಜಧಾನಿಯನ್ನೂ ಕೈವಶಮಾಡಿಕೊಳ್ಳಬೇಕೆಂದು ವೇಗಶಾಲಿಗಳಾದ ಅಶ್ವಗಳನ್ನೇರಿ, ನಾಲ್ಗಾಲೋಟದಿಂದ ಓಡಿಸಿಕೊಂಡು ಕೋಟೆಯಕಡೆಗೆ ಬರತೊಡಗಿದರು. ಆದರೆ ಮಹಾಜಾಗರೂಕರಾಗಿದ್ದ ಆ ದುರ್ಗಪಾಲಕರು ದುರುದ್ದೇಶದಿಂದ ಬರುತ್ತಿದ್ದ ಅವರ ಪ್ರವೇಶಕ್ಕೆ ಆಸ್ಪದಕೊಡದೆ ತಡೆಯಲು, ತಮ್ಮ ಉದ್ದೇಶವು ಸಂಪೂರ್ಣವಾಗಿ ನೆರವೇರದಿದ್ದುದಕ್ಕಾಗಿ ಅವರಿಗೆ ಕೋಪವು ಮಿತಿಮೀರಿತು.

ಪ್ರಜಾವತ್ಸಲನಾಗಿದ್ದ ತಮ್ಮ ಪ್ರಭು ಮೋಕಳನು ದುರ್ಮರಣಕ್ಕೆ ತುತ್ತಾದ ಸಂಗತಿಯು ಒಡನೆ ಕಾಳ್ಗಿಚ್ಚಿನಂತೆ ಹಬ್ಬಿ, ಪ್ರಜೆಗಳು ಹಾಹಾಕಾರ ಮಾಡತೊಡಗಿದರು. ಮೋಕಳನ ಮೂರುಮಂದಿ ಪುತ್ರರಲ್ಲಿ ಹಿರಿಯವನಾದ ಕುಂಭನು ಬುದ್ಧಿವಂತನೂ ದೂರಾಲೋಚಕನೂ ಆದುದರಿಂದ, ತನ್ನ ತಂದೆಗೆ ವಿರೋಧಿಯಾಗಿದ್ದರೂ ಬಂಧುವಾದ ಜೋಡನಿಗೆ ತನ್ನ ಆ ಆಪತ್ಸಮಯದಲ್ಲಿ ಸಹಾಯಕ್ಕೆ ಬರಬೇಕೆಂದು ಹೇಳಿಕಳುಹಿಸಿದನು. ಜೋಡನಾದರೂ ಪೂರ್ವದ್ವೇಷವನ್ನು ಮನಸ್ಸಿಗೆ ತಂದುಕೊಳ್ಳದೆ, ಪಿತೃವಿಹೀನರಾದ ಆ ಬಾಲಕರಮೇಲೆ ದಯೆಯು ಉಕ್ಕಿ ಬರಲು, ಅವರ ಸಹಾಯಕ್ಕೆಂದು ಸ್ವಲ್ಪ ಸೇನೆಯನ್ನೂ ಅದರೊಂದಿಗೆ ತನ್ನ ಮಗನನ್ನೂ ಕಳುಹಿಸಿದನು. ಜೋಡನ ಆ ಸೇನೆಯೂ, ಕುಂಭನಸೇನೆಯೂ ಒಂದಾಗಿ ಹೊರಟು ರಾಜದ್ರೋಹಿಗಳಾದ ಆ ಅಣ್ಣತಮ್ಮಂದಿರನ್ನು ಒಂದೆಡೆಯಲ್ಲೂ ನಿಲ್ಲಗೊಡ

ದಂತೆ ಊರಿಂದ ಊರಿಗೆ ದುರ್ಗದಿಂದ ದುರ್ಗಕ್ಕೆ ಓಡಿಸುತ್ತಾ ಸಾಕುಸಾಕೆನ್ನಿಸಿತು. ಕಾಚಮೇರರು ಪ್ರಾಣಭಯದಿಂದ ಅಲ್ಲಲ್ಲಿ ಅಲೆದು ಕೊನೆಗೆ ರಾಟಕೋಟೆ ಎಂಬೊಂದು ದುರ್ಗವನ್ನು ಹೊಕ್ಕರು. ರಾಟಕೋಟೆಯು ಗುಡ್ಡ ಬೆಟ್ಟಗಳ ಪ್ರಾಂತದಲ್ಲಿ-ಗೊಂಡಾರಣ್ಯದ ಮಧ್ಯಪ್ರದೇಶದಲ್ಲಿದ್ದುದರಿಂದ ಕೆಲ ದಿನಗಳವರೆಗೆ ಅಲ್ಲಿ ಅವರಿಗೆ ಶತ್ರುಬಾಧೆಯು ಒದಗದೆ ನಿಶ್ಚಿಂತತೆಯಿಂದ ಇರಲು ಸಾಧ್ಯವಾಯಿತು. ತಮ್ಮ ಆ ಸ್ಥಳವು ಸುರಕ್ಷಿತವಾದುದೆಂದು ಅವರ ಮನಸ್ಸಿಗೆ ದೃಢವಾದಮೇಲೆ ಅವರು ಆ ಕೋಟೆಯ ಬಿದ್ದುಹೋದ ಕೆಲ ಭಾಗಗಳನ್ನು ಸರಿಪಡಿಸಿ ಅಲ್ಲೇ ನೆಲೆಯಾಗಿ ನಿಲ್ಲಲು ನಿಶ್ಚಯಿಸಿದರು.

ಆದರೂ ಅನ್ಯಾಯಕಾರಿಗಳಾದ ಅವರಮೇಲೆ ವಿಧಿಯಾದರೂ ದಯೆ ತೋರುವುದೆಂತು ? ಅವರ ಮನಸ್ಸು ಬರುತ್ತಾ ಬರುತ್ತಾ ಅನ್ಯಾಯ ಮಾರ್ಗವನ್ನೇ ಹಿಡಿದು ಕೊನೆಗೆ ಅದೇ ಅವರ ಮೃತ್ಯುವಿಗೂ ಕಾರಣವಾಯಿತು. ತನ್ನ ತಂದೆಯನ್ನು ಘಾತುಕತನದಿಂದ ವಧಿಸಿದ ಆ ನೀಚರನ್ನು ಹಿಡಿದು ವಧಿಸಬೇಕೆಂದು ಕೃತಸಂಕಲ್ಪನಾದ ಮೇವಾರಪ್ರಭುವೂ ಆತನಿಗೆ ಸಹಾಯಕನಾದ ಮಾರ್ವಾಡರಾಜಪುತ್ರನೂ ಕಾಚಮೇರರ ಜಾಡೆಯನ್ನು ತಿಳಿಯಬೇಕೆಂದು ದುರ್ಗಮಾರಣ್ಯಗಳಲ್ಲಿ ಸಂಚರಿಸುತ್ತಿರಲಾಗಿ, ಒಂದಾನೊಂದು ದಿನ ಅಕಸ್ಮಾತ್ತಾಗಿ ಒಬ್ಬ ಅಪರಿಚಿತ ಮನುಷ್ಯನು ಬಂದು ಅವರ ಪಾದಗಳ ಮೇಲೆ ಬಿದ್ದು-'ಪ್ರಭೋ, ನ್ಯಾಯವನ್ನು ದೊರಕಿಸಿಕೊಟ್ಟು ನನ್ನನ್ನು ಕಾಪಾಡಿ' ಎಂದು ಬೇಡಿಕೊಂಡನು.-'ನೀನು ಯಾರು, ಏತಕ್ಕಾಗಿ ಬಂದಿರುವೆ, ನಿನಗೆ ಪ್ರಾಪ್ತವಾಗಿರುವ ಆಪತ್ತೇನು' ಎಂದು ಅವರು ಪ್ರಶ್ನಿಸಲು, ಆ ಅಪರಿಚಿತ ಮನುಷ್ಯನು-'ನಾನು ಚೋಹಣ ವಂಶಸಂಭೂತನಾದ ಒಬ್ಬ ರಜಪೂತನು. ಸುಜಾ ಎಂಬುದು ನನ್ನ ಹೆಸರು. ನನಗೆ ರಾಜಸ್ಥಾನದಲ್ಲೇ ಅಪ್ರತಿಮ ಲಾವಣ್ಯಮಯಿಯೆನ್ನಿಸಿದ್ದ ಒಬ್ಬ ಮಗಳಿದ್ದಳು. ಒಂದುದಿನ ಅಗೋ ಅಲ್ಲಿ ಕಾಣುವ ಆ ದುರ್ಗನಿವಾಸಿಗಳಾದ ಕಾಚಮೇರರು, ಈ ಬೆಟ್ಟವನ್ನು ಇಳಿಯುವಾಗ ನನ್ನ ಮಗಳನ್ನು ನೋಡಿ, ಬಲಾತ್ಕಾರದಿಂದ ಅವಳನ್ನೆತ್ತಿಕೊಂಡು ರಾಟಕೋಟೆಗೆ ಹೊರಟುಹೋದರು. ನನ್ನೀದುರ್ದಸೆಯನ್ನು ರಾಣಾಯವರಲ್ಲಿ ವಿಜ್ಞಾಪಿಸಿಕೊಳ್ಳಬೇಕೆಂದು ಹೋಗುತ್ತಿರಲು ಮಾರ್ಗಮಧ್ಯದಲ್ಲೇ ನನ್ನ ಅದೃಷ್ಟವಶದಿಂದ ನೀವೇ ದೊರೆತಿರಿ. ರಾಟಕೋಟೆಯು

ಜನಗಳು ಹೇಳಿಕೊಳ್ಳುವಷ್ಟು ದುರ್ಭೇದ್ಯವಾಗಿಲ್ಲ. ಅದರ ಗುಪ್ತಸ್ಥಾನಗಳನ್ನು ನಾನು ಬಲ್ಲೆನು. ಈಚೆಗೆ ಅದರ ಕಾಮಗಾರಿಯು ನಡೆದಾಗ್ಗೆ ನಾನು ಒಬ್ಬ ಬಡ ಕೂಲಿಯವನ ವೇಷದಿಂದ ಕೆಲಸಕ್ಕೆ ಸೇರಿ, ಅದರ ಅಂತರ್ಯವನ್ನೆಲ್ಲ ತಿಳಿದಿದ್ದೇನೆ. ಮಿಕ್ಕ ಎಲ್ಲಾ ಭಾಗಗಳಲ್ಲೂ ದುರ್ಗಮವಾಗಿದ್ದರೂ, ಒಂದು ಕಡೆ ಮಾತ್ರ ಅದು ಪ್ರವೇಶಸಾಧ್ಯವಾಗಿದೆ. ಎಷ್ಟು ಕಷ್ಟವನ್ನಾದರೂ ಸಹಿಸಿ, ಒಂದುಸಾರಿ ಕೋಟೆಯ ಮೇಲ್ಭಾಗವನ್ನು ಸೇರಬಲ್ಲೆವಾದರೆ, ಮುಂದೆ ಕೋಟೆಯು ನಮ್ಮ ಸ್ವಾಧೀನವಾದಂತೆಯೇ ಸರಿ. ಏಕೆಂದರೆ, ಕೋಟೆಯು ಅತಿಶಯ ದುರ್ಗಮವಾದುದೆಂಬ ಭಾವನೆಯಿಂದ ಕಾವಲುಗಾರರು ಸ್ವಾಭಾವಿಕವಾಗಿಯೇ ಅಶ್ರದ್ಧೆಯಿಂದ ಮೈಮರೆತು ಇದ್ದಾರೆ” ಎಂದು ನುಡಿದನು.

ಅಪರಿಚಿತ ವ್ಯಕ್ತಿಯು ಹೇಳುತ್ತಿದ್ದ ಆ ಕಥೆಯನ್ನು ಸಾವಧಾನದಿಂದ ಕೇಳುತ್ತಿದ್ದ ಆ ರಾಜಪುತ್ರರು-‘ಹಾಗಾದರೆ ನಮಗೆ ಆ ಗುಪ್ತಮಾರ್ಗವನ್ನು ತೋರಿಸಬಲ್ಲೆಯಾ ?’ ಎಂದು ಅತನನ್ನು ಕೇಳಿದರು. ಅತನು ಹಾಗೇ ಆಗಲೆಂದು ಒಪ್ಪಿಕೊಂಡನು. ಒಡನೆ ಆ ರಾಜಕುಮಾರರು ತಮ್ಮ ಪರಿವಾರದವರಲ್ಲಿ ಬಹು ಬಲಿಷ್ಠರೂ ಕಷ್ಟಸಹಿಷ್ಣುಗಳೂ ಅನುಭವಿಗಳೂ ಆದ ಕೆಲಮಂದಿಯನ್ನು ಆರಿಸಿಕೊಂಡು, ಕುದುರೆಗಳನ್ನು ತಿರುಗಿಸಿಕೊಂಡು ರಾಟೆಕೋಟೆಗೆ ಅಭಿಮುಖರಾಗಿ ಹೊರಟರು. ಮುಂದೆ ಸುಜಾನೂ ಆ ಹಿಂದೆ ಅಶ್ವಾರೋಹರಾದರಾಜಪುತ್ರರೂ ಅವರ ಹಿಂದೆ ಪರಿವಾರದವರೂ ಸಾಲಾಗಿ ಹೋಗುತ್ತಿದ್ದರು. ಅಷ್ಟುಮಂದಿ ಪ್ರಯಾಣಮಾಡುತ್ತಿದ್ದರೂ ಲೇಶಮಾತ್ರವೂ ಶಬ್ದವಿಲ್ಲದೆ, ಒಬ್ಬರಾದರೂ ಗಟ್ಟಿಯಾಗಿ ಉಸಿರು ಸಹ ಬಿಡದೆ, ಕೇವಲ ಸೂತ್ರದಬೊಂಬೆಗಳೋ ಎಂಬಂತೆ ಚಲಿಸಿ ಸಾಗುತ್ತಿದ್ದರು. ಆ ರಾತ್ರಿಯಾದರೋ, ಆಕಾಶವನ್ನೇ ಮುಚ್ಚಿಕೊಂಡಂತೆ ನೆರೆದಿದ್ದ ಕಾರ್ಮೋಡಗಳಿಂದ ಕಗ್ಗತ್ತಲಾಗಿತ್ತು. ಅಂತರಿಕ್ಷವೇ ತೂತು ಬಿದ್ದಿತೋ ಎಂಬಂತೆ ಸಾರೋದ್ಧಾರವಾಗಿ ವರ್ಷವು ಸುರಿಯುತ್ತಿತ್ತು. ಮಧ್ಯೆಮಧ್ಯೆ ಕಣ್ಣುಗಳು ಕೊರೆದುಹೋಗುವಂತಹ ಕೋಲ್ಮಿಂಚುಗಳೂ, ಕಿವಿಗಳನ್ನು ಕಿವಿಡಾಗಿಸುವಂತಹ ಗುಡುಗುಗಳೂ ಎಂತಹ ಧೈರ್ಯಶಾಲಿಯ ಹೃದಯವನ್ನೂ ನಡುಗಿಸುವಂತಿದ್ದುವು. ಮುಂದೆ ಹೋಗುತ್ತಿರುವವರಾಗಲೀ, ಹಿಂದೆ ಬರುತ್ತಿ

ರುಪವೇಳಾಗಲೀ ಯಾರಿಗೆ ಯಾರೂ ಕಾಣಿಸದೆ, ಫಳಕ್ಕೆಂದು ಮಿಂಚಿದಾಗ ಮಾತ್ರ ಮಾರ್ಗವನ್ನು ನೋಡಿಕೊಂಡು ಆ ಜನರು ಮುಂದೆ ಸಾಗುತ್ತಿದ್ದರು. ಎಲ್ಲಿ ಸ್ವಲ್ಪ ಸದ್ದಾದರೆ, ತಮ್ಮ ಸುಳಿವು ಶತ್ರುಗಳಿಗೆ ತಿಳಿದು, ತಮ್ಮ ಕಾರ್ಯಕ್ಕೆ ವಿಘಾತವುಂಟಾಗುವುದೋ ಎಂದು, ಅವರಲ್ಲಿ ಎದ್ದುಬಿದ್ದರೂ ಗಾಯವಾದರೂ, ಯಾರೂ ಏನೊಂದು ವಿಧದ ಶಬ್ದವನ್ನೂ ಮಾಡದೆ ಸುಮ್ಮನೆ ಹೋಗುತ್ತಿದ್ದರು. ಎಲ್ಲರಿಗಿಂತಲೂ ಮುಂದಿದ್ದ ಸುಜಾನು ಹೀಗೆ ಎಲ್ಲರನ್ನೂ ದುರ್ಗದ ಬುಡಕ್ಕೆ ಕರೆದುಕೊಂಡುಹೋಗಿ, ಅಲ್ಲೇ ಮುಂದೆ ಇದ್ದ ಎತ್ತರವಾದ ಒಂದು ಬಂಡೆಯಮೇಲೆ ಹತ್ತಲು ಪ್ರಯತ್ನಿಸಿ ಕಾಲಿಡಲು, ಎದುರಿಗೇ, ಉರಿಯುತ್ತಿರುವ ಬೆಂಕಿಯ ಕೆಂಡಗಳಂತೆ ಕಣ್ಣುಗುಡ್ಡೆಗಳನ್ನು ಬಿಟ್ಟುಕೊಂಡು, ಆಹಾರಕ್ಕಾಗಿ ಬಾಯ್ತೆರೆದುಕೊಂಡು ಮೃತ್ಯುವಿನಂತೆ ಕಾದು ಕುಳಿತಿದ್ದ ಒಂದು ಭಯಂಕರ ವ್ಯಾಘ್ರವನ್ನು ಕಂಡು ಸ್ತಂಭಿತನಾದನು. ತನ್ನ ಕುಲಕ್ಕೇ ಏಕಮಾತ್ರ ಸಂತಾನವಾಗಿದ್ದ ತನ್ನಮಗಳಿಗೂ ತನಗೂ ಬಳಿಕ ತನ್ನ ವಂಶಕ್ಕೂ ಪ್ರಾಪ್ತವಾಗಿದ್ದ ಆ ದುರಂತದುರ್ದಸೆಯನ್ನೂ, ಇವರೆಗಿನ ಪ್ರಯಾಣದಿಂದ ಪ್ರಾಪ್ತವಾಗ ಅತಿಶಯ ಆಯಾಸವನ್ನೂ ಮನೋವ್ಯಥೆಯನ್ನೂ ಸಹಿಸಲಾರದೆ, ಪ್ರಾಣಹೋದರೂ ಹೋಗಲೆಂದು ಎಂತಹ ಅಪಾಯವನ್ನಾದರೂ ಎದುರಿಸಲು ಹಿಂಜರಿಯದಿದ್ದ ಆತನು ಸದ್ಯಃ ತಮ್ಮ ಪರಿವಾರಕ್ಕೇ ಪ್ರಾಪ್ತವಾಗಿದ್ದ ಅಪಾಯವನ್ನು ಕಂಡು ಅದನ್ನು ಕುರಿತು ಯೋಚಿಸಲು, ರಾಜಕುಮಾರನ ಕೈಯನ್ನು ಸ್ಪರ್ಶಿಸಿದನು. ರಾಜಪುತ್ರ ಕುಂಭನು, ಏನೋ ಅಪಾಯವು ಸಂಭವಿಸಿರುವುದೆಂದು ಶಂಕಿಸಿ, ಸುತ್ತಲೂ ನೋಡಲು ಎದುರಿಗೆ ಬಿಟ್ಟ ಕಣ್ಣುಗಳಿಂದ ಮೇಲೆ ಹಾರಲು ಸಿದ್ಧಪಡಿಸಿಕೊಳ್ಳುತ್ತಿದ್ದ ಭಯಂಕರವಾದ ಹುಲಿಯು ದೃಷ್ಟಿಗೋಚರವಾಯಿತು. ಒಡನೆ ಕತ್ತಿಯನ್ನು ಸೆಳೆದು, ಹಿಂದೆಮುಂದೆ ನೋಡದೆ ಪ್ರಯೋಗಿಸಿ ಒಂದೇ ಪೆಟ್ಟಿಗೆ ಅದನ್ನು ಸಂಹರಿಸಿಬಿಟ್ಟನು. ಆ ಪ್ರಹಾರದಿಂದ ನೊಂದ ಆ ಹುಲಿಯು ಮರಣವೇದನೆಯಿಂದ ಅಬ್ಬರಿಸಿಕೊಂಡು ಮೃತವಾಗಿ ಬೆಟ್ಟದ ಮೇಲ್ಭಾಗದಿಂದ ಉರುಳಿ ಕೆಳಕ್ಕೆ ಬಿದ್ದಿತು. ಆ ವೇಳೆಗೆ ಸರಿಯಾಗಿ, ಅತ್ತ ದುರ್ಗದಲ್ಲಿ ಮಲಗಿದ್ದ ರಾಜನ ಮಗಳು ಎಚ್ಚತ್ತು, ಮರಣಕಾಲದ ಆ ಹುಲಿಯ ಅಬ್ಬರವನ್ನೂ ಅದು ಕೆಳಕ್ಕೆ ಉರುಳಿಬಿದ್ದ ಶಬ್ದವನ್ನೂ ಕೇಳಿ, ತನ್ನ ತಂದೆಯನ್ನು

ಎಬ್ಬಿಸಿ–'ಅಪ್ಪಾ ಏನೋ ಶಬ್ದವಾಗುತ್ತಿದೆ. ಶತ್ರುಗಳೇನಾದರೂ ಬಂದಿದ್ದಾರೋ ನೋಡು' ಎಂದು ಹೇಳಿದಳು. ಆದರೆ ಚಾಚನು—'ಮಗೂ ಶತ್ರುಗಳೆಲ್ಲಿಂದ ಬಂದಾರು ! ಭಯವಿಲ್ಲ, ಮಲಗಿನಿದ್ರೆ ಮಾಡು. ನಮ್ಮ ಶತ್ರುಗಳು ಬಹುದೂರ ಇದ್ದಾರೆ. ಅದು ಗುಡುಗಿನ ಶಬ್ದವಿರಬಹುದು. ದೇವರನ್ನು ಸ್ಮರಿಸಿಕೊಂಡು ನಿರ್ಭಯವಾಗಿ ಮಲಗಿ ನಿದ್ರಿಸು' ಎಂದು ನುಡಿದು ತಾನೂ ಗಾಢನಿದ್ರಾಸಕ್ತನಾದನು.

ತರುವಾಯ ಸ್ವಲ್ಪ ಹೊತ್ತಿನೊಳಗಾಗಿಯೇ ಶತ್ರುಗಳು ದುರ್ಗವನ್ನು ಪ್ರವೇಶಿಸಿದ್ದಾರೆಂಬ ವಾರ್ತೆಯು ಎಲ್ಲಾಕಡೆಯೂ ಹಬ್ಬಿತು. ಕೋಟೆಯೊಳಗಿನ ಸೈನಿಕರು ಆಯುಧಗಳಿಗಾಗಿ ಅಲ್ಲಲ್ಲಿ ಸುತ್ತಾಡತೊಡಗಿದರು. ಆದರೆ ಅವರ ಪರಿಶ್ರಮವೆಲ್ಲವೂ ವ್ಯರ್ಥವಾಯಿತು. ಮಾರವಾಡದಿಂದ ಬಂದ ರಾಜಕುಮಾರನು ಮೇರನನ್ನು ತೀರಿಸಿದನು. ಸುಜಾನು ಚಾಚನ ಶಿರಚ್ಛೇದನ ಮಾಡಿ ತನ್ನ ಹಗೆತನವನ್ನು ತೀರಿಸಿಕೊಂಡನು. ಹೀಗೆ ರಾಜದ್ರೋಹವನ್ನೂ-ಸಾಧ್ವಿಯ ಮಾನಾಪಹರಣವನ್ನೂ ಮಾಡಿದ ಆ ನೀಚರು ತಮ್ಮ ಪಾಪಕ್ರಿಯೆಗಳ ಫಲವೋ ಎಂಬಂತೆ ನಿಮಿಷಮಾತ್ರದಲ್ಲೇ ಯಮಸದನವನ್ನು ಸೇರಿದರು. ಕುಂಭನು ಹೀಗೆ ತನ್ನ ತಂದೆಯನ್ನು ವಧಿಸಿದ್ದ ದುರಾತ್ಮರನ್ನು ಅಂತ್ಯಗೊಳಿಸಿ ಕೃತಕೃತ್ಯನಾಗಿ ರಾಜಧಾನಿಯನ್ನು ಸೇರಿದನು.

# ರಾಣಾ ಕುಂಭ

ತರುಣಪ್ರಾಯ ಧೀರನಾದ ಕುಂಭನು ಕ್ರಿ. ಶ. ೧೪೩೩ ರಲ್ಲಿ ಅತಿಶಯ ವೈಭವದಿಂದ ಸಿಂಹಾಸನಾರೋಹಣಮಾಡಿ ಧರ್ಮದಿಂದ ರಾಜ್ಯಪಾಲನೆ ಮಾಡಲಾರಂಭಿಸಿದನು. ಮೇವಾರುರಾಜ್ಯವು ಈತನ ಕಾಲದಲ್ಲಿ ನಿಷ್ಕಂಟಕವಾಗಿದ್ದಿತಾದರೂ, ಅಲ್ಪಸ್ವಲ್ಪ ಅಂತರ್ಯುದ್ಧ ಕಿರುಕುಳಗಳು ಇಲ್ಲದಿರಲಿಲ್ಲ. ಮಾರ್ವಾಡದೇಶಾಧಿಪರು ಎಂದಿನಂತೆ ಬಂಧುಗಳೂ ಸಹಾಯಕರೂ ಆಗಿರಲು ಮುಂದೆ ಕೆಲವುಕಾಲ ಯಾವ ಅರಸನ ಧಾಳಿಯೂ ಇಲ್ಲದೆ ದೇಶದಲ್ಲಿ ಶಾಂತತೆಯು ನೆಲೆಸಿರಲು ಅವಕಾಶವೊದಗಿತು.

ಪೃಥ್ವಿಯ ಮತ್ತಾವ ದೇಶಕ್ಕೂ ಒದಗಿರದ ಒಂದಪೂರ್ವಸೌಭಾಗ್ಯವು ಆದಿಯಿಂದಲೂ ಮೇವಾರುದೇಶಕ್ಕೆ ಒದಗಿ ಅದರ ಕೀರ್ತಿಧ್ವಜವನ್ನು ಭಾರತ ದೇಶದ ಇತಿಹಾಸಕ್ಷೇತ್ರದಲ್ಲಿ ಚಿರಸ್ಥಾಯಿಯನ್ನಾಗಿಸಿತು. ಮತ್ತಾವ ರಾಜವಂಶದಲ್ಲೂ ಹಲವು ಶತಮಾನಗಳವರೆಗೆ ಒಂದೇ ಸಮನಾಗಿ ಶೂರರೂ ಧೀರರೂ ಕರ್ತೃತ್ವಶಾಲಿಗಳೂ ಆದ ರಾಜರನ್ನು ಒದಗಿಸಿದ ಉದಾಹರಣೆ ಸಿಕ್ಕುವುದು ದುರ್ಲಭ. ಆದರೆ ಚಿತ್ತೂರು ರಾಜವಂಶದಲ್ಲಿ ಬಪ್ಪಾರಾವಳ ಹಮ್ಮೀರಸಿಂಹರ ಪವಿತ್ರನಾಮಗಳನ್ನು ಸಾರ್ಥಕಗೊಳಿಸುವಂತಹ ಧೀರವರೇಣ್ಯರು ಮೇಲೆಮೇಲೆ ಜನ್ಮವೆತ್ತಿ, ಅದರ ಪಾವಿತ್ರ್ಯತೆಯನ್ನು ಕಾಯ್ದುಕೊಂಡುಬಂದರು. ಕಾಮಾಂಧನಾದ ಅಲ್ಲಾವುದ್ದೀನನು ಚಿತ್ತೂರಿನಮೇಲೆ ದಂಡೆತ್ತಿಬಂದು ಅದನ್ನು ಧ್ವಂಸಗೊಳಿಸಿ ಈ ವೇಳೆಗೆ ಸರಿಯಾಗಿ ಒಂದು ಶತಮಾನಕಾಲವಾಗಿದ್ದಿತು. ಈ ಶತಮಾನಕಾಲಾವಧಿಯಲ್ಲಿ, ಚಿತ್ತೂರು ಪುನಃ ಚೇತರಿಸಿಕೊಂಡು, ತನ್ನ ಪೂರ್ವದ ವೈಭವವನ್ನು ಮೆಲ್ಲಮೆಲ್ಲನೆ ಗಳಿಸಿಕೊಳ್ಳಲು ಪ್ರಯತ್ನಿಸತೊಡಗಿದ್ದಿತು. ಅದರ ರಕ್ಷಣೆಗಾಗಿ ದೇಹತ್ಯಾಗಮಾಡಿ ರಣಕ್ಕೆಬಲಿಗಳಾದ ಮಹನೀಯರ ಸ್ಥಾನದಲ್ಲಿ, ತಮ್ಮ ಹೃದಯರಕ್ತವನ್ನಾದರೂ ಬಸಿದು, ಅವರ ಆರ್ಷೇಯಘನತೆಯನ್ನು ಕಾಪಾಡಲು ಹಿಂಜರಿಯದಿದ್ದ ಧೀರರು ಪುನಃ ಸಹಸ್ರಸಹಸ್ರ ಸಂಖ್ಯೆಯಿಂದ ಉದ್ಭವಿಸಿ ಶತ್ರುರಾಜರ ಕಣ್ಣು ಕುಕ್ಕುವಂತೆ ತಮ್ಮ ವೈಭವಪ್ರತಾಪಗಳನ್ನು ಮೆರೆಯಿಸು

ತ್ತಿದ್ದರು. ರಾಣಾ ಕುಂಭನಲ್ಲಿ ಹವಿನಾರನ ಶಕ್ತಿಸಾಹಸಗಳೂ, ಅಕಬರ ರಾಣಾನ ರಸಿಕತೆಯೂ ಒಂದಾಗಿ ಬೆರೆದಿದ್ದುವು. ಸಮರಸಿಂಹನ ಕಾಲಕ್ಕೆ ಯವನಸೈನ್ಯದಿಂದ ಮಾವಾರುಸೈನ್ಯಕ್ಕೆ ಯಾವ ರಣಕ್ಷೇತ್ರದಲ್ಲಿ ಪರಾಭವ ವುಂಟಾಗಿದ್ದಿತೋ, ಆ ರಣಕ್ಷೇತ್ರದಲ್ಲಿ ಇಂದು ರಾಣಾ ಕುಂಭನ ವಿಜಯ ಧ್ವಜವು ನಿರಂಕುಶತೆಯಿಂದ ಹಾರಾಡುತ್ತಿರುವುದು. ಷಹಬುದ್ದೀನ-ಸಮರ ಸಿಂಹರ ಕಾಲದಿಂದ ಈಚೆಗೆ ದೆಹಲಿ ಸಿಂಹಾಸನವನ್ನು ಇಪ್ಪತ್ತನಾಲ್ಕು ಮಂದಿ ಚಕ್ರವರ್ತಿಗಳೂ ಒಬ್ಬ ಚಕ್ರವರ್ತಿನಿಯೂ ಆಳಿದರು. ಆ ಆಳ್ವಿಕೆಯಾದರೂ ಪಿತೂರಿ, ದಂಗೆ, ದುರ್ಮರಣ, ಹತ್ಯೆ, ಸಿಂಹಾಸನಚ್ಯುತಿ ಮುಂತಾದ ಹಲವು ಅನಾಹುತಗಳಲ್ಲಿ ಈಜಿಕೊಂಡೇ ಸಾಗಿತು. ಆದರೆ ಇಷ್ಟು ಕಾಲಾವಧಿಯಲ್ಲಿ ಚಿತ್ತೂರನ್ನು ಕೇವಲ ಹನ್ನೊಂದು ಮಂದಿ ರಾಜಪುತ್ರರು ಮಾತ್ರವೇ ಆಳಿ ದರು. ಅಲ್ಲಿ ದೆಹಲಿ ರಾಜಧಾನಿಯಲ್ಲಿ ನಡೆದಂತೆ ದಂಗೆದರೋಡೆಗಳಾಗಲೀ ಕೊಲೆಕಾಪಟ್ಯಗಳಾಗಲೀ ಪ್ರವೇಶವುಂಟಾಗಲಿಲ್ಲ. ಅಲ್ಲಿಯ ರಾಜರೂ ಪ್ರಜೆಗಳೂ, ತಮ್ಮ ಧರ್ಮರಕ್ಷಣೆ-ಆತ್ಮರಕ್ಷಣೆಗಳಿಗಾಗಿ ಶತ್ರುಗಳೊಂದಿಗೆ ಬಡಿದಾಡಿ ತಲೆಯನ್ನು ತೆತ್ತರಲ್ಲದೆ ಎಂದೂ ತಮ್ಮತಮ್ಮಲ್ಲೇ ಬಡಿದಾಡಿಕೊಳ್ಳ ಲಿಲ್ಲ. ಇದರಿಂದಲೇ ಈ ಎರಡರಲ್ಲಿ ಯಾವ ಆಧಿಪತ್ಯದ ದಾರ್ಢ್ಯತೆ ಘನತೆ ಸೌಜನ್ಯತೆ ಕಷ್ಟಸಹಿಷ್ಣುತಾ ಸಾಮರ್ಥ್ಯಗಳು ಎಷ್ಟುಮಟ್ಟಿನವೆಂಬುದು ಗೋಚರವಾಗುತ್ತವಲ್ಲವೆ ?

ಕುಂಭನ ಸಾಹಸಪರಾಕ್ರಮಗಳನ್ನು ಪ್ರದರ್ಶಿಸುವ ಮಹತ್ವದ ಕಾರ್ಯ ಗಳು ಕೆಲವುಂಟು. ಖಿಲ್ಜೀ ಅರಸರ ಆಳಿಕೆಯೊಂದಿಗೆ ದೆಹಲಿ ಪ್ರಭುತ್ವದ ಬಿಗಿಯು ಕೇವಲ ಶಿಥಿಲವಾಗಿ ಅದರ ಅಧೀನರಾಜ್ಯಗಳೆಲ್ಲವೂ ಪರಾಧೀನತೆಯ ಶೃಂಖಲೆಯನ್ನು ಕಳಚಿಬಿಸುಟು ಸ್ವತಂತ್ರವಾದುವು. ದೂರಪ್ರದೇಶವಾದ ದಕ್ಷಿಣದ ಬಿಜಾಪುರ ಗೋಲ್ಕೊಂಡ ರಾಷ್ಟ್ರಗಳು ಮಾತ್ರವಲ್ಲ. ಮಾಳವ ಗುಜರಾತ್ ಜಯಪುರ ಮುಂತಾದ ಚಿಕ್ಕಚಿಕ್ಕಸಂಸ್ಥಾನಗಳೂ ಸ್ವತಂತ್ರವಾ ದುವು. ಕಾಲ್ಪಿಯೂ ಸಹ ತನಗೊಬ್ಬ ರಾಜನನ್ನು ಚುನಾಯಿಸಿಕೊಂಡಿತು. ಕುಂಭನು ಸಿಂಹಾಸನಾರೋಹಣ ಮಾಡಿದಕಾಲದಲ್ಲಿ ಮಾಳವ ಗುಜರಾತು ಗಳು ಸಂಪೂರ್ಣ ಸ್ವಾತಂತ್ರ್ಯತೆಯನ್ನು ಗಳಿಸಿ ಮೆರೆಸಿದ್ದುವು. ರಾಣಾನು ಪರಾಕ್ರಮಧುರ್ಯನಾಗಿ ಪರರಾಜರ ಕಣ್ಣು ಕುಕ್ಕುವಂತೆ ಐಶ್ವರ್ಯಪ್ರತಿಭೆ

ಗಳಿಂದ ಮೆರೆಯುತ್ತಿದ್ದ ಈ ಸಂದರ್ಭದಲ್ಲೇ ಮಾಳವ ಗುಜರಾತುಗಳ ಮಹ ಮ್ಮದೀಯ ಪ್ರಭುಗಳಿಬ್ಬರೂ ಒಂದಾಗಿ ಚಿತ್ತೂರಿನಮೇಲೆ ಕಾರ್ಯಭಾಗ ನಡೆಸಲು ಸಿದ್ಧವಾದರು. ಈ ಒಳಸಂಚನ್ನು ತಿಳಿದ ಕುಂಭನು ಕ್ಷಾತ್ರತೇಜ ಪಮ್ಮಡಿಸಲು ವಿಜೃಂಭಿತನಾಗಿ ಒಂದು ಲಕ್ಷ ಕುದುರೆ-ಕಾಲ್ಬಲಗಳನ್ನೂ, ಹದಿನಾಲ್ಕುನೂರು ಹಸ್ತಿಸೈನ್ಯವನ್ನೂ ನೆರೆಯಿಸಿಕೊಂಡು, ಮಾಳ್ವಾರಿನ ಸರ ಹದ್ದಿನ ಮೈದಾನದಲ್ಲೇ ಶತ್ರುಸೈನ್ಯಕ್ಕೆ ಯುದ್ಧಭಿಕ್ಷೆಯನ್ನಿತ್ತು, ಆ ಸಂಯು ಕ್ತಸೈನ್ಯವನ್ನೂ ಸಂಪೂರ್ಣವಾಗಿ ಪರಾಭವಗೊಳಿಸಿ, ಮಾಳವದ ಖಿಲ್ಜಿ ಅರಸ ನಾದ ಮಹಮ್ಮೂದನನ್ನು ಸೆರೆಗೊಳಿಸಿ ಚಿತ್ತೂರಿಗೆ ಬಂದಿಯಾಗಿ ಹಿಡಿದೊ ಯ್ದನು.

ಈ ಸಂದರ್ಭದ ಚರಿತ್ರಾಂಶವನ್ನು ವರ್ಣಿಸುತ್ತಾ, ಮಹಮ್ಮದೀಯ ಚರಿತ್ರಕಾರನಾದ ಅಬುಲ್ ಫಜಲನು ಮುಕ್ತಕಂಠದಿಂದ, ರಾಣಾ ಕುಂಭನ ಶೌರ್ಯ ವೀರ್ಯಗಳನ್ನು ಕುರಿತು ಹೊಗಳುವುದರೊಂದಿಗೆ ಮಹಮ್ಮದೀಯ ರಾದ ತಮ್ಮ ರಾಜರಿಗೆ ಶುದ್ಧವಾಗಿ ಅಪರಿಚಿತವಾದ ಆತನ ಅಭೂತಪೂರ್ವ ಔದಾರ್ಯವನ್ನು ಕುರಿತೂ ಮುಕ್ತಹಸ್ತದಿಂದ ಬಿಡಿಸಿದ್ದಾನೆ. ಮಹಮ್ಮೂ ದನು ಆರು ತಿಂಗಳುಕಾಲ ಚಿತ್ತೂರಿನಲ್ಲಿ ಸೆರೆಯನ್ನನುಭವಿಸಿದ ತರುವಾಯ ದಯಾಳುವಾದ ಕುಂಭನು, ಅಪ್ರಾರ್ಥಿತನಾಗಿ ಆತನನ್ನು ಸೆರೆಮನೆಯಿಂದ ಕರೆತರಿಸಿ ಸ್ನಾನಮಾಡಿಸಿ ಶುಭ್ರವಸ್ತ್ರಾಭರಣಾದಿಗಳಿಂದ ಅಲಂಕರಿಸಿ, ವಿಶೇಷ ಧನವನ್ನೂ ರತ್ನಾಭರಣಗಳನ್ನೂ ಬಹುಮಾನವಾಗಿ ಕೊಟ್ಟು ಉಚಿತ ವಾಕ್ಯ ಗಳಿಂದ ಗೌರವಿಸಿ ಆತನ ರಾಜಧಾನಿಗೆ ಕಳುಹಿಸಿಕೊಟ್ಟನು. ವೀರಶಿರೋ ಮಣಿಯಾದ ಕುಂಭನ ಈ ಆಚರಣೆಗೆ ಸಮಾನವಾದ ಒಂದೇ ಒಂದು ಉದಾ ಹರಣೆಯನ್ನು ಹಿಂದೂಸ್ಥಾನದಲ್ಲಿ ಹತ್ತೆಂಟು ಶತಮಾನಗಳಿಂದ ಆಧಿಪತ್ಯ ಮಾಡಿದ ಅಸಂಖ್ಯ ಮಹಮ್ಮದೀಯ ರಾಜರಲ್ಲಾಗಲೀ, ಚಕ್ರವರ್ತಿಗಳಲ್ಲಾ ಗಲೀ ಕಾಣಲು ಸಾಧ್ಯವೆ! ಅಬುಲ್ ಫಜಲನು, ಹಿಂದೂ ರಾಜರಲ್ಲಿ ಧೈರ್ಯ ಶೌರ್ಯ ಪರಾಕ್ರಮ ಕ್ಷಾತ್ರತೇಜಗಳೊಂದಿಗೆ ಬೆರೆದಿರುವ ಔದಾರ್ಯ ದಯಾ ಭಾವ ಎಂಬ ಈ ಅಲೌಕಿಕ ಸದ್ಗುಣಗಳನ್ನು ಬಹುಮಟ್ಟಿಗೆ ಮೆಚ್ಚಿಕೊಂಡು ಹೊಗಳಿದ್ದಾನೆ. ಶತ್ರುವಿನ ವಿಷಯದಲ್ಲಿ ದಯೆ ತೋರಿಸುವುದಾದರೂ, ಅವ ನಿಂದ ದೀನತೆಯಿಂದ ಪ್ರಾರ್ಥಿತನಾದ ನಂತರವಲ್ಲ-ವಿಶೇಷ ಧನಕನಕಾದಿಗ

ಳನ್ನು ಕಾಣಿಕೆಯಾಗಿ ಗ್ರಹಣಮಾಡಿದ ನಂತರವಲ್ಲ;- ಕೇವಲ ಅಪ್ರಾರ್ಥಿತವಾಗಿ! ಇದು ರಾಜಲೋಕದಲ್ಲೇ ಒಂದಪೂರ್ವ ಉದಾಹರಣೆಯಲ್ಲವೆ! ಇಂತಹ ಅಲೌಕಿಕ ಸದ್ಗುಣಗಳನ್ನು ರಾಜಮಾರ್ತಾಂಡರಾದ ಆರ್ಯಪ್ರಭುಗಳಲ್ಲದೆ ಮತ್ತಾರು ಪ್ರದರ್ಶಿಸಲು ಶಕ್ತರಾದಾರು!

ಜಿತನಾದ ಮಾಳವಾಧಿಪತಿಯು ರಾಣಾನ ಘನತೆ ಔದಾರ್ಯ ಸೌಜನ್ಯಗಳಿಗೆ ಆಶ್ಚರ್ಯಪಡುತ್ತ, ತನ್ನ ಪರಾಭವವನ್ನು ಒಪ್ಪಿಕೊಂಡುದರ ಜ್ಞಾಪಕಾರ್ಥವಾಗಿ ತನ್ನ ಶಿರೋಭೂಷಣವನ್ನು (ಕಿರೀಟ) ಚಿತ್ತೂರಿನಲ್ಲೇ ಬಿಟ್ಟು ಹೋಗಿ ತನ್ನ ರಾಜ್ಯವನ್ನು ಸೇರಿಕೊಂಡನು. ಮುಂದಾದರೂ, ತನ್ನ ಜೀವಾವಧಿ ಚಿತ್ತೂರಿನಮೇಲೆ ಕೈಯೆತ್ತಲಿಲ್ಲ. ಮಾತ್ರವಲ್ಲ, ತನಗೆ ಪ್ರಾಣರಕ್ಷಣೆ ಮಾಡಿ ಪುನಃ ಹಿಂದಿನ ವೈಭವಪದವಿಗಳನ್ನು ಅನುಗ್ರಹಿಸಿದ ರಾಣಾನ ವಿಷಯದಲ್ಲಿ ಸದಾ ಕೃತಜ್ಞನಾಗಿದ್ದು ಗೆಳೆತನದಿಂದ ನಡೆದುಕೊಂಡನು. ಕುಂಭನು, ಈ ತನ್ನ ಮಿತ್ರನ ಸಹಾಯವನ್ನು ತೆಗೆದುಕೊಂಡು, ದೆಹಲಿಯಮೇಲೆ ಯುದ್ಧಕ್ಕೆ ನಡೆದು, ಅಳಿಯಲನುವಾಗಿದ್ದ ಆ ಪ್ರಭುತ್ವವು ಪುನಃ ತಲೆಯೆತ್ತದಂತೆ ಪರಾಭವಗೊಳಿಸಿ ಹಿಂದಿರುಗಿದನು.

ಮಾಳವ ಮತ್ತು ದೆಹಲಿ ಪ್ರಭುಗಳಮೇಲೆ ತನಗೆ ಪ್ರಾಪ್ತವಾದ ವಿಜಯವನ್ನು ಆಚಂದ್ರಾರ್ಕವಾಗಿ ಸ್ಥಿರಗೊಳಿಸಬೇಕೆಂಬ ಅಪೇಕ್ಷೆಯು ರಾಣಾ ಕುಂಭನಿಗಾಯಿತು. ಕೂಡಲೆ ಚಿತ್ತೂರಿನಲ್ಲಿ ಒಂದು ಜಯಸ್ತಂಭವನ್ನು ಕಟ್ಟಿಸಿದನು. ಅದು ಚಿತ್ತೂರು ರಾಜ್ಯಲಕ್ಷ್ಮಿಯ ಪೂರ್ವವೈಭವವನ್ನು ಪ್ರದರ್ಶಿಸುತ್ತಾ ಈಗಲೂ ವಿರಾಜಿಸುತ್ತ ನಿಂತಿದೆ. ಅದನ್ನು ಕಣ್ಣಾರೆ ನೋಡದವರು ಅದರ ಘನತೆಯನ್ನು ಕುರಿತು ಊಹಿಸಲಾರರು, ನೋಡಿದವರು ವರ್ಣಿಸಲಾರರು. ಅದನ್ನು ಕಟ್ಟುವುದಕ್ಕೆ ರಾಣಾನಿಗೆ ಹತ್ತು ವರ್ಷಕಾಲ ಹಿಡಿಯಿತು. ಅದು ನೂರಇಪ್ಪತ್ತೆರಡು ಅಡಿ ಎತ್ತರವಾಗಿದೆ. ಅದಕ್ಕೆ ಒಂಬತ್ತು ಅಂತಸ್ತುಗಳುಂಟು. ಒಂದೊಂದು ಅಂತಸ್ತಿನಲ್ಲೂ ಒಂದೊಂದು ಕಪ್ಪುಕಲ್ಲಿನ ಹಲಗೆಯಮೇಲೆ, ಚಿತ್ತೂರು ರಾಜವಂಶಚರಿತ್ರೆಯು ವಿಸ್ತಾರವಾಗಿ ಬರೆಯಲ್ಪಟ್ಟಿದೆ. ಅಲ್ಲದೆ ದೇವತೆಗಳು ರಾಕ್ಷಸರು ಅಪ್ಸರಸ್ತ್ರೀಯರು ವೀರಪುರುಷರು ಮುಂತಾದ ವಿಗ್ರಹಗಳೂ ನೇತ್ರಾನಂದಕರವಾಗಿ ಅಲ್ಲಲ್ಲಿ ಚಿತ್ರಿಸಲ್ಪಟ್ಟಿವೆ. ಈ ಜಯಸ್ತಂಭ ಮಾತ್ರವೇ ಅಲ್ಲ. ರಾಣಾ ಕುಂಭನು

ಕಟ್ಟಿಸಿದ ಕೋಟೆಕೊತ್ತಲಗಳೂ ಹಲವುಂಟು. ಮೇವಾರು ರಾಜ್ಯರಕ್ಷಣೆಗೆ ಮುಖ್ಯಾಧಾರವಾಗಿರುವ ಎಂಭತ್ತನಾಲ್ಕು ದುರ್ಗಗಳಲ್ಲಿ ಮೂವತ್ತೆರಡನ್ನು ಈ ರಾಜವರೇಣ್ಯನೇ ಕಟ್ಟಿಸಿದನು. ಅಲ್ಲದೆ ಈತನು ಚಿತ್ತೂರುನಗರದಲ್ಲೇ ಶ್ರೀಕೃಷ್ಣನಿಗೂ ಬ್ರಹ್ಮದೇವನಿಗೂ ದೇವಾಲಯಗಳನ್ನು ಕಟ್ಟಿಸಿದ್ದಲ್ಲದೆ, ಅಬೂ ಶಿಖರದಮೇಲೂ ಅನೇಕ ದೇವತಾಮಂದಿರಗಳನ್ನು ಕಟ್ಟಿಸಿದನು. ಅವುಗಳಲ್ಲೊಂದರಲ್ಲಿ ಕುಂಭನ ಮತ್ತು ಆತನ ತಂದೆಯ ವಿಗ್ರಹಗಳೆರಡು ಈಗಲೂ ಪೂಜೆಗೊಳ್ಳುತ್ತಿವೆ.

ಕುಂಭನು ರಸಿಕಾಗ್ರಣಿ. ಕವಿತೆ, ಶಿಲ್ಪ, ಚಿತ್ರಕಲೆ ಮುಂತಾದ ಲಲಿತಕಲೆಗಳಲ್ಲಿ ಆತನಿಗೆ ಅತಿಶಯ ಪ್ರೌಢಿಮೆಯಿದ್ದಿತು. ಎಷ್ಟು ಪ್ರಮಾಣದ ಶೌರ್ಯ ಧೈರ್ಯ ಪರಾಕ್ರಮಗಳಿಂದ ಶತ್ರುರಾಜರಮೇಲೇರಿ ಯುದ್ಧಮಾಡಿ ಜಯಸಂಪಾದನೆ ಮಾಡುತ್ತಿದ್ದನೋ, ಅಷ್ಟೇ ಉತ್ಸಾಹ ಪ್ರೌಢಿಮೆಗಳಿಂದಲೇ ಕವಿತೆ ಮುಂತಾದ ಕುಶಲಕಲೆಗಳಲ್ಲೂ ಪ್ರವೇಶಿಸಿ ಪರಿಶ್ರಮ ಮಾಡುತ್ತಿದ್ದನು. ಈತನ ರಾಣಿಯೇ ಸುಪ್ರಸಿದ್ಧಳೂ, ಶ್ರೀಕೃಷ್ಣನ ಅದ್ವಿತೀಯ ಭಕ್ತಾಗ್ರೇಸರಳೂ ಆದ ರಜಪೂತ ಕವಯಿತ್ರಿ ಮೀರಾಬಾಯಿ. ಆ ಸಾಧ್ವೀಮಣಿಯು ತನ್ನ ಇಷ್ಟದೇವನಾದ ಶ್ರೀಕೃಷ್ಣನಮೇಲೆ ಹಿಂದೀಭಾಷೆಯಲ್ಲಿ ಹಾಡಿರುವ ಪದಪದ್ಯಗಳು ಅಮೃತರಸವನ್ನು ಸುರಿಸುತ್ತ ಭಕ್ತರಿಗೆ ಆಹ್ಲಾದಜನಕಗಳಾಗಿವೆ. ಈಕೆಯು ಬಾಲ್ಯದಿಂದಲೂ ಶ್ರೀಕೃಷ್ಣಮೂರ್ತಿಯ ಪಾದಾರವಿಂದಗಳಲ್ಲೇ ನಟ್ಟ ಚಿತ್ತವುಳ್ಳವಳಾಗಿ ಮಹಾರಾಣಾನ ಪಟ್ಟಮಹಿಷಿಯಾದಮೇಲೂ ತನ್ನ ಪದವಿಯ ಘನತೆಗೌರವಗಳನ್ನು ಲೆಕ್ಕಿಸದೆ ಪ್ರೇಮರತೆ ತನ್ನಾ ಹೃದಯಾಧಿದೇವತೆಯಮೇಲೆ ನೂತನ ಭಾವ ನೂತನ ವರ್ಣನೆಗಳಿಂದ ಮನೋಹರವಾದ ಹಲವು ಕವಿತೆಗಳನ್ನು ರಚಿಸಿ, ಅರಮನೆಯಿಂದ ದೂರದಲ್ಲಿದ್ದ ಶ್ರೀಕೃಷ್ಣದೇವಾಲಯಕ್ಕೆ ನಡೆದು ಅಲ್ಲಿ ಉಚ್ಚಸ್ವರಗಳಿಂದ ಅವುಗಳನ್ನು ಹಾಡಿ, ಸ್ವಾಮಿಗೆ ನಿವೇದಿಸುವಳು. ಆನಂದಬಾಷ್ಪದಿಂದ ಆ ದೇವದೇವನ ಪಾದಗಳನ್ನು ಅಭಿಷೇಕಿಸುವಳು. ಅವಿರಳಸ್ನೇಹಭಾವವು ಉಕ್ಕಿ ಬರಲು ಆ ಪಾದಪದ್ಮಗಳನ್ನು ಅಪ್ಪಿ ಪುಳಕಗೊಳ್ಳುವಳು. ಪ್ರೇಮರೆಯುವಳು. ಆಕೆಯ ಸುಮನೋಹರ ಗಾಂಧರ್ವ ಕಂಠಮಾಧುರ್ಯವೂ, ಭಕ್ತಿರಸವರ್ಷವನ್ನು ಸುರಿಸುತ್ತಿದ್ದ ವರ್ಣನಾವೈಖರಿಯೂ, ಚಿತ್ತಾಕರ್ಷಕವಾಗಿರಲು ಆಕೆಯು

ಪದಗಳನ್ನು ಕೇಳಿದವರೂ, ಒಡನೆ ಆ ದೇವಾದಿದೇವನ ಪಾದಗಳ ಬಳಿಗೆ ಆಕರ್ಷಿಸಲ್ಪಡುವರು. ಅರ್ಧ ತೆರೆದ ನೇತ್ರಗಳಿಂದ ಆನಂದಬಾಷ್ಪವನ್ನು ಧಾರೆ ಧಾರೆಯಾಗಿ ಸುರಿಸುತ್ತ, ಗೋಪೀಜನ ಮನೋಹಾರಕನೂ, ವೃಂದಾವನ ವಿಹಾರಿಯೂ, ಅಲೌಕಿಕ ಮಾನುಷವಿಗ್ರಹನೂ ಆದ ಶ್ರೀಕೃಷ್ಣಪರಮಾತ್ಮನ ವಿವಿಧಲೀಲೆಗಳನ್ನು ಮೃದುಮಧುರ ವಚನಕುಸುಮಗಳಿಂದ ರೂಪುಗೊಳಿಸಿ, ಅವುಗಳನ್ನು ತನ್ನ ನಿಷ್ಕಲ್ಮಷಭಕ್ತಿಯೆಂಬ ನಾರಿನಿಂದ ಕಟ್ಟಿ ಗೀತೆಗಳ ಮಾಲೆಗಳನ್ನಾಗಿಸಿ, ಆತನ ಕಂಠಪ್ರದೇಶದಲ್ಲಿ ಎಡೆಬಿಡದೆ ಸಮರ್ಪಿಸುತ್ತಿರುವಳು. ಆಕೆಗೆ ಆ ಆನಂದದಲ್ಲಿ ಅರಮನೆಯೂ, ರಾಜ್ಯವೈಭವವೂ ಸುಖಸಂಪದಗಳೂ, ಆಹಾರಪಾನೀಯಗಳೂ ಲೌಕಿಕಬಾಂಧವ್ಯಾದಿಗಳೂ ಎಲ್ಲವೂ ಮರೆತುಹೋಗುವುವು. ಆಕೆಯ ಈ ಗಾನವನ್ನು ಕೇಳುತ್ತ, ದಿನದಿನಕ್ಕೆ ದೂರಪ್ರಾಂತಗಳಿಂದಲೂ ನೂರಾರು ಸಹಸ್ರಾರುಮಂದಿ ಯಾತ್ರಿಗೋ ಎಂಬಂತೆ, ಚಿತ್ತೂರಿನ ಆ ಕೃಷ್ಣದೇವಾಲಯಕ್ಕೆ ಬಂದು, ಆಕೆಯ ವದನಾಂಬುಜದಿಂದ ಹರಿಯುತ್ತಿದ್ದ ಭಕ್ತಿಪ್ರವಾಹದಲ್ಲಿ ತೇಲಿಹೋಗುತ್ತಿರುವರು. ಕ್ರಮಕ್ರಮವಾಗಿ ಆಕೆಯ ಕೀರ್ತಿಯು ಉತ್ತರಹಿಂದೂಸ್ಥಾನದಲ್ಲೆಲ್ಲ ವ್ಯಾಪಿಸಿತು. ಡಿಲ್ಲೀ ಚಕ್ರವರ್ತಿಯಾದ ಅಕ್ಬರನು, ಆಕೆಯ ಅನುಪಮ ಲಾವಣ್ಯವನ್ನೂ ಕಂಠಮಾಧುರ್ಯವನ್ನೂ ಗಾನವೈಖರಿಯನ್ನೂ ಕವಿತಾಸೌಂದರ್ಯವನ್ನೂ, ಭಕ್ತಿಪರವಶತೆಯನ್ನೂ ತನ್ನ ಆಸ್ಥಾನಗಾಯಕನಾದ ತಾನಸೇನನಿಂದ ಕೇಳಿ ಸ್ವಸ್ವರೂಪದಿಂದ ಹೋದರೆ ರಾಜಪತ್ನಿಯಾದ ಆಕೆಯ ದರ್ಶನಲಾಭವಾಗಲಾರದೆಂದು ತಿಳಿದು, ಒಂದುದಿನ ಗೋಸಾಯಿಯ ವೇಷವನ್ನು ಧರಿಸಿ ಪಲವು ಮಂದಿ ಹಿಂದೂ ಭಕ್ತಜನರೊಂದಿಗೆ ಬೆರೆದು ಕೃಷ್ಣಾಲಯವನ್ನು ಪ್ರವೇಶಿಸಿ ಒಂದೆಡೆ ಕುಳಿತಿದ್ದನು.

ಮೀರಾಬಾಯಿಯು ಎಂದಿನಂತೆಯೇ ತನ್ನಾ ಇಷ್ಟದೈವವನ್ನು ಹಲವು ಬಗೆಯಿಂದ ಮೈಮರೆತು ಹಾಡಿಹಾಡಿ, ಶ್ರೀಕೃಷ್ಣಮಹಿಮೆಯನ್ನು ಕುರಿತು ಪ್ರಸಂಗಿಸುತ್ತಿರಲು, ಶ್ರೋತೃಗಳೊಂದಿಗೆ ಒಂದೆಡೆ ಕುಳಿತಿದ್ದ ಅಕ್ಬರನು, ನಯನಮೋಹಕವಾದ ಆಕೆಯ ರೂಪಕ್ಕೂ, ಕರ್ಣಾನಂದಕರವಾದ ಗಾನಕ್ಕೂ ಲುಬ್ಧನಾಗಿ ಪರವಶನಾಗಿ ಆ ಅಲೌಕಿಕ ಭಕ್ತಶಿರೋಮಣಿಯನ್ನು ತಲೆಬಾಗಿ ವಂದಿಸಿ, ಪ್ರಸಂಗಾಂತದಲ್ಲಿ ತನ್ನೊಂದಿಗೆ ತಂದಿದ್ದ ಒಂದು ಅಮೌಲ್ಯ

ರತ್ನಹಾರವನ್ನು ಒಪ್ಪಿಸಲು, ಆಕೆಯು ಗೋಸಾಯಿಯಾದ ಅವನಿಗೆ ರಾಜಯೋಗ್ಯವಾದ ಅಂತಹ ಹಾರವು ದೊರೆತ ಬಗೆಯೆಂತೆಂದು ಪ್ರಶ್ನಿಸಿದಳು. ಆ ಪ್ರಶ್ನನ್ನ ಗೋಸಾಯಿಯು ಯಮುನೆಯ ದಡಗಲ್ಲಿ ತಾನು ಸ್ನಾನಕ್ಕಾಗಿ ಇಳಿದಿದ್ದಾಗ ಅದು ದೊರಕಿತೆಂದು ಹೇಳಿ, ಅದನ್ನು ತನ್ನ ಕಾಣಿಕೆಯಾಗಿ ಸ್ವೀಕರಿಸಬೇಕೆಂದು ಆಕೆಯನ್ನು ಪ್ರಾರ್ಥಿಸಿದನು. ಆದರೆ ಪರಮನಿಸ್ಪೃಹೆಳಾದ ಆಕೆಯು ಅದನ್ನು ಕಣ್ಣೆತ್ತಿಯೂ ನೋಡದೆ ನಿರಾಕರಿಸಲು, ಆ ಗೋಸಾಯಿಯು ಪರಮಭಕ್ತಿಭಾವದಿಂದಲೇ-ಅದನ್ನು ಅಲ್ಲೇ ಇದ್ದ ಶ್ರೀಕೃಷ್ಣವಿಗ್ರಹದ ಕೊರಳಲ್ಲಿ ಹಾಕಿ ತನ್ನ ಮಾರ್ಗ ಹಿಡಿದು ಹೊರಟುಹೋದನು.

ಅಸಂಖ್ಯಮೌಲ್ಯವುಳ್ಳ ಆ ರತ್ನಹಾರದ ಸಮಾಚಾರವು ಒಡನೆ ರಾಜಧಾನಿಯಲ್ಲಿ ಹಬ್ಬಿ ರಾಣಾನ ಕಿವಿಯವರೆಗೂ ಹೋಯಿತು. ರಾಣಾನು ರತ್ನಪರೀಕ್ಷಕರಿಗೆ ಅದನ್ನು ತೋರಿಸಲು ಅವರು ಅದರ ಬೆಲೆಯನ್ನು ನಿರ್ಧರಿಸಲಾರದೆ ಅದು ದಿಲ್ಲೀಶ್ವರನದೇ ಎಂದು ಏಕವಾಕ್ಯತೆಯಿಂದ ಹೇಳಿಬಿಟ್ಟರು. ರಾಣಾನು ತನ್ನ ಪತ್ನಿಯು ತುರುಷ್ಕಸಂಪರ್ಕದಿಂದ ಅಪವಿತ್ರಳಾದಳೆಂದು, ಆಕೆಯ ಪಾತಿವ್ರತ್ಯವಿಷಯದಲ್ಲಿ ಸಂದೇಹಪಟ್ಟು ಆಕೆಯ ಶಿರಚ್ಛೇದನಮಾಡಿರೆಂದು ತನ್ನ ಮಂತ್ರಿಗಳಿಗೆ ಅಜ್ಞಾಪಿಸಿದನು. ಆದರೆ ಅದ್ವಿತೀಯ ಭಕ್ತಾಗ್ರಣಿಯೂ ಪರಮಪತಿವ್ರತಾಶಿರೋಮಣಿಯೂ ಆದ ಆಕೆಯಮೇಲೆ ಕತ್ತಿಯನ್ನೆತ್ತಲು ಆ ರಾಜಧಾನಿಯಲ್ಲಲ್ಲ-ಆ ದೇಶದಲ್ಲೇ ಯಾವನೂ ಸಿದ್ಧನಾಗಿ ಮುಂದೆ ಬರಲಿಲ್ಲ. ಕೊನೆಗೆ ರಾಣಾನು-'ಎಲೈ ಪಾಪೀಯಸಿ, ನಿನ್ನೀ ಕಳಂಕಿತಮುಖವನ್ನು ನಾನು ನೋಡಲಾರೆನು. ನೀನು ಯಾವ ಬಗೆಯಿಂದಲಾದರೂ ನಿನ್ನೀ ಪಾಪಿಜನ್ಮವನ್ನು ಕೊನೆಗಾಣಿಸು' ಎಂದು ವರ್ತಮಾನ ಕಳುಹಿಸಿದನು. ಸಾಧ್ವೀ ಮೀರಾಬಾಯಿಯು, ಭರ್ತನ ಆ ಆಜ್ಞೆಗೆ ಪ್ರತಿಮಾತನ್ನಾಡದೆ, ಮಧ್ಯರಾತ್ರಿಯಲ್ಲಿ ತನ್ನ ಅರಮನೆಯಿಂದ ಹೊರಟು, ಸಮೀಪದಲ್ಲೇ ಹರಿಯುತ್ತಿದ್ದ ನದಿಗೆ ನಡೆದು ಅದರಲ್ಲಿ ಧುಮುಕಿ ದೇಹವನ್ನು ನೀಗಲು ಪ್ರಯತ್ನಿಸಿದಳು. ಆದರೆ, ಪ್ರವಾಹದಲ್ಲಿ ತೇಲಿಹೋಗುತ್ತಿದ್ದ ಆಕೆಯನ್ನು ಯಾರೋ ಹಿಡಿದೆತ್ತಿ ಕಾಪಾಡಿದರು. ಹೀಗೆ ದೈವಯೋಗದಿಂದ ಜೀವಿಸಿದ ಮೀರಾಬಾಯಿಯು ಮುಂದೆ, ಬೃಂದಾವನಕ್ಕೆ ಪ್ರಯಾಣಮಾಡಿ, ಅಲ್ಲಿ ತನ್ನ ಇಷ್ಟದೈವವನ್ನು ಧ್ಯಾನಿಸುತ್ತ ಹಲವು ಕಾಲವಿದ್ದಳು. ತರುವಾಯ ಬಹು

ದಿನಗಳಮೇಲೆ, ಆಕೆಯ ಶುಭ್ರಕೀರ್ತಿಯು ಎಲ್ಲೆಡೆಯಲ್ಲೂ ಹರಡಿ, ಸಕಲರೂ ತನ್ನ ರಾಣಿಯ ಪಾವಿತ್ರ್ಯತೆಯನ್ನೂ ಅಲೌಕಿಕ ಭಕ್ತಿಸಾರವಶ್ಯತೆಯನ್ನೂ ಕುರಿತು ಪ್ರಶಂಸಿಸುತ್ತಿದ್ದುದನ್ನು ಕೇಳಿದ ರಾಣಾನು, ತನ್ನ ಧೂರ್ತಕೃತ್ಯಕ್ಕಾಗಿ ತಾನೇ ನಾಚಿ, ಸಕಲ ರಾಜಮರ್ಯಾದೆಗಳಿಂದಲೂ ಆಕೆಯನ್ನು ರಾಜಧಾನಿಗೆ ಕರೆಸಿಕೊಂಡು ಗೌರವಿಸಿದನು. ತರುವಾಯ ಆಕೆಯು ತನ್ನ ಇಷ್ಟಬಂದಂತೆ ಅರಮನೆಯಲ್ಲಾಗಲೀ, ಕೃಷ್ಣಮಂದಿರದಲ್ಲಾಗಲೀ, ವೃಂದಾವನದಲ್ಲಾಗಲೀ ವಾಸಿಸಲು ಯಾವ ಪ್ರತಿಬಂಧಕವೂ ಇರಲಿಲ್ಲ. ಮೀರಾಬಾಯಿಯು, ತನ್ನ ಜನ್ಮಾವಧಿ ಶ್ರೀಕೃಷ್ಣಗುಣವರ್ಣನೆಯ ಗೀತಗಳನ್ನು ರಚಿಸಿ ಪಾಡುತ್ತ, ಶ್ರೀಕೃಷ್ಣಭಕ್ತಿಯನ್ನು ಲೋಕದಲ್ಲಿ ಪ್ರಚಾರಗೊಳಿಸಿ ಕೀರ್ತಿಶೇಷಳಾದಳು. ಉತ್ತರಹಿಂದೂಸ್ಥಾನದಲ್ಲಿ ಆಕೆಯ ಈ ಗೀತಗಳು ಆಬಾಲಗೋಪಾಲವಾಗಿ ಸರ್ವತ್ರಪ್ರಚಾರದಲ್ಲಿದ್ದು, ಸಕಲರಿಗೂ ಶ್ರೀಕೃಷ್ಣಭಕ್ತ್ಯಮೃತರಸವನ್ನು ಪ್ರಸಾದಿಸುತ್ತ ಜನ್ಮತಾರಕವಾಗಿವೆ.

ಹೀಗೆ ರಾಣಾ ಕುಂಭನು ಸಕಲಜನ ಸಮ್ಮತವಾಗಿ ಅರ್ಧ ಶತಮಾನ ಕಾಲ ಚಿತ್ತೂರು ರಾಜಸಿಂಹಾಸನದಲ್ಲಿ ಪ್ರತಿಷ್ಠಿತನಾಗಿ ಪ್ರಜಾಪರಿವಾರಗಳನ್ನು ಕಾಪಾಡಿದನು. ಹಿಂದೂಧರ್ಮವಿರೋಧಿಗಳಾದ ಹಲವರು ಶತ್ರುರಾಜರನ್ನು ತಲೆಯೆತ್ತದಂತೆ ಅಡಗಿಸಿದನು. ಕೋಟೆಕೊತ್ತಲಗಳಿಂದ ರಾಜ್ಯವನ್ನು ಭದ್ರಗೊಳಿಸಿದನು. ಹಲವು ದೇವಾಲಯಗಳನ್ನೂ ಧರ್ಮಸ್ಥಳಗಳನ್ನೂ, ಶಿಲ್ಪಕಲಾಪ್ರದರ್ಶಕಗಳಾದ ಹಲವು ಕಟ್ಟಡಗಳನ್ನೂ ಕಟ್ಟಿಸಿ ರಾಜ್ಯವನ್ನು ನೇತ್ರಾನಂದಕರವಾಗಿ ಮಾಡಿದನು. ಅಷ್ಟುದಿನಗಳು ಪರಿಶ್ರಮಪಟ್ಟುದಕ್ಕೆ ಮಕುಟಪ್ರಾಯವಾಗಿರುವಂತೆ ಸುವರ್ಣಮಹೋತ್ಸವ (*Golden Jubilee*) ವು ನಡೆವ ಸುಸಂದರ್ಭ. ಆತನ ಕೀರ್ತಿತರುವು ಫಲಪ್ರದವಾಗುವ ವೇಳೆ. ಅಂತಹ ಆ ಸಮಯದಲ್ಲಿ, ರಾಜಸ್ಥಾನದ ಇತಿಹಾಸಕ್ಕೇ ಕಳಂಕವನ್ನುಂಟುಮಾಡುವಂತಹ ಅಸಹ್ಯಕೃತ್ಯವೊಂದು ನಡೆಯಿತು. ಅಷ್ಟು ವೈಭವದಿಂದ ಐವತ್ತು ವರ್ಷಕಾಲ ನಡೆದುಬಂದ ಆತನ ರಾಜ್ಯಭಾರವು ಕೊನೆಯಲ್ಲಿ ಅತೀವದುಸ್ಥಿತಿಯಲ್ಲಿ ಕೊನೆಗಂಡಿತು. ಬಪ್ಪಾ ರಾವಳಾದಿಗಳಿಂದ ಧರಿಸಲ್ಪಟ್ಟಿದ್ದ ಕಿರೀಟವನ್ನು ಧರಿಸಿ ಮೆರೆದ ಆತನ ಉತ್ತಮಾಂಗವು, ಒಬ್ಬ ನರಹಂತಕನ ಕರಕೃಪಾಣಕ್ಕೆ ವಶವಾಗಿ ನೆಲಕ್ಕುರುಳಿತು. ಆ ಹಂತಕನಾ

ದರೂ ಮಿತ್ತ್ರರೂ ಇಲ್ಲ. ಆತನ ಮಗನೇ! ಇದು ದುರ್ವಿಧಿಯಲ್ಲವೆ? ಯೋಗಭ್ರಷ್ಟತೆಯ ಪರಮಾವಧಿಪ್ರದರ್ಶನವಲ್ಲವೆ ಇದು?

ತನ್ನ ತಂದೆಯು ಮೃತನಾದನಂತರ, ರಾಣಾ ಕುಂಭನು, ಹೇಗೆ ಸ್ವಜನಸಹಾಯದಿಂದ ಪ್ರಬಲನಾದನೋ ಈಗಲೂ ಹಾಗೆಯೇ ಆ ಸ್ವಜನವಿರೋಧದಿಂದಲೇ ಕ್ಷೀಣತೆಯನ್ನೂ ಹೊಂದಿದನು. ಆತನ ಬಂಧುಗಳೂ ಹಿತಚಿಂತಕರೂ ಆದ ಮಾರವಾಡದೇಶದ ರಾಜಕುಮಾರರಲ್ಲಿ ಆತನಿಗೆ ಬದ್ಧದ್ವೇಷವು ಏರ್ಪಟ್ಟಿತು. ಆ ರಾಜಕುಮಾರರಲ್ಲೊಬ್ಬನಿಗೆ ಜಾಲ್ವಾರು ದೇಶದ ರಾಜಪುತ್ರಿಯನ್ನು ಕೊಟ್ಟು ವಿವಾಹಮಾಡುವುದಕ್ಕೆ ಹಿರಿಯರು ನಿಶ್ಚಯ ಮಾಡಿದ್ದರು. ಕುಂಭನು ಆ ವಾರ್ತೆಯನ್ನು ಕೇಳಿ, ಆ ಕನ್ಯೆಯನ್ನು ತಾನೇ ಮದುವೆಮಾಡಿಕೊಳ್ಳಲಪೇಕ್ಷಿಸಿ, ಬಹುಕಾಲದಿಂದ ನಡೆದುಬಂದ ಬಾಂಧವ್ಯವನ್ನು ಲಕ್ಷಿಸದೆ, ಅಪಕೀರ್ತಿಗೆ ಹಿಂದೆಗೆಯದೆ, ಬಲಾತ್ಕಾರವಾಗಿ ಆ ಕನ್ಯೆಯನ್ನು ಹೊತ್ತುಕೊಂಡುಬಂದು, ಆಕೆಗೆ ಇಷ್ಟವಿಲ್ಲದಿದ್ದರೂ ವಿವಾಹಮಾಡಿಕೊಂಡನು. ಈ ಅವಿವೇಕಕಾರ್ಯವು ಆತನನ್ನು ಅನೇಕ ಕಷ್ಟನಷ್ಟಗಳ ಪಾಲುಮಾಡಿತು. ಕೆಲವು ಕಾಲದಿಂದ ನಡೆದುಬಂದ ಮಾರವಾಡ ಮೇವಾರು ದೇಶಗಳ ಸ್ನೇಹವು ಈ ಕಾರಣದಿಂದ ನಾಶವಾಗಿ, ಪುನಃ ಬದ್ಧದ್ವೇಷವು ಉಂಟಾಯಿತು. ನೂತನವಧುವು ತನ್ನ ವೃದ್ಧಪತಿಯಮೇಲೆ ಲೇಶಮಾತ್ರವೂ ಪ್ರೇಮವಿಲ್ಲದೆ, ತನಗೆ ಗೊತ್ತಾಗಿದ್ದ ಆ ಮಾರ್ವಾಡದೇಶದ ರಾಜಪುತ್ರನ ಧ್ಯಾನದಲ್ಲೇ ಮಗ್ನಳಾಗಿ, ಚಿತ್ತೂರಿಗೆ ಬಂದು ಹೇಗಾದರೂ ತನ್ನನ್ನು ಸಾಗಿಸಿಕೊಂಡುಹೋಗೆಂದು ಆತನಿಗೆ ರಹಸ್ಯವಾಗಿ ಸಂದೇಶಗಳನ್ನು ಕಳುಹಿಸುತ್ತಾ ಇದ್ದಳು. ಅಲ್ಲದೆ, ತನ್ನ ಹೃದಯದಲ್ಲಿ ಉರಿಯುತ್ತಿದ್ದ ಕಾಮಾಗ್ನಿಯ ಜ್ವಾಲೆಯ ಪ್ರತಿರೂಪವನ್ನು ಪ್ರದರ್ಶಿಸುವುದಕ್ಕಾಗಿಯೋ ಎಂಬಂತೆ, ತನ್ನ ಅಂತಃಪುರದ ಮೇಲ್ಭಾಗದಲ್ಲಿ ದೊಡ್ಡದೊಂದು ದೀಪವನ್ನಿಟ್ಟು ರಾತ್ರಿ ಉರಿಸುವಳು. ಅತ್ತ ಮಾರ್ವಾಡದೇಶದ ರಾಜಪುತ್ರನಾದರೂ, ಆಕೆಯಲ್ಲೇ ನಟ್ಟ ಚಿತ್ತವುಳ್ಳವನಾಗಿ, ಆಕೆಯ ಸಲಹೆಯಂತೆ, ತನ್ನ ಪ್ರೇಯಸಿಯನ್ನು ಕರೆದುಕೊಂಡುಹೋಗಬೇಕೆಂದು ಬಂದಾವರ್ತಿ ಚಿತ್ತೂರಿಗೆ ಬಂದಿದ್ದನಾದರೂ ಆತನ ಪ್ರಯತ್ನವು ಸಾಗಲಿಲ್ಲ.

ಕುಂಭನು ಸಿಂಹಾಸನವನ್ನು ಏರಿದಾರಭ್ಯ ಒಂದು ಪದ್ಧತಿಯನ್ನಿಟ್ಟು

ಕೊಂಡಿದ್ದನು. ಆಸ್ಥಾನವನ್ನು ಹೊಕ್ಕು ಸಿಂಹಾಸನದ ಬಳಿಗೆ ಬಂದು, ಕೈ ಕತ್ತಿಯನ್ನು ತನ್ನ ತಲೆಯಸುತ್ತಲೂ ಮೂರುಬಾರಿ ತಿರುಗಿಸಿಕೊಂಡು, ಬಾಯಲ್ಲಿ ಯಾರಿಗೂ ಕೇಳಿಸದಂತೆ ಏನೋ ಕೆಲವುವಾಕ್ಯಗಳನ್ನು ಹೇಳಿಕೊಂಡು ತರುವಾಯ ಏರಿ ಕುಳಿತುಕೊಳ್ಳುವನು. ರಾಣಾನು ಹಾಗೆ ಮಾಡುವುದಕ್ಕೆ ಕಾರಣವೇನೋ ಹೇಳಿಕೊಳ್ಳುತ್ತಿದ್ದುದೇನೋ ಯಾರಿಗೂ ತಿಳಿಯದೆ ಬಹುಕಾಲ ಕಳೆಯಿತು. ಅದನ್ನು ಕೇಳಲು ಯಾರಿಗೂ ಧೈರ್ಯವಿರಲಿಲ್ಲ. ಕೊನೆಗೊಂದುದಿನ ರಾಣಾನ ಹಿರಿಯಮಗನಾದ ರಾಯಮಲ್ಲನು, ಮನಸ್ಸಿನ ಆಕಾಂಕ್ಷೆಯನ್ನು ಅಡಗಿಸಿಟ್ಟುಕೊಳ್ಳಲಾರದೆ, ಅದರ ಅರ್ಥವೇನೋ ತಿಳಿಸಬೇಕೆಂದು ತಂದೆಯನ್ನು ಕೇಳಿಕೊಂಡನು. ರಾಣಾನು ಅದನ್ನು ಹೇಳದಿದ್ದುದಂತಿರಲಿ, ತನ್ನ ಮಗನು ತನ್ನ ಅಭಿಪ್ರಾಯವನ್ನು ಕುರಿತು ಪ್ರಶ್ನಿಸಿದನಲ್ಲಾ ಎಂಬ ರೋಷದಿಂದ ಅವನನ್ನು ತನ್ನ ರಾಜ್ಯದಿಂದ ಗಡೀಪಾರು ಮಾಡಿಸಿಬಿಟ್ಟನು. ಸಿಂಹಾಸನಕ್ಕೆ ಬಾಧ್ಯನಾದ ಜ್ಯೇಷ್ಠಪುತ್ರನು ಹೀಗೆ ದೇಶಾಂತರಗತನಾದ ಒಡನೆ, ಮಿಕ್ಕ ಮಕ್ಕಳಲ್ಲಿ ಚಿಕ್ಕವನಾದ ಉದಯನೆಂಬ ಹೆಸರಿನ ರಾಜಪುತ್ರನು, ರಾಜಸಿಂಹಾಸನವನ್ನು ಏರಿ ಆಳಬೇಕೆಂಬ ದುರಾಸೆಗೆ ವಶನಾಗಿ, ಚಾರನೊಬ್ಬನಿಗೆ ಲಂಚವನ್ನು ಕೊಟ್ಟು ತನ್ನ ತಂದೆಯನ್ನು ಕೊಲ್ಲಿಸಿ, ಆ ಮರಣವಾರ್ತೆಯು ತನ್ನ ಇತರ ಅಣ್ಣಂದಿರಿಗೆ ತಿಳಿಯುವುದಕ್ಕೆ ಮುಂಚಿತವಾಗಿಯೇ ಸಿಂಹಾಸನವನ್ನೇರಿಬಿಟ್ಟನು. ಪಿತೃದ್ರೋಹಿಯಾದ ಆ ನೀಚನು, ತನ್ನಾ ಅಧಿಕಾರವನ್ನು ಸ್ಥಿರಪಡಿಸಿಕೊಳ್ಳಬೇಕೆಂಬ ಅಪೇಕ್ಷೆಯಿಂದ ಸುತ್ತುಮುತ್ತಿನ ಪ್ರಾಂತಗಳಲ್ಲಿದ್ದ ರಾಜರಿಗೆಲ್ಲ ಲಂಚಕೊಟ್ಟು ಹೇಗೋ ತನ್ನಾ ರಾಜ್ಯವನ್ನು ಐದು ವರ್ಷಕಾಲ ಪಾಲಿಸಿದನು. ಅಷ್ಟರಲ್ಲಿ ದೇಶಾಂತರಗತನಾಗಿದ್ದ ರಾಯಮಲ್ಲನಿಗೆ ಈ ವೃತ್ತಾಂತವು ತಿಳಿಯಲು, ಆತನು ಪರರಾಜರ ಸಹಾಯದಿಂದ ಮಹಾಸೇನೆಯನ್ನು ಕೂಡಿಸಿಕೊಂಡು ಬಂದು, ತಮ್ಮನ ಮೇಲೆ ಯುದ್ಧಮಾಡಿ ಅವನನ್ನು ಸೋಲಿಸಿ, ಸಿಂಹಾಸನವನ್ನೇರಿದನು. ಹೆತ್ತ ತಂದೆಯನ್ನು ಕೊನೆಗಾಣಿಸಿದ ಆ ದ್ರೋಹಿಯು ಮತ್ತೆಂತಹ ಕಾರ್ಯಕ್ಕೆ ತಾನೇ ಹಿಂದೆಗೆಯುವನು! ತನ್ನ ಅಣ್ಣನಮೇಲೆ ಯುದ್ಧಮಾಡಲು ತನಗೆ ಒತ್ತಾಸೆಮಾಡುವುದಲ್ಲದೆ, ಚಿತ್ತೂರು ರಾಜಸಿಂಹಾಸನದಮೇಲೆ ಕುಳ್ಳಿರಲೂ ಸಹಕರಿಸಬೇಕೆಂದೂ ಹಾಗೆಮಾಡುವುದಾದರೆ, ಒಬ್ಬ ಮೀವಾರು ರಾಜಪುತ್ರಿ

ಯನ್ನು ದೆಹಲಿಯ ಚಕ್ರವರ್ತಿಗೆ ಕೊಟ್ಟು ಲಗ್ನಮಾಡುತ್ತೇನೆಂದೂ ಆತನ ಬಳಿಗೆ ಹೋಗಿ ಅಂಗಲಾಚಿಕೊಂಡನು. ಚಕ್ರವರ್ತಿಯಾದರೂ, ಆ ದುರ್ದೈವಿಯ ಮಾತಿಗೆ ಒಪ್ಪಿ ಅಭಯಹಸ್ತವನ್ನಿತ್ತು ಉಚಿತ ಬಹುಮಾನದಿಂದ ಆ ಕುಲಘಾತುಕನನ್ನು ಉಪಚರಿಸಿ ಕಳುಹಿಸಿದನು. ಆದರೆ, ಬಪ್ಪಾರಾವಳನ ಪವಿತ್ರವಂಶವು ಈ ದುರುಳನ ಅತ್ಯಾಚಾರದಿಂದ ಕಳಂಕಿತವಾಗುವುದು ಭಗವದಿಷ್ಟಕ್ಕೆ ಬರಲಿಲ್ಲವೆಂದು ತೋರುತ್ತದೆ! ಅವನು ರಾಜಸಭೆಯನ್ನು ಬಿಟ್ಟು ಹೊರಹೊರಟ ಆ ಸಂದರ್ಭದಲ್ಲಿ ಆಕಾಶದಲ್ಲಿ ಒತ್ತಾಗಿ ಮೋಡಕವಿದು ಗುಡುಗುಮಿಂಚುಗಳು ಮಹಾರ್ಭಟದಿಂದ ಕುಂಭದ್ರೋಣವಾಗಿ ಮಳೆಯು ಸುರಿಯುತ್ತಿದ್ದಿತು. ಎಂತೂ ಚಕ್ರವರ್ತಿಯನ್ನು ಒಪ್ಪಿಸಿದೆನಲ್ಲಾ ಎಂಬ ಕುತೂಹಲದಿಂದಲಾ ಪಿತೃದ್ರೋಹಿಯು ಆ ಘೋರವರ್ಷವನ್ನೂ ಲಕ್ಷಿಸದೆ ಹೊರಟುನಡೆಯುತ್ತಿರಲು, ಪಾತಕಿಯಾದ ಅವನು ಮಾಡಲೆಣಿಸಿದ್ದ ಕುಲದ್ರೋಹ ದೇಶದ್ರೋಹಗಳಿಗಾದರೂ ಅವಕಾಶವಿಲ್ಲದಿರಬೇಕೆಂದೂ, ಗೋವನ್ನು ಕೊಯ್ದು ತಿಂಬ ಆ ತುರುಷ್ಕನಿಗೆ ಸೂರ್ಯವಂಶೋದ್ಭವಳಾದ ಕ್ಷತ್ರಿಯಕನ್ಯೆಯನ್ನು ಕೊಡಲೆಣಿಸಿದ್ದ ಆ ದುರಾತ್ಮನು ಇನ್ನು ಬದುಕಿರಕೂಡದೆಂದೂ ಯೋಚಿಸಿ ದೇವರಾಜನು ಕಳುಹಿಸಿದ ವಜ್ರಾಯುಧವೋ ಎಂಬಂತೆ, ಭಯಂಕರವಾದ ಸಿಡಿಲೊಂದು ಬಂದುಹೊಡೆದು ಕ್ಷಣಮಾತ್ರದಲ್ಲಿ ಆ ಹತಭಾಗ್ಯನನ್ನು ಭಸ್ಮಾವಶೇಷನನ್ನಾಗಿಮಾಡಿತು. ಮೃತನಾದ ಪಿತೃಹಂತಕನನ್ನು ರಾಜಸ್ಥಾನದಲ್ಲಿ ಯಾರೂ ಅವನ ಸಹಜನಾಮದಿಂದ ಸಂಬೋಧಿಸುತ್ತಿರಲಿಲ್ಲ. ಹತ್ಯಾರೋ ಅಥವಾ ಹಂತಕ ಎಂಬ ಹೆಸರಿನಿಂದಲೇ ಕರೆಯುತ್ತಿದ್ದರು. ಹೀಗೆ ಕುಂಭನ ಕನಿಷ್ಟಪುತ್ರನು ನಾಮಾವಶೇಷನಾದ ತರುವಾಯ ಪ್ರಜೆಗಳು ಪರಮಾನಂದದಿಂದ ಮಹೋತ್ಸವವನ್ನು ನಡೆಯಿಸಿ, ರಾಯಮಲ್ಲನನ್ನೇ ತಮ್ಮ ಪ್ರಭುವೆಂದು ಗೌರವಿಸಿ ಓಲಗಿಸಿದರು.

# ರಾಣಾ ರಾಯಮಲ್ಲ

ರಾಣಾ ರಾಯಮಲ್ಲನು ಕ್ರಿ. ಶ. ೧೪೭೪ರಲ್ಲಿ ಮೇವಾಡದ ಸಿಂಹಾಸನವನ್ನೇರಿದನು. ವೀರಭೂಮಿಯಾದ ಮೇವಾಡದ ಅಧಿಪತಿಗಳಲ್ಲಿ ಒಬ್ಬೊಬ್ಬರು ಒಂದೊಂದು ಸದ್ಗುಣಕ್ಕಾಗಿ ಪ್ರಖ್ಯಾತರಾದವರು. ಕೆಲವರು ಮಹೋದ್ದೇಶ ಸಾಧನೆಗಾಗಿ ಗೈದ ಸ್ವಾರ್ಥತ್ಯಾಗದಿಂದ, ಕೆಲವರು ವಂಶಪಾವಿತ್ರ್ಯತೆಯನ್ನು ರಕ್ಷಿಸುವುದಕ್ಕಾಗಿ ಕೈಕೊಂಡ ಸ್ಥಿರಪ್ರತಿಜ್ಞೆಯಿಂದ, ಕೆಲವರು ವೀರ್ಯಪ್ರದರ್ಶಕವಾದ ಮಹೌದಾರ್ಯದಿಂದ! ರಾಣಾ ರಾಯಮಲ್ಲನಾದರೋ ಈ ಮೂರು ಸದ್ಗುಣಗಳಿಂದಲೂ ಪ್ರಖ್ಯಾತನಾದನು. ಈತನಿಗೆ, ಸಂಗ, ಪೃಥ್ವೀರಾಜ, ಜಯಮಲ್ಲ ಎಂಬ ಮೂವರು ಮಕ್ಕಳಿದ್ದರು. ಅವರಲ್ಲಿ ಪೃಥ್ವೀರಾಜನು ನಿರುಪಮಸಾಹಸಿ, ಮಹಾ ತೇಜಶ್ಶಾಲಿ. ಹದಿನಾಲ್ಕು ಸಂವತ್ಸರ ವಯಸ್ಸು ಆಗುವುದಕ್ಕೆ ಮುಂಚಿನಿಂದಲೇ ಆ ರಾಜಪುತ್ರನು ಆಯುಧಹಸ್ತನಾಗಿ, ನಿರ್ಭೀತಿಯಿಂದ ಎಲ್ಲಿಗೆಂದರಲ್ಲಿಗೆ ನಡೆದು, ಎಂತಹ ಪರಾಕ್ರಮಿಗಳಿಗೂ ಎದೆನಡುಗುವಂತಹ ಅಪಾಯಗಳಿಗೂ ಬೆದರದೆ ಮಹಾ ಸಾಹಸಕಾರ್ಯಗಳನ್ನು ಮಾಡುವನು. ಅವನಿಗಿದ್ದ ಆತ್ಮವಿಶ್ವಾಸಕ್ಕೂ ಸ್ವಾಭಿಮಾನಕ್ಕೂ ಮಿತಿಯೇ ಇರಲಿಲ್ಲ. ಮಹಮ್ಮದೀಯರು ಹಿಂದೂಧರ್ಮವನ್ನು ದ್ವೇಷಿಸುವರೆಂಬ ಅಂಶವನ್ನು ತಿಳಿದಿದ್ದನಾದುದರಿಂದ, ಅವನು ತನ್ನ ಅನುಚರರಿಂದ ಕೂಡಿಕೊಂಡು, ಅವರನ್ನು ಕಂಡಕಂಡಲ್ಲಿ ಎದುರಿಸಿ, ಯುದ್ಧ ಮಾಡಿ ಸೋಲಿಸುವನು. ಮಹಮ್ಮದೀಯರೊಂದಿಗೆ ಯುದ್ಧವೊದಗಿದ ದಿನ ಅವನಿಗೆ ಮಂಗಳಕರವಾದ ಹಬ್ಬದದಿನ ಪ್ರಾಪ್ತವಾದಷ್ಟು ಸಂತೋಷ. ಆತನ ಅಣ್ಣನಾದ ಸಂಗನಾದರೋ ಪೃಥ್ವಿರಾಜನಂತಲ್ಲದೆ, ಶಾಂತಗುಣಸಮನ್ವಿತನೂ, ವಿವೇಕಿಯೂ, ದೀರ್ಘಾಲೋಚನಾಪರನೂ ಆಗಿದ್ದನು. ದುಡುಕು ಸ್ವಭಾವದವನೂ, ಮುಂಗೋಪಿಯೂ, ಶೂರತನದ ಹೆಮ್ಮೆಯಿಂದ ಮೆರೆಯುವವನೂ ಆದ ಪೃಥ್ವೀರಾಜನಿಗೆ ಸಂಗನ ಈ ಸ್ವಭಾವವು ಸರಿದೋರುತ್ತಿರಲಿಲ್ಲ. ಪೃಥ್ವೀರಾಜನ ಅಭಿಪ್ರಾಯದಲ್ಲಿ, ಸಂಗನು ಸಿಂಹಾಸನಾರೋಹಣಕ್ಕೆ ಅನರ್ಹನೆಂದೂ, ಚಿತ್ತೂರು ರಾಜಸಿಂಹಾಸನವನ್ನು ಏರುವ ಭಾಗ್ಯವನ್ನು

ವಿಧಾತನು ತನ್ನ ಹಣೆಯಲ್ಲೇ ಬರೆದಿರುವನೆಂದೂ ಇದ್ದುದಲ್ಲದೆ ಆ ಮಾತನ್ನು ಸ್ಪಷ್ಟವಾಗಿ ಹೇಳುತ್ತಲೂ ಇದ್ದನು. ಒಂದಾನೊಂದು ದಿನ ರಾಯಮಲ್ಲನ ತಮ್ಮನಾದ ಸುರೇಶಮಲ್ಲನೂ, ಈ ಮೂವರು ಅಣ್ಣತಮ್ಮಂದಿರೂ, ಒಟ್ಟಿಗೆ ಒಂದೆಡೆಯಲ್ಲಿ ಕುಳಿತು ವಿನೋದಕ್ಕೆ ಸಂಭಾಷಣೆ ಮಾಡಿಕೊಳ್ಳುತ್ತಿದ್ದಾಗ ಪೃಥ್ವೀರಾಜನು, ಮೇಲೆ ಹೇಳಿದಂತೆಯೇ-ತಮ್ಮ ತಂದೆಯಾದ ರಾಣಾ ರಾಯಮಲ್ಲನ ತರುವಾಯ ಚಿತ್ತೂರಿಗೆ ತಾನೇ ಅಧಿಪತಿಯಾಗತಕ್ಕವನೆಂದು ಮತ್ತೊಂದುಬಾರಿ ಹೇಳಿದನು. ಆ ಮಾತನ್ನು ಕೇಳಿದ ರಾಜಪುತ್ರ ಸಂಗನು-'ತಮ್ಮಾ ಈ ನಮ್ಮ ರಾಜ್ಯಕ್ಕೆ ನೀನೇ ರಾಜನಾಗಿರಬೇಕೆಂಬುದು ದೇವತೆಗಳ ಇಷ್ಟವಿದ್ದರೆ ಹಾಗೆಯೇ ಆಗಲಿ ಬಿಡು. ವಿಧಿಯು ನಿಯಾಮಕವಾಗಿರುವ ಸಂದರ್ಭದಲ್ಲಿ, ನಾನು ಜ್ಯೇಷ್ಠನಾಗಿ ರಾಜ್ಯಕ್ಕೆ ನಿಶ್ಚಯವಾದ ಬಾಧ್ಯಸ್ಥನಾಗಿರುವೆನಾದರೂ, ನಿನಗಾಗಿ ಅದನ್ನು ಬಿಟ್ಟುಕೊಡತಕ್ಕವನಾಗಿದ್ದೇನೆ. ಆದರೆ, ಆ ಸಂಗತಿಯನ್ನು ನಿರ್ಧರಿಸಿಕೊಳ್ಳುವುದಕ್ಕಾಗಿ ಒಂದುಕೆಲಸ ಮಾಡೋಣ. ನಮ್ಮೂರಹೊರಗಿನ ವ್ಯಾಘ್ರಗಿರಿಯಲ್ಲಿ ಮುಹೂರ್ತಗೊಂಡಿರುವ ಚಾರುಣೀ ದೇವಾಲಯದ ಅರ್ಚಕಳು ಮಹಾ ಯೋಗಿನಿ. ಆಕೆಗೆ ಭವಿಷ್ಯದೃಷ್ಟಿಯುಂಟೆಂದು ಪ್ರಸಿದ್ಧವಾಗಿದೆಯಲ್ಲವೆ? ಆಕೆಯ ಬಳಿಗೆ ಹೋಗಿ, ನಮ್ಮ ನಮ್ಮ ವಿಧಿಲಿಖಿತವು ಹೇಗಿದೆಯೋ ಕೇಳಿತಿಳಿದುಕೊಳ್ಳೋಣ!' ಎಂದನು. ಅದಕ್ಕೆ ಮಿಕ್ಕ ಇಬ್ಬರೂ ಒಪ್ಪಿದರು. ಒಡನೆ ಆ ಸೋದರರು ಮೂವರೂ, ತಮ್ಮ ಚಿಕ್ಕತಂದೆ ಸುರೇಶಮಲ್ಲನೊಂದಿಗೆ ವ್ಯಾಘ್ರಗಿರಿಗೆ ಹೊರಟರು.

ಅವರು ದೇವಸ್ಥಾನವನ್ನು ತಲುಪಿದ ವೇಳೆಯಲ್ಲಿ ಆ ಯೋಗಿನಿಯು ಅಲ್ಲಿರಲಿಲ್ಲ. ಆದುದರಿಂದ ಆಕೆಯು ಬರುವವರೆಗೂ ಅಲ್ಲೇ ನಿಲ್ಲಬೇಕೆಂದು ನಿಶ್ಚಯಿಸಿದರು. ಪೃಥ್ವೀರಾಜ ಜಯಮಲ್ಲರು, ಆಕೆಯು ಕೂಡುತ್ತಿದ್ದ ಮಂಚದಮೇಲೆಯೇ ಕುಳಿತುಕೊಂಡರು. ಸಂಗನು ಅಲ್ಲೇ ಹಾಸಿದ್ದ ಸಿವಂಗಿಯ ಚರ್ಮದಮೇಲೆ ಕುಳಿತನು. ಸುರೇಶಮಲ್ಲನು, ಸಂಗನ ಪಕ್ಕದಲ್ಲೇ ಒಂದು ಮೊಳಕಾಲನ್ನು ಮಾತ್ರ ಸಿವಂಗಿ ಚರ್ಮದಮೇಲಿಟ್ಟುಕೊಂಡು ನೆಲದಮೇಲೆ ಕುಳಿತನು. ತರುವಾಯ ಸ್ವಲ್ಪಹೊತ್ತಿನೊಳಗಾಗಿಯೇ ಆ ಯೋಗಿನಿಯು ಬಂದಳು. ಒಡನೆ ಪೃಥ್ವೀರಾಜನು ತನ್ನಪೀಠದಿಂದೆದ್ದು, ತಾವು ಬಂದಿದ್ದ ಕಾರಣವನ್ನು ತಿಳಿಸಿದನು. ಆ ಮಾತನ್ನು ಕೇಳಿದ ಆ ಮು

ದುಕಿಯು ಹಸನ್ಮುಖದಿಂದ, ಸಿವಂಗಿ ಚರ್ಮದಮೇಲೆ ಕುಳಿತಿದ್ದ ಸಂಗನ ಕಡೆಗೆ ತಿರುಗಿ ಹೀಗೆಂದಳು.

'ಮೇವಾಡದ ಪೂರ್ವಿಕರಾಜರಿಗೆಲ್ಲ ಸಿವಂಗಿ ಚರ್ಮವೇ ಸಿಂಹಾಸನ ಪ್ರಾಯವಾಗಿ ಗೌರವಾರ್ಹವಾಗಿದ್ದುದು. ನೀನು ಈಗ ಅದನ್ನೇ ಅಧಿರೋಹಿಸಿ ಕುಳಿತಿರುವುದರಿಂದ ಮೇವಾಡದ ಸಿಂಹಾಸನವನ್ನು ನೀನೇ ಪಡೆಬಲ್ಲೆ' ಎಂದು ನುಡಿದು, ಸುರೇಶಮಲ್ಲನಕಡೆಗೆ ತಿರುಗಿ—'ಬಹುದಿನಗಳು ಬಹುವಿಧ ಕಷ್ಟನಷ್ಟಗಳನ್ನು ಅನುಭವಿಸಿದ ತರುವಾಯ, ನಿನಗೂ ಮೇವಾಡದ ಅಧಿಪತ್ಯವು ದೊರೆಯಲುಳ್ಳುದು. ಇನ್ನು ಸ್ವಲ್ಪಕಾಲದಲ್ಲೇ ಪಿತೃವಿಹೀನನಾದ ಒಬ್ಬ ರಾಜಕುಮಾರನನ್ನು ಹಗೆಗಳ ಪಾಲಿಗೆ ಬೀಳದಂತೆ, ಲೋಕಮಾತೆ ಚಾರುಣೀದೇವಿಯೇ ರಕ್ಷಿಸುವಳು. ಆ ಸಂಬಂಧದಲ್ಲಿ ದೇವಿಯ ಅನುಗ್ರಹದಿಂದ ನಿನಗೆ ಸೌಭಾಗ್ಯವುಂಟಾಗುವುದು' ಎಂದು ಮುಖವಾಕ್ಯವನ್ನು ಬಿಟ್ಟು ನುಡಿದು ಸುಮ್ಮನಾದಳು.

ಯೋಗಿನಿಯ ಈ ಮಾತುಗಳು ಕರಗಿದ ಸೀಸದಂತೆ ಪೃಥ್ವೀರಾಜನ ಕರ್ಣರಂಧ್ರಗಳಲ್ಲಿ ಪ್ರವೇಶಿಸಿದುವು. ಹೃದಯಭೇದಕಗಳಾದ ಆ ಮಾತುಗಳನ್ನು ಕೇಳಿ ಕೇಳದಂತೆ ಅವನು ರೋಷಾರುಣಲೋಚನನಾಗುತ್ತ, ಬಿಸಿಯುಸಿರುಗಳನ್ನು ಬಿಡುತ್ತ, ಅಸೂಯೆಯೂ, ರೋಷವೂ ಮೇಲೆಮೇಲೆ ಉಕ್ಕುತ್ತಿರಲು, ಕತ್ತಿಯನ್ನು ಒರೆಯಿಂದೆಳೆದು ಸಂಗನನ್ನು ಅಲ್ಲೇ ತೀರಿಸಿಬಿಡಬೇಕೆಂದು ಅವನಮೇಲೆ ಧುಮುಕಲೆತ್ನಿಸಿದನು. ಅಷ್ಟರಲ್ಲಿ ಸುರೇಶಮಲ್ಲನು ಅಡ್ಡಬಂದು ಅವನನ್ನು ತಡೆದು ಸಂಗನ ಪ್ರಾಣವನ್ನು ರಕ್ಷಿಸಿದನಾದರೂ, ಅದೇ ಕಾರಣವಾಗಿ, ಸಂಗ ಮತ್ತು ಪೃಥ್ವೀರಾಜರಿಗೆ ಅಲ್ಲೇ ದೊಡ್ಡದೊಂದು ಕಾಳಗವೇ ಕೈಗಟ್ಟಿತು. ಆ ಅರ್ಚಕಳು, ಈ ಪ್ರಮಾದವನ್ನು ಕಂಡು, ತನ್ನನ್ನೆಲ್ಲಿ ಕೊಲ್ಲುವರೋ ಎಂಬ ಭೀತಿಯಿಂದ ಆ ಗುಹೆಯನ್ನು ಬಿಟ್ಟು ಹೊರಕ್ಕೆ ಓಡಿಹೋದಳು. ಶಾಂತವಾಗಿದ್ದ ಆ ದೇವತಾಗೃಹವು, ಆ ರಾಜಪುತ್ರರ ಪರಸ್ಪರ ಕಠಿಣವಾಕ್ಯಗಳಿಂದಲೂ, ಖಡ್ಗಗಳ ಝಣಝಣತ್ಕಾರದಿಂದಲೂ, ಪ್ರತಿಧ್ವನಿಕೊಡುತ್ತ ಕ್ಷಣಮಾತ್ರದಲ್ಲೇ ಭೀಕರವಾತಾವರಣದಿಂದ ಕೂಡಿ, ಭಯಂಕರವಾಯಿತು.

ಸ್ವಾಭಾವಿಕವಾಗಿಯೇ ಜನ್ಮತಃ ಖಡ್ಗಪ್ರಿಯನೂ, ನಿಷ್ಠುರಹೃದಯ

ನೂ ಆದ ಪೃಥ್ವೀರಾಜನೊಂದಿಗೆ ಸರಿಗಟ್ಟಿ ಹೋರುವುದು ಸಂಗನಿಂದ ಸಾಗದ ಕೆಲಸವಾಯಿತು. ಸ್ವಲ್ಪಹೊತ್ತಿನ ಯುದ್ಧದಲ್ಲೇ ದೇಹದಲ್ಲಿ ನಾಲ್ಕೈದು ಗಾಯಗಳಾದುವು. ಆ ಗಾಯಗಳಿಂದ ನೆತ್ತರು ಧಾರೆಧಾರೆಯಾಗಿ ಸುರಿಯುತ್ತಿದ್ದಿತು. ಕತ್ತಿಯು ಉಪಾಯತಪ್ಪಿ ತಗಲಿದುದರಿಂದ ಒಂದುಕಣ್ಣಿಗೆ ಬಹು ಅಪಾಯಕರವಾದ ಗಾಯವಾಗಿದ್ದಿತು. ಇಂತಹ ಸ್ಥಿತಿಯಲ್ಲಿ ತನ್ನಂತೆಯೇ ಗಾಯಗೊಂಡು ತತ್ತರಿಸುತ್ತಿದ್ದ ಒಂದು ಕುದುರೆಯನ್ನೇರಿ ಏಳುವುದು ಬೀಳುವುದನ್ನರಿಯದೆ, ಸಂಗನು ಪ್ರಾಣಭಯದಿಂದ ಓಡತೊಡಗಿದನು. ವ್ಯಾಘ್ರಗಿರಿಯಿಂದ ಸ್ವಲ್ಪದೂರ ಹೋಗುವುದರೊಳಗಾಗಿಯೇ ರಹತೂರು ವಂಶಜನಾದ ಒಬ್ಬ ರಜಪೂತನು ಅವನಿಗೆ ದೃಷ್ಟಿಗೋಚರನಾದನು. ಆ ರಾಹುತನು, ಎಲ್ಲಿಂದಲೋ ಪ್ರಯಾಣವಾಗಿಬಂದು ಆಯಾಸಪರಿಹಾರಕ್ಕಾಗಿ ಸ್ವಲ್ಪಹೊತ್ತು ಕುದುರೆಯಿಂದಿಳಿದು ಮರದನೆರಳಿನಲ್ಲಿ ಕುಳಿತಿದ್ದನು. ದೇಹವಾದ್ಯಂತವೂ ರಕ್ತಮಯವಾಗಿ, ಪ್ರಾಣಭೀತಿಯಿಂದ ಓಡುತ್ತಿದ್ದ ಸಂಗನನ್ನು ಕಂಡೊಡನೆಯೇ ಮೇಲ್ಕೊಂಡ ರಹತೂರನು, ಆತನನ್ನು ಕುರಿತು,—'ಅಯ್ಯಾ ನೀನಾರು ನಿನಗುಂಟಾಗಿರುವ ಭಯಕ್ಕೆ ಕಾರಣವೇನು ? ಯಾರಿಂದ ನಿನಗೀ ಭಯವು ಪ್ರಾಪ್ತವಾಯಿತು ? ತಿಳಿಸು. ನನ್ನಿಂದ ಆದ ಸಹಾಯ ಮಾಡುತ್ತೇನೆ' ಎಂದು ನುಡಿಯಲು, ಸಂಗನು ಹಿಂದೆಹಿಂದೆ ನೋಡಿಕೊಳ್ಳುತ್ತಾ, ಕ್ಷಣಮಾತ್ರ ಕುದುರೆಯನ್ನು ನಿಲ್ಲಿಸಿ—'ಅಯ್ಯಾ ನಾನು ಮೇವಾರಾಧಿಪತಿ ರಾಯಮಲ್ಲನ ಮಗನು. ನನ್ನ ಸೋದರರು ಕೊಲ್ಲಬಯಸಿ, ನನ್ನೊಂದಿಗೆ ಹೋರಾಡಿದರು. ಆ ಹೋರಾಟದಲ್ಲಿ ಆದ ಗಾಯಗಳಿಂದ ನೊಂದು ಪ್ರಾಣರಕ್ಷಣೆಗಾಗಿ ಓಡುತ್ತಿದ್ದೇನೆ' ಎಂದು ನುಡಿದು, ಮುಂದೆ ಹೊರಡತೊಡಗಿದನು. ಆಗ ರಹತೂರನು— ಅಯ್ಯಾ ಭಯಪಡಬೇಡ. ಈಗಲೇ ಬಹು ಆಯಾಸಪಟ್ಟಿದ್ದೀಯೆ. ಮುಂದೆ ಈ ಆಯಾಸದಲ್ಲೇ ಪ್ರಯಾಣಮಾಡಿದರೆ ಬಹು ಅಪಾಯವುಂಟಾದೀತು ! ಇಲ್ಲಿ ಇಳಿದು ವಿಶ್ರಮಿಸಿಕೋ ! ನನ್ನ ಪ್ರಾಣವನ್ನಾದರೂ ಕೊಟ್ಟು ನಿನ್ನನ್ನು ಶತ್ರುಗಳಿಂದ ಕಾಪಾಡುತ್ತೇನೆ. ಇದನ್ನು ನಂಬು' ವಂದು ಅಭಯದಾನಮಾಡಿ, ಕೈಗೊಟ್ಟು ಕುದುರೆಯಿಂದ ಇಳಿಸಿಕೊಂಡು, ಆತನನ್ನು ಆದರಿಸುತ್ತಿದ್ದನು. ಅಷ್ಟರಲ್ಲಿ ದೂರದಲ್ಲಿ ಕೆಂಧೂಳಿಯೆದ್ದಂತೆ ಕಾಣಿಸಿತು. ಅದನ್ನು ನೋಡಿದ ಸಂಗನು—'ಆಗೋ ನನ್ನ

ತಮ್ಮ ಜಯಮಲ್ಲನು ನನ್ನನ್ನು ಹುಡುಕಿಕೊಳ್ಳಲು ಸೈನ್ಯಸಮೇತನಾಗಿ ಬರುತ್ತಿದ್ದಾನೆ. ಸುರೇಶಮಲ್ಲ-ಪೃಥ್ವೀರಾಜರು, ಪರಸ್ಪರ ಹೊಡೆದಾಡಿ ನಿಶ್ಚೇತಸ್ಕರಾಗಿ ಬಿದ್ದಿದಾರೆ' ಎಂದು ತತ್ತರಿಸತೊಡಗಿದನು. ಆಗಲಾ ರಹತೂರನು —'ಮಿತ್ರಾ ಭಯಪಡಬೇಡ. ನೀನು ಸುರಕ್ಷಿತವಾಗಿ ಈ ಮಂಟಪದೊಳಹೊಕ್ಕು ಬೇರೆ ಮಾರ್ಗದಿಂದ ಹೊರಟುನಡೆ. ಅವರು ಇದರೊಳಕ್ಕೆ ಹೊಗದಂತೆ ನಾನು ಇದರ ದ್ವಾರಪ್ರದೇಶವನ್ನು ರಕ್ಷಿಸುತ್ತಿರುವೆನು' ಎಂದು ನುಡಿದನು. ಅಷ್ಟರೊಳಗಾಗಿ, ಸಂಗನು ಶಂಕಿಸಿದಂತೆಯೇ, ನಾಲ್ಕಾರು ಮುಂದಿ ಕುದುರೆಯ ಸವಾರರೂ, ಅವರಿಗೆ ಮುಖ್ಯಸ್ಥನಾಗಿ ಜಯಮಲ್ಲನೂ ಬಂದು, ರಹತೂರನನ್ನು ಕುರಿತು-'ಸಂಗನನ್ನು ನಮ್ಮ ವಶಕ್ಕೆ ಒಪ್ಪಿಸಿಬಿಡು' ಎಂದು ಅಧಿಕಾರಯುಕ್ತವಾಣಿಯಿಂದ ನುಡಿದನು. ಅದನ್ನು ಕೇಳಿದ ಆ ರಜಪೂತನು—'ಸಂಗನು ನನಗೆ ಶರಣುಬಿದ್ದಿದ್ದಾನಾದುದರಿಂದ ಅವನನ್ನು ನಿನಗೆ ಒಪ್ಪಿಸಲಾರೆನು' ಎಂದನು.—'ಹಾಗಾದರೆ ಅವನನ್ನು ನಾವೇ ಹಿಡಿದುಕೊಳ್ಳುತ್ತೇವೆ' ಎಂದು, ಜಯಮಲ್ಲಾದಿಗಳು, ಆ ಮಂಟಪದೊಳಕ್ಕೆ ಪ್ರವೇಶಿಸತೊಡಗಲು, ರಹತೂರನು ಕತ್ತಿಯನ್ನು ಒರೆಯಿಂದ ಸೆಳೆದು ಅವರೊಂದಿಗೆ ಹೋರಾಡತೊಡಗಿದನು. ಸ್ವಲ್ಪಹೊತ್ತು ಅಲ್ಲೊಂದು ಭಯಂಕರವಾದ ಕಾಳಗ ನಡೆಯಿತು. ನಾಲ್ಕಾರುಮಂದಿ ಶತ್ರುಗಳ ಮಧ್ಯದಲ್ಲಿ ಸಿಕ್ಕಿದ್ದ ರಹತೂರನು, ಬಲಗುಂದಿ ತನ್ನ ಶರಣಾಗತಪರಿಪಾಲನ ಬಿರುದನ್ನು ಸಾರ್ಥಕಗೊಳಿಸಿಕೊಂಡು ಪ್ರಾಣಗಳನ್ನು ತೊರೆದನು. ತರುವಾಯ ಜಯಮಲ್ಲನೂ ಅವನ ಅನುಚರರೂ ಆ ಮಂಟಪವನ್ನು ಹೊಕ್ಕು ಹುಡುಕಿದರು. ಅಲ್ಲಿ ಸಂಗನು ಸಿಕ್ಕದಿರಲು, ಪುನಃ ತಪ್ಪಿಸಿಕೊಂಡುಹೋದನೆಂದುಕೊಂಡು ಹೊರಟು ನಡೆದರು.

ಅಣ್ಣತಮ್ಮಂದಿರಿಗೆ ನಡೆದ ಈ ಹೋರಾಟದ ವರ್ತಮಾನವು ರಾಣಾ ರಾಯಮಲ್ಲನಿಗೆ ತಿಳಿಯಿತು. ತನ್ನ ಪ್ರಿಯಪುತ್ರ ಸಂಗನು ದೇಶಾಂತರಗತನಾಗಿಹೋದ ವಾರ್ತೆಯನ್ನು ಕೇಳಿ ಆತನು, ಅತ್ಯಂತ ಕ್ರುದ್ಧನಾಗಿ ಪೃಥ್ವೀರಾಜನನ್ನು ಕುರಿತು-'ಛೀ, ಎಂತಹ ಕೆಲಸಮಾಡಿದೆ. ನನ್ನ ಪ್ರಿಯಪುತ್ರನು ನಿನ್ನ ದೆಸೆಯಿಂದಲ್ಲವೆ ಪ್ರಾಣಭಯಕ್ಕೆ ಒಳಗಾಗಿ ನಿಂತಲ್ಲಿ ನಿಲ್ಲಲಾಸರೆಯಿಲ್ಲದೆ ದೇಶದೇಶ ಅಲೆಯುವಂತಾಯಿತು. ಇಂತಹ ಭ್ರಾತೃದ್ರೋಹಿಯಾದ

ನಿನ್ನ ಮುಖವನ್ನು ನೋಡಬಾರದು. ಹೋಗು. ಕಲಹಪ್ರಿಯನಾದ ನೀನು ಎಲ್ಲಾದರೂ ಹೀಗೇ ಕಲಹದಿಂದಲೇ ಜೀವಿಸಿಕೊಂಡಿರು' ಎಂದು ನುಡಿದು ಅರಮನೆಯಿಂದ ಹೊರಕ್ಕೆ ಕಳುಹಿಸಿಬಿಟ್ಟನು.

ಪೃಥ್ವೀರಾಜನು ಧೀರನು, ಮಾನಧನನು. ರೋಷಭರದಲ್ಲಿ ತಾನು ಮಾಡಿದ ಕಾರ್ಯವು ಅಷ್ಟು ಪ್ರಮಾದಕರವಾಗುವುದೆಂದು ಭಾವಿಸಿರಲಿಲ್ಲ. ಆದರೂ ತನ್ನ ತಂದೆಯು ಅಷ್ಟು ತುಚ್ಛರೀತಿಯಿಂದ ತನ್ನನ್ನು ನಿಂದಿಸಿದ ಮೇಲೆ, ಪುನಃ ಅಲ್ಲಿ ನಿಲ್ಲಕೂಡದೆಂದು ಭಾವಿಸಿ, ತನ್ನ ದೇಹದ ಗಾಯಗಳು ಸ್ವಲ್ಪ ವಾಸಿಯಾಗುವವರೆಗೂ ಅಲ್ಲಿದ್ದು ತರುವಾಯ ನಾಲ್ವರು ನಂಬಿಕೆಯ ಸೇವಕರನ್ನು ಜೊತೆಗೆ ಕರೆದುಕೊಂಡು, ಬೇಕಾದ ಆಯುಧಸಾಮಗ್ರಿಗಳನ್ನು ಸಂಗ್ರಹಿಸಿಕೊಂಡು, ಮಹತ್ಕಾರ್ಯಗಳನ್ನು ಸಾಧಿಸಿ ಜಗನ್ಮಾನ್ಯತೆಯನ್ನು ಸಂಪಾದಿಸಿಕೊಳ್ಳುವವರೆಗೂ ಪುನಃ ತಮ್ಮ ತಂದೆಯ ಅರಮನೆಯೊಳಕ್ಕೆ ಅಡಿಯಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಹೊರಹೊರಟನು. ಹಾಗೆ ಹೊರಟ ಪೃಥ್ವೀರಾಜನು, ಪ್ರಯಾಣ ಮಾಡುತ್ತ ಮಾಡುತ್ತ ಗಡ್ವಾರೆಂಬ ಚಿಕ್ಕದೊಂದು ರಾಜ್ಯಕ್ಕೆ ಬಂದು ಸೇರಿದನು. ಅದನ್ನು ಪೂರ್ವದಲ್ಲಿ ಮತ್ಸ್ಯಕುಲಕ್ಕೆ ಸೇರಿದ ಒಬ್ಬ ರಾಜನು ಪಾಲಿಸುತ್ತಿದ್ದನು. ಮಿವಾರು ಪ್ರಭುಗಳು ಹಿಂದೆ ಅದನ್ನು ಜಯಿಸಿ ಕೆಲಕಾಲ ಪಾಲಿಸಿದರು. ಆದರೆ, ರಾಯಮಲ್ಲನ ಸೋದರನಾದ ಉದಯನು ಚಿತ್ತೂರನ್ನು ಪಾಲಿಸುತ್ತಿದ್ದ ಕಾಲದಲ್ಲಿ ಗಡ್ವಾರು ಮಿವಾರು ಪ್ರಭುತ್ವಕ್ಕೆ ಒಳಪಡಲು ಇಷ್ಟಪಡದೆ ಸ್ವತಂತ್ರವಾಯಿತು. ರಾಯಮಲ್ಲನು ಪುನಃ ಅದನ್ನು ಸ್ವಾಧೀನಪಡಿಸಿಕೊಳ್ಳಲಾರದೆ, ಹಾಗೆಯೇ ಕಾಲವು ಕಳೆದುಬರುತ್ತಿದ್ದಿತು. ತನ್ನ ಸೇವಕರೊಂದಿಗೆ ಹೊರಟು ಪ್ರಯಾಣವಾಗಿ ಬರುತ್ತಿದ್ದ ಪೃಥ್ವೀರಾಜನು, ಆ ದೇಶವನ್ನು ಹೊಕ್ಕು ಅದರ ಸ್ಥಿತಿಗತಿಗಳನ್ನು ಕುರಿತು ವಿಚಾರಿಸಲು, ಆ ದೇಶವೆಲ್ಲಾ ದಂಗೆಗಾರರು ದರೋಡೆಕೋರರು ಮುಂತಾದವರ ಉಪದ್ರವಕ್ಕೆ ಒಳಗಾಗಿ, ರಾಜನ ದರ್ಪವು ಲೇಶಮಾತ್ರವೂ ನಡೆಯದೆ ಪ್ರಜೆಗಳು ತಹತಹಪಡುತ್ತಿದ್ದಾರೆಂದು ತಿಳಿಯಬಂತು. ಒಡನೆ ರಾಜಪುತ್ರನು ಆ ದೇಶವನ್ನು ಜಯಿಸಿ, ಅದನ್ನು ತನ್ನ ತಂದೆಯ ರಾಜ್ಯಕ್ಕೆ ಸೇರಿಸಬೇಕೆಂದು ನಿಶ್ಚಯಿಸಿಕೊಂಡು, ಅದಕ್ಕೆ ಕಾರಣವೇನಾದರೂ ದೊರೆಯುವುದೇನೋ ನೋಡೋಣವೆಂದುಕೊಂಡು, ಆ ದೇಶದ ಮುಖ್ಯಪಟ್ಟಣ

ಕ್ಕೆ ಪ್ರಯಾಣಮಾಡಿದನು. ಆದರೆ ಅಷ್ಟರಲ್ಲಿ ಅವನಬಳಿ ಇದ್ದ ದ್ರವ್ಯವೆಲ್ಲಾ ಮುಗಿದುಹೋಗಿ, ಅವನಿಗೂ ಅವನ ಸೇವಕರಿಗೂ ಅನ್ನಸಿಕ್ಕುವುದೇ ದುಸ್ತರವಾಯಿತು. ಆಗಲವನು, ತನ್ನ ಕೈಯಲ್ಲಿದ್ದ ಒಂದು ಉಂಗುರವನ್ನಾದರೂ ಮಾರಿ ಧನವನ್ನು ದೊರೆಕಿಸಿ ಕೆಲಕಾಲ ಜೀವನಮಾಡೋಣವೆಂದುಕೊಂಡು, ಆ ಊರಿನ ಒಬ್ಬ ರತ್ನಪ್ರುಡಿ ವ್ಯಾಪಾರಿಯ ಬಳಿಗೆ ಹೋದನು. ದೈವಯೋಗದಿಂದ ಆ ವರ್ತಕನು ಹಿಂದೆ ಆ ಉಂಗುರವನ್ನು ಪೃಥ್ವೀರಾಜನಿಗೇ ಮಾರಿದವನಾಗಿದ್ದು, ಅವನು ರಾಜಪುತ್ರನನ್ನು ಗುರುತುಹಿಡಿದು ಆತನ ವೃತ್ತಾಂತವೇನೆಂದು ಪ್ರಶ್ನಿಸಲು, ಪೃಥ್ವೀರಾಜನು ತನ್ನ ಸಮಾಚಾರವನ್ನೆಲ್ಲಾ ತಿಳಿಸಿ, ಆ ಗದ್ವರುದೇಶವನ್ನು ಜಯಿಸಿ ವಿಶಾವಾರು ರಾಜ್ಯಕ್ಕೆ ಸೇರಿಸಬೇಕೆಂದಿರುವ ತನ್ನ ಸಂಕಲ್ಪವನ್ನು ಮರೆಮಾಡದೆ ಆ ವರ್ತಕನಬಳಿ ಹೇಳಿಬಿಟ್ಟನು. ಇದನ್ನು ಕೇಳಿ ಪರಮ ಹರ್ಷಿತನಾದ ಆ ವರ್ತಕನು, ಆ ದೇಶವನ್ನು ಜಯಿಸಲು ವಿಶೇಷ ಕಷ್ಟಪಡಬೇಕಾದ ಪ್ರಕೃತವಿಲ್ಲವೆಂದೂ, ಉಪಾಯದಿಂದ ಜಯಸಂಪಾದನೆ ಮಾಡುವ ಮಾರ್ಗವನ್ನು ತಿಳಿಸುವಲ್ಲಿ ತಾನು ಸಹಾಯ ಮಾಡುವೆನೆಂದೂ ಮಾತುಕೊಟ್ಟನು. ಪೃಥ್ವೀರಾಜನು, ಆ ಅನುಕೂಲತೆಯೊದಗಿದುದಕ್ಕಾಗಿ ಪರಮಹರ್ಷಿತನಾಗಿ ಅಲ್ಲೇ ಕೆಲವು ದಿನಗಳಿದ್ದು ಕಾರ್ಯಸಾಧನೆ ಮಾಡಲು ನಿಶ್ಚಯಿಸಿದನು.

ತರುವಾಯ ಪೃಥ್ವೀರಾಜನು, ಸ್ಥಳವಿದ್ಯಮಾನವನ್ನು ಬಲ್ಲ ಆ ವರ್ತಕನ ಸಲಹೆಯನ್ನು ಅನುಸರಿಸಿ ತನ್ನ ಪರಿಚಯವನ್ನು ಯಾರಿಗೂ ಕೊಡದೆ, ತಾನೂ ತನ್ನ ಅನುಚರರೂ ಆ ಊರಿನ ರಾಜನ ಬಳಿ ಊಳಿಗಕ್ಕೆ ಸೇರಿ, ಬಹು ವಿಧೇಯತೆಯಿಂದಲೂ ಭಕ್ತಿಶ್ರದ್ಧೆಗಳಿಂದಲೂ ನಡೆದುಕೊಳ್ಳುತ್ತ ದಿನದಿನಕ್ಕೆ ಅತಿಶಯ ನಂಬಿಕೆ ವಿಶ್ವಾಸಗಳನ್ನು ಗಳಿಸಿಕೊಂಡರು. ಹೀಗಿರುವಲ್ಲಿ ಒಂದಾನೊಂದು ಹಬ್ಬಕ್ಕಾಗಿ ವಿಶಾನರಾಜನೆಂಬ ಹೆಸರಿನ ಆ ಪ್ರಭುವು ತನ್ನ ಸೇವಕರಿಗೆಲ್ಲ ಕೆಲಸದಿಂದ ವಿರಾಮವನ್ನಿತ್ತು, ಅವರು ತಮ್ಮ ಮನಬಂದಂತೆ ವಿಹರಿಸಲು ಅಪ್ಪಣೆಕೊಟ್ಟನು. ಪೃಥ್ವೀರಾಜನು, ಆ ದಿನ ಹೇಗೆ ನಡೆಯಬೇಕೆಂಬ ಬಗ್ಗೆ ತನ್ನ ಆಪ್ತ ಸೇವಕರಿಗೆ ತಿಳಿವಳಿಕೆ ಕೊಟ್ಟದ್ದು, ತಾನು ಮಾತ್ರ ಊರಿನಿಂದ ಹೊರಕ್ಕೆ ಹೊರಟು ಅಲ್ಲೊಂದು ಮರದಪೊಟರೆಯಲ್ಲಿ ಹೊಂಚಿ ಕಾದುಕೊಂಡಿದ್ದನು. ಅಷ್ಟರಲ್ಲಿ ಅರಮನೆಯಲ್ಲಿ ಉಳಿದಿದ್ದ ವಿಶಾವಾರಿನ

ಭಟರು, ಪರಿವಾರದವರಾರೂ ಇಲ್ಲದೆ, ರಾಜನು ಒಂಟಿಯಾಗಿದ್ದ ಸಮಯವನ್ನೇ ನೋಡಿ ಆತನಮೇಲೆಬಿದ್ದು, ಅವನ ಪ್ರಾಣಹರಣಮಾಡಲು ಉದ್ಯೋಗಿಸಿದರು. ಅಕಸ್ಮಾತ್ತಾಗಿ ಪ್ರಾಪ್ತವಾದ ಈ ಅಪಾಯವನ್ನು ಕಂಡು, ಮೀನಾರಾಜನು ಮುಂದೇನೂ ತೋರದೆ ಒಡನೆ ತಲೆತಪ್ಪಿಸಿಕೊಂಡು, ಬದುಕಿದ್ದರೆ ಮುಂದೆ ಯೋಚಿಸಬಹುದೆಂದು ಭಾವಿಸಿ ಅರಮನೆಯ ಕಳ್ಳದಾರಿಯಿಂದ ಹೊರಬಿದ್ದನು. ಆ ವೇಳೆಗೆ ಸರಿಯಾಗಿ ಪೂರ್ವಸಂಕೇತದಂತೆ ಅಲ್ಲೇ ಅಲೆಯುತ್ತಿದ್ದ ಮೀವಾರಿನ ಸೇವಕರಲ್ಲೊಬ್ಬನು ರಾಜನಿಗೆ ಕೇವಲ ಆಪ್ತನಂತೆ ಬಳಿಸೇರಿ, ಆತನೆದುರಿಗೆ ತನ್ನ ಕಡೆಯ ಮುಖ್ಯ ಸೇವಕರನ್ನು ವಿಶ್ವಾಸಘಾತುಕರೆಂದು ದೂಷಿಸಿ, ಆತನ ಪ್ರಾಣರಕ್ಷಣೆಗೆಂದು ಒಂದು ಕತ್ತಿಯನ್ನೂ, ಒಂದು ಅಶ್ವವನ್ನೂ ತಂದು ಒದಗಿಸಿದನು. ಅಷ್ಟು ಮಾತ್ರವಲ್ಲದೆ ಅಪಾಯ ಸಂದರ್ಭದಲ್ಲಿ ಜೊತೆಗಿದ್ದು ಸೇವಿಸಲಿಕ್ಕೆಂದು ತಾನೂ ಆತನೊಂದಿಗೆ ಹೊರಟನು. ಮೀನಾರಾಜನು ವಿಧಿಪ್ರೇರಿತನಾಗಿಯೋ ಎಂಬಂತೆ, ಪೃಥ್ವೀರಾಜನು ಹೊಂಚಿ ಎದುರುನೋಡಿಕೊಂಡಿದ್ದ ಮರದ ಬಳಿಗೇ ಬಂದು, ಪ್ರಾಣಭಯದಿಂದ ಮುಂದೆ ಮುಂದೆ ಹೋಗುತ್ತಿದ್ದನು. ಆ ಸುಳಿವನ್ನು ಕಂಡ ಪೃಥ್ವೀರಾಜನು ಒಡನೆ ಹಸಿದ ಹೆಬ್ಬುಲಿಯಂತೆ ಹಾರಿಬಂದು ಆತನಮೇಲೆ ಬಿದ್ದು ತನ್ನ ಕೈಯ ಈಟಿಯ ಒಂದೇ ಏಟಿಗೆ ಆತನನ್ನು ತೀರಿಸಿ, ಅವನು ಹತ್ತಿದ್ದ ಕುದುರೆಯನ್ನೇ ಹತ್ತಿಕೊಂಡು ರಾಜಧಾನಿಯನ್ನು ಹೊಕ್ಕನು. ಅಷ್ಟರಲ್ಲಿ ಮೀನರಾಜನ ಮರಣವಾರ್ತೆಯು ಎಲ್ಲಾ ಕಡೆಯೂ ಹಬ್ಬಿ, ರಾಜಭಟರು ಯುದ್ಧಕ್ಕೆ ಸಿದ್ಧವಾಗುತ್ತಿರಲು, ಪೃಥ್ವೀರಾಜನು ತನ್ನ ಅನುಚರರ ಸಹಾಯದಿಂದ ಏಕಕಾಲಕ್ಕೆ ಪಟ್ಟಣದ ಹತ್ತೆಂಟು ಸ್ಥಳಗಳಲ್ಲಿ ಮನೆಗಳಿಗೆ ಬೆಂಕಿಯನ್ನು ಹತ್ತಿಸಿ ಗಲಭೆಯನ್ನುಂಟುಮಾಡಿ, ಅವರ ದೃಷ್ಟಿಯನ್ನು ಚದುರಿಸಿ ಆ ಗಲಭೆಯಲ್ಲಿ ಸಿಕ್ಕ ಹಲವರನ್ನು ಬಡಿದೋಡಿಸಿ, ಅರಮನೆಯ ಮೇಲೆ ತನ್ನ ಬಳಿಯಲ್ಲಿದ್ದ ಮೀವಾರಿನ ಬಾವುಟವನ್ನೇರಿಸಿದನು. ಹೀಗೆ ಬಹುಸುಲಭದಲ್ಲೇ ವಶವಾದ ಆ ರಾಜ್ಯವನ್ನು ತಾನೇ ಪಾಲಿಸಬೇಕೆಂಬುದು ಅವನ ಅಪೇಕ್ಷೆಯಾಗಿರಲಿಲ್ಲ. ಇನ್ನೂ ಅನೇಕ ಸಾಹಸಕಾರ್ಯಗಳನ್ನು ಮಾಡಿ ಕೀರ್ತಿಯನ್ನು ಗಳಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಆ ರಾಜಪುತ್ರನು, ಆ ದೇಶವನ್ನು ತನ್ನ ತಂದೆಯ ಪ್ರತಿನಿಧಿಯಾಗಿ ಪಾಲಿಸುವಂತೆ

ತನಗೆ ಪ್ರಾರಂಭದಲ್ಲಿ ಸಹಾಯಮಾಡಿದ್ದ ಓಜನೆಂಬ ಆ ವರ್ತಕನ ವಶಕ್ಕೇ ಬಿಟ್ಟು, ತನ್ನ ನಂಬಿಕೆಯ ಅನುಚರರೊಂದಿಗೆ ಅಲ್ಲಿಂದ ಹೊರಟು ದೇಶಸಂಚಾರಕ್ಕಾಗಿ ಪ್ರಯಾಣಮಾಡಿದನು.

ಆ ಕಾಲದಲ್ಲಿ, ಮಿವಾರುದೇಶಕ್ಕೆ ಸೇರಿದ ಬದನೂರು ಎಂಬೊಂದು ಪಟ್ಟಣದಲ್ಲಿ, ರಾಜ್ಯಭ್ರಷ್ಟನಾದ ಒಬ್ಬ ರಾಜಪುತ್ರಪ್ರಭುವು ವಾಸಮಾಡಿಕೊಂಡಿದ್ದನು. ತೋಡಾ ಎಂಬುದು ಅವನ ರಾಜಧಾನಿಯಾಗಿದ್ದಿತು. ಅವನು ದುರದೃಷ್ಟವಶನಾಗಿ ಒಬ್ಬ ತುರುಷ್ಕರಾಜನಿಂದ ಪರಾಜಿತನಾಗಿ, ರಾಜಧಾನಿಯನ್ನು ತ್ಯಜಿಸಿ ನಿಲ್ಲಲು ಎಡೆಯಿಲ್ಲದೆ ಬದನೂರಿಗೆ ಬಂದು ಅಲ್ಲಿ ತಲೆಮರಸಿಕೊಂಡು ಎಂತೋ ಜೀವಿಸುತ್ತಿದ್ದನು. ಆತನಿಗೆ ತಾರಾಬಾಯಿ ಎಂಬ ಹೆಸರಿನ ಅತಿ ಸುಂದರಿಯಾದ ಒಬ್ಬ ಮಗಳಿದ್ದಳು. ಆ ಬಾಲಿಕೆಯು ಇತರ ರಾಜಪುತ್ರಿಯರಂತೆ, ಸೂರ್ಯಕಿರಣವು ಹೊಕ್ಕರಿಯದೆಂದು ಪ್ರಸಿದ್ಧವಾದ ರಾಜಾಂತಃಪುರದ ಒಳಗೇ ಅಡಗಿ ಘೋಷಾದಲ್ಲಿರಲು ಇಷ್ಟಪಡದೆ, ಬಿಲ್ಲುಬಾಣಗಳ ಪ್ರಯೋಗ, ಕತ್ತಿಯಸಾಧನೆ, ಕುದುರೆಸವಾರಿ, ಈಜು ಮುಂತಾದುವುಗಳಲ್ಲಿ ನಿಪುಣಳಾಗಿ, ಯುದ್ಧವೆಂದರೆ ಒಂಟಿಗಾಲಿನಿಂದನಿಂತು ಅಪೇಕ್ಷಿಸುತ್ತಾ, ರಾಜ್ಯಭ್ರಷ್ಟನಾಗಿರುವ ತನ್ನ ತಂದೆಯನ್ನು ಪುನಃ ಸಿಂಹಾಸನಾಧಿಷ್ಟನನ್ನಾಗಿ ಮಾಡಬೇಕೆಂದು ಅಪೇಕ್ಷಿಸಿದ್ದಳು. ಆ ಲಲನಾಮಣಿಯ ಚೆಲುವಿಕೆ ಚಾತುರ್ಯಗಳನ್ನೂ, ಸಾಹಸಪರಾಕ್ರಮಗಳನ್ನೂ ಕೇಳಿ ಜಯಮಲ್ಲನು ತನಗೆ ಆಕೆಯನ್ನಿತ್ತು ಲಗ್ನಮಾಡೆಂದು ಆಕೆಯ ತಂದೆಗೆ ಹೇಳಿ ಕಳುಹಿಸಿದನು. ಆತನು ಆ ಮಾತಿಗೆ ತಾನೇ ಪ್ರತ್ಯುತ್ತರವನ್ನೀಯದೆ, ತನ್ನ ಮಗಳೇ ಅದಕ್ಕೆ ಬೇಕಾದ ಉತ್ತರ ಕೊಡಲೆಂದು, ಆಕೆಯ ಪಾಣಿಗ್ರಹಣದ ಸಂಪೂರ್ಣಭಾರವನ್ನೂ ಆಕೆಯಮೇಲೆಯೇ ಹಾಕಿಬಿಟ್ಟನು. ಆಕೆಯಾದರೋ—'ತನ್ನ ತಂದೆಯ ರಾಜ್ಯಾಪಹರಣಮಾಡಿದ ತುರುಷ್ಕರಾಜನನ್ನು ದಂಡಿಸಿ, ಯಾವಾತನು ಆತನಿಗೆ ಪುನಃ ಆ ರಾಜ್ಯವನ್ನು ದೊರಕಿಸಿಕೊಡುವನೋ ಅಂತಹ ವೀರನೇ ತನ್ನ ಪಾಣಿಗ್ರಹಣ ಮಾಡಲುಳ್ಳವನೆ'ಂದು ವರ್ತಮಾನವನ್ನು ಕಳುಹಿಸಿದಳು. ಜಯಮಲ್ಲನು ಆ ಮಾತನ್ನು ಕೇಳಿ, ಆ ಮಾತಿಗೆ ಸಮ್ಮತಿಸಿದುದಲ್ಲದೆ, ಹಾಗೆ ಮಾಡುವುದಾಗಿ ಪ್ರಮಾಣವಚನವನ್ನು ಕೊಟ್ಟು, ತಾರಾದೇವಿಯನ್ನು ದರ್ಶಿಸಲಪೇಕ್ಷಿಸಿದನು. ಆಕೆಯ ತಂದೆಯ

ಜಯಮಲ್ಲನ ಪ್ರೀತಿಗೊಪ್ಪಿ ಅವರ ಪರಸ್ಪರ ದರ್ಶನಕ್ಕೆ ಅನುಮತಿಕೊಡಲು, ಜಯಮಲ್ಲನು, ಆ ಬಾಲಿಕಾಮಣಿಯ ಲೋಕಮೋಹಕ ಸೌಂದರ್ಯವನ್ನು ನೋಡಿ, ಪರವಶತೆಯನ್ನು ಹೊಂದಿಯೋ ಅಥವ, ರಜಪೂತರು ಸಾಮಾನ್ಯವಾಗಿ ಸೇವಿಸುವ ಅಫೀಮನ್ನು ವಿಶೇಷವಾಗಿ ಸೇವಿಸಿದ್ದ ಮತ್ತಿನಿಂದಲೋ ಮತಿಗೆಟ್ಟು, ತನ್ನ ಗೌರವಕ್ಕೂ ಆಕೆಯ ಗೌರವಕ್ಕೂ ತಗೆಯದಂತಹ ಅನುಚಿತಕಾರ್ಯವನ್ನು ಮಾಡಿ ಆಕೆಗೆ ಅವಮಾನವನ್ನುಂಟುಮಾಡಿದನು. ಆ ವಾರ್ತೆಯು ತಿಳಿದೊಡನೆಯೇ ಮಾನಧನನಾದ ಆಕೆಯ ತಂದೆಯು ಖಡ್ಗಪಾಣಿಯಾಗಿ ಬಂದು, ಒಂದೇ ಪ್ರಹಾರದಿಂದ ಜಯಮಲ್ಲನ ಶಿರಸ್ಸನ್ನು ಹಾರಿಸಿಬಿಟ್ಟನು.

ಜಯಮಲ್ಲನ ಮರಣವಾರ್ತೆಯು ಚಿತ್ತೂರಿಗೆ ತಿಳಿಯಿತು. ಆಗ ರಾಣಾ ರಾಯಮಲ್ಲನ ಆಸ್ಥಾನದಲ್ಲಿದ್ದ ರಜಪೂತರೆಲ್ಲರೂ ಕೋಪೋದ್ದೀಪಿತರಾಗಿ, ತಾರಾಬಾಯಿಯ ತಂದೆಯಮೇಲೇರಿ ಹೋಗಿ ಅವನನ್ನು ವಧಿಸಬೇಕೆಂದು ಸಲಹೆಯಿತ್ತರು. ರಾಯಮಲ್ಲನು, ಸ್ವಲ್ಪ ಹೊತ್ತು ಏನೂ ಹೇಳದೆ ಸುಮ್ಮನಿದ್ದನು. ತರುವಾಯ ರಾಜಪುತ್ರನ ಮರಣಕಾರಿಯನ್ನು ಕೊಲ್ಲಬೇಕೆಂದು ಆಯುಧಗಳನ್ನು ಒರೆಗಳಿಂದೆಳೆದು ಝಳಪಿಸುತ್ತ ಆತುರಗೊಳ್ಳುತ್ತಿದ್ದ ತನ್ನ ಕಡೆಯ ಜನರನ್ನು ಕುರಿತು—'ರಾಜ್ಯವನ್ನು ಕಳೆದುಕೊಂಡು, ಮನೆಬಾಗಿಲುಗಳಿಲ್ಲದೆ - ನಿಲ್ಲುವುದಕ್ಕೆ ನೆಳಲುಕಾಣದೆ ಹೇಗೋ ಕಷ್ಟಪಡುತ್ತ ಕಾಲಕ್ಷೇಪ ಮಾಡಿಕೊಂಡಿದ್ದ ಆ ರಾಜನಿಗೆ ಅವಮಾನಮಾಡಿ ತೊಂದರೆಗೊಳಿಸಿದ ನರಾಧಮನು ನನ್ನಮಗನೇ ಆದರೂ ಸಾಯತಕ್ಕವನೇ! ಮಾನಧನನಾಗಿ, ಕ್ಷತ್ರಿಯ ಕುಲಗೌರವಕ್ಕೆ ತಕ್ಕ ಸಾಹಸಕಾರ್ಯವನ್ನು ಪ್ರಕಟಿಸಿದ ಆ ರಾಜನ ಶೌರ್ಯಕ್ಕೆ ಮೆಚ್ಚಿ ಆ ಬದನೂರು ಸುತ್ತುಮುತ್ತಲಿರುವ ಪ್ರಾಂತವನ್ನು ಅವನಿಗೇ ಬಹುಮಾನವಾಗಿ ಕೊಡುತ್ತಿದ್ದೇನೆ' ಎಂದು ನುಡಿದನು.

ಆಹಾ! ಕ್ಷತ್ರಿಯರ ಧೈರ್ಯವನ್ನೂ ಉದಾರತೆಯನ್ನೂ ಏನೆಂದು ಹೇಳುವುದು! ಎಷ್ಟೆಂದು ವರ್ಣಿಸುವುದು. ತನ್ನ ಉದರ ಸಂಭೂತನಾದ ಮಗನನ್ನು ಕೊಂದ ದ್ರೋಹಿಯನ್ನೂ ಸಹ, ನ್ಯಾಯದ ಎದುರಿನಲ್ಲಿ ಮೆಚ್ಚಿ

ಕೊಂಡು ಧರ್ಮಕ್ಷೇತ್ರವನ್ನು ಬಹುಮಾನಮಾಡಿ ರಕ್ಷಿಸಿದ ಅವರ ನ್ಯಾಯ ಪರತೆಗೂ ಪಾಶ್ಚಾತ್ಯಲೋಕದಲ್ಲಿ ಪ್ರತಿ ಉದಾಹರಣೆಯುಂಟೆ?

ಮುಂದೆ ಕೆಲವು ದಿನಗಳು ಸಾಗಿದುವು. ಪೃಥ್ವೀರಾಜನಿಗೆ ತನ್ನ ಸೋದರನ ಮರಣವಾರ್ತೆಯೂ, ತಾರಾಬಾಯಿಯು ಮಾಡಿದ ಪ್ರತಿಜ್ಞೆಯೂ ತಿಳಿದುವು. ಒಡನೆ ಆತನು ಸಾವಕಾಶಮಾಡದೆ ಬದನೂರಿಗೆ ಪ್ರಯಾಣ ಮಾಡಿ, ಆಕೆಯನ್ನು ಕುರಿತು ತನ್ನನ್ನು ವಿವಾಹವಾಗೆಂದು ಕೇಳಿದನು. ತಾರಾದೇವಿಯು ಎಂದಿನಂತೆಯೇ, ತನ್ನ ತಂದೆಯ ರಾಜ್ಯವನ್ನು ಶತ್ರುಗಳಿಂದ ಗೆಲಿಸಿಕೊಟ್ಟವನನ್ನಲ್ಲದೆ ಇತರರನ್ನು ಮದುವೆಯಾಗೆನೆಂಬ ತನ್ನ ಶಪಥವನ್ನು ತಿಳಿಸಿದಳು. ರಾಜಪುತ್ರನು ಹಾಗೆ ಮಾಡುವೆನೆಂದು ಶಪಥ ಪೂರ್ವಕ ವಾಗ್ದಾನಮಾಡಲು, ಅವನ ಶೌರ್ಯ ಸಾಹಸಗಳಲ್ಲಿ ನಂಬಿಕೆಗೊಂಡ ತಾರಾದೇವಿಯ ತಂದೆಯು, ತನ್ನ ಪುತ್ರಿಯನ್ನು ಆತನಿಗೆ ಕೊಟ್ಟು ವಿವಾಹಮಾಡಿದನು. ಅನುರೂಪ ವಯಸ್ಸು ಗುಣ ಮುಂತಾದುವುಗಳಿಂದ ಪರಸ್ಪರ ಪ್ರೀತಿ ಬದ್ಧರಾದ ಆ ವಧೂವರರಿಬ್ಬರೂ ಏಕಮನಸ್ಕತೆಯಿಂದ, ಕೆಲದಿನಗಳು ಸುಖವಾಗಿದ್ದರು. ತರುವಾಯ ತೋಡಾಪಟ್ಟಣವನ್ನು ಗೆಲಿಸುವ ಪ್ರಯತ್ನ ಮಗ್ನರಾಗಿ ಸಮಯ ನಿರೀಕ್ಷಣೆ ಮಾಡತೊಡಗಿರುವಷ್ಟರಲ್ಲಿ ಮಹಮ್ಮದೀಯರ ಮೊಹರಮ್ ಹಬ್ಬವೂ ಪ್ರಾಪ್ತವಾಯಿತು.

ಮಹಮ್ಮದೀಯರಿಗೆ ಅತಿಮುಖ್ಯವೂ ವಿನೋದಕರವೂ ಆದ ಆ ಹಬ್ಬದ ದಿನಗಳಲ್ಲಿ ಆ ತೋಡಾಪಟ್ಟಣದಲ್ಲಿದ್ದ ತುರುಷ್ಕರಾಜನೂ, ಅವನ ಬಂಧುಗಳೂ, ರಾಜಸೇವಕರೂ, ಪರಿವಾರದವರೂ, ಹೀಗೆ ಎಲ್ಲರೂ, ವಿನೋದಗಳಲ್ಲಿ ಮಗ್ನರಾಗಿದ್ದರು. ಹಬ್ಬದ ಕಡೆಯದಿನ, ಪದ್ಧತಿಯ ಪ್ರಕಾರ ಜಲಾಶಯವನ್ನು ಕುರಿತು ನಡೆದು ಅಲ್ಲಿ ಆಗಬೇಕಾದ ಪದ್ಧತಿಗಳೆಲ್ಲ ತೀರಿದ ನಂತರ, ಪೀರರನ್ನು ಶವಾಕಾರವಾಗಿ ಕಟ್ಟಿ 'ಅಲ್ಬಿದಾಯ' ಎಂಬ ದುಃಖ ಸೂಚಕವಾದ ಗೀತಗಳನ್ನು ಹೇಳಿಕೊಳ್ಳುತ್ತಾ ಹಿಂದಿರುಗಿ ಬರುತ್ತಿದ್ದರು. ಸಹಸ್ರಾರು ಜನರು ಈ ವಿನೋದವನ್ನು ನೋಡುತ್ತಿದ್ದರು. ಆಗ ವಿಚಿತ್ರ ವೇಷಗಳನ್ನು ಧರಿಸಿ, ಗಂಭೀರವಾದ ನಗೆನೋಟಗಳಿಂದ ತಮ್ಮನ್ನು ನೋಡಿದವರ ಚಿತ್ತವನ್ನು ಆಕರ್ಷಣಗೊಳಿಸುತ್ತಿದ್ದ ಮೂವರು ಮನುಷ್ಯರು ಆ ಜನರ ಗುಂಪಿನಲ್ಲಿ ಕಾಣಲ್ಪಟ್ಟರು. ತನ್ನ ಅರಮನೆಯ ಉಪ್ಪರಿಗೆಯಲ್ಲಿ

ಕೇಳಿತು ಆ ಉತ್ಸವವನ್ನು ನೋಡುತ್ತಿದ್ದ ಆ ತುರುಷ್ಕರಾಜನು ತನ್ನ ರಾಜಧಾನಿಯಲ್ಲಿ ನೂತನವಾಗಿ ದೃಷ್ಟಿಗೋಚರರಾದ ಆ ಹೊಸಬರು ಯಾರೆಂದು ತನ್ನ ಬಳಿಯಿದ್ದವರನ್ನು ಪ್ರಶ್ನೆಮಾಡಿದನು. 'ಅವರು ಯಾರು' ಎಂಬೀ ಮಾತು ಅವನ ಬಾಯಿಂದ ಹೊರಟುದೇ ಸಾವಕಾಶವು! ಉತ್ತರಕ್ಷಣದಲ್ಲೇ 'ಸುಯ್' ಎಂಬ ಶಬ್ದಮಾಡುತ್ತ, ಜನಸಮೂಹದಿಂದ ಹೊರಟು ಬಂದ ಬಾಣವೊಂದು ಆ ರಾಜನ ಕಂಠಪ್ರದೇಶಕ್ಕೆ ತಗುಲಿ ಕ್ಷಣಮಾತ್ರದಲ್ಲಿ ಅವನನ್ನು ಶವಸ್ವರೂಪನನ್ನಾಗಿಸಿ ನೆಲಕ್ಕೆ ಕೆಡಹಿಸಿತು. 'ಅಕಸ್ಮಾತ್ತಾಗಿ ರಾಜನು ವಧ್ಯನಾದನು' ಎಂಬ ವಾರ್ತೆಯು ಒಡನೆ ಹಬ್ಬಿ ಜನಸಮೂಹವೂ ರಾಜಪರಿವಾರದವರೂ ಅಲ್ಲೋಲ ಕಲ್ಲೋಲವಾದರು. ಎಲ್ಲರೂ ಕಳವಳದಿಂದ ಎಲ್ಲಿದ್ದವರಲ್ಲೇ ನಿಂತು-ನಿರ್ವಿಣ್ಣರಂತೆ ಮುಂದೇನು ಮಾಡಬೇಕೆಂದು ತೋರದೆ, ಮಂಕುಗಳಂತೆ ಆದರು. ರಾಜಸೇವಕರೂ, ಸೈನಿಕರೂ, ಅಂತಹ ಉತ್ಸವ ಸಮಯದಲ್ಲಿ ರಾಜನನ್ನು ವಧಿಸಿದ ದ್ರೋಹಿಗಳಾರೆಂದು ಕಂಡು ಹಿಡಿಯಲು ಅಲ್ಲಲ್ಲಿ ಆತುರದಿಂದ ಯಾತಾಯಾತ ಮಾಡತೊಡಗಿದರು. ವಿಚಿತ್ರ ವೇಷದಿಂದ ಜನ ಸಂದಣಿಯಲ್ಲಿ ಕಾಣಿಸಿಕೊಂಡವರು, ಮತ್ತಾರೂ ಅಲ್ಲ.—ಪೃಥ್ವೀರಾಜನೂ, ತಾರಾದೇವಿಯೂ, ಅವರ ಸೇವಕರೂ- ಈ ವೇಷದಿಂದ ಬಂದು ಅನಾಯಾಸವಾಗಿ ರಾಜನನ್ನು ಸಂಹರಿಸಿ, ತಾವು ಬಂದ ಕೆಲಸವು ನೆರವೇರಿದುದರಿಂದ ಸಂತುಷ್ಟರಾಗಿ ನಗರದ ಬಹಿಃಪ್ರದೇಶವನ್ನು ಕುರಿತು ಪ್ರಯಾಣಮಾಡುತ್ತಿದ್ದರು. ಅಷ್ಟರಲ್ಲಿ ಕೆಲವರು ರಾಜಸೇವಕರು, ಧೈರ್ಯಮಾಡಿ ಸಾಗಿಬಂದು, ಆ ವಿಚಿತ್ರ ವೇಷಧಾರಿಗಳೇ ರಾಜನನ್ನು ಕೊಂದವರೆಂದು ಆಕ್ಷೇಪಿಸಿ ಅವರನ್ನು ತಡೆಗಟ್ಟಿ ನಿರ್ಬಂಧಿಸಲು ಪ್ರಯತ್ನ ಮಾಡತೊಡಗಿದರು. ಆದರೆ ಶೌರ್ಯ ಪ್ರತಾಪ ಸಂಪನ್ನರೂ ಧೈರ್ಯ ಮೇರುಗಳೂ ಆದ ಅವರನ್ನು ಅಷ್ಟು ಸುಲಭವಾಗಿ ನಿರ್ಬಂಧಿಸುವಂತಿರಲಿಲ್ಲ. ಪೃಥ್ವೀರಾಜನೇ ಮುಂತಾದವರು, ಆ ರಾಜದೂತರನ್ನು ಲಕ್ಷ್ಯವೇ ಮಾಡದೆ ಮುಂದುವರಿಯುತ್ತಾ, ನಗರದ ಕೋಟೆಯ ಬಾಗಿಲಿನ ಬಳಿ ಬರುವವೇಳೆಗೆ ಅಲ್ಲಿದ್ದ ಬೆಟ್ಟದಂತಹ ಭಯಂಕರಾಕಾರವುಳ್ಳ ಆನೆಯೊಂದು ಅವರನ್ನು ಅಡ್ಡಗಿಸಿ ಅವರ ಮಾರ್ಗವನ್ನು ನಿರೋಧಗೊಳಿಸಿತು. ಒಡನೆ ತಾರಾಬಾಯಿಯು ತನ್ನ ಕೈಕತ್ತಿಯಿಂದ ಆದರ ಸೊಂಡಿಲನ್ನು ಛೇದಿಸಿ ಸಂಹರಿಸಿದಳು.

ತರುವಾಯ ಕೋಟೆಯಿಂದ ಹೊರಬಿದ್ದ, ಆ ಮೂವರೂ ತಮ್ಮನ್ನು ಎದುರು ನೋಡಿಕೊಂಡಿದ್ದ ತಮ್ಮ ಸೇನೆಯನ್ನು ಸೇರಿಕೊಂಡರು.

ಒಡನೆ ಸೈನ್ಯ ಸಮೇತರಾಗಿ ನಗರದ್ವಾರದಿಂದ ಒಳಹೊಕ್ಕು ಪೃಥ್ವೀರಾಜಾದಿಗಳು ಅನಾಯಕವೂ ಅರಾಜಕವೂ ಆಗಿ ದಿಕ್ಕು ತೋರದೆ ನಿಂತಿದ್ದ ಮ್ಲೇಂಛ ಸೈನ್ಯವನ್ನು ಚೆಲ್ಲಾಚದರಾಗಿ ಮಾಡಿಬಿಟ್ಟರು. ಪ್ರಾಣಲೋಭದಿಂದ ಸಿಕ್ಕಸಿಕ್ಕ ಕಡೆಗೆ ಓಡಿದವರನ್ನು ಬಿಟ್ಟು, ಮಿಕ್ಕಿದ ಮ್ಲೇಂಛರೆಲ್ಲರೂ ರಜಪೂತ ಸೈನ್ಯದ ಹೊಡೆತವನ್ನು ತಡೆದುಕೊಳ್ಳಲಾರದೆ ಹತರಾದರು. ತಾರಾದೇವಿಯ ಮನೋರಥವು ಸಂಪೂರ್ಣವಾಗಿ ನೆರವೇರಿತು. ಆಕೆಯ ತಂದೆಗೆ ತೋಡಾ ನಗರವು ಎಂದಿನಂತೆ ಸ್ವಾಧೀನವಾಯಿತು. ಈ ಸಂಗತಿಯು, ಅಜಮೀರವನ್ನು ಪಾಲಿಸುತ್ತಿದ್ದ ಮತ್ತೊಬ್ಬ ಮಹಮ್ಮದೀಯ ಪ್ರಭುವಿಗೆ ತಿಳಿಯಿತು. ತನ್ನ ಸೋಕನಾದ ಮ್ಲೇಂಛಪ್ರಭುವನ್ನು ಉತ್ಸವಕಾಲದಲ್ಲಿ ಮೋಸದಿಂದ ಕೊಂದು ರಾಜ್ಯಾಪಹಾರಮಾಡಿದ ಪೃಥ್ವೀರಾಜನನ್ನು ದಂಡಿಸಬೇಕೆಂದು ನಿಶ್ಚಯಿಸಿದ ಆತನು, ತೋಡಾನಗರದಮೇಲೆ ದಂಡೆತ್ತಬೇಕೆಂದು ಸೈನ್ಯಸಾಮಗ್ರಿಗಳನ್ನು ಸಿದ್ಧಗೊಳಿಸತೊಡಗಿದನು. ಈ ವರ್ತಮಾನವು ಬೇಹಿನವರ ಮೂಲಕ ಪೃಥ್ವೀರಾಜನಿಗೆ ತಿಳಿದುಹೋಯಿತು. ಆತನು, ಆ ಮ್ಲೇಂಛನು ತನ್ನ ಮೇಲೇರಿ ಬರುವವರೆಗೂ ಅವನಿಗೆ ಅವಕಾಶಕೊಡಲಾಗದೆಂದು ಎಣಿಸಿ, ಒಡನೆ ಸೈನ್ಯದೊಂದಿಗೆ ಹೊರಟು ನಡುರಾತ್ರಿಯಲ್ಲಿ ಅಜಮೀರುಕೋಟೆಗೆ ಮುತ್ತಿಗೆ ಹಾಕಿ, ಕಾವಲಿದ್ದ ಸೇವಕರನ್ನು ಓಡಿಸಿ, ಕೋಟೆಯ ಬಾಗಿಲುಗಳನ್ನು ಒಡೆಸಿ, ಆ ಮ್ಲೇಂಛರಾಜನು ಅದೇನೆಂದು ವಿಚಾರಿಸಿ ತಿಳಿದುಕೊಳ್ಳುವುದರೊಳಗಾಗಿ, ತನ್ನ ಝುಂಡಾವನ್ನು ಆ ಊರ ಕೋಟೆಯಮೇಲೆ ಏರಿಸಿಬಿಟ್ಟನು.

ಇತ್ತ ರಾಯಮಲ್ಲನು ತನ್ನ ಕುಮಾರನ ಅಗಾಧ ಸಾಹಸ ಕಾರ್ಯಗಳನ್ನು ಕಥೆಗಳಾಗಿ ಕೇಳಿ, ಪರಮಾನಂದಭರಿತನಾದನು. ತನ್ನ ಮೂವರು ಮಕ್ಕಳಲ್ಲಿ, ಜಯಮಲ್ಲನು ಕುಲಕ್ಕೇ ಅಪಕೀರ್ತಿಯನ್ನು ತರುವಂತಹ ದುಷ್ಕರ್ಮವನ್ನಾಚರಿಸಿ ದುರ್ಮರಣ ಹೊಂದಿದುದೂ, ಮತ್ತೊಬ್ಬ ಮಗನಾದ ಸಂಗನು ಎಲ್ಲಿದ್ದಾನೆಂಬ ವಾರ್ತೆಯೇ ತಿಳಿಯದಿದ್ದುದೂ ಆತನಿಗೆ ಮಹದ್ವ್ಯಸನಕರ ವೃತ್ತಾಂತಗಳಾಗಿ ಪರಿಣಮಿಸಿದರೂ, ಕಿರಿಯ ಮಗನಾದ

ಪೃಥ್ವೀರಾಜನು ಅರಿಂದಮನಾಗಿ ಲೋಕದಲ್ಲಿ ಅಗಾಧ ಯಶಸ್ಸಂಪಾದನೆ ಮಾಡಿದುದು ಅತಿಶಯ ಸಂತೋಷವನ್ನುಂಟುಮಾಡದಿರಲಿಲ್ಲ. ಒಡನೆ, ಹಾಗೆ ಲೋಕದ ಹೊಗಳಿಕೆಗೆ ಪಾತ್ರನಾದ ಆತನನ್ನು ಯೋಗ್ಯರೀತಿಯಿಂದ ರಾಜಧಾನಿಗೆ ಕರೆಸಿ ಬಹುಮಾನಿಸುವದು ಯುಕ್ತವೆಂದು ಎಣಿಸಿ, ತನ್ನ ಸನ್ನಿಧಿಗೆ ಹೊರಟು ಬಾರೆಂದು ಮಗನಿಗೆ ವರ್ತಮಾನವನ್ನು ಕಳುಹಿಸಿದನು. ತನ್ನ ಪ್ರತಿಜ್ಞಾನುಸಾರವಾಗಿ ಜಯಲಾಭವಾಗಿ ಕೀರ್ತಿಪ್ರತಿಷ್ಠೆಗಳನ್ನು ಗಳಿಸಿ ಬಹುಮಾನ ಪೂರ್ವಕವಾಗಿ ತಂದೆಯಿಂದಲೇ ಆಹ್ವಾನಿತನಾದುದರಿಂದ, ಪೃಥ್ವೀರಾಜನು ತರುವಾಯ ಸಾವಕಾಶಮಾಡದೆ ಪತ್ನೀ ಪರಿವಾರಗಳೊಂದಿಗೆ ಹೊರಟು ಮಹದ್ವೈಭವದಿಂದ ಬಂದು ಚಿತ್ತೂರನ್ನು ಸೇರಿದನು. ಪರದೇಶಿಯಂತೆ ನಗರದಿಂದ ಹೊರಡಿಸಲ್ಪಟ್ಟ ತನ್ನ ಮಗನು, ಸ್ವಸಾಮರ್ಥ್ಯದಿಂದ ಹಲವರು ರಾಜರನ್ನು ಜಯಿಸಿ, ಅಗಣಿತ ಐಶ್ವರ್ಯವನ್ನೂ ರಾಜ್ಯಲಕ್ಷ್ಮಿಯನ್ನೂ ಗಳಿಸಿ ತೇಜಸ್ವಿಯಾಗಿ, ಅನುರೂಪಳಾದ ಪತ್ನಿಯೊಂದಿಗೆ ಬಂದು ನಮಸ್ಕರಿಸಿ ವಿಧೇಯನಾಗಿ ನಿಂತಿರಲು ಆದರಿಸದ ತಂದೆಯಾವನಿರುವನು ! ರಾಯಮಲ್ಲನು ಅಧಿಕ ಪ್ರೇಮದಿಂದ ಪುತ್ರನನ್ನು ಆದರಿಸಿ, ಮಗ ಸೊಸೆಯರನ್ನು ಮನಸಾರೆ ಆಶೀರ್ವದಿಸಿದನು. ಚಿತ್ತೂರು ನಗರವಾಸಿಗಳೆಲ್ಲರೂ ಆ ತರುಣ ರಾಜದಂಪತಿಗಳನ್ನು ಕಂಡು ಪರಮಾನಂದಭರಿತರಾದರು. ಮುಂದೆ ಪೃಥ್ವೀರಾಜನು, ತಂದೆಗೆ ವಿಧೇಯನಾಗಿ ರಾಜಧಾನಿಯಲ್ಲೇ ನಿಲ್ಲುವನೆಂದು ಎಲ್ಲರೂ ಎಣಿಸಿದ್ದರು. ಹಾಗೆ ನಿಲ್ಲುವುದು ಅವಶ್ಯಕವೂ ಆಗಿದ್ದಿತು. ಆದರೆ, ಜನ್ಮಾರಭ್ಯ ಶೂರ ಕಾರ್ಯಗಳಲ್ಲೇ ನಿರತನಾಗಿ ರಣಜೀವಿಯಾಗಿದ್ದ ಅವನು, ಈಗ ಭೋಗಪರಾಯಣನಾಗಿ ಒಂದೆಡೆ ಕುಳಿತು ತೂಗಡಿಸಲು ಇಷ್ಟಪಡದೆ, ಎಂದಿನಂತೆ ತಾನು ಸ್ವತಂತ್ರನಾಗಿ ತನ್ನ ಇಷ್ಟಾನುಸಾರ ಇರಬೇಕೆಂದೆಣಿಸಿ, ಮಿವಾರು ದೇಶಕ್ಕೆ ಪಶ್ಚಿಮ ಭಾಗದಲ್ಲಿದ್ದ ಕಮಲ್‌ಮೇರು ದುರ್ಗದಲ್ಲಿ ವಾಸಮಾಡಲಿಚ್ಛಿಸಿ, ಪತ್ನೀ ಪರಿವಾರ ಸಮೇತನಾಗಿ ಅಲ್ಲಿಗೆ ಪ್ರಯಾಣಮಾಡಿದನು. ಅಲ್ಲಿ ಅವನ ಮತ್ತು ತಾರಾಬಾಯಿಯ ವೀರವಿಹಾರಗಳಿಗೆ ಯಾವ ಪ್ರತಿಬಂಧಕವೂ ಇಲ್ಲದಿರಲು ಆ ದಂಪತಿಗಳು ತಮ್ಮ ಇಚ್ಛಾನುಸಾರ ಮೃಗಯಾವಿಹಾರಾದಿ ಶೂರಕರ್ಮಗಳಲ್ಲಿ ನಿರತರಾಗಿ ಕಾಲಯಾಪನೆ ಮಾಡಿಕೊಂಡಿದ್ದರು. ಕಮಲ್‌ಮೇರು ಕೋ

ಟೆಯು ಇಂದು ಹಾಳುಬಿದ್ದು ಶೋಭಾವಿಹೀನವಾಗಿ ತೋರುತ್ತಿರುವುದಾದರೂ, ಅದರ ವಿಶಾಲವಾದ ಉನ್ನತವಾದ ಗೋಡೆಗಳು, ಕೋಟೆಯ ತೆನೆಗಳು, ಬುರುಜುಗಳು, ಸುತ್ತಲಿನ ಆಳವಾದ ಕಂದಕಗಳು ಮತ್ತು ಒಳಗಿನ ಉಪ್ಪರಿಗೆಗಳು ಇವುಗಳ ಶೈಥಿಲ್ಯಸ್ವರೂಪವು ಪೂರ್ವದಲ್ಲಿದ್ದ ಅದರ ವೈಭವಪೂರ್ಣ ಸ್ಥಿತಿಯನ್ನು ಸ್ಪಷ್ಟಗೊಳಿಸುತ್ತಿರುವುದು. ಪೃಥ್ವೀರಾಜನು, ಶಿಥಿಲವಾದ ಅದರ ಭಾಗಗಳನ್ನು ಸರಿಗೊಳಿಸಿ, ಭಾರ್ಯಾ ಸಮೇತನಾಗಿ ಅಲ್ಲಿ ವಾಸಿಸಿ, ದುಷ್ಟರನ್ನೂ, ಚೋರರನ್ನೂ ದಂಡಿಸಿ ತಲೆಯೆತ್ತದಂತೆ ಮಾಡಿ, ಸುಖವಾಗಿ ವಾಸಮಾಡಿಕೊಂಡಿದ್ದನು. ರಾಜಪುತ್ರರನೇಕರು ಆ ಶೂರಶಿಖಾಮಣಿಯನ್ನು ಆಶ್ರಯಿಸಿ ಸೇವಿಸುವುದಕ್ಕೆ ಇಚ್ಛಿಸಿ, ರಾಜಪುತಾನದ ಹಲವು ಪ್ರಾಂತಗಳಿಂದ ನಡೆದು ಬಂದು ಕಮಲ್‌ಮೇರನ್ನು ಸೇರಿ, ಪೃಥ್ವೀರಾಜನು ಬೆಂಕಿಗೆ ಹಾರಬೇಕೆಂದರೂ ಹಿಂದೆ ಮುಂದೆ ನೋಡದಂತೆ ಆಜ್ಞಾಧಾರಕರಾಗಿ ವಸಿಸತೊಡಗಿದರು. ಕಮಲ್ಮೇರು ದುರ್ಗವು ಸರ್ವಸಂಪತ್ಪರಿಪೂರ್ಣವಾಗಿ, ಮೃಗರಾಜನನ್ನೊಳಗೊಂಡ ಪರ್ವತಗುಹೆಯಂತೆ ಶತ್ರುಭೀಕರವಾಗಿ ವಿರಾಜಿಸಿತು.

ಹೀಗೆ ನಡೆದು ಬರುತ್ತಿರುವಲ್ಲಿ ಒಂದು ದಿನ ಪೃಥ್ವೀರಾಜನು ತಂದೆಯನ್ನು ದರ್ಶನ ಮಾಡುವುದಕ್ಕೆಂದು ಚಿತ್ತೂರಿಗೆ ಬಂದಿದ್ದನು. ಆಗ ರಾಯಮಲ್ಲನು, ಮಾಳವ ರಾಜನ ಒಬ್ಬ ರಾಯಭಾರಿಯೊಂದಿಗೆ ಅತಿಶಯ ಸಲುಗೆಯಿಂದ ಸಂಭಾಷಣೆ ಮಾಡುತ್ತಿದ್ದುದನ್ನು ನೋಡಿ, ಆ ರಾಯಭಾರಿಯು ಹೊರಟುಹೋದ ತರುವಾಯ, ತಂದೆಯನ್ನು ಕುರಿತು,—"ಇಂತಹ ನೀಚರಿಗೆ ಇಷ್ಟುಮಟ್ಟಿನ ಸಲುಗೆಯನ್ನಿತ್ತು ಹತ್ತಿರ ಸೇರಿಸಿದರೆ ಸಮಯದಲ್ಲಿ ಅವರು ಅಪಾಯವನ್ನುಂಟುಮಾಡದಿರರು. ಮನುಷ್ಯರನ್ನು ಅವರವರ ಯೋಗ್ಯಸ್ಥಾನಗಳಲ್ಲಿಟ್ಟು ಗೌರವಿಸುವುದು ಉಚಿತವಲ್ಲವೆ?" ಎಂದು ಪ್ರಶ್ನಿಸಿದನು. ಆ ಮಾತಿಗೆ ರಾಯಮಲ್ಲನು,—"ಅಪ್ಪಾ, ನೀನು ಮಹಾ ಸಾಹಸಗಾರನು. ದೇಶದೇಶದ ರಾಜರನ್ನು ಬಂಧಿಸಿ ಸ್ವಾಧೀನಗೊಂಡು ಅವರ ಮೇಲೆ ಆಧಿಪತ್ಯ ಮಾಡಲು ಸಮರ್ಥನು. ಆದರೆ ನನಗೆ ಅಂತಹ ಬಲಪರಾಕ್ರಮಗಳಿಲ್ಲ. ನಾನಾದರೆ ಸುತ್ತುಮುತ್ತಿನ ರಾಜರೊಂದಿಗೆ ಸ್ನೇಹವನ್ನು

ಸಂಪಾದಿಸಿ ಒಳ್ಳೆಯ ಮಾತನಾಡಿಕೊಂಡು ನನ್ನ ರಾಜ್ಯವನ್ನು ಕಾಪಾಡಿಕೊಳ್ಳುತ್ತಿದ್ದೇನೆ'' ಎಂದು ಪ್ರತ್ಯುತ್ತರವಿತ್ತನು.

ತಂದೆಯು ಆ ಮಾತನ್ನು ಕೇಳಿ ಪೃಥ್ವೀರಾಜನು ಮಾತುಗಳಿಂದ ಪ್ರತ್ಯುತ್ತರ ಕೊಟ್ಟು ಪ್ರಯೋಜನವಿಲ್ಲವೆಂದು, ಒಡನೆ ಆ ಸ್ಥಳದಿಂದ ಹೊರಟು ತನ್ನ ಬಿಡಾರಕ್ಕೆ ನಡೆದು ಸ್ವಲ್ಪ ಸೇನೆಯನ್ನು ಕೂಡಿಸಿಕೊಂಡು ಮಾಳವ ದೇಶದಮೇಲೆ ದಂಡೆತ್ತಿ ನಡೆದನು. ಮಾಳವ ರಾಜನು ತನ್ನಮೇಲೆ ದಂಡೆತ್ತಿ ಬಂದ ಆ ತರುಣ ವೀರನ ಸಾಮರ್ಥ್ಯವನ್ನು ಕಂಡು ಸಹಿಸದೆ, ಒಡನೆ ಮಹಾಸೇನೆಯನ್ನು ಸೇರಿಸಿಕೊಂಡು, ವಂದಿಮಾಗಧರಿಂದ ಹೊಗಳಿಸಿಕೊಳ್ಳುತ್ತ, ವೇಶ್ಯಾಂಗನೆಯರ ನೃತ್ಯಗೀತಗಳನ್ನು ಲಾಲಿಸುತ್ತ, ಮಹದ್ವೈಭವದಿಂದ ಯುದ್ಧಕ್ಕಾಗಿ ಪ್ರಯಾಣಮಾಡಿದನು. ಮಾಳವ ರಾಜನ ವಿಸ್ತಾರವಾದ ಸೇನೆಯು, ಒಂದು ಸ್ಥಳದಲ್ಲಿ ಬೀಡು ಬಿಟ್ಟು ಸಂಗೀತ ಸಾಹಿತ್ಯ ವಿನೋದಗಳಲ್ಲಿ ಕಾಲಯಾಪನೆ ಮಾಡುತ್ತ ಹೊತ್ತುಗಳೆಯುತ್ತಿದ್ದ ಒಂದು ರಾತ್ರಿ, ಅಕಸ್ಮಾತ್ತಾಗಿ ಅವರ ಬಿಡಾರದ ಬಳಿ ಒಂದು ದೊಡ್ಡ ಕಲಕಲ ರವವು ಎದ್ದಿತು. ಅದೇನೆಂದು ಕೆಲವರು ಆ ಕಡೆಗೆ ಓಡಿ ನೋಡಲು, ಅಲ್ಲಿ ಕೆಲಮಂದಿ ಅಪರಿಚಿತ ಶೂರ ಸೈನಿಕರು ಆಯುಧಪಾಣಿಗಳಾಗಿ ಕುದುರೆಗಳನ್ನೇರಿ ನಿರ್ಭಯವಾಗಿ ಶಿಬಿರವನ್ನು ಹೊಕ್ಕು ರಾಜನೆಲ್ಲೆಂದು ಅರಸುತ್ತ ಆ ಡೇರೆಯ ಕಡೆಗೆ ಪ್ರಯಾಣವಾಗಿ ಸಾಗಿಬರುತ್ತಿದ್ದುದು ಕಾಣಿಸಿತು. ಹೀಗೆ ಅಕಸ್ಮಾತ್ತಾಗಿ ಶತ್ರುದಳವು ತಮ್ಮ ಸೈನ್ಯದ ಒಳಹೊಕ್ಕು ಮುಂದುವರಿಯುತ್ತಿದ್ದುದನ್ನು ಕಂಡು ಮಾಳವ ಸೈನಿಕರು ನಿಶ್ಚೇಷ್ಟಿತರಾಗಿ ಶತ್ರುಸೈನ್ಯವನ್ನು ಹೇಗೆ ಎದುರಿಸಿ ಅಟ್ಟಬೇಕೆಂಬ ಉಪಾಯ ತೋರದೆ ಸಿರ್ವಿಣ್ಣರಾಗಿ ನಿಂತರು. ಆಗ ಪೃಥ್ವೀರಾಜನು ಲೇಶಮಾತ್ರವೂ ಸಾವಕಾಶ ಮಾಡದೆ ಕುದುರೆಯನ್ನೋಡಿಸಿಕೊಂಡು, ರಾಜನ ಡೇರೆಯನ್ನು ಸೇರಿ ಅಲ್ಲಿ ಕುದುರೆಯನ್ನಿಳಿದು, ಮದಗಜದ ಮೇಲೆ ಧುಮುಕಲಾತುರಗೊಳ್ಳುತ್ತಿರುವ ಮರಿಸಿಂಗದಂತೆ ಹಾರಿಹಾರಿಕೊಂಡು ಒಳಹೊಕ್ಕು, ಭಯಭ್ರಾಂತನಾಗಿ ದಿಕ್ಕು ದಿಕ್ಕು ನೋಡುತ್ತಾ ಕುಳಿತಿದ್ದ ರಸಿಕಜನಾನಂದಕರನಾದ ಆ ರಾಜನನ್ನು, ಅವನ ಸೈನ್ಯ ಪರಿವಾರಗಳ ಕಣ್ಣೆದುರಿಗೇ ಬಂಧಿಸಿ ಸೆರೆಗೊಂಡು ನಿರ್ಭಯವಾಗಿ ತನ್ನಾ ಬೇಟೆಯೊಂದಿಗೆ ಹೊರಟನು. ಆ ಶೂರ ರಾಜಪುತ್ರನು

ತಮ್ಮ ರಾಜನೊಂದಿಗೆ ಹೊರಟ ತರುವಾಯ, ಆವರೆಗೆ ಭ್ರಾಂತರಂತೆ ನಿಂತಿದ್ದ ಮಾಳವ ರಾಜ ಸೈನಿಕರು, ಆಯುಧಗಳನ್ನು ಸಂಗ್ರಹಿಸಿಕೊಂಡು ತಮ್ಮಾ ರಾಜನನ್ನು ಬಿಡಿಸಿಕೊಂಡು ಬರಬೇಕೆಂದು ಪೃಥ್ವೀರಾಜನನ್ನು ಬೆನ್ನಂಟಿ ಹೊರಟರು. ಅವರು ಒಂದು ಕೂಗಳತೆಯಷ್ಟು ಸಮೀಪಕ್ಕೆ ಬಂದುದನ್ನು ಕಂಡು, ರಾಯಮಲ್ಲ ಕುಮಾರನು, ಅವರನ್ನು ಕುರಿತು— 'ಈಗ ಈ ಮಾಳವ ರಾಜನನ್ನು ಬಿಡಿಸಿಕೊಳ್ಳಬೇಕೆಂದು ಮುಂದರಿದು ಬಂದಿರಾದರೆ ನಿಮ್ಮ ರಾಜನಿಗೆ ಇಂದೇ ಮೃತ್ಯುವು ಸಮೀಪಿಸಿತೆಂದು ತಿಳಿಯಿರಿ. ಈ ವಿಷಯದಲ್ಲಿ ಮೊರಟುತನ ಮಾಡಿದಿರಾದರೆ, ನನ್ನ ಕೈಕತ್ತಿಗೆ ನಿಮ್ಮ ರಾಜನು ಈಗಲೇ ತುತ್ತಾಗುವನು. ಹಾಗಲ್ಲದೆ ಅವನನ್ನು ಬಿಡಿಸಬೇಕೆಂಬ ನಿಮ್ಮ ಈ ಪ್ರಯತ್ನವನ್ನು ಬಿಟ್ಟು ನಿಂತಿರಾದರೆ, ಇವನನ್ನು ಕೊಂಡೊಯ್ದು ನಮ್ಮ ತಂದೆಯ ಪಾದಗಳ ಮೇಲೆ ಬೀಳಹಾಕಿ ತರುವಾಯ ಪ್ರಾಣಗಳೊಂದಿಗೆ ಹೋಗಬಿಡುವೆನು'' ಎಂದು ಸಂದೇಶವನ್ನು ಕಳುಹಿಸಿದನು. ಆ ಮಾತನ್ನು ಕೇಳಿ, ಮಾಳವರಾಜಸೇವಕರು ಹಿಂಜರಿದು ನಡೆದರು.

ಪೃಥ್ವೀರಾಜನು ಸೆರೆಬಿದ್ದಿದ್ದ ಆ ಮಾಳವೇಶನೊಂದಿಗೆ ನಡೆದು ಚಿತ್ರೂರು ರಾಜಧಾನಿಯನ್ನು ಸೇರುವ ವೇಳೆಗೆ ರಾಯಮಲ್ಲನು ಆ ದಿನದ ರಾಜಸಭೆಯನ್ನು ತೀರಿಸಿ ಎದ್ದಿದ್ದನು. ವೀರ ರಸಾವತಾರವೋ ಎಂಬಂತಿದ್ದ ತನ್ನ ಪುತ್ರನನ್ನೂ ಒಂದಿಗೇ ಅವಮಾನದಿಂದ ಅಧೋವದನನಾಗಿ ಹತಾಶನಾಗಿ ನಿಂತಿದ್ದ ಮತ್ತೊಬ್ಬ ಉತ್ತಮ ವಸ್ತ್ರಧಾರಿಯಾದ ಮನುಷ್ಯನನ್ನೂ ಕಂಡು - ಅವರೆಗೆ ಎಂದೂ ಮಾಳವ ರಾಜನನ್ನು ಕಂಡ ಪರಿಚಯವಿಲ್ಲದುದರಿಂದ, ಆತನು ಯಾರೆಂದು ಮಗನನ್ನು ಪ್ರಶ್ನಿಸಿದನು. ಪೃಥ್ವೀರಾಜನು— 'ಈತನು ಯಾರೆಂದು ನಾನು ಹೇಳೆನು. ಅಂದು ಮಕುಟಾಭಿಷಿಕ್ತರಾದ ತಮಗೆ ಸರಿಸಮಭಾವದಿಂದ ಕುಳಿತು ದೊಡ್ಡದೊಡ್ಡ ಮಾತುಗಳನ್ನಾಡುತ್ತ ಬಹು ಸಲುಗೆಯಿಂದ ಸಂಭಾಷಣೆಮಾಡುತ್ತಿದ್ದ ಆ ಸೇವಕನನ್ನು ಕರೆದು ವಿಚಾರಿಸಿದರೆ, ಈತನು ಯಾರೆಂದು ತಿಳಿಯಬಲ್ಲುದು'' ಎಂದು ನುಡಿದನು. ರಾಣಾರಾಯಮಲ್ಲನು ಆ ಮಾಳವ ರಾಯಭಾರಿಯನ್ನು ಕರೆಸಿ, ತನ್ನ ಮಗನಿಗೆ ಸೆರೆಸಿಕ್ಕಿ ಬಂಧಿತನಾಗಿ ಬಂದ ಆತನು ಯಾರೆಂದು ವಿಚಾರಿಸಿದನು. ಆ ರಾಯಭಾರಿಯು, ಮಹೇಂದ್ರ ವೈಭವದಿಂದ ಮೆರೆಯುತ್ತಿದ್ದ ತಮ್ಮ

ರಾಜನು ಬಂದೀವಾನನಂತೆ ತೇಜೋಪಹೀನನಾಗಿ ಬಂಧಿತನಾಗಿ ನಿಂತಿದ್ದ ಆ ದುಸ್ಥಿತಿಯನ್ನು ಕಂಡು, ಬಾಯಿಯುದ್ರುವವಾರಿ, ಮಾತು ಹೊರಡದೆ ಕೊನೆಗೆ ತಾನೇ ಚೇತರಿಸಿಕೊಂಡು ಆತನು ತನ್ನ ಪ್ರಭುವಾದ ಮಾಳವೇಂದ್ರನೆಂದು ಬಿನ್ನವಿಸಿದನು. ಆ ವಾರ್ತೆಯನ್ನು ಕೇಳಿದ ರಾಯಮಲ್ಲನು, ಬಹು ಅಪಚಾರವಾಯಿತೆಂದುಕೊಂಡು ಆತನನ್ನು ಯೋಗ್ಯ ಆಸನದಲ್ಲಿ ಕೂಡಿಸಿ ಉಚಿತ ವಚನಗಳಿಂದ ಆದರಿಸಿ ರಾಜಯೋಗ್ಯ ಉಪಚಾರಗಳಿಂದ ಗೌರವಿಸಿ ಕೆಲವು ದಿನಗಳವರೆಗೆ ತನ್ನ ರಾಜಧಾನಿಯಲ್ಲೇ ಇಟ್ಟುಕೊಂಡಿದ್ದು, ಅವನಿಂದ ಕಪ್ಪಕಾಣಿಕೆಗಳನ್ನು ಸ್ವೀಕರಿಸಿ, ಅವನನ್ನು ತನ್ನ ಮಾಂಡಲಿಕ ವರ್ಗಕ್ಕೆ ಸೇರಿಸಿಕೊಂಡು ಸಬಹುಮಾನವಾಗಿ ಬೀಳ್ಕೊಟ್ಟನು. ಪೃಥ್ವೀರಾಜನು ಹೀಗೆ ತನ್ನ ಪರಾಕ್ರಮವನ್ನು ಪ್ರತ್ಯಕ್ಷವಾಗಿ ತಮ್ಮ ತಂದೆಗೆ ತೋರಿಸಿದ ಸುಸಂಧಿಯೊಂದು ಒದಗಿದುದಕ್ಕಾಗಿ ಸಂತಸಪಟ್ಟು, ಅಲ್ಲಿಂದ ಹೊರಟು ತನ್ನ ಪತ್ನೀಪರಿವಾರಗಳೊಂದಿಗೆ ಕಮಲ್ಮೇರುವಿಗೆ ಪ್ರಯಾಣವಾದನು.

ಪೃಥ್ವೀರಾಜನು ಕಮಲ್ಮೇರು ಕೋಟೆಗೆ ಹೋಗಿ ಕೆಲವು ದಿನಗಳಾಗುವುದರೊಳಗಾಗಿ, ಇತ್ತ ಆತನ ಚಿಕ್ಕಪ್ಪನಾದ ಸುರೇಶಮಲ್ಲನು ರಾಣಾನ ಮೇಲೆ ತಿರುಗಿಬಿದ್ದು ಯುದ್ಧಕ್ಕೆ ಸಿದ್ಧನಾದನು. ಪೂರ್ವದಲ್ಲಿ ಚಾರುಣೀ ದೇವತೆಯ ಅರ್ಚಕಳು ನಿನಗೆ ಪ್ರಭುತ್ವ ಪ್ರಾಪ್ತಿಸುವುದೆಂದು ಹೇಳಿದ್ದ ಸಂಗತಿಯು ಅವನಿಗೆ ಮರೆತಿರಲಿಲ್ಲ. ಆದರೆ ಎಷ್ಟು ದಿನಗಳಾದರೂ ಪ್ರಭುತ್ವ ಪ್ರಾಪ್ತಿಯ ಲಕ್ಷಣಗಳು ಕಂಡುಬಾರದಿದ್ದುದು ಆತನಿಗೆ ಬೇಸರವನ್ನುಂಟುಮಾಡಿತು. ಕೊನೆಗೆ ಅವನು,—'ಹೀಗೆ ಸುಮ್ಮನೆ ಕಾಲನಿರೀಕ್ಷಣೆ ಮಾಡಿಕೊಂಡಿದ್ದರೆ ಅದರಿಂದ ಯಾವ ಫಲವೂ ದೊರೆಯಲಾರದು. 'ಸಾಹಸೇ ಲಕ್ಷ್ಮೀ' ಎಂಬಂತೆ ಸಾಹಸಗಾರನಿಗಲ್ಲದೆ, ಮೀನಮೇಷಗಳನ್ನೆಣಿಸಿಕೊಂಡು ಕಾಲನಿರೀಕ್ಷಣೆಯಿಂದ ಕುಳಿತಿರುವವನಿಗೆ ಲಕ್ಷ್ಮಿ ಒಲಿಯಲಾರಳು' ಎಂದುಕೊಂಡು, ತನ್ನ ಭುಜಬಲದಿಂದಲೇ ರಾಜ್ಯವನ್ನು ಸಂಪಾದಿಸಿ ಪ್ರಭುತ್ವ ಮಾಡಬೇಕು." ಎಂದು ಯೋಚಿಸಿ ತಮ್ಮಣ್ಣನೂ ಮಹಾರಾಣಾನೂ ಆದ ರಾಯಮಲ್ಲನ ಮೇಲೆಯೇ ಕತ್ತಿ ಕಟ್ಟಿದನು. ಪೂರ್ವದಲ್ಲಿ ರಾಣಾನಿಗೆ ಅತ್ಯಂತ ನಂಬಿಕೆಗೆ ಪಾತ್ರನೂ, ಸಮೀಪದ ಬಂಧುವೂ ಆದ

ಸಾರಂಗದೇವನೆಂಬ ರಜಪೂತನು, ರಾಜದ್ರೋಹಿಯಾಗಿ ಸುರೇಶಮಲ್ಲ ನೊಂದಿಗೆ ಸೇರಿದ್ದನು. ಅವರಿಬ್ಬರೂ ಕಲೆತು ಪಿಾವಾರು ದೇಶದ ಗ್ರಾಮ ಗಳನ್ನು ಹೊಕ್ಕು ಕೈಗೆ ಸಿಕ್ಕ ಗ್ರಾಮಗಳನ್ನು ಕೊಳ್ಳೆ ಹೊಡೆದು, ಮನೆ ಗಳಿಗೆ ಅಗ್ನಿಪ್ರವೇಶಮಾಡಿಸಿ ಹೀಗೆ ದೇಶದ ಸ್ವಲ್ಪ ಭಾಗವನ್ನು ಆಕ್ರಮಿಸಿ ದರು. ಅಷ್ಟರಲ್ಲಿ ರಾಯಮಲ್ಲನು ಈ ವಾರ್ತೆಯನ್ನು ಕೇಳಿ ತನ್ನ ಸೇನೆಯ ನ್ನೊಡಗೊಂಡು ನಡೆದು, ಶತ್ರು ಸೇನೆಯೊಂದಿಗೆ ಬಹು ಘೋರವಾಗಿ ಕಾದಿ ಇಪ್ಪತ್ತೆರಡು ಗಾಯಗಳಿಂದ ಕಡುನೊಂದು ಏನು ಮಾಡಲೂ ತೋರದೆ ನಿರ್ವಿಣ್ಣನಾಗಿದ್ದನು. ರಾಣಾನ ಸೈನ್ಯವು ನಿರ್ಮೂಲವಾಗುವುದಕ್ಕೆ ಸಿದ್ಧವಾಗಿತ್ತು. ಆದರೆ ಅಷ್ಟರಲ್ಲಿ ಪೃಥ್ವೀರಾಜನು ಈ ವಾರ್ತೆಯನ್ನು ಕೇಳಿ ತನ್ನ ಬಲದೊಂದಿಗೆ ಬಹು ಶೀಘ್ರವಾಗಿ ಪ್ರಯಾಣಮಾಡಿ ಬಂದು ತಮ್ಮ ತಂದೆಯ ಸೇನೆಯು ನಿಶ್ಶೇಷ ಹತವಾಗದಂತೆ ಕಾಪಾಡಿದನು. ಆದರೆ, ಶತ್ರುಗಳನ್ನು ಪರಾಜಯಗೊಳಿಸಲಿಲ್ಲ.—

ಉಭಯ ಸೇನೆಗಳೂ ಒಂದಕ್ಕೊಂದು ಸೋಲದೆ, ಹಿಂಜರಿಯದೆ, ಸಾವುಬಾಳುಗಳ ಇಚ್ಛೆಯನ್ನುಳಿದು, ರಾತ್ರಿಯ ಕಾಲದಲ್ಲಿ ಆಯುಧಗಳ ಮೇಲೆಯೇ ಮಲಗಿ, ಎಷ್ಟು ಹೊತ್ತಿಗೆ ಬೆಳಗಾಗುವುದು - ಎಷ್ಟು ಹೊತ್ತಿಗೆ ಯುದ್ಧ ಪ್ರಾರಂಭವಾಗುವುದು ಎಂದು ಕನವರಿಸುತ್ತ ಕಾಲ ಕಳೆಯುತ್ತಿ ದ್ದರು. ಹೀಗಿರುವಲ್ಲಿ ಒಂದಾನೊಂದುದಿನ ಸುರೇಶಮಲ್ಲನು ಒಂದು ಮಂಚದಮೇಲೆ ಮಲಗಿಕೊಂಡು, ವ್ರಣವೈದ್ಯನಾದೊಬ್ಬ ನಾಪಿತನಿಂದ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದನು. ಆಗ ಪೃಥ್ವೀರಾಜನು ಮೆಲ್ಲಮೆಲ್ಲನೆ ಶತ್ರು ಶಿಬಿರವನ್ನು ಹೊಕ್ಕು ಸೈನಿಕರಿಗೆ ಕಾಣಿಸಿಕೊಳ್ಳದೆ, ತನ್ನ ಚಿಕ್ಕಪ್ಪನ ಗುಡಾರದೊಳಕ್ಕೆ ನುಗ್ಗಿ ಅವನೆದುರಿಗೆ ನಿಂತನು. ಪೃಥ್ವೀರಾಜನನ್ನು ಕಂಡೊಡನೆಯೇ ಸುರೇಶಮಲ್ಲನು ಭಯವಿಸ್ಮಯಗಳಿಂದ ತಟ್ಟನೆ ಮೇಲಕ್ಕೆ ದ್ದನು. ಹಾಗೆ ಬಲವಂತವಾಗಿ ಒಡನೆ ಎದ್ದುದರಿಂದ ಆವರೆಗೇ ಸ್ವಲ್ಪ ಮಟ್ಟಿಗೆ ಮಾಗಿದ್ದ ಗಾಯಗಳು ಬಿರಿದು, ಚಿಲುಮೆಯಿಂದಲೋ ಎಂಬಂತೆ ಚಿಲ್ಲನೆ ರಕ್ತವು ಚಿಮ್ಮಿ ಹೊರಟಿತು. ಪೃಥ್ವೀರಾಜನು ಆತನ ಸಂಭ್ರಮವನ್ನು ಕಂಡು, ಭಯವಿಲ್ಲವೆಂದು ನಂಬುಗೆಯನ್ನು ಹೇಳಿ,—"ಕ್ಷೇಮಸಮಾ ಚಾರವನ್ನು ತಿಳಿದು ಹೋಗಲು ಬಂದೆನಲ್ಲದೆ ಮತ್ತಾವ ದುರುದ್ದೇಶ

ಯಿಂದಲೂ ಇಲ್ಲ. ಗಾಬರಿ ಪಡಬೇಕಾದುದಿಲ್ಲ;" ಎಂದು ಅಭಯ ವಾರ್ತೆ ಯನ್ನು ನುಡಿದನು. ಸುರೇಶಮಲ್ಲನು—'ಮಗೂ ನಾನು ಸುಖವಾಗಿದ್ದೇನೆ. ನೀನು ಬಂದು ದರ್ಶನ ಕೊಟ್ಟುದರಿಂದ ಮತ್ತಷ್ಟು ಸುಖವಾಯಿತಪ್ಪಾ!' ಎಂದು ಪ್ರತ್ಯುತ್ತರ ಕೊಟ್ಟನು. ತರುವಾಯ ಪೃಥ್ವೀರಾಜನು,---'ನನಗೆ ಬಹು ಹಸಿವೆಯಾಗಿದೆ. ನಿನ್ನನ್ನು ಯಾವಾಗ ನೋಡುವೆನೋ ಯಾವ ಸ್ಥಿತಿ ಯಲ್ಲಿ ನೋಡುವೆನೋ ಎಂದು ನಮ್ಮ ತಂದೆಯನ್ನೂ ದರ್ಶಿಸದೆ, ಅನ್ನ ವನ್ನೂ ತಿನ್ನದೆ ನೇರವಾಗಿ ಇಲ್ಲಿಗೇ ಬಂದೆನು. ನನಗಿಷ್ಟು ಅನ್ನವನ್ನು ಕೊಡಿಸು' ಎಂದು ಚಿಕ್ಕಪ್ಪನನ್ನು ಪ್ರಾರ್ಥಿಸಿದನು. ಸುರೇಶಮಲ್ಲನು ಬಹು ಸಂತಸಪಟ್ಟು ಇಬ್ಬರಿಗೂ ಆಹಾರವನ್ನು ತರಿಸಲು, ಹಗಲೆಲ್ಲಾ ಒಬ್ಬರ ಪ್ರಾಣವನ್ನು ಅಪಹರಿಸಲು ಮತ್ತೊಬ್ಬರು ಹೊಂಚುಹಾಕಿ, ಪ್ರಾಣಾಂತ್ಯಕಾರಿಯಾದ ಭಯಂಕರ ಯುದ್ಧರಂಗದಲ್ಲಿ ಹೋರಾಡಿದ ಆ ಇಬ್ಬರು ರಾಜಕುಮಾರರೂ ಒಂದೆಡೆ ಕುಳಿತು ಭುಜಿಸಿದರು. ಕೊನೆಗೆ ಪೃಥ್ವೀ ರಾಜನು, ಹೊರಡುವಾಗ ತನ್ನ ಚಿಕ್ಕಪ್ಪನನ್ನು ಕುರಿತು—'ನಾಳೆಗೆ ನಮ್ಮ ಈ ಯುದ್ಧ ಕಾರ್ಯವನ್ನು ಕೊನೆಗಾಣಿಸಬೇಕಪ್ಪಾ!' ಎನ್ನಲು, ಆತನು— 'ಆಗಲಿ ಮಗು, ನಾಳೆ ಪ್ರಾತಃಕಾಲ ಬರುವೆಯಂತೆ, ಈಗ ಹೋಗಿ ಬಾ!' ಎಂದು ನುಡಿದು ತನ್ನ ಮಗನನ್ನು ಕಳುಹಿಸಿದನು.

ಮಾರನೆಯ ಪ್ರಾತಃಕಾಲ ಯಥಾಪ್ರಕಾರವಾಗಿ ಯುದ್ಧ ಪ್ರಾರಂಭ ವಾಯಿತು. ಎಂದಿನಂತೆಯೇ ಆ ಯುದ್ಧದಲ್ಲೂ ಪೃಥ್ವೀರಾಜನಿಗೇ ಜಯ ವಾಯಿತು. ಸುರೇಶಮಲ್ಲನೂ ಅವನಿಗೆ ಸಹಾಯಕನಾಗಿ ಬಂದಿದ್ದ ಸಾರಂಗ ದೇವನೂ ಪರಾಜಿತರಾಗಿ ಪಲಾಯನ ಮಾಡಿದರು. ಪೃಥ್ವೀರಾಜನು ಪಲಾ ಯಿತರಾದ ಅವರನ್ನು ಬೆನ್ನಟ್ಟಿ ಓಡಿಸಿಕೊಂಡು ಹೋಗಲು, ಅನೇಕ ಚಿಕ್ಕ ಚಿಕ್ಕ ಕದನಗಳೂ ನಡೆದುವು. ಅವುಗಳಲ್ಲೆಲ್ಲಾ ಪೃಥ್ವೀರಾಜನಿಗೇ ಜಯ ವಾಗುತ್ತಿದ್ದಿತು. ಪ್ರಳಯಾಂತಕನನ್ನು ಹೋಲುತ್ತಿದ್ದ ಆ ರಾಜಕುಮಾ ರನ ಹಾವಳಿಯನ್ನು ಸಹಿಸಲಾರದೆ, ಸುರೇಶಮಲ್ಲಾದಿಗಳು ಓಡಿಯೋಡಿ ಬೇಸತ್ತು ಕೊನೆಗೆ ಒಂದು ಘೋರಾಟವಿಯನ್ನುಹೊಕ್ಕು, ಅಲ್ಲಿ ದುರ್ಭೇದ್ಯ ವಾದ ಒಂದು ಸ್ಥಳದಲ್ಲಿ ವಾಸಸ್ಥಾನವನ್ನು ಕಲ್ಪಿಸಿಕೊಂಡು, ಅಲ್ಲಿ ತಮ್ಮ ಗುರುತು ಪರಿಚಯವು ಯಾರಿಗೂ ಆಗಲಾರದೆಂದುಕೊಂಡು ಅವಿತುಕೊಂ

ಡಿದ್ದರು. ಹಾಗಿರುವಲ್ಲಿ, ಒಂದಾನೊಂದುದಿನ ರಾತ್ರಿ ನಿಶ್ಶಬ್ದವಾಗಿದ್ದ ವೇಳೆಯಲ್ಲಿ ಕತ್ತಿಗಳ ಖಣಖಣತ್ಕಾರ ಶಬ್ದವನ್ನು ಕೇಳಿ ಸುರೇಶಮಲ್ಲನು-- 'ಓಹೋ! ನಮ್ಮಣ್ಣನ ಮಗನು ಬಂದಂತೆ ಕಾಣುತ್ತದೆ' ಎಂದು ತನ್ನವರೊಂದಿಗೆ ಹೇಳುವುದರೊಳಗಾಗಿಯೇ, ಪೃಥ್ವೀರಾಜನು ವೀರಭಟರ ಪರಿವಾರದೊಂದಿಗೆ ಒರೆಯಿಂದ ಹಿರಿದ ಕತ್ತಿಯನ್ನು ಝಳಪಿಸುತ್ತ ಅವರ ಎದುರಿಗೆಹಾರಿ ಧುಮುಕಿ ನಿಂತನು. ಒಡನೆ ಖಡ್ಗವನ್ನೆತ್ತಿ ಅದರಿಂದ ತನ್ನ ಚಿಕ್ಕಪ್ಪನನ್ನು ಒಂದೇ ಪ್ರಹಾರಕ್ಕೆ ತೀರಿಸಿಬಿಡುವುದರಲ್ಲಿದ್ದನು. ಆಗ ಸಾರಂಗದೇವನು ಅಡ್ಡ ಬಂದು,—'ಈಗ ಸುರೇಶಮಲ್ಲನು ಗಾಯಗಳಿಂದ ಪೀಡಿತನಾಗಿ ಕದಲಲಾರದಿದ್ದಾನೆ. ಮೊದಲು ಇಪ್ಪತ್ತು ಖಡ್ಗ ಹತಿಗಳನ್ನಾದರೂ ಲೆಕ್ಕಗೊಳ್ಳದಿದ್ದ ಆ ವೀರನು ಈಗ ಬರಿಯ ಒಂದು ಗುದ್ದನು ಸಹ ಸಹಿಸಿಕೊಳ್ಳಲಾರದಿದ್ದಾನೆ. ಆದುದರಿಂದ ಆತನು ಇಂದು ಅವಧ್ಯನು" ಎಂದು ನುಡಿದನು. ಆ ಮಾತಿಗೆ ಪೃಥ್ವೀರಾಜನು ಪ್ರತ್ಯುತ್ತರ ಕೊಡುವುದರೊಳಗಾಗಿ ಸುರೇಶಮಲ್ಲನು,—'ಸಾರಂಗದೇವಾ. ಹಾಗೆನ್ನಬೇಡ. ನಾನು ಹೋದರೆ ನಮ್ಮಣ್ಣನ ಮಗನ ಕೈಯಲ್ಲಲ್ಲವೆ ಹೋಗುವೆನು.' ಎಂದು ಪೃಥ್ವೀರಾಜನ ಕಡೆ ತಿರುಗಿ—'ಕುಮಾರಾ ಇನ್ನು ಯುದ್ಧವನ್ನು ಸಾಕು ಮಾಡು. ನೀನು ನನ್ನನ್ನು ಕೊಲ್ಲುವುದೊಂದು ಅಗಾಧ ಕಾರ್ಯವಲ್ಲ. ನನಗೆ ಮಕ್ಕಳಿದ್ದಾರೆ. ಅವರು ರಾಜಪುತ್ರರಾದ್ದರಿಂದ ಅವರಿಗೆ ಸಹಾಯ ಸಂಪತ್ತುಗಳು ದೊರೆತು ಎಂತೋ ಜೀವಿಸುವರು. ಆದರೆ ನಾವೇ ಒಂದು ವೇಳೆ ನಿನ್ನನ್ನು ಸಂಹರಿಸುವ ಪ್ರಸಂಗ ಸಂಭವಿಸಿದ್ದರೆ ಚಿತ್ತೂರಿನ ಗತಿ ಏನಾಗುತ್ತಿದ್ದಿತು? ನಿನ್ನನ್ನು ಕೊಂದರೆ ನಾನು ಅನುಗಾಲವೂ ಲೋಕನಿಂದೆಗೆ ಗುರಿಯಾಗುವುದು ತಪ್ಪದು" ಎಂದು ವೀರ ಪುರುಷೋಚಿತ ವಾಕ್ಯಗಳನ್ನು ನುಡಿದನು. ಪೃಥ್ವೀರಾಜನು, ತನ್ನ ಚಿಕ್ಕ ತಂದೆಯು ನುಡಿದ ಆ ಹೃದಯದ್ರಾವಕ ವಾರ್ತೆಗಳನ್ನು ಕೇಳಿ ಎದೆಯು ಕರಗಲು ಒಡನೆ ತನ್ನ ಸೈನಿಕರ ಕಡೆಗೆ ತಿರುಗಿ—'ನಿಮ್ಮ ಕತ್ತಿಗಳನ್ನು ಒರೆಗಳೊಳಕ್ಕೆ ಸೇರಿಸಿರಿ' ಎಂದು ನುಡಿದು, ತನ್ನ ಖಡ್ಗವನ್ನೂ ಒರೆಯೊಳಗೆ ಹಾಕಿದನು. ತರುವಾಯ ಅವನೂ ಚಿಕ್ಕಪ್ಪನೂ ಒಬ್ಬರನ್ನೊಬ್ಬರು ಗಟ್ಟಿಯಾಗಿ ಅಪ್ಪಿಕೊಂಡರು. ಒಂದಿಗೇ ಎರಡು ಸೈನ್ಯಗಳವರೂ ತಮ್ಮ ಹಳೆಯ ಹಗೆತನಗಳನ್ನೆಲ್ಲ ಒಮ್ಮೆ

ಗೇ ಮರೆತು, ಪುನಃ ಒಂದಾಗಿ ಕಲೆತು ಮೆಲೆತು ಇಷ್ಟಾಲಾಪಗಳನ್ನಾಡುತ್ತಾ ಕುಳಿತರು.

ಅನಂತರ ಪೃಥ್ವೀರಾಜನು ತನ್ನ ಚಿಕ್ಕಪ್ಪನನ್ನು ನೋಡಿ—'ನಾನು ಇಲ್ಲಿಗೆ ಬಂದಾಗ ನೀವೇನು ಮಾಡುತ್ತಿದ್ದಿರಿ' ಎಂದು ಕೇಳಿದನು. ಅದಕೇಳಿ ಸುರೇಶಮಲ್ಲನು—'ಮಾಡುವದೇನನ್ನು? ಇದ್ದುದಿಷ್ಟನ್ನು ತಿಂದು, ಹುಚ್ಚು ಹುರುಳು ಹಾಡುಗಳನ್ನು ಹೇಳಿಕೊಳ್ಳುತ್ತಿದ್ದೆವು' ಎಂದನು. ಪುನಃ ರಾಜಪುತ್ರನು—'ಹೌದು, ನಿಮ್ಮ ವಾಸಸ್ಥಾನದ ಗುರುತು ಹಚ್ಚಲು ನಾನು ವಿಶ್ವಪ್ರಯತ್ನ ಮಾಡುತ್ತಿರುವೆನೆಂಬ ಸಂಗತಿಯು ತಿಳಿದಿದ್ದರೂ ನೀವು ಅಷ್ಟು ಅಜಾಗ್ರತೆಯಿಂದಿದ್ದುದೇಕೆ ?' ಎಂದು ಕೇಳಿದನು. ಅದನ್ನು ಕೇಳಿದ ಸುರೇಶಮಲ್ಲನು—'ಅಪ್ಪಾ ನಾನಿನ್ನೇನು ಮಾಡಲಿ ! ನೀನು ನನ್ನನ್ನು ಎಲ್ಲೂ ಕಾಲೂರಿ ನಿಲ್ಲಲು ಅವಕಾಶವಿಲ್ಲದಂತೆ ತರುಮುತ್ತಿದ್ದೀಯೆ ? ನಾನು ಎಲ್ಲಾದರೊಂದೆಡೆ ತಲೆ ಮರಸಿಕೊಂಡು ಪ್ರಾಣ ರಕ್ಷಣೆ ಮಾಡಿಕೊಳ್ಳಬೇಕಲ್ಲವೆ ? ಆದುದರಿಂದ ಇಲ್ಲೇ ಇದ್ದೆನಪ್ಪ !' ಎಂದನು. ಆ ರಾತ್ರೆ ಹೀಗೆ ಹಲವು ಬಗೆಯ ಸಂಭಾಷಣೆಯಲ್ಲಿ ಕಾಲ ಕಳೆಯಿತು. ಮಾರನೆಯ ಪ್ರಾತಃಕಾಲ ಪೃಥ್ವೀರಾಜನು ತನ್ನ ಚಿಕ್ಕಪ್ಪನನ್ನು ಕುರಿತು—'ಇಲ್ಲಿಗೆ ಸಮೀಪದಲ್ಲಿರುವ ಭವಾನೀ ದೇವಾಲಯಕ್ಕೆ ದೇವಿಗೆ ಬಲಿ ಸಮರ್ಪಿಸಲು ಬರುವೆಯಾ ?' ಎಂದು ಕೇಳಿದನು. ಸುರೇಶಮಲ್ಲನು ಲೋಕಾನುಭವವನ್ನರಿತವನಾದುದರಿಂದ, ಈ ಉಪಾಯದಿಂದ ಆ ರಾಜಕುವರನು ತನಗೆ ಏನಾದರೂ ಅಪಾಯವನ್ನುಂಟುಮಾಡದಿರನೆಂದು ಯೋಚಿಸಿಯೋ ಅಥವ ಈಚೆಗೆ ಎರಡು ತಿಂಗಳಿಂದಲೂ ತೆರಪಿಲ್ಲದೆ ನಡೆದ ಯುದ್ಧಗಳಿಂದ ಶ್ರಾಂತನಾಗಿದ್ದುದರಿಂದಲೋ, ಎಂತೂ ಪೃಥ್ವೀರಾಜನನ್ನು ನೋಡಿ—'ಮಗೂ ನಾನು ಗಾಯಗಳಿಂದ ಬಹುಮಟ್ಟಿಗೆ ಪೀಡಿತನಾಗಿ ಕದಲಲಾರದೆ ಇದ್ದೇನೆ ನನಗೆ ಬದಲು ಈ ಸಾರಂಗದೇವನನ್ನು ಕರೆದುಕೊಂಡು ಹೋಗು' ಎಂದು ತನ್ನಾ ಸ್ನೇಹಿತನನ್ನು ಕಳುಹಿಸಿದನು.

ಪೃಥ್ವೀರಾಜನು—'ಯಾರು ಬಂದರೂ ಸರಿ' ಎಂದು, ತನ್ನೊಂದಿಗೆ ಬಂದ ಸಾರಂಗದೇವನನ್ನು ಕರೆದುಕೊಂಡು ದೇವಾಲಯಕ್ಕೆ ಹೋಗಿ ಅಲ್ಲಿ ಅವನನ್ನು ದೇವತೆಗೆ ಬಲಿಯಾಗಿ ವಧಿಸಲುದ್ಯುಕ್ತನಾಗಲು, ವೀರನಾದ

ಅವನು ಪೃಥ್ವೀರಾಜನಿಗೆ ಅಣಗದೆ ಇಬ್ಬರಿಗೂ ಹೋರಾಟವು ಮೊದಲಾಯಿತು. ಸ್ವಲ್ಪ ಹೊತ್ತು ಇಬ್ಬರಿಗೂ ಭಯಂಕರ ಹೋರಾಟವು ನಡೆಯಿತಾದರೂ ಕೊನೆಗೆ ಸಾರಂಗದೇವನು ಪೃಥ್ವೀರಾಜನ ಕರಕೃಪಾಣಕ್ಕೆ ಬಲಿಯಾದನು. ಪ್ರಾರಂಭದಲ್ಲಿ ಮಿವಾರಾಧಿಪನಿಗೆ ಅಪ್ರತಿಹತವಾದ ಖಡ್ಗವನ್ನು ಪ್ರಸಾದಿಸಿದ್ದ ಆ ದೇವಿಗೆ ರಜಪೂತ ವೀರನ ಕಂಠರಕ್ತವನ್ನು ಸಮರ್ಪಿಸಿ, ಪೃಥ್ವೀರಾಜನು ದೇವಿಗಾಗಿ ತಮ್ಮ ಮನೆತನದಿಂದ ಇದ್ದ ಹರಕೆಯನ್ನೂ ಮತ್ತು ತಮ್ಮ ತಂದೆಯ ಹಗೆಯನ್ನೂ ಏಕಕಾಲಕ್ಕೆ ತೀರಿಸಿ ಕೃತಕೃತ್ಯನಾದನು.

ಸಾರಂಗದೇವನ ದುರ್ಮರಣ ವಾರ್ತೆಯು ಸುರೇಶಮಲ್ಲನಿಗೆ ಶ್ರುತವಾಯಿತು. ತಾನು ಕಾರಣಾಂತರದಿಂದ ಅವನೊಂದಿಗೆ ಹೋಗದಿದ್ದುದೇ ಮೇಲಾಯಿತೆಂದುಕೊಂಡು, ಪುನಃ ಆ ಸ್ಥಳದಲ್ಲೇ ತಂಗಿ ಇರಲು ಇಷ್ಟಪಡದೆ ಗಾಯಗಳ ಬಾಧೆಯಿಂದ ಸಂಕಟಪಡುತ್ತಿದ್ದರೂ ಮರಣಭೀತಿಯು ಅತಿಶಯವಾಗಲು ಒಡನೆ ಕುದುರೆ ಹತ್ತಿ ಹೊರಟು ಸಪರಿವಾರನಾಗಿ ತಾನು ಜಯಿಸಿದ್ದ ಭೂ ಪ್ರದೇಶವನ್ನು ಕುರಿತು ಪ್ರಯಾಣಮಾಡಿದನು. ತಾನು ಹೊಸದಾಗಿ ಸಂಪಾದಿಸಿದ ಭೂ ಪ್ರದೇಶದಲ್ಲೇ ತನಗೆ ನಿಲ್ಲಲು ಅವಕಾಶವಿಲ್ಲದಿರುವಾಗ ಇನ್ನು ತನ್ನ ಪಿತ್ರಾರ್ಜಿತ ಸ್ವಾಸ್ಥ್ಯವನ್ನೂ ತನ್ನಾ ಜ್ಞಾತಿಗಳಿಗೆ ಬಿಟ್ಟು ಹೋಗಲು ಇಷ್ಟಪಡದೆ, ರಾಜನಿಗಿಂತಲೂ ಬ್ರಾಹ್ಮಣರೇ ಬಲವಂತರೆಂದೂ, ಅವರಿಗೆ ದಾನಮಾಡಿದ ಸ್ವಾಸ್ಥ್ಯವನ್ನು ತಮ್ಮಣ್ಣನು ಅಪಹರಿಸಲಾರನೆಂದೂ ಎಣಿಸಿ, ತನ್ನ ಪಿತ್ರಾರ್ಜಿತ ಸ್ವಾಸ್ಥ್ಯವನ್ನೆಲ್ಲಾ ಬ್ರಾಹ್ಮಣರನ್ನು ಕರೆದು ಅವರಿಗೆ ದಾನವಾಗಿ ಕೊಟ್ಟು ತಾನು ಎಲ್ಲೋ ಹೊರಟು ನಡೆದನು. ಈ ಸಂಗತಿಯು, ರಾಣಾಗೆ ತಿಳಿಯಲು ತನ್ನ ತಮ್ಮನು ಮಾಡಿದ ಆ ಕೆಲಸಕ್ಕೆ ಆತನು ಕೋಪೋದ್ದೀಪಿತನಾದನು. ಬ್ರಾಹ್ಮಣರಿಗೆ ಕೊಡಲ್ಪಟ್ಟ ಆ ಭೂ ಸ್ವಾಸ್ಥ್ಯವನ್ನು ವಾಪಸು ಪಡೆದರೆ ತಾನೂ ತನ್ನ ವಂಶಸ್ಥರೂ ಹಲವು ಕಾಲ ನರಕವಾಸವನ್ನು ಅನುಭವಿಸಬೇಕಾದೀತೆಂದು ನಂಬಿ, ದಾನ ಪಡೆದ ಆ ಬ್ರಾಹ್ಮಣರಗೊಡವೆಗೆ ಹೋಗದೆ ಸುಮ್ಮನಿದ್ದುಬಿಟ್ಟನು.

ತರುವಾಯ ಸುರೇಶಮಲ್ಲನು ಮಾವಾರು ಪ್ರಾಂತವನ್ನು ಸಂಪೂರ್ಣವಾಗಿ ಪರಿತ್ಯಜಿಸಿ ದಕ್ಷಿಣಾಭಿಮುಖನಾಗಿ ಬಹು ದೂರ ಪ್ರಯಾಣಮಾಡಿ ನಟ್ಟಡವಿಗಳಲ್ಲಿ ಸುತ್ತುತ್ತಿರಲು, ಒಂದಾನೊಂದುದಿನ ಒಂದು ಮೇಕೆಯು ತನ್ನ ಮರಿಯನ್ನು ತೋಳವು ಭಕ್ಷಿಸದಂತೆ ರಕ್ಷಿಸಲೂ ತನ್ನನ್ನು ರಕ್ಷಿಸಿಕೊಳ್ಳಲೂ ಮಾರ್ಗಕಾಣದೆ ತಲ್ಲಣಿಸುತ್ತಿರಲು, ಅದನ್ನು ಕಂಡು ಹಿಂದೆ ಚಾರುಣೀದೇವಿಯು ಅರ್ಜಕಳು ತನಗೆ ಹೇಳಿದ್ದ ಭವಿಷ್ಯದ್ವೃತ್ತಾಂತವನ್ನು ಜ್ಞಾಪಿಸಿಕೊಂಡು, ಆ ಸಮಯವು ಈಗ ಬಂತೆಂದು ನೆನೆದು, ಆ ಮೇಕೆಯನ್ನೂ ಅದರ ಮರಿಯನ್ನೂ ತೋಳನ ಬಾಧೆಯಿಂದ ಸಂರಕ್ಷಿಸಿದನು. ಆ ಮೃಗಪ್ರಾಣಿಗೆ ಹಾಗೆ ಪ್ರಾಣದಾನಮಾಡಿ, ಆ ಬಗ್ಗೆ ವಿಶೇಷ ಸಮಾಧಾನತೆಯನ್ನು ಹೊಂದಿದ ಮನಸ್ಸಿನಿಂದ ಅಲ್ಲಲ್ಲೆ ಸಂಚರಿಸುತ್ತಾ, ಅಲ್ಲೇ ವಾಸಿಸಿದ್ದ ಕಾಡುಜನರ ಸ್ನೇಹಮಾಡಿ, ಅವರನ್ನು ತನ್ನ ಆಜ್ಞಾಧಾರಕರನ್ನಾಗಿಸಿ, ಸುತ್ತುಮುತ್ತಿನ ಇತರ ಪ್ರಾಂತಗಳನ್ನೂ ಸ್ವಾಧೀನಪಡಿಸಿಕೊಂಡು, ಅಲ್ಲೇ ಒಂದು ಕೋಟೆಯನ್ನು ಕಟ್ಟಿಕೊಂಡು ತನ್ನ ಜೀವಿತಶೇಷವನ್ನು ಆ ಪ್ರಾಂತದಲ್ಲೇ ಇದ್ದು ಕಳೆಯಲು ನಿಶ್ಚಯಿಸಿದನು. ದುರ್ದೈವವಶದಿಂದ ತನಗೆ ಚಿತ್ತೂರು ವಾಸ ಸೌಭಾಗ್ಯವು ದಕ್ಕದಿದ್ದರೂ, ಆ ಪಟ್ಟಣದ ಮತ್ತು ಮಾವಾರು ದೇಶದ ವಿಷಯದಲ್ಲಿ ಆತನಿಗೆ ಎಳ್ಳಷ್ಟೂ ಅಭಿಮಾನವು ಕುಗ್ಗದೆ, ಅದನ್ನೇ ತನ್ನ ಮಾತೃಸ್ಥಾನವನ್ನಾಗಿ ಎಣಿಸಿದ್ದುದು ಮಾತ್ರವಲ್ಲದೆ, ಎಂದೆಂದಿಗೂ, ಆ ಪವಿತ್ರ ಕ್ಷೇತ್ರವನ್ನೇ ನಿಮ್ಮ ಮಾತೃಭೂಮಿಯನ್ನಾಗಿ ಎಣಿಸಿ ಗೌರವ ಭಾವದಿಂದ ಕಾಣುತ್ತಿರಬೇಕೆಂದು ತನ್ನ ಮಕ್ಕಳಿಗೆ ಶಾಸನಮಾಡಿ, ಆ ರಜಪೂತ ವೀರನು ಅಸುವನ್ನು ನೀಗಿದನು. ಆತನ ಮಾತುಗಳಲ್ಲಿ ಆತನ ಮಕ್ಕಳು ನಿಷ್ಕಲ್ಮಷವಾದ ವಿಶ್ವಾಸವನ್ನಿಟ್ಟುಕೊಂಡು, ಚಿತ್ತೂರನ್ನು ಜನ್ಮಭೂಮಿಯೆಂಬ ಅಭಿಮಾನದಿಂದ ಎಲ್ಲಿದ್ದರೂ ಸಾಯಂಪ್ರಾತಃಕಾಲಗಳಲ್ಲಿ ಸ್ಮರಿಸಿಕೊಳ್ಳುತ್ತಿದ್ದರು. ಈ ವಿಶ್ವಾಸವು ಮುಂದೆ, ಅಕ್ಬರು ಚಕ್ರವರ್ತಿಯು ಪ್ರಬಲನಾಗಿ ಚಿತ್ತೂರನ್ನು ಮುತ್ತಿಗೆ ಹಾಕಿದ ಮಹಾಪಾಯ ಸಂದರ್ಭದಲ್ಲಿ ಆಗ ಆಳುತ್ತಿದ್ದ ರಾಣಾನು ಅಪ್ರಯೋಜಕನಾಗಿ ಮರಣಕ್ಕೆ ಹೆದರಿ ಮನೆಯಲ್ಲಿ ಅವಿತುಕೊಂಡಾಗ, ಈ ಸುರೇಶಮಲ್ಲನ ಮಕ್ಕಳಲ್ಲಿ ಒಬ್ಬನೇ ಮುಂದಾಗಿ ಬಂದು ತನ್ನ ವಂಶೀಕರ

ಜನ್ಮಭೂಮಿಯಾದ ಈ ಚಿತ್ತೂರಿಗಾಗಿ ತನ್ನ ಪಂಚಪ್ರಾಣಗಳನ್ನೂ ಧಾರೆಯಿತ್ತು ಜನ್ಮಸಾರ್ಥಕ್ಯವನ್ನು ಹೊಂದಿದನು.

ಹೀಗೆ ಪೃಥ್ವೀರಾಜನು ಚಿಕ್ಕಪ್ಪನನ್ನು ಸ್ವದೇಶದಿಂದ ಹೊರಡಿಸಿ. ತರುವಾಯ ತನ್ನ ಅಣ್ಣನಾದ ಸಂಗನು ಇನ್ನೂ ಜೀವಿಸಿದ್ದಾನೆಂದೂ ಅವನಿಗೆ ವಿವಾಹ ಪ್ರಯತ್ನವು ನಡೆಯುತ್ತಿದೆಯೆಂದೂ, ವರ್ತಮಾನವನ್ನು ಕೇಳಿದನು. ಹಿಂದೆ ಚಾರುಣೀದೇವಿಯ ಅರ್ಚಕಳು ಹೇಳಿದ ಮಾತಿನಂತೆ, ಸಂಗನು ಜೀವಿಸಿದ್ದರೆ, ತನಗೆ ರಾಜಯೋಗವು ದಕ್ಕದೆಂದುಕೊಂಡು ಅವನನ್ನು ಹುಡುಕಿ ಹುಡುಕಿ ಕೊಲ್ಲಬೇಕೆಂದು ನಿಶ್ಚಯಿಸಿ ಸೈನ್ಯದೊಂದಿಗೆ ಪ್ರಯಾಣವಾಗಲು ಸಿದ್ಧನಾಗುವ ವೇಳೆಗೆ ಅವನ ಸೋದರಿಯು ಬಂದು ತನ್ನ ದೀನವೃತ್ತಾಂತವನ್ನು ಹೇಳಿ ಮೊರೆಯಿಟ್ಟುಕೊಂಡು, ಅವನನ್ನು ಆ ಪ್ರಯಾಣದಿಂದ ನಿವಾರಿಸಿದಳು.

ಈ ಸಂದರ್ಭದಲ್ಲಿ ಪೃಥ್ವೀರಾಜನ ಸೋದರಿಯ ಪರಿಚಯವನ್ನಷ್ಟು ಕೊಡುವುದು ಅಗತ್ಯವಿದೆ. ರಾಯಮಲ್ಲನು ತನ್ನ ಈ ಮಗಳನ್ನು ಶಿರೋಹಿ ದೇಶದ ರಾಜನಿಗೆ ಕೊಟ್ಟು ವಿವಾಹ ಮಾಡಿದ್ದನು. ಆ ಕನ್ಯೆಯು ಸೌಂದರ್ಯ ಸೌಜನ್ಯ ಸೌಶೀಲ್ಯ ಪಾತಿವ್ರತ್ಯಾದಿಗಳಲ್ಲಿ ಅಸಮಾನ್ಯಳಾಗಿದ್ದಳಾದರೂ, ಆಕೆಯ ಗಂಡನು ಮಾತ್ರ ಆಕೆಯನ್ನು ತಕ್ಕ ಆದರಣೆಯಿಂದ ನಡೆಯಿಸಿಕೊಳ್ಳದೆ ಅತ್ಯಂತ ನೀಚತನದಿಂದ ಕಾಣುತ್ತಿದ್ದನು. ರಾಯಮಲ್ಲನ ಅಳಿಯನು ಅಫೀಮು ತಿಂದು ಮೈಮೇಲೆ ಪ್ರಜ್ಞೆ ತಪ್ಪಿ ಭಾರ್ಯೆಯನ್ನು ತುರುಬು ಹಿಡಿದು ಮಂಚದಿಂದ ಕೆಳಕ್ಕೆಳೆದುಹಾಕಿ, ರಾತ್ರಿಯೆಲ್ಲಾ ಒಣ ನೆಲದಮೇಲೆ ಬಿದ್ದಿರುವಂತೆ ಮಾಡಿ ಹೀಗೆ ಬಾಧೆಗೊಳಿಸುತ್ತಿದ್ದನು. ಮಹಾರಾಜ ಕುಮಾರ್ತೆಗೆ ಅದಕ್ಕಿಂತಲೂ ಹೆಚ್ಚಿನ ಅವಮಾನವೇನು ? ಆದುದರಿಂದ ಆ ಬಾಲಿಕೆಯು ತನ್ನ ಈ ದೈನ್ಯತೆಯನ್ನು ಹೇಗಾದರೂ ನಿವಾರಿಸೆಂದು ತನ್ನ ಸೋದರನನ್ನು ಕುರಿತು ಪ್ರಾರ್ಥಿಸಿಕೊಂಡಳು. ಪೃಥ್ವೀರಾಜನು ಸೋದರೀ ಪ್ರಾರ್ಥನೆಯನ್ನು ಕೇಳಿ ಕರುಳು ಮರುಗಿ, ಸಂಗನ ಮೇಲೆ ಹೊರಡಲಿದ್ದ ತನ್ನ ಪ್ರಯಾಣವನ್ನು ತಪ್ಪಿಸಿ ಶಿರೋಹಿ ಪಟ್ಟಣದಮೇಲೆ ದಂಡೆತ್ತಿ ಹೊರಟನು. ಶಿರೋಹಿ ಪಟ್ಟಣವನ್ನು ಸೇರಿದೊಡನೆಯೇ, ಸೈನ್ಯವನ್ನು ಊರಹೊರಗೇ ಬಿಟ್ಟು, ನಡುರಾತ್ರಿಯಲ್ಲಿ ಯಾರೂ ಕಾಣದಂತೆ

ಕೋಟೆಯನ್ನು ಹತ್ತಿ ಒಳಕ್ಕಿಳಿದು ಅಂತಃಪುರವನ್ನು ಪ್ರವೇಶಿಸಿ ಶಯನ ಗೃಹದಲ್ಲಿ ನಿಂತನು. ಆಗ ಶಿರೋಹಿರಾಜನು ಅಫೀಮು ಮತ್ತಿನಿಂದ ದೇಹವನ್ನು ಮರೆತು ಮಂಚದಮೇಲೆ ಬಿದ್ದುಕೊಂಡಿದ್ದನು. ಅವನ ಪತ್ನಿಯಾದ ಪೃಥ್ವೀರಾಜನ ತಂಗಿಯು ಅವನಿಂದ ಅಪಮಾನಿತಳಾಗಿ ನೆಲದಮೇಲೆ ಮುಖಮುಡಿಯಾಗಿ ಬಿದ್ದು ರೋದಿಸುತ್ತಿದ್ದಳು.

ಪ್ರಿಯತಮಳಾದ ತನ್ನ ತಂಗಿಗೆ ಪ್ರಾಪ್ತವಾಗಿದ್ದ ದುರವಸ್ಥೆಯನ್ನು ಕಣ್ಣಾರೆ ಕಂಡ ಪೃಥ್ವೀರಾಜನು ಕೋಪಾವೇಶಪರವಶನಾಗಿ, ತಮ್ಮ ಕುಟುಂಬಕ್ಕೀ ಆ ನೀಚನಿಂದ ಪ್ರಾಪ್ತವಾಗಿದ್ದ ಪರಾಭವವನ್ನು ನೀಗಿಸಲೆಣಿಸಿ, ಒಡನೆ ಅವನನ್ನು ತೀರಿಸಿಬಿಡಬೇಕೆಂಬ ಉದ್ದೇಶದಿಂದ ಖಡ್ಗವನ್ನೆತ್ತಿದನು. ತನ್ನ ಪತಿಗೆ ಪ್ರಾಪ್ತವಾದ ಆ ಪ್ರಾಣಾಂತ ಅವಸ್ಥೆಯನ್ನು ಕಂಡ ಆ ಬಾಲಿಕೆಯು, ಪತಿವ್ರತೆಯಾದ್ದರಿಂದ ತಮ್ಮಣ್ಣನ ಕಾಲಮೇಲೆಬಿದ್ದು ಬೇಡಿಕೊಂಡು, ತನ್ನ ಪತಿಯ ಪ್ರಾಣವನ್ನು ರಕ್ಷಿಸಿಕೊಂಡಳು. ಈ ಕಳಕಳದ ಗಲಭೆಯಿಂದ ಎಚ್ಚತ್ತ ಆ ಶಿರೋಹಿರಾಜನು, ತನ್ನ ಕಣ್ಣೆದುರಿಗೆ ದಂಡಧಾರಿಯಾದ ಯಮನಂತೆ ಖಡ್ಗಹಸ್ತನಾಗಿ ನಿಂತಿದ್ದ ತನ್ನ ಭಾವನನ್ನು ಕಂಡು ಮುಂದೇನು ಮಾಡಬೇಕೆಂದು ತೋರದೆ, ಪ್ರಾಣಭಯದಿಂದ ಗಡಗಡನೆಂದು ನಡುಗುತ್ತಿರಲು, ಪೃಥ್ವೀರಾಜನು, ಅವನನ್ನುದ್ದೇಶಿಸಿ—'ಎಲವೋ, ನೀನು ನಮ್ಮ ಸೋದರಿಗೆ ತಂದಿಟ್ಟ ಪರಾಭವಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಹೇಳುವೆನು ಕೇಳು. ನೀನು ಆಕೆಯ ಪಾದಗಳಿಗೆ ಬಿದ್ದು ಕ್ಷಮಾಪಣೆ ಕೇಳಿಕೊಂಡು, ಆಕೆಯ ಪಾದರಕ್ಷೆಗಳನ್ನು ಎತ್ತಿ ತಲೆಯಲ್ಲಿ ಧರಿಸಿದೆಯಾದರೆ ನಿನ್ನನ್ನೀಗ ಪ್ರಾಣಗಳೊಂದಿಗೆ ರಕ್ಷಿಸುತ್ತೇನೆ. ಹಾಗಿಲ್ಲದಿದ್ದರೆ, ಈ ಖಡ್ಗದ ಒಂದೇ ಪಟ್ಟಿನಿಂದ ನಿನ್ನ ತಲೆಯನ್ನು ಹಾರಿಸಿಬಿಡುತ್ತೇನೆ" ಎಂದನು. ಅವನ ಆ ದರ್ಪಯುಕ್ತ ವಾಣಿಯನ್ನು ಕೇಳಿ ಅಫೀಮು ಭಕ್ಷಕನಾದ ಆ ಹೇಡಿಯು ಮುಂದೆ ಮಾರ್ಗತೋರದೆ ಹಾಗೆಯೇ ಮಾಡಿ ಬದುಕಲೊಪ್ಪಿ - ಆತನು ಹೇಳಿದಂತೆಯೇ ಆಚರಿಸಿದನು.

ತಾನು ಹೇಳಿದಂತೆಯೇ ಅವನು ಆಚರಿಸಿದ ಕೂಡಲೆ ಪೃಥ್ವೀರಾಜನ ಕೋಪಾಗ್ನಿಯು ಶಾಂತವಾಗಿ ಹೋಯಿತು. ಒಡನೆ ತನ್ನಾ ಭಾವಮೈದುನನನ್ನು ಅಪ್ಪಿಕೊಂಡು, ಮುಂದೆ ತನ್ನ ತಂಗಿಯನ್ನು ಹಾಗೆ ಕಷ್ಟಪಡಿಸ

ಬೇಡವೆಂದು ಕೇಳಿಕೊಂಡನು. ಶಿರೋಹಿರಾಜನು, ತನ್ನ ವಿಷಯದಲ್ಲಿ ಸುಮುಖನಾದ ಪೃಥ್ವೀರಾಜನೊಂದಿಗೆ ಕಲೆಸಿಮೆಲೆಸಿ ಸ್ನೇಹದಿಂದಲೇ ಇದ್ದನಾದರೂ, ತನಗೆ ಪ್ರಾಪ್ತಿಸಿದ - ಪತ್ನಿಯ ಪಾದರಕ್ಷೆಗಳನ್ನು ತಲೆಯಮೇಲಿಟ್ಟುಕೊಂಡ - ಆ ಪರಾಭವದ ಸಂಗತಿ ಮಾತ್ರ ಬೆಂಕಿಯಾಗಿ ಅವನ ಹೃದಯವನ್ನು ದಹಿಸುತ್ತಿತ್ತು. ಪೃಥ್ವೀರಾಜನಂತೆ ಸ್ವಯಂಧೀರನಲ್ಲದುದರಿಂದ ಶಿರೋಹಿರಾಜನು ಒಡನೆ ಯಾವ ಪ್ರತೀಕಾರವನ್ನೂ ಮಾಡಲಾರದೆ ಸಮಯ ನಿರೀಕ್ಷಣೆಯಲ್ಲಿದ್ದನು. ಪೃಥ್ವೀರಾಜನು ಕಳ್ಳತನದಿಂದ ರಾಜನಗರಿಯನ್ನು ಪ್ರವೇಶಿಸಿದ್ದನಾದರೂ, ರಾಜನಿಗೆ ಸ್ನೇಹಪಾತ್ರನಾಗಿ ಔತಣಾದಿಗಳನ್ನು ಸ್ವೀಕರಿಸುತ್ತ ಕೆಲವು ದಿನಗಳವರೆಗೆ ಅಲ್ಲಿ ಸುಖವಾಗಿದ್ದು, ತರುವಾಯ ತನ್ನ ಕಮಲ್ಮೇರು ಕೋಟೆಗೆ ಹೊರಡಲು ಪ್ರಯಾಣವಾದನು. ಶಿರೋಹಿ ರಾಜಧಾನಿಯು ಅತ್ಯುತ್ತಮವಾದ ಮಿಠಾಯಿ ಪದಾರ್ಥಗಳಿಗೆ ಬಹು ಹೆಸರುವಾಸಿಯಾದುದು. ಆದುದರಿಂದ ಮಾರ್ಗದಲ್ಲಿ ಉಪಾಹಾರವಾಗಿರಲೆಂದು ಶಿರೋಹಿರಾಜನು ತನ್ನ ಭಾವಮೈದುನನಿಗೆ ಕೆಲವು ಪದಾರ್ಥಗಳನ್ನು ಕಟ್ಟಿಸಿಕೊಟ್ಟನು.

ಪೃಥ್ವೀರಾಜನು ತನ್ನ ತಂದೆಯಮೇಲೆ ವಿರೋಧಿಯಾಗಿ ಶಸ್ತ್ರಧಾರಣ ಮಾಡಿದ ಚಿಕ್ಕಪ್ಪನ ಶಿಬಿರವನ್ನು ನಿರ್ಭಯವಾಗಿ ಹೊಕ್ಕು, ನಿಶ್ಶಂಕೆಯಿಂದ ಅಲ್ಲಿ ಕುಳಿತು ಊಟಮಾಡಿ ಬಂದ ಸಾಹಸಿಯಾದುದರಿಂದ, ಮನಸ್ಸಿನಲ್ಲಿ ಲೇಶಮಾತ್ರವೂ ಸಂಶಯಪಟ್ಟುಕೊಳ್ಳದೆ, ತನ್ನ ಭಾವನು ಕಟ್ಟಿಸಿಕೊಟ್ಟ ಭಕ್ಷ್ಯಗಳನ್ನೂ ಮಾರ್ಗದಲ್ಲಿ ಹಾಗೆಯೇ ಭಕ್ಷಿಸಿದನು. ಭಕ್ಷಿಸಿದ ಸ್ವಲ್ಪ ಹೊತ್ತಿಗೆಲ್ಲ ಅವನ ಹೃದಯದ ಬಡಿತವು ವೇಗವಾಯಿತು. ಬಾಯಲ್ಲಿ ಮಾತು ಹೊರಡದಾಯಿತು. ಗಂಟಲೊಣಗಿ ಬಾಯಲ್ಲಿನ ದ್ರವವಾರಿತು. ಕುದುರೆಯ ಮೇಲೆ ಕುಳಿತು ಮುಂದೆ ಹೆಜ್ಜೆ ಇಡಲಾರದಂತಾಗಲು, ತತ್ತರಪಟ್ಟುಕೊಂಡು ಕುದುರೆಯಿಂದಿಳಿದು ಕುಳಿತನು. ಆ ವೇಳೆಗೆ ಅವನು ತನ್ನ ಕಮಲ್ಮೇರು ಕೋಟೆಗೆ ಸ್ವಲ್ಪ ದೂರದಲ್ಲಿದ್ದ ಮಾಮಾದೇವಿಯ ಆಲಯದ ಸಮೀಪಕ್ಕೆ ಬಂದಿದ್ದನು. ಅಲ್ಲಿಂದ ಒಂದು ಹೆಜ್ಜೆಯನ್ನು ಎತ್ತಿಡುವುದಕ್ಕೂ ಅತನಿಗೆ ಸಾಧ್ಯವಾಗಲಿಲ್ಲ. ಕೊನೆಯ ಸಾರಿ, ತನ್ನ ಪ್ರೇಯಸಿಯನ್ನು ಒಂದು ಬಾರಿ ನೋಡಲೆಳಸಿ, ತಾರಾದೇವಿಯನ್ನು ಅಲ್ಲಿಗೆ ಬಾರೆಂದು ಹೇಳಿಕಳು

ಹಿಸಿದನು. ಆದರೆ ಆಕೆಯು ಬರುವುದರೊಳಗಾಗಿಯೇ, ಶಿರೋಹಿ ರಾಜನು ಆ ಭಕ್ಷ್ಯಗಳಲ್ಲಿ ಮಿಶ್ರಣಮಾಡಿಸಿ ತನ್ಮೂಲಕ ಪ್ರಯೋಗಿಸಿದ್ದ ಬಹು ತೀಕ್ಷ್ಣವಾದ ವಿಷದ ವೇಗದಿಂದ ಪೃಥ್ವೀರಾಜನು ಗತಪ್ರಾಣನಾಗಿ ಬಿದ್ದಿದ್ದನು.

ತರುವಾಯ ತಾರಾದೇವಿಯು ಅಲ್ಲಿಗೆ ಬಂದು ಭರ್ತೃ ಕಳೇಬರವನ್ನು ನೋಡಿ ಅನೇಕವಾಗಿ ವಿಲಪಿಸಿದಳು. ಆದರೆ ವೀರಪುತ್ರಿಯೂ, ವೀರ ಪತ್ನಿಯೂ ಆದುದರಿಂದ ಒಡನೆ ಮಾಡಬೇಕಾದ ಕರ್ತವ್ಯವನ್ನು ಯೋಚಿಸಿ ನಿರ್ಧರಿಸಿದಳು. ವ್ಯಸನವನ್ನು ಹಿಂದಕ್ಕಿಟ್ಟಳು. ವೀರಪತಿವ್ರತಾ ಸ್ತ್ರೀಯರ ಮಾರ್ಗದಲ್ಲಿ ನಡೆದು ಪತಿಲೋಕವನ್ನು ಸೇರಲು ನಿಶ್ಚಯಿಸಿದಳು. ಸ್ವಯಂ ವರ ಮಂಟಪಕ್ಕೆ ಸಾಗುವ ರಾಜಪುತ್ರಿಯಂತೆ ಧೀರಗಂಭೀರ ಮುಖ ಭಾವವು ವಿರಾಜಿಸುತ್ತಿರಲು, ತನ್ನ ಪತಿದೇಹದೊಂದಿಗೆ ಗಾಢಾಗ್ನಿಯನ್ನು ಪ್ರವೇಶಿಸಿ ಪರಮ ಪದವಿಗೆ ಸಂದಳು. ಇಂದಿಗೆ ಆ ದಂಪತಿಗಳು ಮೃತರಾಗಿ ಹೆಚ್ಚುಕಡಮೆ ನಾನೂರು ಸಂವತ್ಸರಗಳಾಗುತ್ತ ಬಂದರೂ, ಈಗಲೂ, ಆ ಮಾಮಾದೇವಿಯ ಆಲಯದ ಬಳಿ ಆ ದಂಪತಿಗಳು ತಮ್ಮ ದೇಹಗಳನ್ನು ಅಗ್ನಿಗೆ ಆಹುತಿಯನ್ನಾಗಿಸಿದ ಸ್ಥಳವು ದೃಷ್ಟಿಗೋಚರವಾಗುತ್ತಿರುವುದಂತೆ! ಪೃಥ್ವೀರಾಜನು ತಾನು ಮಾಡಿದ ಯುದ್ಧಗಳೆಲ್ಲದರಲ್ಲೂ ಕಪಟೋಪಾಯ ದಿಂದಲೇ ಜಯಸಂಪಾದನೆ ಮಾಡಿದನಾದರೂ, ಒಟ್ಟಿನಲ್ಲಿ ಆತನು ಅಧಿಕ ಸಾಹಸಿಯೆಂದೂ, ರಣದಲ್ಲಿ ಬೆದರಿ ಹಿಂದೋಡುವವನಲ್ಲವೆಂದೂ ಹೇಳ ಬಹುದು.

ಅಣ್ಣನನ್ನಾದರೂ ಕೊಂದು ತಾನು ಚಿತ್ತೂರು ಸಿಂಹಾಸನವನ್ನು ಏರಬೇಕೆಂದು ಯೋಚಿಸಿದ ಲೋಪವೊಂದು ಈತನಲ್ಲಿ ಕಂಡು ಬರುತ್ತಿದೆ. ಈತನಲ್ಲದೆ, ರಜಪೂತರಲ್ಲಿ ಬಹು ಪ್ರಸಿದ್ಧಿಗೇರಿದ ಪೃಥ್ವೀರಾಜನೆಂಬಾತನು ಮತ್ತೊಬ್ಬನುಂಟು. ಆತನು ಚೋಹಣ ವಂಶಸ್ಥನು. ಡಿಲ್ಲೀ ನಗರದಲ್ಲಿ ಚಕ್ರವರ್ತಿಯಾಗಿ ಆಳಿದ ಶೂರಶಿಖಾಮಣಿ. ಆತನೇ ಮಹಮ್ಮದ್ ಘೋರಿ ಯೆಂಬ ಮ್ಲೇಂಛ ರಾಜನನ್ನು ಹೊಡೆದಟ್ಟಿ ಭಾರತದೇಶಕ್ಕೆ ಕೀರ್ತಿಯನ್ನು ಗಳಿಸಿಕೊಟ್ಟ ಅಪ್ರತಿಮವೀರನು. ಕನ್ಯಾಕುಬ್ಜದ ಅರಸನಾದ ದೇಶ ದ್ರೋಹಿ ಜಯಚಂದ್ರನ ಬೆಂಬಲದಿಂದ ಪುನಃ ದಂಡೆತ್ತಿಬಂದ ಮಹಮ್ಮದ್

ಘೋರಿಯೊಂದಿಗೆ ಮತ್ತೊಂದುವೇಳೆ ನಡೆದ ಯುದ್ಧದಲ್ಲಿ ಆತನು ಪ್ರಾಣ ಗಳನ್ನು ನೀಗಿ ತನ್ನ ಕೀರ್ತಿಯನ್ನು ಶಾಶ್ವತಗೊಳಿಸಿಕೊಂಡನು. ವೀರ ಪತಿ ವ್ರತೆಯಾದ ಸಂಯುಕ್ತಾದೇವಿಯು ಭರ್ತನಾದ ಈ ಪೃಥ್ವೀರಾಜನ ಚರಿ ತ್ರೆಯೂ, ಮುಂದೆ ಕ್ರಮವಾಗಿ ಪ್ರಕಟವಾಗುವುದು.

# ರಾ ಣಾ ಸಂ ಗ

ಹದಿನಾರನೆಯ ಶತಾಬ್ದ ಪ್ರಾರಂಭ. ಮಾರವಾರು ಸಂಸ್ಥಾನದ ಮೂಲೆಯ ಒಂದು ಗ್ರಾಮದಲ್ಲಿ ಒಂದು ಬಡ ರಜಪೂತ ಕುಟುಂಬವು ವಾಸವಾಗಿದ್ದಿತು. ಒಂದು ಮೇಕೆಗಳ ಮಂದೆ, ನಾಲ್ಕಾರು ದನಕರುಗಳು, ಉಟ್ಟು ಹೊದೆಯುವ ಕೆಲವು ಬಟ್ಟೆ ಬರೆಗಳು, ಬೇಯಿಸಿಕೊಂಡು ತಿನ್ನಲೆ ರಡು ಪಾತ್ರೆಗಳು ಇಷ್ಟಲ್ಲದೆ ಅವರಬಳಿ ಮತ್ತಾವ ಸೊತ್ತೂ ಇರಲಿಲ್ಲ. ಪ್ರಪಂಚದಲ್ಲಿ ಎಂತಹ ದರಿದ್ರರಿದ್ದರೂ, ಹುಡುಕಿಕೊಂಡು ಹೋದರೆ, ಅವರಿಗಿಂತಲೂ ಕಡು ದರಿದ್ರರಾದ ಮತ್ತೆ ಕೆಲವರೂ ಕಣ್ಣಿಗೆ ಬೀಳುವರು. ಆ ಬಡ ಕುಟುಂಬದ ಯಜಮಾನನು ಒಂದು ದಿನ ಹೊಲದಿಂದ ಮೇಕೆ ಗಳನ್ನು ಹೊಡೆದುಕೊಂಡು ಮನೆಯಕಡೆ ನಡೆದು ಬರುತ್ತಿರುವಾಗ, ಮಾರ್ಗದಲ್ಲಿ, ಹರುಕು ಬಟ್ಟೆಗಳನ್ನು ಕಟ್ಟಿಕೊಂಡು ಹೊಟ್ಟೆಗನ್ನವಿಲ್ಲದೆ ಸಂಕಟಪಡುತ್ತಿದ್ದ ಸುದಾಮದರಿದ್ರನಾದ ಮತ್ತೊಬ್ಬ ಮನುಷ್ಯನು ಬಿದ್ದಿ ದ್ದುದು ಕಾಣಿಸಿತು. ತಮ್ಮ ದನ ಕುರಿ ಮೇಕೆಗಳನ್ನು ಕಾಯುವುದಕ್ಕೆ ಯಾವನಾದರೊಬ್ಬ ಆಳನ್ನು ಇಟ್ಟುಕೊಳ್ಳಬೇಕೆಂದು ಅವನು ಆವರೆಗೇ ಹುಡುಕುತ್ತಿದ್ದನಾದುದರಿಂದ ಆ ಹೊಸ ಮನುಷ್ಯನನ್ನು ಜೊತೆಗೆ ಕರೆದು ಕೊಂಡು ಬಂದು, ಹೊಟ್ಟೆಗಷ್ಟು ಅನ್ನವಿಟ್ಟು, ತಮ್ಮಲ್ಲಿದ್ದುದರಲ್ಲೇ ಒಂದು ವಸ್ತ್ರವಿತ್ತು ಆ ಕೆಲಸ ಮಾಡಿಕೊಂಡಿರುವಂತೆ ನಿಯಮಿಸಿದನು. ಆದರೆ ಆತನ ಹೆಂಡತಿಗೆ ಆ ಸೇವಕನನ್ನು ಇಟ್ಟುಕೊಳ್ಳಲು ಅಷ್ಟುಮಟ್ಟಿಗೆ ಸಮ್ಮತಿ ಇರಲಿಲ್ಲ.—'ಬ್ರಾಹ್ಮಣರಿಗೂ ಕಣ್ಣು ಕೈ ಕಾಲುಗಳಿಲ್ಲದ ಅಂಗಹೀನ

ಭಿಕ್ಷುಕರಿಗೂ ಅನ್ನವಿಟ್ಟು ಕಾಪಾಡುವುದು ಪುಣ್ಯಸಾಧಕವಾದ ಕಾರ್ಯ ವಲ್ಲದೆ, ಇಂತಹ ದೃಢಾಂಗರಿಗೆ ದಾನ ಮಾಡಿದರೆ ಪ್ರಯೋಜನವೇನು ? ದೇಶದಲ್ಲಿ ದುರ್ಮಾರ್ಗಿಗಳಾದ ಹಲವರು ಕೆಲಸಕಾರ್ಯಗಳಿಲ್ಲದೆ ಸೋಮಾ ರಿಗಳಾಗಿ ತಿರುಗುತ್ತಿರುವರು. ಇವನ ಗುಣ ನಡತೆಗಳು ಎಂಥವೋ ನಮ ಗೇನು ತಿಳಿಯುವುವು ? ಅಷ್ಟು ಮಾತ್ರವಲ್ಲದೆ ಪಶುಪಾಲನೆ ಎಂಬುದೇನು ಯಾರೆಂದರವರು ಮಾಡುವಂತಹ ಸರ್ವಸಾಮಾನ್ಯ ಕೆಲಸವೇ ? ಚಿಕ್ಕಂದಿ ನಿಂದಲೂ ಅಭ್ಯಾಸವಿದ್ದವರಿಗಲ್ಲದೆ, ಪಶುಗಳು ಹೊಸಬರನ್ನು ಪಕಾಪಕಿ ಬಳಿಸೇರಲು ಬಿಡುವುವೇ ? ಈ ಮನುಷ್ಯನಿಂದ ನಮ್ಮ ಈ ಕಾರ್ಯವು ಆಗು ವಂತೆ ತೋರದು' ಎಂದು ಹೇಳಿದಳು.

ಹೆಂಡತಿ ಹೇಳಿದ ಈ ಮಾತನ್ನು ಯಜಮಾನನು ಪ್ರಾರಂಭಕ್ಕೆ ಲಕ್ಷ್ಯ ಮಾಡದಿದ್ದನಾದರೂ ಕೆಲವು ದಿನಗಳೊಳಗಾಗಿ ಅವು ನಿಶ್ಚಯವೆನ್ನಿಸಿ ದವು. ಏಕೆಂದರೆ, ದುಷ್ಟನಾಗಿ ಏನೂ ತಿಳಿಯದ ಆ ಗ್ರಾಮ ಬಾಲಕರು ಕೈಯಲ್ಲಿ ಕೋಲನ್ನು ಹಿಡಿದು ಹಿಂದೆ ಹೊರಟ ಮಾತ್ರದಲ್ಲೇ ವಿಧೇಯತೆ ಯಿಂದ ಅಣಗಿ ಮಾರ್ಗದಲ್ಲಿ ನಡೆವ ಪಶುಗಳು, ಈ ಹೊಸಬನನ್ನು ಲಕ್ಷ್ಯವೇ ನೇ ಮಾಡದೆ ಸಿಕ್ಕಲ್ಲಿ ತಿರುಗ ತೊಡಗಿದುವು. ಯಜಮಾನನು ಆ ಮನು ಷ್ಯನ ಬುದ್ಧಿ ಕುಶಲತೆಯನ್ನು ನೋಡಿ-'ದನಗಾಯುವ ಈ ಕೆಲಸವು ಇವ ನಿಂದ ಸಾಗದು; ಮನೆಯ ಕೆಲಸಗಳನ್ನಾದರೂ ಮಾಡಿಕೊಂಡಿದ್ದು ಹೊಟ್ಟೆ ಹೊರೆದುಕೊಳ್ಳಲಿ' ಎಂದುಕೊಂಡು ಆ ಕೆಲಸಕ್ಕೆ ನಿಯಮಿಸಿದನು. ಆದರೆ ಆ ನಿರ್ಭಾಗ್ಯನಿಗೆ ಆ ಕೆಲಸವೂ ತಿಳಿಯದೆ, ಅದರಲ್ಲೂ ಅವನು ಶುದ್ಧ ಅಪ್ರ ಯೋಜಕನೆಂಬುದು ಸ್ಪಷ್ಟವಾಯಿತು. ಒಂದಾನೊಂದು ದಿನ ಯಜಮಾ ನಿಯು ರೊಟ್ಟಿಗಳನ್ನು ಮಾಡಲು ಒಲೆಯ ಮೇಲಿನ ಕಾವಲಿಯಲ್ಲಿ ಹಾಕಿ ದ್ದು, ತಾನು ಅವಸರದ ಯಾವುದೋ ಒಂದು ಕೆಲಸಕ್ಕಾಗಿ ಮನೆಯೊಳಕ್ಕೆ ಹೋಗಬೇಕಾಗಿದ್ದುದರಿಂದ ಅವು ಸೀದುಹೋಗದಂತೆ ನೋಡಿಕೊಂಡಿ ರೆಂದು ಆ ಸೇವಕನಿಗೆ ಹೇಳಿ ಒಳಕ್ಕೆ ಹೋಗಿದ್ದಳು. ಸೇವಕನು 'ಸರಿ ಹಾಗೇ ಆಗಲಿ' ಎಂದು ನುಡಿದನು. ಆದರೆ ಆಕೆಯು ಕಣ್ಣುಮರೆಯಾದೊಡನೆಯೇ, ತನ್ನ ಸ್ಥಿತಿಗತಿಗಳನ್ನು ಕುರಿತ ಚಿಂತಾತರಂಗಗಳು ಮನಸ್ಸಮುದ್ರದಲ್ಲಿ ಏಳ ತೊಡಗಲು ಒಲೆಯ ಮೇಲಿದ್ದ ರೊಟ್ಟಿಯ ವಿಚಾರವನ್ನು ಸಂಪೂರ್ಣವಾಗಿ

ಮರೆತು ಪರಧ್ಯಾನ ರತನಾಗಿದ್ದುಬಿಟ್ಟನು. ಇತ್ತ ಕಾವಲಿಯಲ್ಲಿದ್ದ ರೊಟ್ಟಿಗಳು ಸೀದು ಇದ್ದಲಾಗಿ ಹೋದುವು. ಯಜಮಾನಿಯು ಬಂದು ನೋಡಿ- ಸೀದುಹೋದ ಆ ರೊಟ್ಟಿಗಳನ್ನು ಕಂಡು, ಕೂಳುದಂಡದ ಆ ಸೋಮಾರಿ ಸೇವಕನ ಬುದ್ಧಿಹೀನತೆಯಿಂದ ಆದಿನ ಎಲ್ಲರೂ ಅರೆ ಹೊಟ್ಟೆಯೇ ತಿಂದು ಇರಬೇಕಾಯಿತೆಂದು ಕೂಗಾಡಿದಳು. ಆಕೆ ಮಾತ್ರವಲ್ಲ-ಯಜಮಾನನೂ ಕೋಪಗೊಂಡು-'ನಿಮ್ಮಗೆ ರೊಟ್ಟಿಗಳು ಬೆಂದು ಸಿದ್ಧವಾಗಿದ್ದಾಗ ಹೊಟ್ಟೆ ಬಿರಿಯುವಂತೆ ಕವಳಿಸುವುದಕ್ಕೆ ಮಾತ್ರ ನೀನು ಬಾಯಿ ತೆರೆಯಬಲ್ಲೆಯಲ್ಲದೆ, ಅವು ಸೀದುಹೋಗುತ್ತಿವೆಯೋ ಎಂದು ನೋಡಲು ಕಣ್ಣು ತೆರೆಯಲಾರೆಯಲ್ಲವೆ! ಛೀ ನಿರ್ಭಾಗ್ಯನೇ! ಸೋಮಾರಿಯೇ! ನೀನು ನಮ್ಮಲ್ಲಿದ್ದು ಕೆಲಸಮಾಡುವುದು ಸಾಕು! ಇನ್ನು ನಿನಗೆ ಇಷ್ಟಬಂದೆಡೆಗೆ ಹೊರಟು ಹೋಗು' ಎಂದು ಹೇಳಿಬಿಟ್ಟನು.

ದನಗಾವ ಸೇವಕನಾಗಿ ಆ ಮನೆಗೆ ಬಂದು ಸೇರಿದ್ದ ಆ ಮಂದಭಾಗ್ಯನು ಯಜಮಾನನ ಬಾಯಿಂದ ಬಂದ ಆ ಮಾತುಗಳನ್ನು ಕೇಳಿ ಮುಂದೆ ಉಪಾಯತೋರದೆ — ಮನೆಯಿಂದ ಹೊರಟು ಹೊರಕ್ಕೆ ನಡೆದನು. ಪಶುಪಾಲನೆಯೂ ರೊಟ್ಟಿ ಸುಡುವಿಕೆಯೂ ಬಾರದಿದ್ದರೂ, ಅವನು ಶುದ್ಧ ಅಪ್ರಯೋಜಕನೂ ಬುದ್ಧಿಹೀನನೂ ಅಲ್ಲ. ಅವನ ಶರೀರಾಕೃತಿಯು ಭವ್ಯವಾದುದು, ಬಲವಾದುದು, ಕಷ್ಟಸಹಿಷ್ಣುವಾದುದು. ಮುಖದಲ್ಲಿ ಅಪೂರ್ವ ತೇಜೋರಾಶಿಯು ಇದ್ದಂತೆ ತೋರುತ್ತಿದ್ದಿತಾದರೂ, ವಿಧಿಹತನಾದುದರಿಂದ ಅದರ ಪ್ರಕಾಶವು ಹೊರಕ್ಕೆ ಕಂಡುಬಾರದೆ ಲುಪ್ತವಾಗಿದ್ದಿತು. ರಾಜಪುತ್ರಸ್ಥಾನದಲ್ಲಿ ಹುಟ್ಟಿದ ಯಾವನಾದರೂ ಆಯುಧ ವಿಹೀನನಾಗಿರನು. ಆದರೆ ಅದಾವ ದುಷ್ಕರ್ಮಫಲವೋ ಈ ಮನುಷ್ಯನು ತನ್ನ ಸಮಸ್ತವನ್ನೂ- ಪಂಚಪ್ರಾಣ ಸದೃಶವಾದ ಆಯುಧಗಳನ್ನೂ ವಿಧಿ ದೇವತೆಗೆ ಕೊಳ್ಳೆಗೊಟ್ಟು ನಿರ್ಭಾಗ್ಯನಾಗಿದ್ದನು. ಆತನ ದೇಹಕಾಂತಿಯನ್ನೂ ಆಜಾನು ಬಾಹುಗಳನ್ನೂ ಭವ್ಯಾಕೃತಿಯನ್ನೂ ನೋಡಿದವರು ಅವನು ಪಶುಪಾಲನೆಗಾಗಿ ಹುಟ್ಟಿದವನಲ್ಲವೆಂದು ನಿಸ್ಸಂದೇಹವಾಗಿ ಹೇಳುವಂತಿದ್ದಿತು.

ರಾಯಮಲ್ಲನ ಕುಮಾರನಾದ ಸಂಗನು, ಅಂದು ಮಠದಸಮೀಪದಲ್ಲಿ, ಬೀರೊಬ್ಬ ರಜಪೂತನ ಸಹಾಯದಿಂದ ಹೇಗೋ ಪ್ರಾಣಗಳನ್ನು ದಕ್ಕಿಸಿ

ಕೊಂಡು ಪಲಾಯನಮಾಡಿ, ಮಹಾರಾಜನ ಮಗನಿಗಾಗಿ ಯಾರೂ ಪಶುಪಾಲಕರಲ್ಲಿ ಬಂದು ಹುಡುಕರು ಎಂದು ತಿಳಿದು ಮೇಲೆ ಹೇಳಿದಂತೆ ಗೊಲ್ಲನ ಮನೆಯಲ್ಲಿ ಬಂದು ಕೆಲಕಾಲ ತಲೆ ಮರಸಿಕೊಂಡು ಕಾಲಕ್ಷೇಪಮಾಡಿಕೊಂಡಿದ್ದನು. ತಾನು ಆಪದ್ಬಾಂಧವರೆಂದು ನಂಬಿಕೊಂಡಿದ್ದ ಆ ಗೊಲ್ಲ ದಂಪತಿಗಳೇ ತನ್ನನ್ನು ಮನೆಯಿಂದ ಹೊರಡಿಸಿದ ತರುವಾಯ ಇನ್ನು ತಿನ್ನಲು ಹಿಡಿ ಕೂಳಿಲ್ಲದೆ, ಮಲಗಲು ಅಂಗೈಯಗಲ ನೆರಳಿಲ್ಲದೆ, ಹಿಡಿವುದಕ್ಕೆ ಆಯುಧವಿಲ್ಲದೆ, ಕಷ್ಟ ಸುಖಗಳನ್ನು ಹೇಳಿಕೊಳ್ಳಲು ಒಬ್ಬ ಮಿತ್ರನಿಲ್ಲದೆ ಆ ನಿರ್ಭಾಗ್ಯನು ಮತ್ತೆಲ್ಲಿ ಹೋಗಲೆಂದು ವಿಚಾರಪಡತೊಡಗಿದನು. ಹೀಗೆ ವಿಚಾರಮಗ್ನನಾಗಿ, ಏನೂ ತೋರದೆ ಅವನು ಅಡವಿಪಾಲಾಗಿ ತಿರುಗುತ್ತಿರಲಾಗಿ ಒಂದು ದಿನ ಕೆಲಮಂದಿ ಕುದುರೆ ಸವಾರರು ಅವನನ್ನು ಕಂಡು ಒಡನೆ ತಮ್ಮ ಕುದುರೆಗಳಿಂದ ಇಳಿದು ಅವನ ಪಾದಕ್ಕೆ ಬಿದ್ದು ನಮಸ್ಕಾರ ಮಾಡಿದರು. ಹಲವು ದಿನಗಳಿಂದ ಯೋಗ್ಯ ಪೋಷಣೆಯಿಲ್ಲದೆ ದೇಹವು ಸ್ವಲ್ಪ ಮಲಿನವಾಗಿದ್ದಿತಾದರೂ, ಆ ವಿಶಾಲ ನೇತ್ರಗಳನ್ನೂ ಆಜಾನುಬಾಹುಗಳನ್ನೂ ದಿವ್ಯ ಸುಂದರ ವಿಗ್ರಹವನ್ನೂ ಕಂಡವರು ಆತನನ್ನು ಗೌರವಿಸದೆ ಇರಲಾರರು. ಆ ಸವಾರರು ಹೀಗೆ ಆತನನ್ನು ಗೌರವಿಸಿ-'ಪ್ರಭೋ ನೀವು ಪ್ರಾಣದೊಂದಿಗಿರುವ ವರ್ತಮಾನವು ಪೃಥ್ವೀ ರಾಜನಿಗೆ ತಿಳಿದರೆ ನಿಶ್ಚಯವಾಗಿಯೂ ನಿಮಗೆ ಪ್ರಾಣಾಪಾಯವುಂಟಾಗುವುದು. ಆದುದರಿಂದ ನೀವು ಈಗ ನಾವು ಸೇವಿಸುತ್ತಿರುವ ನಮ್ಮ ಧೊರೆಯಾದ ಶ್ರೀ ನಗರರಾಜನಾದ ಕರಮಚಂದನಲ್ಲಿ ಬಂದು ಆತನಲ್ಲಿ ಊಳಿಗಕ್ಕೆ ನಿಲ್ಲುವುದಾದರೆ ನಿಮಗೆ ಬೇಕಾಗುವ ಅಶ್ವ ಆಯುಧಾದಿಗಳು ಆತನಿಂದ ದೊರೆಯುವುವು' ಎಂದು ನುಡಿದರು. ಅದನ್ನು ಕೇಳಿದ ಸಂಗನು, ತನ್ನ ಸ್ಥಿತಿಯು ಕುದುರಲು ಇದಕ್ಕಿಂತಲೂ ಉತ್ತಮ ಸಂದರ್ಭವು ಇನ್ನು ದೊರಕಲಾರದೆಂದು ತಿಳಿದು, ಅವರೊಂದಿಗೆ ನಡೆದು ಆ ರಾಜಸೇವೆಯಲ್ಲಿ ನಿಂತು, ಕಾಲಯಾಪನೆ ಮಾಡುತ್ತಿದ್ದನು.

ಒಂದಾನೊಂದು ದಿನ ಆ ಕರಮಚಂದ ರಾಜನು ಪರಿವಾರದೊಂದಿಗೆ ಪ್ರಯಾಣಮಾಡುತ್ತಾ ಮಟ್ಟ ಮಧ್ಯಾಹ್ನದ ಬಿಸಿಲಿನಲ್ಲಿ ಅಲಸಿ ಅತ್ಯಂತಾಯಾಸದಿಂದ ಒಂದು ಆಲದ ಮರದ ಕೆಳಗೆ ಮಲಗಿಕೊಂಡನು. ಸಂಗನಿಗೆ

ಅಡಿಗೆಯಲ್ಲಿ ಅನುಭವವಿಲ್ಲದುದರಿಂದ ಎಲ್ಲರೂ ಅಟ್ಟು ಉಂಡುಕೊಂಡಿರಲು, ಆತನು ಕತ್ತಿಯನ್ನು ತಲೆಯ ಕೆಳಗಿಟ್ಟುಕೊಂಡು ನೆರಳಲ್ಲಿ ಮಲಗಿ ಹಾಯವಾಗಿ ನಿದ್ರಿಸುತ್ತಿದ್ದನು. ಆ ಆಲದ ಮರದ ಪೊಟ್ಟರೆಯಿಂದೊಂದು ಮಹಾ ಸರ್ಪವು ಹೊರಕ್ಕೆ ಬಂದು ಹೆಡೆಯೆತ್ತಿ ಅವನ ತಲೆಯನ್ನು ಸೋಕದೆ ಅದರ ಮೇಲೆ ಕೊಡೆಹಿಡಿದಂತೆ ಆಡುತ್ತಿದ್ದಿತು. ಆ ಹೆಡೆಗೆ ಸರಿಯಾಗಿ ಮೇಲೆ ಚಿತ್ರವರ್ಣ ರಂಜಿತ ಪಕ್ಷಿಯೊಂದು ಅವ್ಯಕ್ತ ಮಧುರವಾದ ಧ್ವನಿಯಿಂದ ಹಾಡುತ್ತಿದ್ದಿತು. ಆ ಸಮಯದಲ್ಲಿ ಆ ಮಾರ್ಗವಾಗಿ ಹೋಗುತ್ತಿದ್ದ ಒಬ್ಬ ಗೊಲ್ಲನು ಇದೇನು ಅದ್ಭುತವೆಂದು ರೆಪ್ಪೆಯಿಕ್ಕದೆ ಆ ದೃಶ್ಯವನ್ನು ನೋಡುತ್ತಾ ನಿಂತುಕೊಂಡನು. ಮಿಕ್ಕ ರಾಜಪುತ್ರರೆಲ್ಲರೂ ಸಮೀಪಕ್ಕೆ ಬಂದೊಡನೆಯೇ ಸಂಗನು ಎಚ್ಚೆತ್ತು ಕಣ್ಣುಬಿಟ್ಟನು. ಒಡನೆ ಆ ಗೊಲ್ಲನು ಭಯ ಸಂಭ್ರಮಗಳಿಂದ ಕೂಡಿ, ಸಂಗನಿಗೆ ಸಾಷ್ಟಾಂಗ ನಮಸ್ಕಾರಮಾಡಿ 'ಭಲಾ ಭಲಾ, ಈ ಮಹಾನುಭಾವನು ದೊಡ್ಡ ರಾಜನಾಗುವನು. ಅಸಮಾನನೆನ್ನಿಸಿ ಪ್ರಭುತ್ವಮಾಡುವನು' ಎಂದು ನುಡಿದನು.

ಆ ಮಾತನ್ನು ಕೇಳಿದ ಸಂಗನು ತನ್ನ ರಹಸ್ಯವನ್ನು ಹೊರಗೆಡಹಲಿಷ್ಟವಿಲ್ಲದೆ, ತಾನು ಕಡು ಬಡವನಲ್ಲದೆ ತನಗೆ ರಾಜನಾಗುವಂತಹ ಯೋಗವಿಲ್ಲವೆಂದು ಸಾಧಿಸಿದನು. ಆದರೆ ಆ ಗೊಲ್ಲನು ಸಂಗನ ಆ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದೆ, ತನಗೆ ಪಕ್ಷಿಭಾಷೆಯೂ ಸರ್ಪಭಾಷೆಯೂ ತಿಳಿಯುವುವೆಂದೂ, ಆತನು ನಿದ್ರಿಸುತ್ತಿದ್ದಾಗ್ಗೆ ಆತನಿಗೆ ಮಹಾರಾಜ ಪಟ್ಟವೊದಗುವುದೆಂದು ಅವು ಹೇಳಿಕೊಳ್ಳುತ್ತಿದ್ದುವೆಂದೂ ದೃಢವಾಗಿ ಹೇಳಿದನು. ಆಗಲೂ ಸಂಗನು ಅದೆಲ್ಲವೂ ಕೆಲಸಕ್ಕೆ ಬಾರದ ಹಾಳು ಹರಟೆಯೆಂದು ಜರಿಯದಿರಲಿಲ್ಲ. ಆದರೆ ಶ್ರೀನಗರದ ರಾಜನು ತನಗೆ ಭಂಟನಾಗಿ ಕೆಲಸ ಮಾಡುತ್ತಿದ್ದ ಅವನು ಸೇವಕನ ವೃತ್ತಿಗೆ ತಕ್ಕವನಲ್ಲವೆಂದೂ-ಯಾವನೋ ಪ್ರಚ್ಛನ್ನ ವೇಷಧಾರಿಯೆಂದೂ ಆವರಗೇ ಊಹಿಸಿದ್ದನು. ಮತ್ತು ತನ್ನ ಜನನಾದಿ ವೃತ್ತಾಂತಗಳನ್ನು ತಿಳಿಸೆಂದು ಬಹು ಪಟ್ಟಿಗೆ ನಿರ್ಬಂಧಿಸಿದನು. ಅಲ್ಲದೆ ಅವನು ಹಾಗೆ ತನ್ನ ಪರಿಚಯವನ್ನು ತಿಳಿಸುವುದಾದರೆ ತನ್ನ ಮಗಳನ್ನು ಕೊಟ್ಟು ಲಗ್ನಮಾಡುವುದಲ್ಲದೆ, ರಾಜ್ಯವು ಬರಬಹುದಾಗಿದ್ದರೆ ಅದಕ್ಕೂ ಸಹಾಯಮಾಡುವೆನೆಂದೂ ವಾಗ್ದಾನ ಮಾಡಿದನು.

ಆ ವೇಳೆಗೆ ಸಂಗನ ತಮ್ಮನಾದ ಜಯಮಲ್ಲನು ಬಹು ಹೇಯ ರೀತಿಯಿಂದ ವಧಿಸಲ್ಪಟ್ಟ ಸಂಗತಿಯೂ, ಪೃಥ್ವೀರಾಜನು ಮಹೋನ್ನತ ದೆಸೆಯಲ್ಲಿದ್ದ ಸಂಗತಿಯೂ ಆತನಿಗೆ ತಿಳಿಯಿತು. ಸಂಗನು ಪ್ರಾರಂಭದಿಂದಲೂ ದುರದೃಷ್ಟವಂತನಾಗಿದ್ದರೂ, ಇಂದು ಅವನ ಪ್ರಭೆಯನ್ನು ಆಚ್ಛಾದಿಸಿಕೊಂಡಿದ್ದ ಕಾರ್ಮೋಡಗಳ ಸಮೂಹವು ಚದುರಿಹೋಗಿ, ರಾಜಲೋಕದಲ್ಲಿ ತೇಜಸ್ವಿಯಾಗಿ ಪ್ರಕಾಶಿಸಲು ಅವಕಾಶವೊದಗಿತು. ಶ್ರೀನಗರರಾಜನು ಅವನನ್ನು ಈ ದುರ್ದೆಶೆಯ ಕೂಪದಿಂದ ಮೇಲಕ್ಕೆತ್ತಿ, ಆದರಿಸಿ ತನ್ನ ಮಗಳನ್ನಿತ್ತು ಮದುವೆಮಾಡಿ, ಬೆಂಬಲವಾಗಿ ನಿಂತನು. ಇತ್ತ ಹೀಗೆ ನಡೆದಿರಲು ಅತ್ತ ಪೃಥ್ವೀರಾಜನು ಈ ವಾರ್ತೆಯನ್ನು ಕೇಳಿ, ತರುಬಿಕೊಂಡು ಹೊರಟು ಅವನನ್ನು ತೀರಿಸಿಬಿಡಬೇಕೆಂದು ಪ್ರಯತ್ನಿಸಿದ್ದನು. ಆದರೆ ಅಷ್ಟರಲ್ಲಿ ಸಂಗನ ಪುಣ್ಯವು ನೆಟ್ಟಗಿದ್ದು ಪೃಥ್ವೀರಾಜನಿಗೆ ಬೇರೊಂದು ಕಾರ್ಯವೊದಗಿತು. ಅವನು ಅವನ ತಂಗಿಯ ಯೋಗಕ್ಷೇಮವನ್ನು ವಿಚಾರಿಸಲು ಹೋಗಿ ಕಮಲ್ಮೀರು ದುರ್ಗದ ಬಳಿ ಬಂದು ಅಲ್ಲೇ ದಾರುಣ ಮರಣಕ್ಕೆ ಈಡಾದನೆಂದು ಹಿಂದಿನ ಅಧ್ಯಾಯದ ಅಂತ್ಯಭಾಗದಲ್ಲಿ ಹೇಳಲಾಯಿತಲ್ಲವೆ! ಆ ಕಾರಣದಿಂದ ಸಂಗನು ನಿಶ್ಚಿಂತೆಯಿಂದ ಜೀವಿಸಲು ಅವಕಾಶವೊದಗಿತು. ಪೃಥ್ವೀರಾಜನು ಮರಣವಾದ ಕೆಲವು ದಿನಗಳಿಗೇ, ಅವನ ತಂದೆ ರಾಣಾ ರಾಯಮಲ್ಲನು, ಮಹಾ ದುಃಖಭಾರದಿಂದಲೂ ಜರಾಭಾರದಿಂದಲೂ ಜರ್ಝರೀಭೂತವಾಗಿದ್ದ ದೇಹವನ್ನು ಬಿಟ್ಟು ಪರಲೋಕಕ್ಕೇರಿದನು. ರಾಯಮಲ್ಲನು ಮೇವಾರು ದೇಶಕ್ಕೆ ಯಾವ ಮಹತ್ವದ ಅಭಿವೃದ್ಧಿ ಸ್ಥಿತಿಯನ್ನೂ ಉಂಟುಮಾಡಲಿಲ್ಲವಾದರೂ, ಮೊದಲಿದ್ದ ಸ್ಥಿತಿಗೆ ಲೋಪವನ್ನುಂಟುಮಾಡದೆ ಕಾಪಾಡಿದನು. ರಾಣಾನು ಕೃಪಾಳುವೂ ಗೌರವನೀಯನೂ ರಜಪೂತರಿಗೆ ಅಸ್ವಾಭಾವಿಕವಾದ ಶಾಂತರಸಪೂರಿತನೂ ಆಗಿದ್ದನಾದರೂ, ತನ್ನ ಮಕ್ಕಳನ್ನು ಸ್ವಾಧೀನದಲ್ಲಿಟ್ಟುಕೊಳ್ಳಲಾರದೆ ಕಲಹಮಾಡಿಕೊಳ್ಳಲೆಡೆಯಿತ್ತು ದುಃಖಭಾಜನನಾದನು.

ಪಿತೃಮರಣವಾರ್ತೆಯು ಸಂಗನಿಗೆ ತಿಳಿಯಿತು. ಸಜ್ಜನನೂ ಪುತ್ರವತ್ಸಲನೂ ಆದ ಆತನ ಮರಣಕ್ಕಾಗಿ ಸಂಗನು ಬಹು ವ್ಯಸನಪಟ್ಟನು. ತರುವಾಯ ಮಾವನಿಂದ ಕಳುಹಿಸಿಕೊಂಡು ಚಿತ್ತೂರನ್ನು ಪ್ರವೇಶಿಸಿ, ಚಾರು

ಣೀದೇವಿಯ ಆರ್ಶೀರ್ವಾದಗಳೂ, ಮತ್ತು ಗೊಲ್ಲನೂ ಹೇಳಿದ ಮಾತುಗಳನ್ನು ಸಾರ್ಥಕಗೊಳಿಸುವಂತೆ ಸಂಗ್ರಾಮಸಿಂಹನೆಂಬ ನಾಮಧೇಯದಿಂದ ಕ್ರಿ.ಶ. ೧೫೦೯ರಲ್ಲಿ ಚಿತ್ತೂರು ರಾಜಸಿಂಹಾಸನವನ್ನು ಅಧಿರೋಹಿಸಿದನು. ಮೇವಾರು ಸಿಂಹಾಸನಕ್ಕೆ ಯೋಗ್ಯಪ್ರಭುವು ದೊರೆತನೆಂದು ರಾಜಪುತ್ರಸ್ಥಾನದಲ್ಲಿ ಮಾತ್ರವಲ್ಲ - ದೇಶ ದೇಶದಲ್ಲೂ ಪ್ರಸಿದ್ಧಿಯಾಯಿತು. ಮಾರ್ವಾಡ ಆಂಬರು ಅಜಮೀರು ಬೂಂದಿ ಗ್ವಾಲಿಯರ್ ಕಾಲ್ಪಿ ಮೊದಲಾದ ರಾಜಪುತ್ರ ಸಂಸ್ಥಾನಗಳು ಸಂಗನ ಆಜ್ಞೆಯನ್ನು ಶಿರಸಾವಹಿಸಿ ನಡೆದುಕೊಂಡುವು. ಮಾಳವ ದೇಶದಿಂದ ಅಬೂಪರ್ವತ ಶಿಖರದವರೆಗೂ ಆತನ ಆಜ್ಞೆಯು ಅವ್ಯಾಹತವಾಗಿ ನಡೆಯುತ್ತಿದ್ದಿತು ಸಿಂಹಾಸನವೇರಿದ ಮೇಲೆ ಸಂಗ್ರಾಮನು ತನಗೆ ಕಷ್ಟಬಂದ ಕಾಲದಲ್ಲಿ ಸಹಾಯಮಾಡಿದ ಆ ಗೋಪಾಲಕ ದಂಪತಿಗಳನ್ನೂ, ತನಗೆ ಕನ್ಯೆಯನ್ನಿತ್ತು ಪ್ರೀತಿಯಿಂದ ಕಾಪಾಡಿದ ಶ್ರೀನಗರದ ಕರಮಚಾಂದ ರಾಜನನ್ನೂ, ಅಲಕ್ಷ್ಯಮಾಡದೆ ರಾಜಧಾನಿಗೆ ಕರೆಸಿಕೊಂಡು ಒಪ್ಪು ಬಗೆಯಿಂದ ಮನ್ನಿಸಿದನು. ಗೋಪಾಲಕನಿಗೆ ಶಾಶ್ವತ ಜೀವನೋಪಾಯವನ್ನು ಕಲ್ಪಿಸಿ, ಕರಮಚಾಂದನಿಗೆ ಅಜ್ಮೀರನ್ನು ಜಹಗೀರನ್ನಾಗಿ ಕೊಟ್ಟು ಆತನ ಮಗ ಜಗಮಲ್ಲನಿಗೆ ರಾವ್ ಎಂಬ ಬಿರುದನ್ನೂ ಪ್ರಸಾದಿಸಿದನು. ರಾಜ್ಯಾರೋಹಣ ಮಾಡಿದ ದಿನಮೊದಲುಗೊಂಡು, ಆತನು ಹದಿನೆಂಟು ಯುದ್ಧಗಳಲ್ಲಿ ದಿಲ್ಲಿ ಚಕ್ರವರ್ತಿಯೊಂದಿಗೂ ಮಾಳವ ದೇಶಾಧಿಪತಿಯೊಂದಿಗೂ ಹೋರಾಡಿ ವಿಜಯ ಹೊಂದಿದನು. ಮೇವಾರು ರಾಜ್ಯದ ಸರಹದ್ದು ಎಲ್ಲಾ ದಿಕ್ಕುಗಳಲ್ಲೂ ವಿಸ್ತರಿಸಿತು. ರಾಣಾಸಂಗನು ಏಕಛತ್ರಾಧಿಪತಿಯಾಗಿ, ಮೇವಾರು ದೇಶವನ್ನು ಪಾಲಿಸಿದ ರಾಣಾಗಳೆಲ್ಲರಿಗಿಂತಲೂ ಶ್ರೇಷ್ಠನೆಂದು ವಿಖ್ಯಾತನಾದನು. ಆತನು ಮೇವಾಡಿನ ಸರ್ವಶ್ರೇಷ್ಠ ರಾಣಾ ಯೆಂಬ ಪ್ರತಿಷ್ಠೆಯುಂಟಾದುದಕ್ಕೆ ಒಂದು ದಂತ ಕಥೆಯುಂಟು.

ಒಂದಾನೊಂದುವೇಳೆ ದೇವತೆಗಳಲ್ಲೊಬ್ಬನು ಮನುಷ್ಯಾವತಾರವೆತ್ತಿ, ತನ್ನ ಪೂರ್ವ ಶತ್ರುವಾದ ಒಬ್ಬನ ಮೇಲೆ ಹಗೆ ತೀರಿಸಿಕೊಳ್ಳಬೇಕೆಂದು ಅಲ್ಲಲ್ಲಿ ತಿರುಗುತ್ತಾ ಚಿತ್ತೂರಿಗೂ ಬಂದನಂತೆ! ಮಹಾರಾಣಾ ಸಂಗನು ಆವನನ್ನು ನೋಡಿದ ಕೂಡಲೆ ಅವನು ಮಹಾಪುರುಷನೆಂದು ತಿಳಿದು ಅವನನ್ನು ಆದರಿಸಿ ಗೌರವಿಸಿದನಂತೆ! ಆ ದಿವ್ಯ ಪುರುಷನು ಅವನಿಂದ ಅನು

ಜ್ಞೆ ಪಡೆದು ಹೊರಡುವಾಗ ಬಹು ಪಟುವಾದ ಸಾಮರ್ಥ್ಯವುಳ್ಳ ಒಂದು ರಕ್ಷಾಯಂತ್ರವನ್ನು ಒಂದು ಚೀಲದಲ್ಲಿ ಹಾಕಿ ಸಂಗನ ಕೈಗೆ ಕೊಟ್ಟು, ಇದನ್ನು ನೀನು ಕಂಠದಲ್ಲಿ ಕಟ್ಟಿಕೊಂಡಿರೆಂದು ಹೇಳಿದನು. ಅದು ಕಂಠದಲ್ಲಿ ಇದ್ದಷ್ಟು ದಿನವೂ ಅವನಿಗೆ ಜಯವೇ ಉಂಟಾಗುತ್ತಿರುವುದೆಂದೂ, ಅದು ಎಂದಾದರೂ ಪ್ರಮಾದದಿಂದಲಾಗಲೀ, ದೈವವಶದಿಂದಲಾಗಲೀ ಬೆನ್ನ ಮೇಲಕ್ಕೆ ತಿರುಗಿದ ಪಕ್ಷದಲ್ಲಿ ತನಗೆ ದುರ್ದಿನಗಳು ಪ್ರಾಪ್ತವಾದುವೆಂದು ತಿಳಿಯಬೇಕೆಂದೂ ಖಂಡಿತವಾಗಿ ಹೇಳಿದ್ದನು. ಮತ್ತು ಆ ಮಾತು ನಿಜವೆಂಬುದನ್ನು ಖಚಿತಪಡಿಸಲು, ಆ ದಿವ್ಯ ಪುರುಷನು ಒಂದು ನವಿಲು ಗರಿಯನ್ನು ಸಂಗನ ಕೈಯಲ್ಲಿ ಕೊಟ್ಟು,—'ಇದನ್ನು ತೆಗೆದುಕೊಂಡು ಈ ನಗರದಲ್ಲಿ ಮೃತರಾದವರನ್ನು ಇದರಿಂದ ಸ್ಪರ್ಶಿಸು. ಅವರು ಒಡನೇ ಬದುಕುವರು' ಎಂದು ನುಡಿದನು. ರಾಣಾನು ಆ ಮಾತನ್ನು ಕೇಳಿ ಪರಮಾಶ್ಚರ್ಯ ಹೊಂದಿ, ಚಿತ್ತೂರಿನಲ್ಲಿ ಕಂಡ ಪ್ರೇತಶವಕ್ಕೆ ಆ ನವಿಲಿನ ಗರಿಯನ್ನು ಸೋಕಿಸುತ್ತಿದ್ದನು. ಅದೇನು ಆಶ್ಚರ್ಯವೋ! ಆ ಗರಿಯು ಸೋಕಿದೊಡನೆಯೇ ಮೃತಕಳೇಬರವು ಪುನಃ ಚೇತನಹೊಂದಿ ಎದ್ದು ನಿಲ್ಲುವುದಂತೆ! ಇದನ್ನು ಕಂಡು ಆ ಮಹಾ ಪುರುಷನ ಮಾತು ನಿಜವೆಂದು ನಂಬಿ, ರಕ್ಷಾಯಂತ್ರವನ್ನು ಕೊರಳಲ್ಲೇ ಧರಿಸಿ, ಆತನ ಹೆಸರಿನಮೇಲೆ ಚಿತ್ತೂರಿನಲ್ಲಿ ಒಂದು ಆಲಯವನ್ನು ಕಟ್ಟಿಸಿದನು. ಆ ಆಲಯವು ಸಂಗನು ಮೃತನಾದ ತರುವಾಯವೂ ಬಹು ಕಾಲಗಳವರೆಗಿದ್ದಿತು.

ದಿವ್ಯ ಪುರುಷನು ಅನುಗ್ರಹಿಸಿದ ರಕ್ಷಾಯಂತ್ರವು ಅನೇಕವೇಳೆ ರಜಪೂತರ ಮೇಲೂ, ಶತ್ರುಗಳಾದ ಮಹಮ್ಮದೀಯರ ಮೇಲೂ ಪ್ರಯೋಗಿಸಲ್ಪಟ್ಟು ಸಂಗ್ರಾಮ ಸಿಂಹನಿಗೆ ಜಯವನ್ನು ತಂದಿತ್ತಿತು. ಅದು ತನ್ನ ಸ್ವಾಧೀನದಲ್ಲಿದ್ದುದರಿಂದ. ರಾಣಾನು ತನಗೆ ಎಂತಹ ಪ್ರಬಲ ಶತ್ರುವಿನೊಂದಿಗೆ ಕದನವು ಕೈಗಟ್ಟಲಿದೆಯೆಂದು ತಿಳಿದರೂ ಲೇಶಮಾತ್ರವೂ ಹಿಂಜರಿಯದೆ ಧೈರ್ಯವಾಗಿಯೇ ಇರುತ್ತಿದ್ದನು. ಆ ಕಾಲದಲ್ಲಿ ದೆಹಲೀ ಸಿಂಹಾಸನಕ್ಕೆ ಸುಲ್ತಾನ್ ಇಬ್ರಾಹಿಂ ಲೋಡಿ ಎಂಬೊಬ್ಬ ಮಹಮ್ಮದೀಯನು ಪ್ರಭುವಾಗಿದ್ದನು. ಅವನ ಕ್ರೌರ್ಯವೂ, ದೌರ್ಜನ್ಯವೂ, ಅಹಂಭಾವವೂ ಮಿತಿಮೀರಿ ಸಮೀಪದ ಪರಿವಾರದವರಿಗೂ ಸಹಿಸಲಸಾಧ್ಯವಾಗಿದ್ದುದರಿಂದ

ಮಂತ್ರಿ ಸಾಮಂತಾದಿಗಳು ಸಹ ಅವನೊಂದಿಗಿದ್ದು ಏಗಲಾರದೆ ಅವನನ್ನು ತೊಲಗಿ ಹೋದರು. ದೇಶದಲ್ಲೆಲ್ಲಿ ನೋಡಿದರೂ ಪಿತೂರಿಗಳು ಎದ್ದುವು. ಸುಲ್ತಾನನು ರೋಷಭೀಷಣನಾಗಿ ಅಮಾನುಷ ಕ್ರೌರ್ಯದಿಂದ ಒಂದನ್ನು ಅಡಗಿಸುವ ವೇಳೆಗೆ ಮತ್ತೊಂದು ಬೇರೊಂದು ರೂಪದಿಂದ ತಲೆಯೆತ್ತಿಕೊಳ್ಳುವುದು. ಹೀಗಿರಲು, ಸುಲ್ತಾನನ ಚಿಕ್ಕಪ್ಪನೇ ದೆಹಲಿಯ ಪ್ರಭುತ್ವದ ಮೇಲೆ ದಂಡೆತ್ತಿಬಾರೆಂದು ಬಾಬರನನ್ನು ಪ್ರೇರಿಸಲಿಕ್ಕಾಗಿ ಕಾಬೂಲಿಗೆ ಹೋದನು.

ಬಾಬರನು ಮೊಗಲಾಯಿ ವಂಶಕ್ಕೆ ಸೇರಿದ ಮುಹಮ್ಮದೀಯನು. ಇವನ ಪೂರ್ವಿಕರಾದ ಚಂಗೇಜ್‌ಖಾನ್ ತೈಮೂರ್‌ಲೇನ್ ಮುಂತಾದವರು ಇದಕ್ಕೆ ಮುಂಚೆಯೇ ಹಿಂದೂಸ್ಥಾನದಮೇಲೆ ದಂಡೆತ್ತಿಬಂದು, ಹಿಂದೂಸ್ಥಾನದಮೇಲೆ ಧಾಳಿಮಾಡಲು ಮುಹಮ್ಮದೀಯರಿಗೆಲ್ಲ ಮಾರ್ಗದರ್ಶಕರಾದರು. ಬಾಬರನೂ, ಎಂದಿಗೆ ಹಿಂದೂಸ್ಥಾನದಮೇಲೆ ದಂಡೆತ್ತಿ, ಫಲವಂತವಾದ ಆ ದೇಶವನ್ನು ಆಕ್ರಮಿಸುವೆನೋ ಎಂದು ಹಗಲಿರುಳೂ ಹಂಬಲಿಸುತ್ತಿದ್ದನು. ಈವರೆಗೆ ಒಂದಾವರ್ತಿ ಪಂಜಾಬು ದೇಶದಮೇಲೆ ದಂಡೆತ್ತಿ ಬಂದಿದ್ದನು. ಆ ದಂಡಯಾತ್ರೆಯುಲ್ಲಾತನಿಗೆ ರಾಜ್ಯಲಾಭವಾಗಲಿಲ್ಲವಾದರೂ, ಅವನ ಸೈನಿಕರು ಬೆಟ್ಟಗುಡ್ಡಗಳಿಂದಾವೃತವಾದ ತಮ್ಮ ದೇಶಕ್ಕೂ, ಮಹಾ ಸುಖದಾಯಿನಿಯೂ ಭೋಗಸಾಧನಗಳಿಗೆ ನೆಲೆವೀಡೂ ಆದ ರತ್ನಗರ್ಭ ಭಾರತದೇಶಕ್ಕೂ ಇದ್ದ ವ್ಯತ್ಯಾಸವನ್ನು ಕಂಡುಕೊಂಡು, ಈ ದೇಶವನ್ನು ಬಿಟ್ಟು ಹೋಗಲಾರದೆ ಹೋಗಿದ್ದು, ಈಗ ಪುನಃ ದಂಡೆತ್ತಬೇಕೆಂದು ತಮ್ಮ ಯಜಮಾನನನ್ನು ಮೇಲೆ ಮೇಲೆ ಪ್ರೋತ್ಸಾಹಗೊಳಿಸುತ್ತಿದ್ದರು. ಬಾಬರನ ಮತ್ತು ಅವನ ಸೈನಿಕರ ಅಪೇಕ್ಷೆಗನುಗುಣವಾಗಿ ಈಗ ಮೇಲೆ ಹೇಳಿದಂತೆ ಭಾರತದೇಶೀಯರೇ ಬಂದು ಆಹ್ವಾನಿಸಿದ ಸಂದರ್ಭವೂ ಪ್ರಾಪ್ತವಾಯಿತಷ್ಟೆ! ಸರಿ, ಮುಂದೆ ಹೇಳಬೇಕಾದುದೇನು! ಇಂತಹ ಸುಸಂಧಿಯನ್ನು ಕಳೆದುಕೊಳ್ಳುವನೇ ಬಾಬರನು! ಒಡನೆ ಅಲ್ಲಲ್ಲಿ ಚದುರಿದ್ದ ತನ್ನ ಸೇನೆಗಳನ್ನೆಲ್ಲ ಒಂದೆಡೆ ಕೂಡಿಸಿ, ಪರ್ವತ ಪ್ರಾಂತಗಳಿಂದ ಹೊರಬಿದ್ದು ಪಂಜಾಬುದೇಶವನ್ನು ಹೊಕ್ಕು, ತನ್ನನ್ನು ಎದುರಿಸಿ ಅಡ್ಡಗಿಸಿದ ಶತ್ರುಸೇನೆಗಳನ್ನು ಒಂದಾದಮೇಲೊಂದರಂತೆ ಗೆಲ್ಲುತ್ತಾ ಮೆಲ್ಲಮೆಲ್ಲನೆ

ಡಿಲ್ಲಿಯನ್ನು ಸಮೀಪಿಸಿದನು. ಪಾನಿಪಟ್ಟೆಂಬ ಗ್ರಾಮದ ಸಮೀಪದಲ್ಲಿ ಬಾಬರನಿಗೂ, ಲಕ್ಷಸೇನಾ ಪರಿವೃತನಾದ ಇಬ್ರಾಹಿಂ ಲೋದಿಗೂ ಕದನವು ಕೈಗಟ್ಟಿತು. ಇಬ್ರಾಹಿಮನು ರಣರಂಗದಲ್ಲಿ ಮೃತಿ ಹೊಂದಿ ಡಿಲ್ಲೀಶ್ವರನೆಂದು ಗುರ್ತಿಸಲೂ ಶಕ್ಯವಲ್ಲದಂತೆ ಒಂದೆಡೆ ಬಿದ್ದಿದ್ದನು. ಎಲ್ಲಾ ಮಸೀದಿಗಳಲ್ಲೂ ಅಂದು ಬಾಬರನೇ ಚಕ್ರವರ್ತಿಯೆಂದು ಆತನ ಹೆಸರಿನಲ್ಲೇ ಪ್ರಾರ್ಥನೆಗಳು ನಡೆದುವು.

ಅಗಾಧ ಸೈನ್ಯ ಸಹಾಯ ಸಂಪತ್ತಿನಿಂದ ಕೂಡಿದ್ದರೂ, ಕಾಬೂಲಿನ ಒಬ್ಬ ಅನಾಮಧೇಯ ಸರದಾರನಾದ ಚಿಕ್ಕ ವಯಸ್ಸಿನ ಬಾಬರನಿಂದ, ಡಿಲ್ಲೀಶ್ವರನು ಹತನಾದುದು ಯಾರಿಗೂ ಸಂತೋಷವನ್ನುಂಟುಮಾಡಲಿಲ್ಲ. ಹಿಂದೂಗಳಿಗಂತೂ ಈ ಇಬ್ಬರಲ್ಲಿ ಯಾರು ರಾಜ್ಯಾಧಿಪತಿಗಳಾಗಿದ್ದರೂ ಒಂದೇ! ಏಕೆಂದರೆ, ಇಬ್ಬರೂ ಮಾಂಸಭಕ್ಷಕರಾದ ತುರುಷ್ಕರೇ! ಇಬ್ಬರೂ ಅವರ ದೇವಾಲಯ ಧರ್ಮಸ್ಥಳಗಳನ್ನು ನಾಶಗೊಳಿಸುವ ಘಾತುಕರೇ! ಅವರಿಬ್ಬರಲ್ಲಿ ಯಾರು ಗೆದ್ದು ಉಳಿದರೂ ಅವರನ್ನು ಹಿಂದೂಸ್ಥಾನದಿಂದ ಹೊರಗಟ್ಟುವ ಭಾರವು ರಣಸಿಂಹನಾದ ಮೇವಾರು ರಾಣಾನ ಪಾಲಿಗೇ ಬಿದ್ದಿದೆಯೆಂದು ಜನರು ಹೇಳಿಕೊಳ್ಳತೊಡಗಿದರು.

ಪರಕೀಯರು ಬಂದು ಹಾಗೆ ನೆರೆಮಗ್ಗುಲಲ್ಲಿ ಪ್ರಬಲಿಸಿಕೊಂಡಿರುವುದು ಕ್ಷೇಮವಲ್ಲವೆಂದು ಸಂಗ್ರಾಮಸಿಂಹನಾದರೂ ಯೋಚಿಸದಿರಲಿಲ್ಲ. ಆದುದರಿಂದ ಇನ್ನು ಆಲಸನಾಗಿ ಕುಳಿತಿರುವುದು ತಕ್ಕುದಲ್ಲವೆಂದೆಣಿಸಿ ಆ ರಣಮಲ್ಲನು, ಬಾಬರನಮೇಲೆ ಯುದ್ಧಕ್ಕೆ ಹೊರಡತಕ್ಕುದೇ ನಿಶ್ಚಯವೆಂದು ಆ ಕಾರ್ಯಕ್ಕೆ ಉದ್ಯೋಗಿಸಿದನು. ಆತನಿಗೆ ಸಹಾಯವಾಗಿ ಐವತ್ತು ಸಹಸ್ರ ಅಶ್ವಸೈನ್ಯವೂ, ಉತ್ತಮ ವಂಶ ಸಂಜಾತರಾದ ಏಳು ಮಂದಿ ಮಹಾರಾಜರೂ, ರಾವು ಬಿರುದಿನಿಂದ ಶೋಭಿತರಾದ ಒಂಬತ್ತು ಮಂದಿ ಸಾಮಂತರೂ, ರಾವಳರು ರಾಹುತರು ಎಂಬ ಬಿರುದುಗಳಿಂದ ವಿಭೂಷಿತರಾದ ನೂರ ಹದಿನಾಲ್ಕು ಮಂದಿ ಸರದಾರರೂ, ಐದುನೂರು ಮಂದಿ ಗಜಾರೋಹಿ ಮಾಹುತರೂ ಜೊತೆಗೆ ನಡೆದರು. ದುರ್ದಮನೀಯವಾದ ಇಷ್ಟು ವೀರ ಪರಿವಾರವನ್ನು ನಡೆಯಿಸಿಕೊಂಡು ಸಂಗ್ರಾಮಸಿಂಹನು ಪ್ರಾರಂಭಕ್ಕೆ ಬಯಾನಾ ಎಂಬ ಊರಿನ ಕೋಟೆಯ ಬಳಿಗೈದಿ ಅದನ್ನು ಮುತ್ತಿದನು. ಆ

ಮುತ್ತಿಗೆಯು ಜರುಗುತ್ತಿದ್ದಾಗಲೇ ಒಂದು ದಿನ ಸಂಗನು ಆ ಊರಿನ ಕೊಳದಲ್ಲಿಳಿದು ಸ್ನಾನ ಮಾಡುತ್ತಿರಲು, ಆತನ ಕಂಠದಲ್ಲಿದ್ದ ದೇವಪುರುಷ ದತ್ತವಾದ ರಕ್ಷಾಯಂತ್ರವು ಬೆನ್ನಿನ ಕಡೆಗೆ ತಿರುಗಿ ಅಲ್ಲಿ ಜೋಲು ಬಿದ್ದಿತು. ಅಕಸ್ಮಾತ್ತಾಗಿ ಸಂಭವಿಸಿದ ಆ ಸಂಗತಿಯನ್ನು ಕಂಡು, ಸಂಗ್ರಾಮನು ತನ್ನ ಮರಣಕಾಲವು ಸಮೀಪಿಸಿತೆಂದುಕೊಂಡು, ತಕ್ಕ ಪ್ರಯತ್ನಗಳನ್ನು ಮಾಡಿಕೊಂಡಿರುತ್ತಿರುವ ವೇಳೆಗೆ, ಬಾಬರನು, ಬಯಾನಾ ಕೋಟೆಯನ್ನು ಶತ್ರುನಿರ್ಮುಕ್ತ ಮಾಡಲಿಕ್ಕಾಗಿ ಹನ್ನೆರಡುನೂರು ಮಂದಿ ಸೈನಿಕರನ್ನು ಕಳುಹಿಸಿದನು. ಆದರೆ ಅವರಲ್ಲಿ ಬಹು ಸ್ವಲ್ಪ ಸಂಖ್ಯಾಕರು ಮಾತ್ರವೇ ಬದುಕಿ ಹಿಂದಿರುಗಿ, ರಾಜಪುತ್ರವೀರನು ಸಾಮಾನ್ಯನಲ್ಲವೆಂದೂ, ಜೀತಕ್ಕಾಗಿಯೇ ಕೆಲಸಮಾಡುವ ಬಾಬರನ ಸೈನಿಕರಿಗೂ ದೇಶಭಕ್ತಿಯಿಂದ ಪ್ರೇರಿತರಾಗಿ ಪ್ರಾಣಗಳನ್ನರ್ಪಿಸಲು ಸಿದ್ಧರಾಗಿರುವ ರಾಜಪುತ್ರವೀರರಿಗೂ ಬಹಳ ಭೇದವಿದೆಯೆಂದೂ ತಿಳಿಸಿದರು. ಮೇವಾರು ರಾಜ್ಯಕ್ಕೆ ಉತ್ತರ ಸರಹದ್ದಿನಲ್ಲಿರಬೇಕೆಂದು ರಾಣಾನು ಕಾಣ್ವಾಹಾ ಎಂಬೊಂದು ಗ್ರಾಮದಲ್ಲಿ ತನ್ನ ನಿವಾಸಕ್ಕಾಗಿ ಒಂದು ದೊಡ್ಡ ಮಹಲನ್ನು ಕಟ್ಟಿಸಿದನು.

ಬಾಬರನು ಆ ಮಹಲಿಗೆ ಎದುರಾಗಿಯೇ ತನ್ನ ಶಿಬಿರವನ್ನು ಹಾಕಿಸಿ, ಫಿರಂಗಿ ಬಂಡಿಗಳನ್ನು ಸರಕುಗಳ ಬಂಡಿಗಳೊಂದಿಗೆ ಬೆರೆಸಿ, ಗೋಣಿಚೀಲಗಳನ್ನು ಕಟ್ಟಿ, ಸೇನೆಯ ಪ್ರಥಮ ಪಙ್ಕ್ತಿಯನ್ನು ಏರ್ಪಡಿಸಿ, ಅದರ ಹಿಂದೆ ಸೇನೆಯವರನ್ನು ನಿಲ್ಲಿಸಿದನು. ಬಂಡಿಗಳು ಸಾಕಾದಷ್ಟು ದೊರಕದಿದ್ದಲ್ಲಿ ಅಲ್ಲಲ್ಲಿ ಕಂದಕಗಳನ್ನು ತೋಡಿಸಿದನು. ಆತನ ಫಿರಂಗಿಗಳಲ್ಲೆಲ್ಲಾ 'ಜಯ ಫಿರಂಗಿ' ಎಂಬುದೊಂದು ಪ್ರಖ್ಯಾತವಾಗಿದ್ದಿತು. ಅದನ್ನು ಉಸ್ತಾದ್ ಎಂಬೊಬ್ಬ ಸೇನಾನಿ ಮಾತ್ರವೇ ಬಹಳ ಚಾತುರ್ಯದಿಂದ ಉಪಯೋಗಿಸುತ್ತಿದ್ದನಂತೆ! ಒಂದೊಂದುವೇಳೆ ಅವನು ಅದನ್ನು ದಿನಕ್ಕೆ ಹದಿನಾರುವೇಳೆ ಪ್ರಯೋಗಿಸಲು ಶಕ್ತನಾಗಿದ್ದನಂತೆ! ಆ ಫಿರಂಗಿಯ ಪ್ರಯೋಗದಿಂದ ನಡೆವ ಯುದ್ಧವು ಉಭಯ ಪಕ್ಷಗಳವರಿಗೂ ಬಹು ಬಾಧಕರವಾಗಿದ್ದರೂ ಪ್ರೇಕ್ಷಕರಿಗೆ ಮಾತ್ರ ಬಹು ವಿನೋದಕರವಾಗಿರುತ್ತಿದ್ದಿತು. ಆಜನ್ಮ ಯುದ್ಧದಲ್ಲೇ ಮುಳುಗಿದ್ದು, ದೇಶ ಸಂರಕ್ಷಣೆಗಾಗಿ ದೇಹ ರಕ್ತವನ್ನು ಧಾರೆ ಧಾರೆಯಾಗಿ ಸುರಿಸಿ, ಒಂದು ಕಾಲನ್ನೂ ಒಂದು ಕಣ್ಣನ್ನೂ ಯುದ್ಧ ಭಿಕ್ಷೆಯನ್ನಾಗಿ

ತಿತ್ತು, ಏನತ್ತು ಗಾಯಗಳಿಂದ ತೂತು ಬಿದ್ದ ಶರೀರದಿಂದ ಶೂರ ಶಿಖಾಮಣಿಯೆಂಬ ಸಾರ್ಥಕ ನಾಮವನ್ನು ಹೊತ್ತ ಸಂಗ್ರಾಮಸಿಂಹನೊಂದು ಕಡೆ. ಆತನಿಗೆ, ಈದ ಹುಲಿಯ ಮೊಲೆಗಳನ್ನು ಕೀಳಲಿಕ್ಕೂ ಹಿಂದೆಗೆಯದ, ಸಿಂಹದ ಒಳಿ ಸಾರಿ ಅದರ ಕೇಸರಗಳನ್ನಾದರೂ ಕಿತ್ತುಕೊಂಡು ಬರಲು ಶಂಕಿಸದ, ಯುದ್ಧದಲ್ಲಿ ಬೆನ್ನು ತೋರಿಸಿ ಅರಿಯದ, ಬದುಕಿದರೆ ಮಹತ್ಕೀರ್ತಿ ಕಾಂತೆಯನ್ನೂ, ಮೃತರಾದರೆ ವೀರಸ್ವರ್ಗವನ್ನೂ ಪಡೆಯಲು ಹಿಂಜರಿಯದ ಮಹಾ ವೀರರಾದ ರಾಜಪುತ್ರರು ಅನುಚರರು. ಅವರೆಲ್ಲರೂ ತಮ್ಮ ಪೂರ್ವಿಕರು ಬಹು ಬಗೆಯಿಂದ ಮಾಡಿದ ದೇಶ ಸೇವೆಗಳನ್ನು ಕೇಳಿ-ಅವರ ಶೂರ ಕರ್ಮಗಳನ್ನಾಲಿಸಿ ಹೆಮ್ಮೆಗೊಂಡಿದ್ದರು. ಆ ರಜಪೂತರು ನವೀನ ವಧುಗಳನ್ನು ವರಿಸಲು ವಿವಾಹ ಮಂಟಪಕ್ಕೆ ನಡೆವಂತೆ ಮೃತ್ಯುದೇವತೆಯನ್ನು ವರಿಸಲು ಯುದ್ಧ ಭೂಮಿಗೆ ನಡೆವ ವಿದ್ಯೆಯನ್ನೂ ಕಲಿತು, ಆ ರಣ ವಿದ್ಯೆಯಲ್ಲಿ ಪಾರಂಗತರಾಗಿದ್ದರು. ವೀರ ಪುರುಷನಿಗೆ ಮರಣವು ಅಂತಃಪುರದಲ್ಲಿ ಹಂಸ ತೂಲಿಕಾತಲ್ಪದಮೇಲೆ ಆಗತಕ್ಕದು ಯುಕ್ತವಲ್ಲವೆಂಬುದನ್ನು ಅವರಲ್ಲೊಬ್ಬೊಬ್ಬನೂ ತಿಳಿದಿದ್ದನು. ನಿಜಾಯುಧದಿಂದ ನೆಲಕ್ಕುರುಳಿದ ಹಗೆಯ ದೇಹವೇ ಶೂರನಿಗೆ ತಕ್ಕ ಹಾಸಿಗೆಯೆಂಬುದು ಆ ರಜಪೂತ ವೀರರಿಗೆ ಯುದ್ಧ ವಿದ್ಯೆಯ ಬಾಲಪಾಠವಾಗಿದ್ದಿತು. ಇಂತಹ ಮಹಾ ಶೂರ ಪರಿವಾರದಿಂದ ಯುಕ್ತನಾಗಿ ಸಂಗ್ರಾಮಸಿಂಹನು ಶತ್ರುವಿನೊಂದಿಗೆ ಕಾದಲು ಒಂಟಿಗಾಲಿನಿಂದ ನಿಂತಿದ್ದನು.

ಅತ್ತ ಇನ್ನೊಂದು ಕಡೆ ಇದ್ದವನೋ, ಹನ್ನೊಂದನೆಯ ವಯಸ್ಸಿನಲ್ಲೇ ರಾಜ್ಯಾಭಿಷೇಕವನ್ನು ಪಡೆದು, ಪರರಾಜರ ಪೀಡೆಯಿಂದ, ಪಿತೃಪಿತಾಮಹರಿಂದ ಅರ್ಜಿತವಾದ ರಾಜ್ಯವನ್ನು ಕಳೆದುಕೊಂಡು ದಿಕ್ಕು ದೆಸೆಗಳನ್ನರಿಯದೆ ಅಲೆದ ಕಷ್ಟ ಜೀವಿ. ಆವರೆಗೇ ಸಾಮರ್ಕಂದು ಪ್ರಾಂತವನ್ನು ಎರಡು ಸಾರಿ ಪಡೆದು ಗದ್ದುಗೆಯೇರಿ, ಎರಡು ಸಾರಿಯೂ ಅದನ್ನು ಹಗೆಗಳಿಗೆ ಬಿಟ್ಟು ಕೊಟ್ಟು ಪ್ರಾಣ ರಕ್ಷಣೆಗಾಗಿ ಓಡಿ, ದೇಹದಲ್ಲಿ ಪ್ರಾಣವಿದ್ದರೆ ಅದನ್ನು ಸಾಧಿಸದಲ್ಲದೆ ಬಿಡೆನೆಂದು ಪ್ರತಿಜ್ಞೆಮಾಡಿ ಸರ್ವದಾ ಆ ಕನಸು ಕಾಣುತ್ತಿದ್ದವನು. ಸಂಗನಂತೆಯೇ ಮನೆ ಬಾಗಿಲುಗಳನ್ನು ತ್ಯಜಿಸಿ, ದನ ಕಾಯುತ್ತಲೂ, ಗಟ್ಟ ಬೆಟ್ಟ ಪ್ರಾಂತಗಳಲ್ಲಿ ತಿರುಗಿಯೂ ಕಾಲ ಕಳೆದು,

ಕೊನೆಗೆ ಕಾಬೂಲು ಪ್ರಾಂತವನ್ನು ವಶಪಡಿಸಿಕೊಂಡು ಅಲ್ಲಿ ಸಿಂಹಾಸನ ವೇರಿ, ಅದಕ್ಕಿಂತಲೂ ಉತ್ತಮವಾದ ದೇಶವನ್ನು ಜಯಿಸಬೇಕೆಂಬ ಹವಣಿಕೆಯಲ್ಲಿದ್ದವನು. ಈ ಯುದ್ಧಕಾಲಕ್ಕೆ ಅವನು ನಡುವಯಸ್ಸು ಮೀರದೆ, ಉತ್ತಮವಾದ ಶರೀರ ದಾರ್ಢ್ಯವನ್ನುಂಟಾಗಿ ಶತ್ರು ಭೀಕರನಾಗಿದ್ದನು. ಬಲವಾದ ಇಬ್ಬರು ಮನುಷ್ಯರನ್ನು ಎಡಬಲ ಕಕ್ಷಗಳಲ್ಲಿ ಇರುಕಿಸಿಕೊಂಡು ಕೋಟೆಯ ಗೋಡೆಗಳಮೇಲೆ ಓಡಬೇಕೆಂದರೆ ಅವನ ಸಾಮರ್ಥ್ಯವು ಎಷ್ಟು ಮಟ್ಟಿನದಿರಬಹುದು! ಅವನು ಯಾವಾಗಲೂ ಕುದುರೆಯ ಜೀನನ್ನೇ ವಾಸಸ್ಥಾನವಾಗಿ ಮಾಡಿಕೊಂಡಿದ್ದನೆಂದು ಹೇಳಬಹುದು. ಮಾರ್ಗಮಧ್ಯದಲ್ಲಿ ದೊರಕುವ ತುಂಬಿ ಹರಿವ ನದಿಗಳನ್ನು ಅನಾಯಾಸವಾಗಿ ಈಜಿಕೊಂಡೇ ದಾಟುವನಲ್ಲದೆ, ದೋಣಿಗಳನ್ನು ಅಪೇಕ್ಷಿಸನು. ಅಂತಹ ಶೂರಾಗ್ರೇಸರನಾದ ಬಾಬರನು ಪಾರ್ಶೀ ಭಾಷೆಯಲ್ಲಿ ರಸವಂತವಾದ ಮನೋಜ್ಞವಾದ ಮೃದುಮಧುರ ನುಡಿಗಳಿಂದ ಕವಿತ್ವವನ್ನು ಹೇಳುವಂತಹ ರಸಿಕತೆಯನ್ನೂ ಗಳಿಸಿದ್ದನು. ಆತನಿಗೆ ಸ್ವಮತಾಭಿಮಾನವು ವಿಶೇಷವಾಗಿದ್ದಿತು. ಆದರೆ ಅದು ಅಂಧ ಶ್ರದ್ಧೆಯಲ್ಲ. ಅದರ ಸಹಾಯದಿಂದ ತನ್ನ ಶತ್ರು ರಾಜರಲ್ಲಿ ಇದ್ದ ಗುಣಗಳನ್ನು ಗ್ರಹಿಸಿ. ಅವುಗಳನ್ನು ತನ್ನ ಗ್ರಂಥದಲ್ಲಿ ಉದಾರ ಭಾವದಿಂದ ಹೊಗಳಿ ಬರೆಯುತ್ತಿದ್ದನು.

ರಾಣಾ ಸಂಗ್ರಾಮಸಿಂಹನಿಗೆ ಈತನಿಗಿಂತಲೂ ಸದ್ಗುಣವಂತನೂ, ಪೌರುಷ ಶಾಲಿಯೂ ಆದ ಶತ್ರುವು ಎಂದೂ ದೊರಕಿರಲಿಲ್ಲ. ಎರಡು ಪಕ್ಷಗಳವರಿಗೂ ಅದೊಂದು ಸತ್ವಪರೀಕ್ಷೆಗಾಗಿ ಏರ್ಪಟ್ಟ ಯುದ್ಧವೇ ಆಗಿದ್ದಿತು. ರಾಜಪುತ್ರರು, ತಮ್ಮ ದೇವಾಲಯಗಳನ್ನು ಧ್ವಂಸಗೊಳಿಸಿ, ತಮ್ಮ ದೇವತಾ ವಿಗ್ರಹಗಳನ್ನು ಚೂರು ಚೂರು ಮಾಡಿದ ಮ್ಲೇಂಛರನ್ನು ತಮ್ಮ ಕುಲದೇವತೆಯಾದ ಭವಾನಿಯು ನಿರ್ಮೂಲಗೊಳಿಸಿ ತಮಗೆ ಜಯವನ್ನುಂಟುಮಾಡುವಳೆಂದು ನಂಬಿ ಧೈರ್ಯವಾಗಿದ್ದರು. ಅತ್ತ ಮೊಗಲಾಯರೋ, ವಿಗ್ರಹಾರಾಧನೆ ಮಾಡುವ ಪಾಪಾತ್ಮರಾದ ಹಿಂದೂಗಳನ್ನು ನಿರ್ಮೂಲಿಸುವುದಕ್ಕೆ ಸಹಾಯಮಾಡೆಂದು ಅಲ್ಲಾನನ್ನು ಪ್ರಾರ್ಥಿಸಿಕೊಂಡರು. ಈ ರಾಜಪುತ್ರ ಮೊಗಲಾಯಿ ಪ್ರಭುಗಳಿಬ್ಬರೂ ಮಿಕ್ಕ ಎಲ್ಲಾ ಗುಣಗಳಲ್ಲೂ ಸಮಾನರಾಗಿದ್ದಂತೆಯೇ ಅಫೀಮು ಸೇವನೆಯಲ್ಲೂ ಸಮಾನರೇ ಆಗಿದ್ದರು.

ಹದಿನೈದು ದಿನಗಳವರೆಗೂ ಎರಡು ಸೈನ್ಯಗಳಲ್ಲಿ ಒಂದೂ ಯುದ್ಧವನ್ನು ಪ್ರಾರಂಭಿಸದೆ, ಸುಮ್ಮನೆ ಒಂದನ್ನೊಂದು ನೋಡಿಕೊಳ್ಳುತ್ತಾ, ಯಾರು ಮುಂದಾಗಿ ಯುದ್ಧಕ್ಕಿಳಿದರೆ ಏನು ಪ್ರಮಾದವುಂಟಾಗುವುದೋ ಎಂದು ಶಂಕಿಸುತ್ತಾ ಸುಮ್ಮನಿದ್ದರು. ಬಾಬರನ ಸೈನಿಕರು ಸ್ವಲ್ಪಮಟ್ಟಿಗೆ ನಿರುತ್ಸಾಹಿತರೂ ಆಗಿದ್ದರು. ಅವರು ತಮ್ಮ ಹೆಂಡಿರು ಮಕ್ಕಳನ್ನು ಬಿಟ್ಟು ಬಹುದೂರ ದೇಶವಾದ ಹಿಂದೂಸ್ಥಾನದ ವಿಶೇಷ ಬಿಸಿಲಿನಿಂದ ಬಾಡಿ ಬಸವಳಿದು, ತಂಪಾದ ತಮ್ಮ ಗುಡ್ಡಗಾಡು ಪ್ರಾಂತಗಳನ್ನು ಎಂದಿಗೆ ಹೋಗಿ ಸೇರಿಕೊಂಡೇವು ಎಂದು ಇಚ್ಛಿಸಿ, ತನ್ನನ್ನು ತಮ್ಮ ಸ್ವದೇಶಕ್ಕೆ ಕರೆದೊಯ್ಯೆಂದು ಬಲವಂತ ಪಡಿಸತೊಡಗಿದ್ದರು. ಆದುದರಿಂದಲೇ ಮೊದಲು ಬಾಬರನು ಕಳುಹಿಸಿದ್ದ ಸಾವಿರದೈನೂರು ಮಂದಿಯಲ್ಲಿ ಹತಶೇಷರಾಗಿ ಹಿಂದಕ್ಕೆ ಹೋದವರು, ಸಂಗರಾಜನ ಸೈನಿಕರ ಹೆಸರನ್ನು ಕೇಳಿದರೇ ಗಡಗಡ ನಡುಗುವಂತೆ ತಮ್ಮ ಜೊತೆಯ ಸೈನಿಕರನ್ನು ಹೆದರಿಸಿದುದು! ಅವನ ಶಿಬಿರದೊಂದಿಗೆ ಬಂದಿದ್ದ ಪಾರಸೀಕ ಜ್ಯೋತಿಷ್ಕರು ಯಾವಾಗ ಕೇಳಿದರೂ ಯುದ್ಧ ಪರಿಣಾಮದ ನೀಚ ದೆಸೆಯನ್ನು ಕುರಿತೇ ಫಲ ಹೇಳುತ್ತಿದ್ದರಲ್ಲದೆ, ಉಚ್ಚ ದೆಸೆಯನ್ನು ಹೇಳಲಾರದಿದ್ದರು. ಹೀಗೆ ಆ ಯುದ್ಧ ಸನ್ನಿವೇಶವು ಬಾಬರನಿಗೆ ಬಹುಮಟ್ಟಿಗೆ ಉತ್ಸಾಹಭಂಗವನ್ನುಂಟುಮಾಡುವಂತಿದ್ದಿತು.

ಈ ಎರಡು ವಾರಗಳಲ್ಲಿ ರಾಣಾ ಸಂಗ್ರಾಮನಿಗೂ ಬಾಬರನಿಗೂ ಸಂಧಿ ಪ್ರಸ್ತಾಪಗಳು ಜರುಗುತ್ತಿದ್ದುವೆಂದು ರಜಪೂತ ಚರಿತ್ರಕಾರರಲ್ಲಿ ಕೆಲವರು ಬರೆಯುತ್ತಾರೆ. ಬಾಬರನು ತಾನು ವಿದೇಶದಲ್ಲಿ ಪಂಚಾಗ್ನಿ ಮಧ್ಯದಲ್ಲಿದ್ದಂತೆ ಶತ್ರುಮಂಡಲ ಮಧ್ಯದಲ್ಲಿ ಏಕಾಕಿಯಾಗಿದ್ದೇನೆಂಬುದನ್ನೂ, ಒಂದು ವೇಳೆ ಈ ಯುದ್ಧದಲ್ಲಿ ತನಗೆ ಅಪಜಯ ಪ್ರಾಪ್ತವಾದರೆ, ಹಗೆಗಳು ನಾಲ್ಕು ದಿಕ್ಕುಗಳಿಂದಲೂ ತನ್ನನ್ನು ಮುತ್ತುವರೆಂಬುದನ್ನೂ ಚೆನ್ನಾಗಿ ತಿಳಿದಿದ್ದನು. ಹಾಗಾದರೆ ಈವರೆಗೇ ಕೈ ಸೇರಿದ್ದ ದೆಹಲಿ ರಾಜ್ಯವೂ ಕೈತಪ್ಪಿ ಹೋಗುವುದಲ್ಲದೆ ಕಾಬೂಲನ್ನು ಸೇರಲೂ ಅವಕಾಶವಿಲ್ಲದಂತಾಗುವುದೆಂಬುದರ ಅರಿವೂ ಅತನಿಗಿದ್ದಿತು. ರಾಣಾ ಸಂಗನು ರಣ ಕುಶಲನು, ನಿರ್ಭೀತ, ನಿಸ್ವಾರ್ಥ ದೇಶಾಭಿಮಾನಿ, ಮೇವಾರು ರಾಜ್ಯದ ಶ್ರೇಯಸ್ಸಾಧನೆಗಾಗಿ ಸ್ವಸೌಖ್ಯವನ್ನು-ಹೆಚ್ಚೇನು ಪ್ರಾಣಗಳನ್ನೂ ತೃಣವಾಗಿ ಎಣಿಸಿ ಕಷ್ಟ ಪಡ

ತಕ್ಕವನು ಎಂಬ ಸಂಗತಿಯಾದರೂ ಆತನಿಗೆ ತಿಳಿಯದಿರಲಿಲ್ಲ. ಆದುದರಿಂದ ರಾಜಪುತ್ರ ಚರಿತ್ರಕಾರರು ಹೇಳುವಂತೆ ಉಭಯರಿಗೂ ಸಂಧಿ ಪ್ರಸ್ತಾಪಗಳು ಜರುಗುತ್ತಿದ್ದುವೆಂದು ನಂಬುವುದರಲ್ಲಿ ಏನೂ ದೋಷ ತೋರುವುದಿಲ್ಲ. ಈ ಒಡಂಬಡಿಕೆಯಲ್ಲಿ ಬಾಬರು ಕೋರಿದ ಸಂಗತಿಗಳಲ್ಲಿ ಯಾವುದೂ ರಾಣಾನಿಗೆ ಅವಮಾನಕರವಾದುದಾಗಲೀ, ಆತನು ಅಂಗೀಕರಿಸಕೂಡದುದಾಗಲಿ ಆಗಿರಲಿಲ್ಲ.

೧ "ಹಸುರು ನೀರಿನ ಸರೋವರವು ಮೇವಾರುದೇಶದ ಉತ್ತರದ ಗಡಿಯಾಗಿರಬೇಕು. ೨ ಬಾಬರನು ಡಿಲ್ಲಿ ರಾಜ್ಯವನ್ನು ಆಕ್ರಮಿಸಿದ್ದಕ್ಕಾಗಿ ರಾಣಾಯವರಿಗೆ ಸ್ವಲ್ಪ ಕಪ್ಪವನ್ನು ಕೊಡಬೇಕು" ಇವು ಆ ಒಡಂಬಡಿಕೆಯ ನಿಬಂಧನೆಗಳೆಂದು ಹೇಳಲ್ಪಟ್ಟಿವೆ. ಆದರೆ ಉಭಯ ರಾಜರಿಗೂ ಹೀಗೆ ಮಾತು ಕಥೆಗಳು ಜರುಗುತ್ತಿರಲು, ಸಂಗನು ಬಾಬರನ ಬಳಿಗೆ ಕಳುಹಿಸಿದ ರಾಯಭಾರಿಯು ತುರುಷ್ಕರ ಬಳಿ ಲಂಚಕ್ಕಾಸೆಪಟ್ಟು, ತನ್ನ ಯಜಮಾನನ ರಹಸ್ಯಗಳನ್ನೆಲ್ಲ ಬಯಲು ಮಾಡಿದನೆಂಬ ಒಂದು ದುರ್ವಾರ್ತೆಯುಂಟು. ಆ ರಾಜದ್ರೋಹಿ ತಾರಾ ವಂಶಸ್ಥನಾದ ಶಿಲಾದೇವನೆಂಬುವನು. ಬಾಬರನು ತಾನು ಅಕಸ್ಮಾತ್ತಾಗಿ ಮಾಡುವ ತಪ್ಪುಗಳಿಗಾಗಿ ಅನೇಕವೇಳೆ ಪಶ್ಚಾತ್ತಾಪ ಪಡುವ ಸ್ವಭಾವವುಳ್ಳವನು. ಅದಕ್ಕೆ ಉದಾಹರಣೆಯಾಗಿ ಒಂದು ಚಿಕ್ಕ ಕಥೆಯಿದೆ.

ಆತನು ಈವರೆಗೂ ಮದ್ಯಪಾನ ಮಾಡುವ ಪದ್ಧತಿ ವಿಶೇಷವಾಗಿದ್ದಿತು. ಆದರೆ ಅದು ಪಾಪಕಾರ್ಯವೆಂದೂ, ಅದರಿಂದ ತನ್ನ ಮೇಲೆ ಭಗವದಾಗ್ರಹವುಂಟಾಗುವುದೆಂದೂ ತಿಳಿಯದಿರಲಿಲ್ಲ. ತಾನು ಮೇಲೆ ಹೇಳಿದಂತೆ ಸುತ್ತುಮುತ್ತಲೂ ಶತ್ರುಗಳಿಂದ ಆವೃತನಾಗಿದ್ದಂತಹ ಇಕ್ಕಟ್ಟಿನ ಸಂದರ್ಭದಲ್ಲಿ ಆತನ ವಿಚಾರವು ಭಗವಂತನ ಕಡೆ ತಿರುಗಿ, ತಾನು ತನ್ನಲ್ಲಿರುವ ಆ ದುರಾಚಾರವನ್ನು ತೊಲಗಿಸಿದಲ್ಲದೆ ಭಗವದನುಗ್ರಹಕ್ಕೆ ಪಾತ್ರನಾಗಲಾರೆನೆಂದು ತೋರಿತು. ಆ ದಿನದಿಂದ ಆ ಅಭ್ಯಾಸವನ್ನು ಸಂಪೂರ್ಣವಾಗಿ ತ್ಯಜಿಸಿ, ಪಾನಕ್ಕಾಗಿ ಉಪಯೋಗಿಸುತ್ತಿದ್ದ ಬಂಗಾರ ಬೆಳ್ಳಿಯ ಪಾತ್ರೆಗಳನ್ನೆಲ್ಲ ಒಡೆಸಿ ಚೂರು ಚೂರು ಮಾಡಿಸಿ ಅದನ್ನೆಲ್ಲ ಬಡವರಿಗೂ ಫಕೀರರಿಗೂ ದಾನಮಾಡಿಬಿಟ್ಟನು. ಅಷ್ಟುಮಾತ್ರವಲ್ಲ, ಸಿಲ್ಕಿನಲ್ಲಿದ್ದ ಸಾರಾಯಿಯನ್ನೆಲ್ಲ ನೆಲಕ್ಕೆ

ಚಲ್ಲಿಸಿ, ಆ ದಿನ ತನಗೆ ಜಯವಾದರೆ, ಮಹಮ್ಮದೀಯರಿಂದ ತನಗೆ ಬರಬೇಕಾದ ದಸ್ತಾವೇಜು ಸಂಬಂಧ ದ್ರವ್ಯವನ್ನೆಲ್ಲ ದಾನವಾಗಿ ಬಿಟ್ಟುಬಿಡುವೆನೆಂದೂ ಪ್ರತಿಜ್ಞೆ ಮಾಡಿದನು. ಕೇವಲ ವಚನ ಶೌರ್ಯ ಮಾತ್ರವಲ್ಲದೆ, ಕಾರ್ಯದಿಂದಲೂ ಸಹ ಮದ್ಯಪಾನ ತ್ಯಾಗಮಾಡಿದ ತಮ್ಮ ಪ್ರಭುವಿನ ಮೇಲ್ಪಂಕ್ತಿಯನ್ನನುಸರಿಸಿ ಕೂಡಲೆ ಸೈನ್ಯದಲ್ಲಿದ್ದ ಸೇನಾಪತಿಗಳು, ಸಾಮಂತರು, ಉಮ್ರಾಗಳು, ಅಮೀರರು ಮೊದಲಾದ ಸುಮಾರು ಮುನ್ನೂರು ಮಂದಿ ಸರದಾರರು ಒಂದೇ ದಿನದಲ್ಲಿ ಸಾರಾಯಿ ಪಾನವನ್ನು ವಿಸರ್ಜಿಸಿ ಪವಿತ್ರರಾದರು. ಹೀಗೆ ನಡೆದ ತರುವಾಯ ಬಾಬರನು, ಸ್ವದೇಶಕ್ಕೆ ಹಿಂದಿರುಗಬೇಕೆಂದು ವಿಚಾರಗ್ರಸ್ತರಾಗಿದ್ದ ತನ್ನ ಸೈನಿಕರನ್ನು ಒಂದೆಡೆ ಕಲೆಯಿಸಿ ಅವರಿಗೆ ಮತಾವೇಶವುಂಟಾಗುವಂತೆ ಹೀಗೆ ಪ್ರೋತ್ಸಾಹಿಸಿಕೊಂಡನು.

"ಎಲೈ ವೀರರೇ! ಪ್ರಪಂಚದಲ್ಲಿ ಹುಟ್ಟಿದವನು ಎಂದಿಗಾದರೊಂದು ದಿನ ಸಾಯುವುದು ತೀರದು. ಬದುಕಿದ್ದು ಪರಾಭವ ಹೊಂದಿ ನಾಚಿಕೆಗೇಡಾಗಿ ಜೀವಿಸುವುದಕ್ಕಿಂತಲೂ, ಸತ್ತು ಗೌರವ ಹೊಂದುವುದು ಮೇಲು. ನಾನು ಸತ್ತರೂ ಚಿಂತೆಯಿಲ್ಲ. ಆದರೆ ಒಳ್ಳೆಯ ಹೆಸರನ್ನು ಹೊತ್ತು ಸತ್ತೆನಾದರೆ ಅದಕ್ಕಿಂತಲೂ ಭಾಗ್ಯವಿನ್ನೊಂದಿಲ್ಲ. ಭಗವಂತನು ದಯಾಮಯನು. ನಾವು ಈ ಯುದ್ಧದಲ್ಲಿ, ಸೋತೆವಾದರೆ ಮತಕ್ಕೋಸ್ಕರ ಮರಣ ಹೊಂದಿದ ಶೂರರೆನ್ನಿಸಿಕೊಳ್ಳುವೆವು. ಗೆದ್ದೆವಾದರೆ ಭಗವಂತನ ಮೆಚ್ಚುಗೆಗೆ ಪಾತ್ರರಾದವರಾಗುವೆವು. ಆದುದರಿಂದ ಮರಣಕ್ಕೆ ಹೆದರೆವೆಂದೂ ಯುದ್ಧ ಭೂಮಿಯಿಂದ ಹಿಂದಡಿಯಿಟ್ಟು ಪಲಾಯಿತರಾಗಲಾರೆವೆಂದೂ ಒಂದು ಸಾರಿ ಪ್ರಮಾಣ ಮಾಡೋಣ."

ಶೂರನೂ ಆಸ್ತಿಕನೂ ನಿಸ್ವಾರ್ಥಪರನೂ ಆದ ತಮ್ಮ ರಾಜನಾಡಿದ ಈ ಮಾತುಗಳು ಎಲ್ಲರಲ್ಲೂ ಪೌರುಷವನ್ನು ಉಕ್ಕಿಸಿದುವು. ಸೈನಿಕರೆಲ್ಲರೂ, ತಮ್ಮ ಪವಿತ್ರಗ್ರಂಥವಾದ ಖುರಾನನ್ನು ಹಿಡಿದುಕೊಂಡು 'ಯುದ್ಧದಲ್ಲಿ ಗೆಲ್ಲಬೇಕು ಅಥವ ಸಾಯಬೇಕು' ಎಂಬುದಾಗಿ ಪ್ರಮಾಣ ಮಾಡಿದರು. ಎಂತಹ ಶಕ್ತಿಹೀನನಾದವನು ಸಹ ಮತಾವೇಶ ಹೊಂದಿ, ದೇಹಾಭಿಮಾನವನ್ನು ತೊರೆದು ಶತ್ರುಹನನ ಮಾಡುವೆನೆಂದು ಸಂಕಲ್ಪ ಮಾಡಿದನು. ತರುವಾಯ ಶತ್ರುಗಳಮೇಲೆ ಬೀಳುವುದಕ್ಕೆ ತಕ್ಕ ಏರ್ಪಾಡುಗಳು ನಡೆಯು

ಸಾಗಿದುವು. ಬಾಬರನು ಅಶ್ವಾರೂಢನಾಗಿ ತನ್ನ ಸೇನಾಪತಿಗಳು ಎಲ್ಲೆಲ್ಲಿ ನಿಂತು ಹೇಗೆ ನಡೆದುಕೊಳ್ಳಬೇಕೆಂದು ಸೂಚಿಸಲು ಸ್ವಲ್ಪ ಕಾಲ ಅಲ್ಲಲ್ಲಿ ತಿರುಗಿದನು.

೧೫೨೭ನೆಯ ಸಂವತ್ಸರದ ಮಾರ್ಚಿ ೨೭ನೆಯ ತಾರೀಖು ಶನಿವಾರದ ದಿನ ರಾಜಸ್ಥಾನದ ಭಾಗ್ಯನಿರ್ಣಯ ಮಾಡುವ ಮಹದ್ಯುದ್ಧವು ಪ್ರಾರಂಭಿಸಿತು. ರಾಣಾನಿಗೆ ದೈವಪುರುಷ ದತ್ತವಾಗಿದ್ದ ರಕ್ಷಾಯಂತ್ರವು ವಿಮುಖವಾಗಿದ್ದಿತಾದರೂ, ಪ್ರಾರಂಭದಲ್ಲಿ ರಾಣಾಸಂಗನಿಗೇ ಜಯವಾಗುವುದೆಂದು ಎಲ್ಲರೂ ತಿಳಿದಿದ್ದರು. ಬಾಬರು ಚಕ್ರವರ್ತಿಯ ಸೈನ್ಯವು ಅವರೆಗೆ ಎಂದೂ ರಜಪೂತ ಸೈನಿಕರ ಕತ್ತಿಯ ರುಚಿಯನ್ನು ಕಂಡರಿಯದು. ಅಫೀಮಿನ ಮತ್ತಿನಿಂದ ಆರಕ್ತವಾದ ನೇತ್ರಗಳಿಂದ ರೋಷಭೀಷಣರಾದ ರಜಪೂತ ಯೋಧರು, ಶತ್ರುಗಳ ಮೇಲೆ ಬಿದ್ದು, ಕತ್ತಿಗಳನ್ನೂ ಭಲ್ಯೆಗಳನ್ನೂ ಶತ್ರು ದೇಹಗಳಲ್ಲಿ ಪ್ರವೇಶಗೊಳಿಸಿ, ರಕ್ತಸಿಕ್ತವಾದ ಆ ಆಯುಧಗಳನ್ನು ಕಂಡು ವೀರಾವೇಶಯುಕ್ತರಾಗಿ ವಿಜೃಂಭಿಸತೊಡಗಲು, ಧೀರರಾದ ಆ ಮೊಗಲಾಯಿ ಸೈನಿಕರೂ ಸಹ ಏನು ಮಾಡಬೇಕೆಂದು ತೋರದೆ ಸುಮ್ಮನೆ ನಿಲ್ಲಬೇಕಾಯಿತು. ಹಿಂದಿನ ಎಷ್ಟೋ ಯುದ್ಧಗಳಲ್ಲಿ ಶತ್ರುದಳದ ಬೆನ್ನು ಮೂಳೆಯನ್ನು ಮುರಿದಿದ್ದ ಜಯ ಫಿರಂಗಿಯೂ ಸಹ ಈ ಬಾರಿ, ರಾಜಪುತ್ರರ ಪ್ರಾಬಲ್ಯವನ್ನು ಅಡಗಿಸಲಾರದಾಯಿತು. ಆ ಕಠಿಣ ಸಮಯವನ್ನು ತಿಳಿದು ಬಾಬರನು, ತನ್ನ ಸೈನ್ಯವನ್ನು ಎರಡು ಭಾಗಮಾಡಿ, ಒಂದು ಭಾಗದವರನ್ನು ಹಿಂದುಗಡೆಯಿಂದ ಬಂದು ರಜಪೂತ ಸೈನ್ಯವನ್ನು ಆಕ್ರಮಿಸಿರೆಂದು ಕಳುಹಿಸಿ, ಫಿರಂಗಿಯ ಸಾಲನ್ನು ಸ್ವಲ್ಪ ಓರೆಯಾಗಿ ತಿರುಗಿಸಿ, ಪ್ರಥಮ ಶ್ರೇಣಿಯವರ ಕೈಯಲ್ಲಿ ತುಪಾಕಿಯನ್ನಿತ್ತು ಪ್ರಯೋಗಿಸಲಾಜ್ಞೆಯಿತ್ತು, ಮತ್ತೊಂದು ಪಕ್ಕದಿಂದ ಬಾಣವರ್ಷವನ್ನು ಸುರಿಸಲಾರಂಭಿಸಿದನು. ಆಗ ರಜಪೂತ ಸೈನ್ಯದ ಒಂದು ಭಾಗಕ್ಕೆ ಅಧಿಪತಿಯಾಗಿದ್ದ ಶಿಲಾದೇವನು, ರಾಜದ್ರೋಹಿಯಾಗಿ ಎದೆಯನ್ನು ಕಲ್ಲು ಮಾಡಿಕೊಂಡು ತನ್ನ ಸೇನೆಯೊಂದಿಗೆ ಹೊರಟು ಶತ್ರುಪಕ್ಷವನ್ನು ಸೇರಿದನು.

ಆಕಸ್ಮಿಕವಾಗಿ ಶತ್ರುಸೇನೆಯು ಹಿಂದಿನಿಂದ ಬಂದು ಮೇಲೆ ಬಿದ್ದುದೂ, ಸ್ವಜನ ಸೇನೆಯು ಮೋಸ ಮಾಡಿದುದೂ, ತುರುಷ್ಕರು ವಜ್ರಮುಷ್ಟಿ

ಯಿಂದ ಮೇಲೇರಿ ಬರುತ್ತಿದ್ದುದೂ, ರಾಜಪುತ್ರ ಸೇನೆಯಲ್ಲಿ ಕಳವಳವನ್ನೆಬ್ಬಿಸಿತು. ಎಲ್ಲಿಯವರಲ್ಲಿ ಓಡಸಾಗಿದರು. ಮಹಮ್ಮದೀಯರು ರಜಪೂತ ಸೇನೆಯ ಒಂದು ಮೂಲೆಗೆ ಸೇರಿ, ಫಿರಂಗಿಗಳನ್ನು ಎತ್ತಿ ಕಟ್ಟಿ ಅದರಮೇಲೆ ಪ್ರಯೋಗಿಸತೊಡಗಿದರು. ಅದರಿಂದಲೇ ಬಹುಮಂದಿ ಹತರಾದರು. ಮಿಕ್ಕ ಬಹು ಸ್ವಲ್ಪ ಮಂದಿ ಹೇಗೋ ಪ್ರಾಣಗಳೊಂದಿಗೆ ಹೊರಬಿದ್ದು ಓಡಿಹೋದರು. ಹಾಗೆ ಯುದ್ಧರಂಗದಿಂದ ಹೊರಬಿದ್ದವರಲ್ಲಿ ರಾಣಾನೂ ಒಬ್ಬನು. ಯುದ್ಧದಲ್ಲಿ ತಗುಲಿದ ಗಾಯಗಳಿಂದ ರಾಣಾನು ಕುಂಟನೂ ನಡೆಯಲಾರದವನೂ ಆಗಿ, ಯುದ್ಧರಂಗಕ್ಕೆ ಬೆನ್ನು ಕೊಟ್ಟು ಹೋಗಲು ಒಪ್ಪದಿದ್ದನಾದರೂ, ಆತನ ಸೇವಕರು, ಆತನನ್ನು ಹೇಗೊ ಎತ್ತಿಕೊಂಡೋಡಿ ಅಪಾಯ ಸ್ಥಳದಿಂದ ತಪ್ಪಿಸಿ, ಸುರಕ್ಷಿತ ಸ್ಥಳವನ್ನು ಸೇರಿಸಿದರು. ಅನೇಕರು ಯುದ್ಧ ಭೂಮಿಯನ್ನು ತ್ಯಜಿಸದೆ ಅಲ್ಲೇ ಪ್ರಾಣತ್ಯಾಗ ಮಾಡಿದರು. ಹಾಗೆ ಪ್ರಾಣತ್ಯಾಗ ಮಾಡಿದವರಲ್ಲಿ ಚಂದಾವತ ವಂಶಸ್ಥನಾದ ರಾಜಪುತ್ರವೀರನೊಬ್ಬನು ಶೂರರಾದ ತನ್ನ ಮುನ್ನೂರು ಮಂದಿ ಅನುಚರರೊಂದಿಗೆ ಯುದ್ಧದಲ್ಲಿ ಅಪ್ರತಿಮನೆಂದು ಹೋರಾಡಿ, ಪ್ರಭುವಿಗಾಗಿ ದೇಹರಕ್ತವನ್ನು ಬಸಿದನು. ಮೊದಲು, ರಾಜ್ಯಭಾರ ಕಾಲದಲ್ಲಿ ರಾಣಾನಿಗೆ ಮಂತ್ರಾಲೋಚನೆ ಕೊಡುವುದರಲ್ಲಿ ಹೇಗೆ ಪ್ರಥಮ ಗಣ್ಯನಾಗಿದ್ದನೋ ಈಗ ಆತನ ನಿಮಿತ್ತವಾಗಿ ಪ್ರಾಣಗಳನ್ನು ಕೊಡುವುದರಲ್ಲೂ ಪ್ರಥಮ ಗಣ್ಯನಾದನು. ಆತನಿಗೆ ಸಹಾಯಕವಾಗಿ ಮಾರ್ವಾರ್ರು ರಾಜಕುಮಾರನು ಇಪ್ಪತ್ತು ಮಂದಿ ತನ್ನ ಅನುಚರರೊಂದಿಗೆ ಕೂಡಿ ನೆಲಕ್ಕೆ ಬಿದ್ದನು. ಈ ಯುದ್ಧವು ನಡೆದ ಸ್ಥಳದ ಸಮೀಪದಲ್ಲೇ, ಬಾಬರನು, ಯುದ್ಧದಲ್ಲಿ ಮಡಿದ ರಾಜಪುತ್ರ ಯೋಧರ ತಲೆಬುರುಡೆಗಳನ್ನು ಏಕತ್ರ ಸೇರಿಸಿ, ಅವುಗಳಿಂದಲೇ ಒಂದು ಜಯಸ್ತಂಭವನ್ನು ಕಟ್ಟಿಸಿದನು.

ಹೀಗೆ ಸಂಪೂರ್ಣ ಪರಾಜಯಹೊಂದಿ ಕುಂಟನಾಗಿ, ಕುಳಿತ ಸ್ಥಳದಿಂದ ಕದಲಲೂ ಸಾಧ್ಯವಿಲ್ಲದಂತಹ ಸ್ಥಿತಿಯಲ್ಲಿದ್ದರೂ, ರಾಣಾ ಸಂಗ್ರಾಮನು ಶೌರ್ಯ ಗಾಂಭೀರ್ಯಗಳಲ್ಲಿ ಸಿಂಹದಂತೆ ಇನ್ನೂ ಪ್ರತಾಪಶಾಲಿಯಾಗಿಯೇ ಇದ್ದನಲ್ಲದೆ ದೀನನಾಗಲಿಲ್ಲ. ಚಿತ್ತೂರು ಕೋಟೆಯಲ್ಲಡಗಿ ಬಾಗಿಲು ಮುಚ್ಚಿಕೊಂಡು ಅವಿತುಕೊಂಡಿರಲಿಷ್ಟಪಡದೆ, ಚಿತ್ತೂರು ಕೋ

ಟೆಯ ಬಾಗಿಲುಗಳನ್ನು ಯಾವಾಗಲೂ ತೆರೆದೇ ಇರಬೇಕೆಂದು ಆಜ್ಞಾಪಿಸಿ ತಾನು ಎಂದಿದ್ದರೊಂದುದಿನ ಶತ್ರುವನ್ನು ಜಯಿಸಿ ಜಯಧ್ವಾನಗಳಿಂದ ಕೋಟೆಯನ್ನು ಪ್ರವೇಶಿಸುವೆನೆಂದು ಹೇಳುತ್ತಿದ್ದನು. ಈ ಯುದ್ಧದಲ್ಲಿ ಪ್ರಾಪ್ತಿಸಿದ ಪರಾಭವವನ್ನು ನೀಗಿಕೊಳ್ಳುವವರೆಗೂ ಆ ಸ್ಥಳವನ್ನು ಬಿಡೆನೆಂದು ಯುದ್ಧಭೂಮಿಯಲ್ಲೇ ಒಂದು ಗೂಡಾರವನ್ನು ಹಾಕಿಸಿಕೊಂಡು ಅಲ್ಲೇ ವಾಸ ಮಾಡಿಕೊಂಡಿದ್ದನಂತೆ! ಆವರೆಗೆ ಮೃತರಾದ ರಜಪೂತ ವೀರರ ಹೆಂಡಿರೆಲ್ಲರೂ, ತಮ್ಮ ಆಭರಣಾದಿಗಳನ್ನು ಮಾರಿ, ಆ ದ್ರವ್ಯದಿಂದ ಸೇನೆಯನ್ನು ಸೇರಿಸಿ ಅದರ ಸಹಾಯದಿಂದ ಮೊಗಲರ ಮೇಲೆ ಯುದ್ಧಕ್ಕೆ ಪುನಃ ದಂಡೆತ್ತೆಂದು ಆತನನ್ನು ಪ್ರೋತ್ಸಾಹಿಸಿದರಾದರೂ, ಈ ಯುದ್ಧವಾದಮೇಲೆ ಒಂದು ವರ್ಷದೊಳಗಾಗಿಯೇ ರಾಣಾನೂ ಪರಲೋಕಗತನಾದುದರಿಂದ ಆ ಆಶಯವು ಕೊನೆಸಾಗಲಿಲ್ಲ.

ಸಂಗನು ವಿಷವನ್ನು ತಿಂದು ಸತ್ತನೆಂದು ಕೆಲವರು ಹೇಳುವುದುಂಟು. ಆದರೆ ಅದು ನಿಜವಲ್ಲ. ಬಾಲ್ಯದಿಂದಲೂ ಮನೆ ಬಾಗಿಲುಗಳನ್ನು ಬಿಟ್ಟು ತಿರುಗಿ ಆತನು ಪಟ್ಟ ಅಸಮಸೀಯ ಕಷ್ಟಗಳೂ, ಮಹಾ ಯುದ್ಧಗಳಲ್ಲಿ ಆತನ ದೇಹದ ಮೇಲುಂಟಾದ ಐವತ್ತು ಗಾಯಗಳೂ, ಮೇಲಾಗಿ-ಕಾಣ್ವಾಹಾ-ಎಂಬಲ್ಲಿ ಜರುಗಿದ ಯುದ್ಧವೂ ವಿಷಕ್ಕಿಂತಲೂ ಹೆಚ್ಚು ತೀಕ್ಷ್ಣವಾಗಿ ವೇಧಿಸಿ ಆತನಿಗೆ ಅಕಾಲ ಮರಣವನ್ನುಂಟುಮಾಡಿದುವು. ಮೇವಾರು ರಾಜ್ಯವನ್ನು ಪಾಲಿಸಿದ ರಾಣಾಗಳಲ್ಲೆಲ್ಲ ಸಂಗ್ರಾಮಸಿಂಹನೇ ಮಹಾ ಪ್ರತಾಪಶಾಲಿ. ಆದುದರಿಂದ ಅವನು ಎಲ್ಲರಿಗಿಂತಲೂ ಅಧಿಕನೆಂದು ಹೇಳುವುದು ವಾಡಿಕೆ. ಆತನ ತರುವಾಯ ಸಿಂಹಾಸನವನ್ನೇರಿದ ಆತನ ವಂಶಸ್ಥರು, ಆತನಂತೆಯೇ ದೃಢ ಚಿತ್ತತೆಯಿಂದ ನಡೆದಿದ್ದರೆ, ಚಿತ್ತೂರಿಗೆ ಎಂದಿಗೂ ದುರ್ದೆಸೆಯುಂಟಾಗುತ್ತಿರಲಿಲ್ಲ.